ಸಂಪುಟ : ೨೪
ಸಂಚಿಕೆ : ೩

ಕರ್ನಾಟಕ ಭಾರತಿ

ಡಾ. ಬಿ. ಆರ್. ಅಂಬೇಡಕರ
ವಿಶೇಷಾಂಕ
ಜನೆವರಿ ೧೯೯೨

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು

"ಕರ್ನಾಟಕ ಭಾರತಿ"ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪು ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಸಂಪೂರ್ಣವಾಗಿಯಾಗಲೀ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಕಖರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅವರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು ಸಂಪಾದಕರು, "ಕರ್ನಾಟಕ ಭಾರತಿ" ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು. ಇನ್ನಿತರ ಯಾವುದೇ ವಿಷಯಕ್ಕೆ ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ ೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ ೪. ಅಕ್ಷಯ ತೃತೀಯ ಸಂಚಿಕೆ

ಬಿಡಿ ಸಂಚಿಕೆಯ ಬೆಲೆ : ರೂ. ೨೦–೦೦

ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ರಿಯಾಯಂತಿ ಚಂದಾ ದರ ರೂ. ೧೦–೦೦ ಮಾತ್ರ. ಹಣವನ್ನು ಡಿಮಾಂಡ ಡ್ರಾಫ್ಟ್ ಇಲ್ಲವೆ ಪೋಸ್ಟಲ್ ಆರ್ಡರ ಮೂಲಕ ವಿತ್ತಾಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೨೪ ಸಂಚಿಕೆ : ೩

ಗೌರವ ಸಂಪಾದಕರು

ಡಾ. ಎಸ್. ರಾಮೇಗೌಡ

ಕುಲಪತಿಗಳು

ಸಂಪಾದಕರು

ಡಾ. ವೀರಣ್ಣ ರಾಜೂರ

ಡಾ. ಬಿ. ಆರ್. ಹಿರೇಮಠ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೨೪ ಸಂಚಿಕೆ : ೩

ಜನವರಿ ೧೯೯೨

ಡಾ. ಬಿ. ಆರ್. ಅಂಬೇಡಕರ ವಿಶೇಷಾಂಕ

(ಸಂಕ್ರಮಣ ಸಂಚಿಕೆ)

ಪ್ರಕಾಶಕರು

ಶ್ರೀ ಸದಾನಂದ ಕನವಳ್ಳಿ

ನಿರ್ದೇಶಕರು, ಪ್ರಸಾರಾಂಗ, ಕ. ವಿ. ವಿ., ಧಾರವಾಡ

ಮುದ್ರಕರು

ಬಸವನಾಳ ಪ್ರಿಂಟರ್ಸ್

ಯು. ಬಿ. ಹಿಲ್, ಧಾರವಾಡ

ಪ ರಿ ವಿ ಡಿ

ಭಾರತರತ್ನ



ಡಾ. ಬಿ. ಆರ್. ಅಂಬೇಡಕರ

ಬೋಧಿವೃಕ್ಷ

● ಅಶೋಕ ನರೋಡೆ

ಆಗಸದಿಂದಿಳಿದು ಬಂದ ದೇವದೂತನಲ್ಲ
ಭೂಭಾರವಿಳಿಸಲೆಂದು ಉದಿಸಿದ ಅವತಾರಿಯೂ ಅಲ್ಲ
ಸರ್ವರಂತೆ ಮಾಡಿ ಮಿಂಚಿನ ಗೊಂಚಲಾದವ.
ತನ್ನ ನೀಳ ತೋಳುಗಳಲ್ಲಿ ದಶದಿಕ್ಕುಗಳನ್ನಳೆದು
ಬಾನೆತ್ತರ ಬೆಳೆದು, ಬೆಳ್ಳಿಬೆಟ್ಟವಾಗಿ ಸಂವಿಧಾನಶಿಲ್ಪಿಯಾದ
ದೇಶಕ್ಕಿಡಿಯಾಗಿ ಬೆಳಕಿನ ಬಟ್ಟೆಯುಡಿಸಿದ.

ಜಪ-ತಪವೆಂದು ಅಡವಿಗೋಡಿ ಹೋದವನಲ್ಲ.
ಕಣ್ಮುಚ್ಚಿ ಕೂಡಲಿಲ್ಲ, ಗಿರಿ-ಗಹ್ವರಗಳಲ್ಲಿ.
ಸಮಾಜದೇರು-ಪೇರು, ಮೇಲು-ಕೀಳು
ದೌರ್ಜನ್ಯ ದಬ್ಬಾಳಿಕೆಗಳ ಗೊಬ್ಬರವುಂಡು ಬೆಳೆದ ಬೋಧಿವೃಕ್ಷ.
ಇವನೆಂದೂ ಪವಾಡ ಮಾಡಿದವನಲ್ಲ.
ಹುಟ್ಟು ಹೋರಾಟಗಾರನಾದ ಈ ಸೂರ್ಯನಿಟ್ಟ
ಪ್ರತಿ ಹೆಜ್ಜೆ ಪವಾಡಗಳನ್ನಿಕ್ಕಿ ಮೆಟ್ಟಿದವು.

ಈ ಸಾಹೇಬ ಸಾನಿಧ್ಯದಿಂದ
ಕುರುಡರಿಗೆ ಕಣ್ಣು, ಕುಂಟರಿಗೆ ಕಾಲು
ಮೂಕರಿಗೆ ಬಾಯಿ ತಂತಾನೆ ಬಂದವು.
ಯುಗ-ಯುಗದ ನಿದ್ರೆಯಿಂದೆದ್ದಿತು ಮೆದುಳು
ಕೀಳರಿಮೆಯ ಕಿತ್ತೊಗೆದು
ಸರ್ವರಲಿ ಸ್ವಾಭಿಮಾನದ ಸೆಲೆ ಚಿಮ್ಮಿಸಿ
ತುತ್ತ-ತುದಿಗೆ ಬುದ್ಧನನ್ನಪ್ಪಿ
ಬಯಲೊಳಗೆ ಬಯಲಾಗಿ
ಕತ್ತಲೆಯೊಳಗೆ ಬೆಳಕಾಗಿ ಹೋದ.

● ●

ಡಾ. ಬಿ. ಆರ್. ಅಂಬೇಡಕರ : ಜೀವನ ಮತ್ತು ಸಾಧನೆ

● ಶ್ರೀಮತಿ ಚಂದ್ರಮಾ ಭೀಮಶೇನರಾವ್

ನಿಸ್ವಾರ್ಥ, ಅವಿಶ್ರಾಂತ ಹೋರಾಟ ಅಂಬೇಡ್ಕರರ ಅನ್ವರ್ಥನಾಮವೆನ್ನಬಹುದು. ಶತಮಾನಗಳಾಚೆಯಿಂದ ತನ್ನ ವರ್ಗಕ್ಕೆ ಅಂಟಿದ ಅಸ್ಪೃಶ್ಯತೆಯನ್ನು ನಿವಾರಿಸಲು, ತುಳಿಯಲ್ಪಟ್ಟವರನ್ನು ಮೇಲೆತ್ತಲು, ಈ ದಿಸೆಯಲ್ಲಿ ಭಾರತೀಯ ಸಮಾಜವನ್ನು ಪುನರ್ರಚಿಸಲು ಅವಿರತ ಶ್ರಮಿಸಿದ ಜೀವ ಅಂಬೇಡ್ಕರರದು. ಅವರ ಪ್ರಯತ್ನ ಪ್ರತಿಭೆ ಇಷ್ಟಕ್ಕೇ ಸೀಮಿತಗೊಳ್ಳದೆ ಹಲವೆಡೆ ಪಸರಿಸಿತ್ತು. ಸಂವಿಧಾನ ಶಿಲ್ಪಿ, ಅರ್ಥಶಾಸ್ತ್ರಜ್ಞ, ಸಮಾಜಶಾಸ್ತ್ರಜ್ಞ, ಶಿಕ್ಷಕ, ಲೇಖಕ, ಆಡಳಿತತಜ್ಞನಷ್ಟೇ ಅಲ್ಲದೆ ಅವರೊಬ್ಬ ಶ್ರೇಷ್ಠ ಮೇಧಾವಿಯೂ, ಸಾಮಾಜಿಕ, ಅರ್ಥಿಕ, ರಾಜಕೀಯ ಕ್ಷೇತ್ರಗಳಲ್ಲಿ ಒಬ್ಬ ಅಸಮಾನ್ಯ ವಿಚಾರವಾದಿಯೂ ಆಗಿದ್ದರು. ಅವರೊಬ್ಬ ಭಾರತದ ಅತ್ಯಮೂಲ್ಯ ರತ್ನವೇ ಆಗಿದ್ದರು.

ಚಾತುರ್ವರ್ಣ ವ್ಯವಸ್ಥೆಯಲ್ಲಿ ತೀರ ಕೆಳಗಿನ ಶೂದ್ರವರ್ಗದ ಅಸ್ಪೃಶ್ಯರಾಗಿ ಹುಟ್ಟಿದ ಅಂಬೇಡ್ಕರ, ಚಿಕ್ಕಂದಿನಿಂದಲೇ ಹಿಂದೂ ಸಮಾಜದ ಅವಹೇಳನ, ಅವಮಾನ, ನಿಂದೆಗಳಿಗೆ ಗುರಿಯಾಗಬೇಕಾಯಿತು. ಕಬೀರ ಪಂಥವನ್ನನುಸರಿಸುವ, ದೈವಭಕ್ತಿಯ ಸಂಪ್ರದಾಯದ ಕುಟುಂಬದಲ್ಲಿ ಹುಟ್ಟಿದ ಭೀಮರಾವನು ತಂದೆ ರಾಮಜಿ ಸತ್ಪಾಲನಿಗೆ ಹದಿನಾಲ್ಕನೆಯ ಮಗು, ತಾತ–ತಂದೆ ಸೈನ್ಯದಲ್ಲಿ ಸೇವೆ ಸಲ್ಲಿಸಿದ್ದರಿಂದ ಶಿಸ್ತಿನಲ್ಲಿ ಆತನ ಬೆಳವಣಿಗೆ. ಆರು ವರ್ಷಕ್ಕೆ ತಾಯಿಯನ್ನು ಕಳೆದುಕೊಂಡ ಭೀಮರಾವ್‌ಗೆ ತಾಯಿಯ ಮಮತೆ ದೊರಕಿದ್ದು ಸೋದರತ್ತೆ ಮೀರಾಬಾಯಿಯಿಂದ. ಕಟ್ಟಾ ಶಾಖಾಹಾರಿಯಾದ ತಂದೆ ಇಂಗ್ಲೀಷ ತಿಳಿದವನಾದುದರಿಂದ ಬಾಲ್ಯದಿಂದ ಭೀಮರಾವ್‌ಗೆ ಆ ಭಾಷೆಯ ಮೇಲೆ ವ್ಯಾಮೋಹ, ಪ್ರಭುತ್ವ. ಶಿಸ್ತಿನ ಸುಸಂಸ್ಕೃತ ಬಾಲಕನಾದರೂ ಆತನಿಗೆ ಅಸ್ಪೃಶ್ಯವರ್ಗದಲ್ಲಿ ಹುಟ್ಟಿದ್ದರಿಂದ ಮುಕ್ತಮನದಿಂದ ಚಕ್ಕಡಿಯೇರುವ, ದಾರಿಯಲ್ಲಿ ನೀರು ಕುಡಿಯುವ, ಶಾಲೆಯಲ್ಲಿ ಎಲ್ಲ ಮಕ್ಕಳೊಡನೆ ಕೂಡಿ ಕಲಿಯುವ – ಕಲೆಯುವ ಸಂಯೋಗವಿರಲಿಲ್ಲ. ಅಂತೆಯೇ ಎಳೆತನದಲ್ಲಿಯೇ ಆತನಲ್ಲಿ ಅಂಕುರಿಸಿದ ಅಸಮಾನತೆಯ ಬೀಜ ಆತ ಬೆಳೆದಂತೆಲ್ಲ ಹೆಮ್ಮರವಾಯಿತು.

ಹದಿನೇಳು ವರ್ಷಕ್ಕೆ ಮಗನ ಮದುವೆ ಮಾಡಿದ ರಾಮಜಿಗೆ ಮ್ಯಾಟ್ರಿಕ್ ಕಲಿತ ಮಗನನ್ನು ಮುಂದೆ ಓದಿಸುವ ಆಸೆ. ಅಂತೆಯೇ ಎಲ್‌ಫಿನ್‌ಸ್ಟನ್ ಕಾಲೇಜಿನಲ್ಲಿ ಭೀಮರಾವ್ ಇಂಟರ್‌ಮಿಡಿಯೇಟ್ ಮುಗಿಸಿದಾಗ ಆರ್ಥಿಕ ಅಡಚಣೆ ಎದುರಾಯಿತು. ಆದರೆ ಆತನ ವಿದ್ಯಾಭ್ಯಾಸದಲ್ಲಿ ಆಸಕ್ತಿಯಿದ್ದ ಕೆಳುಸ್ಕರ್ ಎಂಬ ಹೆಸರಿನ ಸಹಾಯಕ ಶಿಕ್ಷಕರ ಮುಖಾಂತರ ಬರೋಡಾ ಮಹಾರಾಜರನ್ನು ಭೀಮರಾವ್ ಸಂಪರ್ಕಿಸಿ, ಅವರು ಕೇಳಿದ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಕೊಟ್ಟು, ತಿಂಗಳಿಗೆ ರೂ. ೨೫-೦೦ ವಿದ್ಯಾರ್ಥಿವೇತನ ದೊರಕಿಸಿದ. ಬಡತನದ ಕಷ್ಟ-ಕಾರ್ಪಣ್ಯಗಳನ್ನೂ, ಅಸ್ಪೃಶ್ಯ ನೆಂದು ಅಸಹ್ಯ ಅವಹೇಳನಗಳನ್ನೂ ಸಹಿಸಿಕೊಂಡು ೧೯೧೨ ರಲ್ಲಿ ಇಂಗ್ಲೀಷ ಸಾಹಿತ್ಯ ಹಾಗೂ ಪರ್ಷಿಯನ್ ವಿಷಯಗಳನ್ನು ತೆಗೆದುಕೊಂಡು ಬಿ. ಎ. ಪಾಸಾದ ಆತನಲ್ಲಿ ವಿದ್ಯಾದಾಹ ಹೆಚ್ಚಿತು. ಬಡೋದೆಯ ಮಹಾರಾಜರು ಉನ್ನತ ವ್ಯಾಸಂಗಕ್ಕಾಗಿ ಅಮೇರಿಕೆಗೆ ಕಳಿಸುವ ಕೆಲವೇ ವಿದ್ಯಾರ್ಥಿಗಳಲ್ಲಿ ಭೀಮರಾವ ಕೂಡ ಒಬ್ಬರಾಗಿ ೧೯೧೨ ರಲ್ಲಿ ಕೋಲಂಬಿಯಾ ವಿಶ್ವವಿದ್ಯಾಲಯಕ್ಕೆ ಹೋಗುವ ಸುವರ್ಣಾವಕಾಶ ಪಡೆದರು. ಭಾರತದ ಉಸಿರುಕಟ್ಟುವ ವಾತಾವರಣದಿಂದ ಬಿಡುಗಡೆ ಹೊಂದಿ ಸ್ವತಂತ್ರ ವಾತಾ ವರಣದಲ್ಲಿ ಯಾವ ತಾರತಮ್ಯಕ್ಕೂ ಒಳಗಾಗದೆ ಎಲ್ಲರೊಡನೆ ಸರಿಸಮವಾಗಿ ವ್ಯವ ಹರಿಸುವ ನ್ಯೂಯಾರ್ಕ ಜೀವನ ಆತನಿಗೆ ಹೊಸಪ್ರಪಂಚವನ್ನೇ ತೆರೆಯಿತು. ಆದರೆ ಸ್ವೇಚ್ಛಾಚಾರಿಯಾಗದೇ ಯಾವ ನೋಟವೀಕ್ಷಣೆ, ಮಿತ್ರಕೂಟಗಳಿಲ್ಲದೆ ನಿಯಮಿತ ಕಾಲಾವಧಿಯಲ್ಲಿ ಸಾಧ್ಯವಾದಷ್ಟೂ ಹೆಚ್ಚು ಜ್ಞಾನಗಳಿಸುವದೇ ಅವರ ಲಕ್ಷ್ಯವಾಯಿತು. ಪ್ರೊ. ಎಡ್ವಿನ ಸೆಲ್ಮಗಾನರ್ ಅವರ ಮೆಚ್ಚಿನ ಶಿಷ್ಯನಾದ ಭೀಮರಾವ ಅವರು ಬರೆದ "ಪ್ರಾಚೀನ ಭಾರತದಲ್ಲಿಯ ವ್ಯಾಪಾರೋದ್ಯಮ" ಎಂಬ ಪ್ರಬಂಧ ೧೯೧೫ ರಲ್ಲಿ ಅವರಿಗೆ ಎಂ.ಎ. ಪದವಿ ದೊರಕಿಸಿಕೊಟ್ಟಿತು. ಅವರ ಇನ್ನೊಂದು ಮಹತ್‌ಕೃತಿ "ಬ್ರಿಟಿಷ ಇಂಡಿಯಾದಲ್ಲಿನ ಹಣಕಾಸು ವ್ಯವಸ್ಥೆಯ ವಿಕಾಸ", ಅವರಿಗೆ ಕೋಲಂ ಬಿಯಾ ವಿಶ್ವವಿದ್ಯಾಲಯದ ಪಿಎಚ್.ಡಿ ಪದವಿಯನ್ನು ದೊರಕಿಸಿಕೊಟ್ಟಿತು. ಭೀಮರಾವ್ ಅರ್ಥಶಾಸ್ತ್ರ ಜ್ಞಾನದ ಆಳ ಅಭ್ಯಾಸಕ್ಕೆ ಇದೇ ಸಾಕ್ಷಿ. ಭಾರತಕ್ಕೆ ಹಿಂತಿರುಗಿದ ಅಂಬೇಡ್ಕರರಿಗೆ ಹೆಜ್ಜೆ ಹೆಜ್ಜೆಗೂ ತಮ್ಮ ಕೀಳುಜನ್ಮವನ್ನು ನೆನಪಿಗೆ ತಂದುಕೊಡುವ ಅನುಭವ ಕಾಯ್ದಿತ್ತು. ಬರೆದುಕೊಟ್ಟ ಕವಲುಪತ್ರದ ಪ್ರಕಾರ ಆತ ಬಡೋದೆ ಸಂಸ್ಥಾನದಲ್ಲಿ ಮಿಲಿಟರಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾಗ, ಪೇದೆಗಳು ಕೂಡ ಕಾಗದದ ಕಟ್ಟುಗಳನ್ನು ದೂರದಿಂದ ಮೇಜಿನ ಮೇಲೆ ಎಸೆಯು ತ್ತಿದ್ದರು. ಆಫೀಸಿನಲ್ಲಿ ಕುಡಿಯುವ ನೀರು ಸಿಗುತ್ತಿರಲಿಲ್ಲ. ಅವರು ಸ್ಪರ್ಶಿಸಿದ್ದೂತೆ ನೆಲದ ಹಾಸನ್ನು ಸುತ್ತಿಡಲಾಗುತ್ತಿತ್ತು. ಯಾವ ವಸತಿಗೃಹ-ಹೋಟೆಲಿನಲ್ಲಿಯೂ ವಸತಿ ಸಿಕ್ಕದ ಅಂಬೇಡ್ಕರ, ಒಂದು ಪಾರ್ಸಿ ತಂಗುವ ಮನೆಯಲ್ಲಿ ಗುಪ್ತವಾಗಿ ಉಳಿದು ಕೊಂಡಿದ್ದರೂ, ಅವರ ತಂಟ್ಟಿಯ ವಿಷಯ ತಿಳಿದ ತಕ್ಷಣ ಪಾರ್ಸಿಗಳು ದೊಣ್ಣೆ ಹಿಡಿದು

ಬಂದು ಹೊರಗಟ್ಟಿದಾಗ, ಅಮೇರಿಕೆ ಪದವೀಧರ ಸುಸಂಸ್ಕೃತ ಅಂಬೇಡ್ಕರ ಅಸಹಾಯರಾಗಿ, ತನ್ನ ನಾಡಿನಲ್ಲಿ ತನಗೆ ನೆಲೆಯಿಲ್ಲದೆ ತನ್ನ ಸಾಮಾನುಗಳ ಮಧ್ಯ ಮರದಡಿ ಕುಳಿತು ಗಳಗಳನೆ ಅತ್ತರಂತೆ. ವಿಷಯ ತಿಳಿದಾಗ ಬಡೋದೆಯ ದಿವಾನ ರಾಗಲಿ, ಮಹಾರಾಜರಾಗಲಿ ಅಸಹಾಯಕತೆ ವ್ಯಕ್ತಪಡಿಸಿದರು. ಜೀವನೋಪಾಯ ಕ್ಕಾಗಿ ಪ್ರಾರಂಭಿಸಿದ ಮುಂಬಯಿ ಶೇರುಪೇಟೆಯ ವ್ಯವಹಾರಗಳ ವಿಷಯದಲ್ಲಿ ಸಲಹೆ ನೀಡುವ ಅವರ ಕಂಪನಿಯೂ, ಸಲಹೆಗಾರರು ಕೆಳಜಾತಿಯವರೆಂದು ಜನರಿಗೆ ತಿಳಿದ ತಕ್ಷಣ ಮುಚ್ಚಿಹೋಯಿತು. ಆದರೂ ತೀರದ ಜ್ಞಾನದಾಹ ಅವರನ್ನು ಲಂಡನ್ನಿಗೆಳೆ ಯಿತು. ಪ್ರಾಧ್ಯಾಪಕ ಹುದ್ದೆಗೆ ರಾಜೀನಾಮೆ ನೀಡಿ, ೧೯೧೮ ರಲ್ಲಿ ಸಿಡೆನ್‌ಹ್ಯಾಂ ಕಾಲೇಜಿನಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕನಾಗಿ ಮಾಡಿದ ಮಿತವ್ಯಯದಿಂದ ಉಳಿಸಿದ ಹಣ, ಸ್ನೇಹಿತ ನವಲ್‌ಬಾಥಾನ್ ಹಾಗೂ ಕೊಲ್ಲಾಪುರ ಮಹಾರಾಜರ ಸಹಾಯ ಗಳಿಂದ ವಿದ್ಯಾರ್ಜನೆಗಾಗಿ ಲಂಡನ್ನಿಗೆ ತೆರಳಿದರು. ಅಲ್ಲಿ ತನ್ನ ಸಮಯ, ಹಣ ಎರಡನ್ನೂ ಅತ್ಯಂತ ಎಚ್ಚರಿಕೆಯಿಂದ ವಿನಿಯೋಗಿಸಿ, ದಿನಕ್ಕೆ ೧೮ ಗಂಟೆ ಅಧ್ಯಯನ ನಡೆಸಿ, ಎಂ.ಎಸ್‌ಸಿ. ಪದವಿಯನ್ನೂ 'ರೂಪಾಯಿ ಸಮಸ್ಯೆ' ಪ್ರಬಂಧಕ್ಕಾಗಿ ಡಿ.ಎಸ್‌ಸಿ. ಪದವಿಯನ್ನೂ ಸಂಪಾದಿಸಿದರು. 'ಲಂಡನ್ ಸ್ಕೂಲ ಆಫ್ ಎಕನಾ ಮಿಕ್ಸ್ ಮತ್ತು ಪಾಲಿಟಿಕಲ್ ಸೈನ್ಸ'ದಿಂದ 'ಗ್ರೇಜಇನ್'ಗೆ ಪ್ರವೇಶ ಪಡೆದು, ಬ್ಯಾರಿಸ್ಟರ ಪದವಿಯನ್ನು ಗಳಿಸಿದರು.

ಬೇರೆ ದೇಶಗಳಲ್ಲಿದ್ದಾಗ ಅಂಬೇಡ್ಕರರು ಓದಿನ ಮಧ್ಯದಲ್ಲೂ ಭಾರತದ ರಾಜಕೀಯ, ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸುತ್ತಲೇ ಇದ್ದರು. ಭಾರತಕ್ಕೆ ಹಿಂದಿರುಗಿ ಸಾವರಕರ, ಗಾಂಧೀಜಿಯವರಂತೆ ದಲಿತೋದ್ಧಾರದ ಕಾರ್ಯಕ್ಕಿಳಿದರು. ವಿದ್ಯಾಪ್ರಸಾರಕ್ಕಾಗಿ – ಅಸ್ಪೃಶ್ಯರಿಗಾಗಿ ವಸತಿಗೃಹಗಳನ್ನು ತೆಗೆಯುವುದು. ಜ್ಞಾನ ಪ್ರಸಾರಕ್ಕಾಗಿ ವಾಚನಾಲಯಗಳನ್ನು, ಚರ್ಚಾ ಕೇಂದ್ರಗಳನ್ನು ಸ್ಥಾಪಿಸುವದು, ಅವರ ಆರ್ಥಿಕ ಸುಧಾರಣೆಗಾಗಿ ಉದ್ಯೋಗ ಹಾಗೂ ಕೃಷಿತರಬೇತಿ ಶಾಲೆಗಳನ್ನು ತೆಗೆಯು ವದು – ಈ ಮುಂತಾದ ಉದ್ದೇಶದಿಂದ ಅಂಬೇಡ್ಕರರು 'ಬಹಿಷ್ಕೃತ ಹಿತಕಾರಿಣಿ ಸಭೆ' ಯೊಂದನ್ನು ಸ್ಥಾಪಿಸಿದರು. ಅಸ್ಪೃಶ್ಯರ ಅಜ್ಞಾನ ನಿರ್ಮೂಲನೆ ಹಾಗೂ ಅವರ ಉತ್ಕರ್ಷಣೆಯೇ ಅಂಬೇಡ್ಕರರ ಜೀವನದ ಗುರಿಯಾಗಿತ್ತು. ಗಾಂಧೀಜಿಯವರ ಅಸ್ಪೃಶ್ಯೋದ್ಧಾರದಿಂದಾಗಲಿ ಅಥವಾ ಕಾಂಗ್ರೆಸ್ಸಿನ ೪೦ ಅಧಿವೇಶನಗಳ ನಂತರವೂ ಅಸ್ಪೃಶ್ಯರಿಗೆ ಕುಡಿಯುವ ನೀರಿಗೆ, ದೇವಾಲಯ ಪ್ರವೇಶಕ್ಕೆ ಸಮಾನ ಹಕ್ಕು ದೊರಕದೆ ಇದ್ದುದು, ಅಂಬೇಡ್ಕರರು ಪ್ರಸ್ತುತ ರಾಜಕೀಯದಿಂದ ಸ್ವಾತಂತ್ರ್ಯ ಸಂಗ್ರಾಮದಿಂದ ದೂರವಿದ್ದುದಕ್ಕೆ ಕಾರಣವಾಗಿದ್ದವು. ವ್ಯಕ್ತಿಯ ಸಾಮಾಜಿಕ ಮಾನ ವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವುದೇ ಅವರ ಲಕ್ಷ್ಯವಾಗಿದ್ದಿತು. ಸಮಾಜ ಸುಧಾರಕರಿಗಿಂತ ಭಿನ್ನವಾದ ಸಮಾಜಕ್ರಾಂತಿಕಾರರಾಗಿದ್ದ ಅಂಬೇಡ್ಕರರ ನಿಲುವು ತನ್ನ

ಆತ್ಮೋದ್ಧಾರ ತನ್ನಿಂದಲೇ ಸಾಧ್ಯವೆಂಬುದಾಗಿದ್ದಿತು. ಸ್ವಅಧ್ಯಯನ, ಸ್ವಾವಲಂಬನ, ಸ್ವಪ್ರಯತ್ನ, ದಾಸ್ಯತ್ವದ ಅರಿವು ಉಂಟು ಮಾಡಿ, ಸ್ವಾಭಿಮಾನ ಜಾಗೃತಗೊಳಿಸುವದೇ ಅಂಬೇಡ್ಕರರ ಧ್ಯೇಯಮಂತ್ರವಾಗಿದ್ದಿತು. ಸಮಯಾವಕಾಶ ದೊರಕಿದಾಗಲೆಲ್ಲ ಸಭೆ ಸಮಾರಂಭಗಳಲ್ಲಿ, ಸಮ್ಮೇಳನಗಳಲ್ಲಿ ತಮ್ಮ ಭಾಷಣಗಳಲ್ಲಿ ಅಸ್ಪೃಶ್ಯರನ್ನು ಉತ್ತೇಜಿಸಲು, ಹುರಿದುಂಬಿಸಲು ಅಂಬೇಡ್ಕರರು ಕೆಲವೊಮ್ಮೆ ಗರ್ಜಿಸಿ, ಮಗದೊಮ್ಮೆ ಚುಚ್ಚಿ ಮನತಟ್ಟುವಂತೆ ಮಾತನಾಡುತ್ತಿದ್ದರು. ತನ್ನ ದೇಶದ ದಾಸ್ಯ ವಿಮೋಚನೆಗಿಂತ ಅಸ್ಪೃಶ್ಯರ ದಾಸ್ಯವಿಮೋಚನೆ ಕಡಿಮೆಯದಲ್ಲ ಎಂದವರು ಭಾವಿಸಿದ್ದರು.

೧೯೨೭ ರ ಮಹಾಡ್ ಅಧಿವೇಶನ, ತದನಂತರ ಕುಡಿಯುವ ನೀರಿಗಾಗಿ ಹಕ್ಕು ಸ್ಥಾಪಿಸಲು ಅವರ ನೇತೃತ್ವದಲ್ಲಿ ಸಾವಿರಾರು ಅಸ್ಪೃಶ್ಯರು ಕೆರೆಗೆ ನಡೆದದ್ದು ಐತಿಹಾಸಿಕವಾದುದಾಗಿದೆ. ತಮ್ಮ ಟೀಕಾಕಾರರಿಗೆ ಉತ್ತರ ನೀಡಲು ಚೌಹಾರ ಅವರು ಹೊರಡಿಸಿದ 'ಮೂಕ ನಾಯಕ' ಪತ್ರಿಕೆ, ನಂತರ 'ಬಹಿಷ್ಕೃತ ಭಾರತ' ಪಾಕ್ಷಿಕಗಳು ಅಂಬೇಡ್ಕರರ ಚಿಂತನೆಗೆ, ತತ್ವಪ್ರತಿಪಾದನೆಗಳಿಗೆ ಕನ್ನಡಿ ಹಿಡಿಯುತ್ತವೆ. ಸಮಾನಾವಕಾಶಗಳಿಗಾಗಿ ಹೋರಾಡಬೇಕು, ಬದುಕನ್ನು ನಡೆನುಡಿಗಳನ್ನು ಶುಚಿಯಾಗಿಸಿಕೊಳ್ಳಬೇಕು, ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಬೇಕು ಎಂದು ಅಸ್ಪೃಶ್ಯರನ್ನುದ್ದೇಶಿಸಿ ಹೇಳಿದ ಅಂಬೇಡ್ಕರರು ಅಹಿಂಸಾಮಾರ್ಗವನ್ನು ಎತ್ತಿ ಹಿಡಿದರು. ಅಸ್ಪೃಶ್ಯರು ಹಿಂದುಗಳೇ. ಕೆರೆ ಭಾವಿ, ಸ್ಕೂಲುಗಳಂಥ ಅನುಕೂಲಗಳು ಅವರಿಗೂ ಲಭ್ಯವಾಗಬೇಕು. ಮುಸ್ಲಿಂ, ಕ್ರಿಶ್ಚಿಯನ್‌ರಂಥ ಮಾಂಸಾಹಾರಿಗಳು ಈ ಅನುಕೂಲಗಳನ್ನು ಹೊಂದಿರುವಾಗ ಅವನ್ನು ಮಾಂಸಾಹಾರದ ಆಧಾರದ ಮೇಲೆ ಅಸ್ಪೃಶ್ಯರಿಗೆ ನಿರಾಕರಿಸುವದು ಅನ್ಯಾಯ ಎಂದವರು ಪ್ರತಿಪಾದಿಸಿದರು. ತಮ್ಮ ಕ್ರಿಯೆ-ಕಾರ್ಯಗಳ ಮುಖಾಂತರ ನುಡಿ-ಬರಹಗಳಿಂದ ಅಸ್ಪೃಶ್ಯರ ವಿವೇಕವನ್ನು ಜಾಗೃತಗೊಳಿಸುವದರೊಂದಿಗೆ ಸವರ್ಣೀಯರ ಕಣ್ಣು-ಮನ-ಹೃದಯ ತೆರೆಯಲೂ ಅಂಬೇಡ್ಕರರು ಪ್ರಯತ್ನಪಟ್ಟರು. 'ಮನುಸ್ಮೃತಿ'ಯನ್ನು ಬೆಂಕಿಗಾಹುತಿ ಮಾಡುವದು ಅಂಬೇಡ್ಕರರು ಸವರ್ಣೀಯರ ಲಕ್ಷವನ್ನು ಅಸ್ಪೃಶ್ಯತೆ ಅಸಮಾನತೆಗಳತ್ತ ಸೆಳೆಯಲು ಕೈಕೊಂಡ ಕ್ರಮವಾಗಿದ್ದಿತು. ತಮ್ಮ ವಿದ್ವತ್ಪೂರ್ಣ, ತರ್ಕಬದ್ಧ ಸಪ್ರಮಾಣ ಗ್ರಂಥಗಳಾದ 'ಶೂದ್ರರು ಯಾರು' ? 'ಜಾತಿವಿನಾಶ', 'ಜಾತಿಗಳು : ಅವುಗಳ ಹುಟ್ಟು ಮತ್ತು ವಿಕಾಸ' ಮುಂತಾದವುಗಳಲ್ಲಿ ಇದೇ ತತ್ವಗಳನ್ನು ಪ್ರತಿಪಾದಿಸಿ, ಹಿಂದೂ ಸಮಾಜದ ಪುನರ್ರಚನೆಯ ಅವಶ್ಯಕತೆಯನ್ನು ಮನಗಾಣಿಸಿದರು.

ರಾಜಕೀಯ ರಂಗದಲ್ಲೂ ಅಂಬೇಡ್ಕರ ತಮ್ಮ ಧ್ಯೇಯೋದ್ದೇಶಗಳನ್ನು ಎತ್ತಿ ಹಿಡಿದರು. ನಾಸಿಕದಲ್ಲಿ ಅಂಬೇಡ್ಕರರು 'ಒಂದು ದೇಶ ಹೇಗೆ ಇನ್ನೊಂದು ದೇಶವನ್ನು

ಆಳ ಕೂಡದೋ ಅದರಂತೆಯೇ ಒಂದು ವರ್ಗ ಇನ್ನೊಂದು ವರ್ಗದ ಮೇಲೆ ದಬ್ಬಾಳಿಕೆ ಮಾಡಕೂಡದು. ಜನತಾಂತ್ರಿಕ ರಾಜಪದ್ಧತಿಗೆ ವ್ಯಕ್ತಿಸ್ವಾತಂತ್ರ್ಯವೇ ಆಧಾರ. ದೇಶದ ಪ್ರಗತಿ ಸಾಮಾಜಿಕ-ರಾಜಕೀಯ ಸಮಸ್ಯೆ ಸಮಾಧಾನವನ್ನೊಳಗೊಂಡಿದೆ. ಐದರಲ್ಲೊಂದು ಭಾಗ ಭಾರತೀಯರು(ಅಸ್ಪೃಶ್ಯ)ರಿಗೆ ಸಮಾನ ಅವಕಾಶಗಳಿಲ್ಲದಿರುವಾಗ ಅಂಥ ಅವಕಾಶಗಳನ್ನು ದೇಶದ ಸಂವಿಧಾನದಲ್ಲಿಯೇ ಯೋಚಿಸಬೇಕಾಗುತ್ತದೆ.... ಸ್ವಂತದ ಸಂವಿಧಾನ ರಚನೆಗೊಳ್ಳದ ಹೊರತು ಅಧಿಕಾರ ನಮ್ಮ ಕೈಗೆ ಬರಲಾರದು, ನಮ್ಮ ಸಮಸ್ಯೆಗಳು ಪರಿಹಾರವಾಗಲಾರವು' ಎಂದು ತರ್ಕಬದ್ಧವಾಗಿ, ವಿಚಾರ ಪ್ರಚೋದಕವಾಗಿ ಪರಿಣಾಮಕಾರಿಯಾಗಿ ಮಾತನಾಡಿದರು. ಸರಕಾರ ರಚಿಸಿದ ಒಂದನ್ನು ಹೊರತುಪಡಿಸಿ, ಉಳಿದ ಎಂಟೂ ಉಪಸಮಿತಿಗಳಲ್ಲಿ ಕೆಲಸ ನಿರ್ವಹಿಸಿದ ಅಂಬೇಡ್ಕರರು ಮಾಡಿದ ಮಹತ್ಕಾರ್ಯವೆಂದರೆ ಮೂಲಭೂತ ಹಕ್ಕುಗಳನ್ನು ಕುರಿತು ಘೋಷಣೆಯನ್ನು ತಯಾರಿಸಿದ್ದು, ಅಂಬೇಡ್ಕರರನ್ನು ಮುಂಬಯಿ ವಿಧಾನ ಪರಿಷತ್ತಿಗೆ ನಾಮಕರಣ ಮಾಡಿದಾಗಲೂ ಅವರು ಮಾಡಿದ ಕಾರ್ಯ, ಆಡಿದ ರೀತಿ ಪರಿಣಾಮಕಾರಿ.

ಆದರೆ ನಿಮ್ನವರ್ಗದವರಿಗಾಗಿ ಪ್ರತ್ಯೇಕ ಮತಕ್ಷೇತ್ರದ ಪ್ರಶ್ನೆ ಉದ್ಭವಿಸಿದಾಗ ಗಾಂಧಿ, ಅಂಬೇಡ್ಕರರ ನಡುವೆ ಭಿನ್ನಾಭಿಪ್ರಾಯ ತಲೆದೋರಿತು. ನಿಮ್ನವರ್ಗ ದವರಿಗಾಗಿ ಪ್ರತ್ಯೇಕ ಮತಕ್ಷೇತ್ರದ ವಿರುದ್ಧ ಗಾಂಧೀಜಿ ಉಪವಾಸ ಸತ್ಯಾಗ್ರಹ ನಡೆಸಿದರೂ ಮೊದಮೊದಲು ಅಂಬೇಡ್ಕರ ನಿಷ್ಠುರವಾಗಿಯೇ ಇದ್ದರು. ಕೊನೆಗೆ ನಡೆದ ಪೂನಾ ಒಪ್ಪಂದ ಅಂಬೇಡ್ಕರರಿಗೆ ಲಾಭದಾಯಕವಾಗಿಯೇ ಪರಿಣಮಿಸಿತು. ಹೀಗೆ ಹತ್ತಾರು ವರ್ಷಗಳಿಂದ ಎಲ್ಲಾ ನಿಟ್ಟಿನಿಂದ ಹೋರಾಡಿದರೂ ಅಸ್ಪೃಶ್ಯತೆ ಲವಲೇಶವೂ ಕೊನೆಗಾಣದಾದಾಗ, ೧೯೩೫ ರಲ್ಲಿ 'ಹಿಂದೂಗಳಾಗಿ ಅವಮಾನ ಸಹಿಸುವದಕ್ಕಿಂತ ಬೇರೊಂದು ಧರ್ಮವನ್ನು ಸ್ವೀಕರಿಸಿ ಸ್ವಾಭಿಮಾನಿಗಳಾಗಿ ಬಾಳು ವದು ಮೇಲು' ಎಂದು ಅಂಬೇಡ್ಕರ್ ಸಾರಿದರು. ಈ ನಿರ್ಧಾರ ಗಾಂಧೀಜಿಯವರಿಗೆ 'ದುರದೃಷ್ಟಕರ' ಎನಿಸಿದರೆ, ಬೇರೆ ಬೇರೆ ಧರ್ಮಗಳ ನಾಯಕರು ಅಂಬೇಡ್ಕರರನ್ನು ಅವರ ಅನುಯಾಯಿಗಳೊಂದಿಗೆ ತಮ್ಮ ಧರ್ಮಕ್ಕೆ ಸೇರಿಸಿಕೊಂಡು, ತಮ್ಮ ಸಂಖ್ಯಾಬಲವನ್ನು ಹೆಚ್ಚಿಸಿಕೊಳ್ಳಬಯಸಿದರು. ಪ್ರತಿಕ್ರಿಯೆ ಏನೇ ಇದ್ದರೂ, ಅಂಬೇಡ್ಕರರ ಮತಾಂತರ ಘೋಷಣೆಯಿಂದಾಗಿ ಅಸ್ಪೃಶ್ಯತೆಯು ಪ್ರಶ್ನೆ ಪ್ರಾಮುಖ್ಯತೆಯನ್ನು ಪಡೆಯಿತು. ಈ ಮತಾಂತರ ನಿರ್ಧಾರದ ಪರಿಣಾಮವಾಗಿ ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯರಿಗೆ ದಸರಾ ಸಮಯದಲ್ಲಿ ದರಬಾರ ಪ್ರವೇಶ ವನ್ನು ಕೊಡಲಾಯಿತು. ತ್ರಾವಣ್‌ಕೊರ್ ಸಂಸ್ಥಾನದಲ್ಲಿ ದೇವಾಲಯಗಳನ್ನು ಅಸ್ಪೃಶ್ಯರಿಗಾಗಿ ತೆರೆಯಲಾಯಿತು. ಕೊನೆಗೆ ಅಂಬೇಡ್ಕರರು ಪ್ರಜ್ಞೆ, ಕರುಣೆ, ಸಮತೆ – ಈ ಮೂರು ತತ್ವಗಳನ್ನು ಬೋಧಿಸುವ ಬೌದ್ಧ ಧರ್ಮವನ್ನು ಸ್ವೀಕರಿ

ಸಿದರು. ಹಲವು ಲಕ್ಷ ಅನುಯಾಯಿಗಳೊಂದಿಗೆ ಅವರು ನಾಗಪುರದಲ್ಲಿ ಮಾಡಿದ ಮತಾಂತರ ಐತಿಹಾಸಿಕ. ಅಂಬೇಡ್ಕರರ (೧೯೫೪ ಮೇ ಬಿಬಿಸಿ ಭಾಷಣದ) ಪ್ರಕಾರ 'ಪ್ರಜ್ಞೆ, ಕರುಣೆ, ಸಮತೆ – ಈ ತತ್ವಗಳಿಲ್ಲದ ಮನುಷ್ಯನ ಬದುಕು ಸುಖಕರವಾಗದು. ಬೌದ್ಧಧರ್ಮ ರಕ್ತರಹಿತ ಕ್ರಾಂತಿಯ ದಾರಿ'.

ಮಾನವತಾವಾದಿಯಾದ ಅಂಬೇಡ್ಕರರು ಇನ್ನೂ ಅನೇಕ ದಿಸೆಯಲ್ಲಿ ಕಾರ್ಯ ನಿರ್ವಹಿಸಿ, ಬಳಲುವ ಮಾನವಜನಾಂಗಕ್ಕಾಗಿ ಶ್ರಮಿಸಿದರು. ಸ್ವತಂತ್ರ ಕಾರ್ಮಿಕ ಪಕ್ಷದ ಅಧ್ಯಕ್ಷರಾಗಿ ಕೃಷಿಕರ–ಕಾರ್ಮಿಕರ ಸಂಘಟನೆ ಮತ್ತು ಅವರ ಹಿತಾಸಕ್ತಿಗಳ ರಕ್ಷಣೆಗೆ ಪ್ರಯತ್ನಪಟ್ಟರು. ಮುಂಬಯಿ ವಿಧಾನ ಸಭೆಯಲ್ಲಿ ಸಕ್ರಿಯವಾಗಿ ರಚನಾತ್ಮಕ ಕಾರ್ಯಗಳನ್ನು ಕೈಕೊಂಡರು. ಖೋತಿ ಪದ್ಧತಿಯ ಅಂತ್ಯ, ಕೃಷಿಕರ ದಾಸ್ಯದ ಕೊನೆ ಹಾಗೂ ಮಹಾರ ವತನಗಳ ಸೇವಾ ರದ್ಧತಿ – ಈ ಕುರಿತಾದ ಮಸೂದೆಗಳನ್ನು ಮಂಡಿಸಿದರು. ಸಾಂಸ್ಕೃತಿಕ, ಪ್ರಾದೇಶಿಕ, ಭಾಷಾವಾರು ನಿಷ್ಠೆಯ ವಿರುದ್ಧ ಅಖಂಡ ಭಾರತದ ಪರವಾಗಿ ವಾದಿಸಿದರು. ಕಾರ್ಮಿಕರ ಸಮಸ್ಯೆಗಳಾಗಲಿ, ಅಸ್ಪೃಶ್ಯರ ಸಮಸ್ಯೆಗಳೇ ಆಗಲಿ ಅಂಬೇಡ್ಕರರು ಅವುಗಳನ್ನು ಮಾನವೀಯ ಸಮಾನತೆಯ ದೃಷ್ಟಿಯಿಂದ ಕಾಣುತ್ತಿದ್ದರು. ಅಸ್ಪೃಶ್ಯರಿಗೆ ಸೈನಿಕ ಸೇವೆಯ ಅವಕಾಶಗಳಿರಬೇಕೆಂಬ ಅವರ ಬಹುಕಾಲದ ಬೇಡಿಕೆ ೧೯೪೧ ರಲ್ಲಿ ಈಡೇರಿತು. ವೈಸರಾಯರು ತಮ್ಮ ಕಾರ್ಯಕಾರಿ ಮಂಡಳಿಯಲ್ಲಿ ಈ ವರೆಗೂ ಯುದ್ಧ ಸಲಹಾಸಮಿತಿಯ ಸದಸ್ಯರಾಗಿದ್ದ ಅಂಬೇಡ್ಕರರನ್ನು ಸೇರಿಸಿಕೊಂಡು, ಕಾರ್ಮಿಕ ಇಲಾಖೆಯನ್ನು ಕೊಟ್ಟಾಗ, ಮುಂಬಯಿಯ ಪತ್ರಿಕೆಯೊಂದು ಇದು "ಅಸ್ಪೃಶ್ಯನೊಬ್ಬನ ಅದ್ವಿತೀಯ ಸಾಧನೆ" ಎಂದು ಪ್ರಶಂಸಿಸಿತು. ೧೯೪೬ರ ಮಾರ್ಚ ೧೫ ರಂದು ಅಟ್ಲಿಯವರು ಭಾರತಕ್ಕೆ ಪೂರ್ಣ ಸ್ವಾತಂತ್ರ್ಯವನ್ನು ಘೋಷಿಸಿದಾಗ, ಅವರು ಕಳಿಸಿದ ನಿಯೋಗಕ್ಕೆ ಅಂಬೇಡ್ಕರರು ಕೆಲವು ಒತ್ತಾಯದ ಬೇಡಿಕೆಗಳನ್ನು ಮಂಡಿಸಿದರು. ಅವುಗಳು : ೧. ಅಸ್ಪೃಶ್ಯರಿಗೆ ಸ್ವತಂತ್ರ ಮತಕ್ಷೇತ್ರಗಳನ್ನು ನೀಡಬೇಕು. ೨. ಅವರಿಗೆ ಕೇಂದ್ರ ಮತ್ತು ಪ್ರಾಂತೀಯ ಸರಕಾರದಲ್ಲಿ ಯೋಗ್ಯ ಪ್ರಾತಿನಿಧ್ಯ ನೀಡಬೇಕು. ಆ ನಂತರ ಕೂಡ ಅಸ್ಪೃಶ್ಯರಿಗೆ ರಾಜ್ಯಾಂಗ ಸಭೆಯಲ್ಲಿ ಪ್ರಾತಿನಿಧ್ಯ ಸಾಲದೆಂದು ಬ್ರಿಟಿಷ ಪ್ರಧಾನಿಗೆ ತಂತಿಕೊಟ್ಟರು, ಸತ್ಯಾಗ್ರಹ ಹೂಡಿದರು. ಕೊನೆಗೆ ಲಂಡನ್ನಿಗೆ ಹೋಗಿ ಕಾಮನ್ಸ ಸಭೆಯಲ್ಲಿ ತಮ್ಮ ನಿಲುವನ್ನು ವಿಶದಪಡಿಸಿದರು,

ಕಟ್ಟಾ ದೇಶಾಭಿಮಾನಿಯಾದ ಅಂಬೇಡ್ಕರರು ವಿಧಾನಸಭೆ, ರಾಜ್ಯಾಂಗ ಸಭೆ, ದುಂಡುಮೇಜಿನ ಪರಿಷತ್ತುಗಳಲ್ಲಿ ಮಾಡಿದ ಭಾಷಣಗಳು ಎಲ್ಲರೂ ತಲೆದೂಗುವಂತಿದ್ದವು. ಕೇಳಿದವರ ಮನದಲ್ಲಿ ಅವು ರಾಷ್ಟ್ರಾಭಿಮಾನವನ್ನು ಜಾಗೃತಗೊಳಿಸುತ್ತಿದ್ದವು, ರಾಜ್ಯಾಂಗ ಸಭೆಯಲ್ಲಿ ಮಾಡಿದ ಅವರ ಭಾಷಣದಲ್ಲಂತೂ ಅವರ ಸಾಮಾನ್ಯವಾದ

ಬಿರುನುಡಿಗಳ ಬದಲಾಗಿ ಒಬ್ಬ ಸ್ನೇಹಿತ, ಸಲಹೆಗಾರ, ಅಖಂಡ ರಾಷ್ಟ್ರದ ಹಿತ ಚಿಂತಕನನ್ನು ಕಾಣುವಂತಾಯಿತು.

ಕಾನೂನತಜ್ಞ ಅಂಬೇಡ್ಕರರು ಸ್ವಾತಂತ್ರ್ಯದ ನಂತರ ಭಾರತದ ಪ್ರಥಮ ಕಾನೂನು ಮಂತ್ರಿ ಆದರು. ಸಂವಿಧಾನತಜ್ಞರಾದ ಅವರು ರಾಷ್ಟ್ರದ ಧ್ಯೇಯೋದ್ದೇಶಗಳನ್ನೂ ರಾಜ್ಯಾಂಗದ ಆಡಳಿತ ವಿಧಾನಗಳನ್ನೂ ನಿರ್ದಿಷ್ಟಪಡಿಸುವ ಸಂವಿಧಾನವನ್ನೂ ರೂಪಿಸುವ ರೂವಾರಿಯಾದರು. ನವೆಂಬರ್ ೨೬ ರಂದು ರಾಜ್ಯಾಂಗ ಸಭೆ, ಅದನ್ನು ಅಂಗೀಕರಿಸಿದಾಗ ನೆಹರೂ ಅವರು ಅಂಬೇಡ್ಕರರನ್ನು 'ಸಂವಿಧಾನಶಿಲ್ಪಿ' ಎಂದು ಕರೆದುದಲ್ಲದೆ ಅಧ್ಯಕ್ಷರಾದ ರಾಜೇಂದ್ರ ಪ್ರಸಾದರೂ ಕೂಡ ಅಂಬೇಡ್ಕರರನ್ನು 'ಸಂವಿಧಾನ ಸಮಿತಿಯ ಸದಸ್ಯರನ್ನಾಗಿ, ಅಧ್ಯಕ್ಷರನ್ನಾಗಿ ಮಾಡಿದ ಸೂಕ್ತ ನಿರ್ಣಯಕ್ಕೆ ಸರಿಸಮಾನವಾದ ನಿರ್ಣಯ ಇನ್ನೊಂದಿರಲಾರದು' ಎಂದು ಪ್ರಶಂಸಿಸಿದರು. ಈ ಸಂವಿಧಾನದಲ್ಲಿ ಅಸ್ಪೃಶ್ಯತೆಯನ್ನು ಕಾನೂನು ಬದ್ಧವಾಗಿ ಹೋಗಲಾಡಿಸಿದ್ದಲ್ಲದೆ ಅಸ್ಪೃಶ್ಯತೆಯನ್ನಾಚರಿಸುವುದು ದಂಡನಾರ್ಹವೆನಿಸಿದೆ. ಆದರೆ ಸಂವಿಧಾನದಷ್ಟೇ ಮಹತ್ವದ ಅಂಬೇಡ್ಕರರು ಸಂಬಂಧಪಟ್ಟ ಶಾಸ್ತ್ರಗ್ರಂಥಗಳನ್ನೆಲ್ಲ ಪರಾಮರ್ಶಿಸಿ, ಬೇರೆ ಬೇರೆ ಅಭಿಪ್ರಾಯಗಳನ್ನು ಹೊಂದಿದ ಅನೇಕ ಪಂಡಿತರೊಡನೆ ಕೂಲಂಕಷವಾಗಿ ಚರ್ಚಿಸಿ, ಸಮಗ್ರವಾಗಿ ರೂಪಿಸಿದ ಹಿಂದೂ ಮಸೂದೆ ವಿವಿಧ ವಿರೋಧವನ್ನು ಎದುರಿಸಬೇಕಾಯಿತು. ನೆಹರೂರವರು ಮೊದಲಿನ ಉತ್ಸಾಹ ತೋರಿಸಲಿಲ್ಲ. ಸರದಾರ ಪಟೇಲ ಮತ್ತು ರಾಜೇಂದ್ರಪ್ರಸಾದರಿಬ್ಬರೂ ವಿರೋಧಿಸಿದರು. ಇತರರೂ ಕೂಡ 'ಮಸೂದೆಯಲ್ಲಿ ಸೂಚಿಸಿದ ಬದಲಾವಣೆಗಳು ಹಿಂದೂ ಧರ್ಮದ ಸಂಪ್ರದಾಯಗಳಿಗೆ ವಿರೋಧವಾಗಿವೆ, ಜಾತ್ಯಾತೀತತೆಯ ಹೆಸರಿನಲ್ಲಿ ಅವನ್ನು ನಾಶಗೊಳಿಸಲಾಗದು, ಮಸೂದೆಗೆ ಜನಾಭಿಪ್ರಾಯದ ಬೆಂಬಲವಿಲ್ಲ' ಎಂಬೆಲ್ಲ ಕಾರಣಗಳಿಂದಾಗಿ ತೀವ್ರವಾಗಿ ವಿರೋಧ ವ್ಯಕ್ತಪಡಿಸಿದರು. ಕೊನೆಗೆ ಅಂಬೇಡ್ಕರರು ಹಿಂದೂ ಮಸೂದೆಯನ್ನು ಮಂಡಿಸಿದರೂ, ಅವರ ಚರ್ಚೆಯನ್ನು ಚುನಾವಣಾ ನಂತರ ಮುಂದಿನ ಅಧಿವೇಶನಕ್ಕೆ ಮುಂದೂಡಲಾಯಿತು. ಇದರ ಪರಿಣಾಮ ಅಂಬೇಡ್ಕರರ ತೀವ್ರ ನಿರಾಶೆ ಮತ್ತು ಸಂಪುಟಕ್ಕೆ ಅವರ ರಾಜೀನಾಮೆ. ಆದರೆ ಅವರೇ ಸ್ಥಾಪಿಸಿದ 'ಪೀಪಲ್ ಎಜ್ಯುಕೇಶನ್ ಸೊಸೈಟಿ'ಯ ಮುಂಬಯಿಯ ಸಿದ್ಧಾರ್ಥ ಕಾಲೇಜು, ಔರಂಗಾಬಾದದಲ್ಲಿಯ ವಿದ್ಯಾಲಯ – ಹೀಗೆ ಇನ್ನೂ ಅನೇಕ ವಿದ್ಯಾಸಂಸ್ಥೆಗಳ ಕಾರ್ಯಗಳಲ್ಲಿ ಅವರು ನಿರತರಾದರು.

ಅಂಬೇಡ್ಕರರ ಬಹುಮುಖ ವ್ಯಕ್ತಿತ್ವ, ವಿದ್ವತ್ತು, ಕಾರ್ಯವ್ಯಾಪ್ತಿಗಳನ್ನು ಗುರುತಿಸಿ ಉಸ್ಮಾನಿಯಾ ವಿಶ್ವವಿದ್ಯಾಲಯ ಅವರಿಗೆ 'ಡಾಕ್ಟರ್ ಆಫ್ ಲಿಟರೇಚರ್' ಗೌರವ ಪದವಿಯನ್ನು ಕೊಟ್ಟರೆ, ಅಮೇರಿಕೆಯ ಕೊಲಂಬಿಯಾ ವಿಶ್ವವಿದ್ಯಾಲಯ

ಅವರಿಗೆ 'ಡಾಕ್ಟರ್ ಆಫ್ ಲಾಲ್' ಗೌರವ ಪದವಿಯನ್ನು ದಯಪಾಲಿಸಿತು. ಆ ಸಮಯದಲ್ಲಿ ಕೆನಡಾದ ವಿದೇಶಾಂಗ ಸಚಿವರಾದ ಲೆಸ್ಟರ್ ಪಿಯರ್‍ಸ ಜೊತೆ ಪದವಿಯನ್ನು ಸ್ವೀಕರಿಸಿದಾಗ ಅಂಬೇಡ್ಕರರನ್ನು 'ಭಾರತದ ಸಂವಿಧಾನ ಕರ್ತೃ, ಮಂತ್ರಿ ಮಂಡಲದ ಸದಸ್ಯ, ರಾಜ್ಯಸಭೆಯ ಗಣ್ಯ, ಭಾರತದ ಹಿರಿಯ ನಾಗರಿಕ, ಶ್ರೇಷ್ಠ ಸಮಾಜ ಸಂಧಾರಕ, ಮಾನವೀಯ ಹಕ್ಕುಗಳ ವೀರಪುರಸ್ಕರ್ತ' ಎಂದು ಪ್ರಶಂಸಿಸಲಾಯಿತು.

ಅಮೇರಿಕೆಯಲ್ಲಿಯ ನಿಗ್ರೋಗಳಿಗಿಂತ, ಈಜಿಪ್ತಿನಲ್ಲಿಯ ಇಸ್ರೇಲಿಗಳಿಗಿಂತ, ಜರ್ಮನಿಯಲ್ಲಿಯ ಜ್ಯೂಗಳಿಗಿಂತ ಹೀನಸ್ಥಿತಿಯಲ್ಲಿರುವ ಭಾರತದಲ್ಲಿಯ ಹಿಂದೂ ಸಮಾಜದ ಅಸ್ಪೃಶ್ಯರ ನಿಮ್ನವರ್ಗದವರ ಏಳಿಗೆಗಾಗಿ ಅಂಬೇಡ್ಕರರು ತಮ್ಮ ಜೀವನವನ್ನೇ ಮೀಸಲಾಗಿಟ್ಟರು. ಲೋಕದ ಲಕ್ಷ್ಯವನ್ನಿವರತ್ತ ಸೆಳೆದ ಮೊದಲಿಗರು. ಶತ ಶತಮಾನಗಳಿಂದಲೂ ತುಳಿತಕ್ಕೊಳಗಾದ ಈ ವರ್ಗದ ಜನಕ್ಕೆ ನಾಗರೀಕ ಜೀವನಾವಕಾಶ ಮತ್ತು ರಾಜಕೀಯ ಅಧಿಕಾರದ ಮುಖಾಂತರ ಆರ್ಥಿಕ ಸಾಮಾಜಿಕ ಉನ್ನತಿ ದೊರಕಿಸುವದೇ ಅಂಬೇಡ್ಕರರ ಆಜೀವ ಧ್ಯೇಯೋದ್ದೇಶವಾಗಿದ್ದಿತು. ಮೂವತ್ತು ವರ್ಷಗಳವರೆಗೆ ಅವರು ಮಾಡಿದ ಸತತ ಪ್ರಯತ್ನಗಳ ಫಲವಾಗಿ ಈ ಜನವರ್ಗಕ್ಕೆ ಹೊಸಜೀವನ ಲಭಿಸಿದೆ. ಅಸಮಾನತೆ, ವಿದ್ಯೆ, ಉದ್ಯೋಗಗಳಲ್ಲಿ, ಜೀವನಕ್ರಮದಲ್ಲಿ ಕೆಲಮಟ್ಟಿಗಾದರೂ ಒಳ್ಳೆಯ ಬದಲಾವಣೆ ಮೂಡಿದೆ. ಎಲ್ಲ ಕ್ಷೇತ್ರಗಳಲ್ಲೂ ಕೆಲಮಟ್ಟಿಗಾದರೂ ಸ್ಥಾನ ದೊರಕುವಂತಾಗಿದೆ. ಅಂಬೇಡ್ಕರರ ಜೀವನಾಧ್ಯಯನ ಮಾಡಿ, ಅವರ ತತ್ವಗಳನ್ನರಿತು ಅವರ "ವಿದ್ಯೆ, ಸಂಘಟನೆ, ಹೋರಾಟ"ದ ಕರೆಗೆ ಓಗೊಟ್ಟದ್ದಾದರೆ, ಅವರ ದಾರಿಯನ್ನನುಸರಿಸಿದ್ದಾದರೆ ತುಳಿತಕ್ಕೊಳಪಟ್ಟ ಜನವರ್ಗ ಆರ್ಥಿಕ-ಸಾಮಾಜಿಕ-ಸಾಂಸ್ಕೃತಿಕ-ರಾಜಕೀಯ ಕ್ಷೇತ್ರಗಳಲ್ಲಿ ಮೇಲೇರೀತು. ಹೀಗಾದಾಗಲೇ ಅಂಬೇಡ್ಕರರು ಈ ಜನಕ್ಕಾಗಿ ಜೀವ ಸವೆಸಿದ್ದು ಸಾರ್ಥಕವೆನಿಸುತ್ತದೆ. ಭಾರತದ ಈ ರತ್ನಕ್ಕೆ ನಾವು ಮಾಡುವ ನೈಜ ನಮನ ಇದಾಗುತ್ತದೆ.

● ●

ಡಾ. ಅಂಬೇಡಕರ : ಸಾಮಾಜಿಕ ಮತ್ತು ಶೈಕ್ಷಣಿಕ ವಿಚಾರಗಳು

● ಜೋಗನ್ ಶಂಕರ

ಡಾ. ಅಂಬೇಡ್ಕರರು ವಿವಿಧ ವಿಷಯಗಳ ಬಗ್ಗೆ ಪಾಂಡಿತ್ಯಪೂರ್ಣ ಬರಹಗಳನ್ನು ಬರೆದಿದ್ದಾರೆ, ಭಾಷಣಗಳನ್ನು ಮಾಡಿದ್ದಾರೆ. ಅವರ ಬೌದ್ಧಿಕ ಮತ್ತು ಶೈಕ್ಷಣಿಕ ಸಾಧನೆಗಳು ಮಹತ್ತರವಾದವುಗಳು. ಅವರು ಪಡೆದ ಔಪಚಾರಿಕ ಶಿಕ್ಷಣ, ಅಸ್ಪೃಶ್ಯನ ವೈಯಕ್ತಿಕ ಅನುಭವಗಳು ಮತ್ತು ನಮ್ಮ ದೇಶದ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ಸವರ್ಣೀಯ ನಾಯಕರುಗಳನ್ನು ಅತೀ ಸಮೀಪದಿಂದ ಗಮನಿಸುವ ಅವಕಾಶ ಪಡೆದ ಅಂಬೇಡ್ಕರರು ನಮ್ಮ ದೇಶದ ಸಾಮಾಜಿಕ ವ್ಯವಸ್ಥೆಯನ್ನು ತಮ್ಮ ವಿಶಿಷ್ಟ ದೃಷ್ಟಿಯಿಂದ ವಿಶ್ಲೇಷಿಸಿದರು.

ಅಂಬೇಡ್ಕರರು ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರದ ವಿದ್ಯಾರ್ಥಿಗಳಾಗಿದ್ದರು. ಆಗಿನ್ನೂ ಈ ಎರಡೂ ಶಾಸ್ತ್ರಗಳು ಶೈಶವಾವಸ್ಥೆಯಲ್ಲಿದ್ದವು. ಚಾರ್ಲ್ಸ್ ಡಾರ್ವಿನ್ ಪ್ರತಿಪಾದಿಸಿದ ವಿಕಾಸ ಸಿದ್ಧಾಂತವು ಎಲ್ಲ ಶಾಸ್ತ್ರಗಳ ಮೇಲೂ ಮೋಡಿ ಮಾಡಿದ ಕಾಲವದು. ಸಮಾಜಶಾಸ್ತ್ರಜ್ಞರೂ ಮತ್ತು ಮಾನವಶಾಸ್ತ್ರಜ್ಞರೂ ಸಾಮಾಜಿಕಸಂಸ್ಥೆಗಳ ಮತ್ತು ರೂಢಿ ಸಂಪ್ರದಾಯಗಳ ಹುಟ್ಟು, ಬೆಳವಣಿಗೆಗಳನ್ನು ವಿಕಾಸ ಸಿದ್ಧಾಂತದ ಮೂಲಕ ವಿವರಿಸುವುದು ಫ್ಯಾಷನ್ ಆಗಿದ್ದ ಕಾಲವದು. ಡಾ. ಅಂಬೇಡ್ಕರರು ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಯಾಗಿದ್ದಾಗ ಆಗ ಪ್ರಚಲಿತವಿದ್ದ ಸಾಮಾಜಿಕ ಸಿದ್ಧಾಂತಗಳಲ್ಲಿ ಕೆಲವೊಂದು ನ್ಯೂನತೆಗಳಿದ್ದವು. ರೂಢಿ-ಸಂಪ್ರದಾಯ, ಸಾಮಾಜಿಕ ಸಂಸ್ಥೆಗಳ ಮೂಲ ಬೆಳವಣಿಗೆಯನ್ನು ಕಂಡುಹಿಡಿಯಲು ಐತಿಹಾಸಿಕ ದಾಖಲೆಗಳ, ಪಳೆಯುಳಿಕೆಗಳ ಸಾಕ್ಷಿ ಬೇಕು. ಇವೆರಡೂ ಇಲ್ಲದ ಜಾತಿವ್ಯವಸ್ಥೆ ಭಾರತೀಯ ರೂಢಿ-ಸಂಪ್ರದಾಯಗಳ ವಿವರಣೆಯು ಇತಿಹಾಸವಾಗಲಾರದು, ಶಾಸ್ತ್ರೀಯ ವಿವರಣೆಯಂತೂ ಖಂಡಿತ ಆಗಲಾರದು. ಈ ನ್ಯೂನತೆಯು ಮುಂದೆ ವ್ಯಕ್ತಪಡಿಸಿರುವ ಡಾ. ಅಂಬೇಡ್ಕರರ ವಿಚಾರಗಳಲ್ಲಿಯೂ ಕಂಡುಬರುತ್ತವೆ.

ಹಿಂದೂ ಸಾಮಾಜಿಕ ಸಂಘಟನೆಯ ಬಗ್ಗೆ ಅದರಲ್ಲೂ ವಿಶೇಷವಾಗಿ ಜಾತಿ ವ್ಯವಸ್ಥೆಯ ಬಗೆಗಿನ ಅವರ ವಿಚಾರಗಳು ಅತೀ ಮಹತ್ವವಾದವುಗಳು. ಕೊಲಂಬಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿದ್ದಾಗ ಅವರು ೧೯೧೬ರಲ್ಲಿ ಡಾ. ಎ. ಎ. ಗೋಲ್ಡನ್‌ವೈಸರ್ ಅವರ ಮಾರ್ಗದರ್ಶನದಲ್ಲಿ ಒಂದು ಪ್ರಬಂಧವನ್ನು ಮಂಡಿಸಿದ್ದರು. ವಿಷಯ : 'ಭಾರತದಲ್ಲಿನ ಜಾತಿಗಳು, ಅವುಗಳ ಕಾರ್ಯವಿಧಾನ, ಮೂಲ ಮತ್ತು ಬೆಳವಣಿಗೆ'. ಅವರ ಇನ್ನೊಂದು ಕೃತಿ 'ಅನಿಹಿಲೇಶನ್ ಆಫ್ ಕಾಸ್ಟ್' (ಜಾತಿಯ ವಿನಾಶ). ಲಾಹೋರಿನ ಜಾತ-ಪಾತ ತೋಡಕ್ ಮಂಡಲದ ಸದಸ್ಯರು ಅಂಬೇಡ್ಕರರವರಿಗೆ ಅಧ್ಯಕ್ಷೀಯ ಭಾಷಣ ಮಾಡಲು ಆಮಂತ್ರಿಸಿ, ಕೊನೆಗೆ ಆ ಕಾರ್ಯಕ್ರಮವನ್ನೇ ರದ್ದುಪಡಿಸಿದರು. ಅಧ್ಯಕ್ಷೀಯ ಭಾಷಣವನ್ನೇ 'ಅನಿಹಿಲೇಶನ್ ಆಫ್ ಕಾಸ್ಟ' (ಜಾತಿಯ ವಿನಾಶ) ಎಂಬ ಹೆಸರಿನ ಗ್ರಂಥವನ್ನಾಗಿ ೧೯೩೬ ರಲ್ಲಿ ಪ್ರಕಟಿಸಲಾಯಿತು. ಈ ಎರಡು ಕೃತಿಗಳ ವಿಷಯಕ್ಕೆ ಸಂಬಂಧಿಸಿದ ಅವರ ಇನ್ನೆರಡು ಕೃತಿಗಳಾದ 'ವ್ಹೂ ವೆರ್ ಶೂದ್ರಾಸ್ ?' (೧೯೪೬) ಮತ್ತು 'ವ್ಹೂ ವೆರ್ ದಿ ಅನ್‌ಟಚೆಬಲ್ಲ ?' (೧೯೪೮) ಹಿಂದೂ ಸಾಮಾಜಿಕ ವ್ಯವಸ್ಥೆ, ಅಸ್ಪೃಶ್ಯರು ಮತ್ತು ಶೂದ್ರರ ಮೂಲದ ಬಗ್ಗೆ ವಿವರಣೆ ನೀಡುತ್ತವೆ.

ಡಾ. ಅಂಬೇಡ್ಕರರು ಜಾತಿ ಮತ್ತು ವರ್ಣವ್ಯವಸ್ಥೆಗಳ ನಡುವಿನ ವ್ಯತ್ಯಾಸವನ್ನು ಚೆನ್ನಾಗಿ ವಿವರಿಸಿದ್ದಾರೆ. ವರ್ಣವ್ಯವಸ್ಥೆಯು ಉದ್ಯೋಗದ ಆಧಾರದ ಮೇಲೆ ಅವಲಂಬಿಸಿದ ಜಾತಿಪದ್ಧತಿಗಿಂತ ಮೊದಲಿದ್ದ ಸ್ತರವಿನ್ಯಾಸವ್ಯವಸ್ಥೆ. ಈ ವ್ಯವಸ್ಥೆಯಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರಗಳೆಂಬ ವರ್ಣಗಳಿದ್ದು ಪುರೋಹಿತರು, ಸೈನಿಕ, ವ್ಯಾಪಾರಿ ಹಾಗೂ ಕೈಕೆಲಸಗಾರರು ಮತ್ತು ಸೇವಕರು ಎಂಬ ವರ್ಗಗಳಿದ್ದವು. ವರ್ಣವ್ಯವಸ್ಥೆಯು ಮುಕ್ತ ಅಥವಾ ತೆರೆದ ಸಾಮಾಜಸ್ತರ ವಿನ್ಯಾಸ ಹೊಂದಿತ್ತು. ಯೋಗ್ಯತೆ ಮತ್ತು ಕುಶಲತೆಯ ಆಧಾರದ ಮೇಲೆ ಆಯಾ ವ್ಯಕ್ತಿಯ ಸಾಮಾಜಿಕ ಸ್ಥಾನಮಾನವನ್ನು ನಿರ್ಧರಿಸಲಾಗುತ್ತಿತ್ತು. ಈ ವ್ಯವಸ್ಥೆಯಲ್ಲಿ ಸಾಮಾಜಿಕ ಚಲನೆಯು ಸುಲಭಸಾಧ್ಯವಿತ್ತು. ಇದಕ್ಕೆ ಪ್ರತಿಯಾಗಿ ಜಾತಿಪದ್ಧತಿಯಲ್ಲಿ ವ್ಯಕ್ತಿಯ ಸಾಮಾಜಿಕ ಸ್ಥಾನಮಾನ ಆತನು ಜನ್ಮತಾಳಿದ ಜಾತಿಯ ಅನುಗುಣವಾಗಿ ನಿರ್ಧರಿಸುವಂತಹ ಮುಚ್ಚಿದ ಸಾಮಾಜಿಕ ಸ್ತರವಿನ್ಯಾಸ ಪದ್ಧತಿಯಾಗಿ ಬೆಳೆಯಿತು. ಕಾಲಕ್ರಮೇಣ ಜಾತಿಯ ಕಟ್ಟಳೆಗಳನ್ನು ವ್ಯವಸ್ಥಿತವಾಗಿ ಕ್ರೋಢೀಕರಿಸಿ, ಅದಕ್ಕೊಂದು ತಾತ್ವಿಕ ತಳಹದಿಯನ್ನು, ನ್ಯಾಯ-ನಿಬಂಧನೆಗಳನ್ನು ಮನುವಿನಂಥವರು ರಚಿಸಿದರು. ಅದು ಸಾಮಾಜಿಕ ಚಲನೆಗೆ ಅವಕಾಶವಿಲ್ಲದ ಬದಲಾವಣೆಯ ಅಂಶಗಳು ಎಷ್ಟೊಂದು ಪ್ರಭಾವ ಬೀರಿದರೂ ಅತಿಯಾದ ಸ್ಥಿತಿಸ್ಥಾಪಕತ್ವಗುಣ ಹೊಂದಿಯೂ ಗಟ್ಟಿಯಾಗಿ ಉಳಿದಿರುವ ವ್ಯವಸ್ಥೆ.

ಡಾ. ಅಂಬೇಡ್ಕರರು ಪ್ರಸ್ತುತಪಡಿಸಿದ ಪ್ರಬಂಧದಲ್ಲಿ ಸೆನಾರ್ಟ, ನೆಸ್ಫೀಲ್ಡ್, ರೈಸ್ಲೀ ಮತ್ತು ಕೇತ್ಕರ್‌ರವರು ವಿವರಿಸಿದ ಜಾತಿಯ ಬಗೆಗಿನ ಸಿದ್ಧಾಂತಗಳನ್ನು ಪರೀಕ್ಷಿಸಿ, ಮಡಿ–ಮೈಲಿಗೆ, ಅಂತರ್ ವಿವಾಹ ಮತ್ತು ಸಹಭೋಜನ ನಿರ್ಬಂಧ, ಜನ್ಮದಿಂದ ಮಾತ್ರ ಲಭ್ಯವಿರುವ ಜಾತಿಯ ಸದಸ್ಯತ್ವ ಮುಂತಾದ ಜಾತಿಯ ಕೇಂದ್ರ ಬಿಂದು ಆಗಿರುವ ವಿಷಯಗಳನ್ನು ವಿಮರ್ಶಿಸಿದ್ದಾರೆ. ಮಡಿ–ಮೈಲಿಗೆಯ ವಿಚಾರಗಳು ಜಾತಿವ್ಯವಸ್ಥೆಗೆ ಸಂಬಂಧಿಸಿದವುಗಳಲ್ಲವೆಂದು ಅವು ಪೌರೋಹಿತ್ಯ ಆಚರಣೆಗೆ ಸಂಬಂಧಿಸಿ ದವುಗಳೆಂದು ಅಂಬೇಡ್ಕರರು ಅಭಿಪ್ರಾಯಪಡುತ್ತಾರೆ. ಪುರೋಹಿತಶಾಹಿಗಳು ಈ ಅಂಶಗಳನ್ನು ಜಾತಿವ್ಯವಸ್ಥೆಯಲ್ಲಿ ಉನ್ನತಸ್ಥಾನ ಪಡೆಯುವ ಸಲುವಾಗಿ ಉಪಯೋಗಿಸಿಕೊಂಡರು. ಅಂಬೇಡ್ಕರರು ಪುರೋಹಿತ ಮತ್ತು ಮಡಿಗಳೆರಡೂ ತುಂಬ ಹಳೆಯ ಸಂಗಾತಿಗಳೆಂದು ಹೇಳುತ್ತಾರೆ.

ಡಾ. ಸಿ. ಪಾರ್ವತಮ್ಮ ನಮ್ಮ ತಲೆಮಾರಿನ ಹೆಸರಾಂತ ಸಮಾಜಶಾಸ್ತ್ರಜ್ಞೆ. ಅವರ ಪ್ರಕಾರ ಧಾರ್ಮಿಕತೆ ಮಡಿ–ಮೈಲಿಗೆಯ ವಿಚಾರಗಳನ್ನು ತುಂಬ ಸರಳಗೊಳಿಸಿ, ಅಂಬೇಡ್ಕರರು ತಿರಸ್ಕರಿಸಿದ್ದು ಸರಿಯಲ್ಲವೆಂದು ಅಭಿಪ್ರಾಯಪಡುತ್ತಾರೆ. ಪಾರ್ವತಮ್ಮನವರ ಪ್ರಕಾರ ಮಡಿ–ಮೈಲಿಗೆಯ ಕಲ್ಪನೆಗಳು ಜಾತಿಪದ್ಧತಿಯ ಅತೀ ಮುಖ್ಯವಾದ ಅಂಶಗಳು. ನಮ್ಮ ನಿತ್ಯ ಜೀವನದ ಎಲ್ಲ ವಿಷಯಗಳ ಮೂಲಕ ಈ ಅಂಶಗಳು ಪ್ರಕಟಗೊಳ್ಳುತ್ತವೆ. ಮಡಿ–ಮೈಲಿಗೆಯ ಕಲ್ಪನೆಗಳು ಕಸಬುಗಳಿಗೆ ಸಂಬಂಧಿಸಿದ್ದು, ಕಸುಬುಗಳ ಆಧಾರದ ಮೇಲೆ ಏಣಿಶ್ರೇಣಿಯ ಸಾಮಾಜಿಕ ಸ್ತರ ವಿನ್ಯಾಸವುಂಟಾಗಿರುವುದನ್ನು ನಾವು ಪ್ರಾಚೀನಕಾಲದ ಉದಾಹರಣೆಗಳೊಂದಿಗೆ ಪ್ರಸ್ತುತ ಕಾಲದ ಉದಾಹರಣೆಗಳನ್ನೂ ಕಾಣಬಹುದು. ಸಮಾಜದಲ್ಲಿ ಉನ್ನತ ಸ್ಥಾನಮಾನಗಳನ್ನು ಒದಗಿಸುವ ವೃತ್ತಿಗಳನ್ನು ಉನ್ನತ ಜಾತಿಯವರು ಕೈಗೊಂಡಿದ್ದು, ಇಂತಹ ವೃತ್ತಿಗಳು ಧಾರ್ಮಿಕ ಆಚರಣೆಗೆ ಸಂಬಂಧಿಸಿದ ಮೈಲಿಗೆಯನ್ನು ಹೊಂದಿರುವುದಿಲ್ಲ. ಸಾಮಾನ್ಯವಾಗಿ ಮೈಮುರಿದು ದುಡಿಯುವ ವೃತ್ತಿ ಕೀಳೆಂದೂ, ಇನ್ನೂ ಕೆಲವು ವೃತ್ತಿಗಳು ಅತೀ ಕೀಳೆಂದೂ ಮನು ನಿರ್ಧರಿಸಿದ್ದಾನೆ. ಉದಾಹರಣೆಗೆ ಕಸಾಯಿ ಭಂಗಿ ಜಾಡಮಾಲೆ ಕೆಲಸ, ಚರ್ಮದ ಕೆಲಸ ಇತ್ಯಾದಿ. ಭಾರತದ ಅಸ್ಪೃಶ್ಯರಿಗೆ ತಗುಲಿರುವ ಸಾಮಾಜಿಕ ಕಳಂಕವು ಅವರು ಕೈಗೊಳ್ಳುವ ಕಸುಬಿನಿಂದ ಉದ್ಭವವಾಗುವಂತಹದು. ಜಾತಿ ಮತ್ತು ವೃತ್ತಿಗಳನ್ನು ಒಂದೇ ಹೆಸರಿನಿಂದಲೇ ಕೆಲವೊಮ್ಮೆ ಕರೆಯುಬಹುದು. ಉದಾಹರಣೆಗೆ – ಚಮ್ಮಾರ.

ಅಸ್ಪೃಶ್ಯರು ಹಿಂದೂ ಸಾಮಾಜಿಕ ವ್ಯವಸ್ಥೆಯ ಅತೀ ಕೆಳಗಿನ ಸ್ತರದಲ್ಲಿರುವ ಸಮೂಹ. ಅವರು ಹಿಂದೂ ಸಮಾಜಕ್ಕೆ ಅತೀ ಅವಶ್ಯಕ ಸೇವೆಮಾಡುವ ಕಾರ್ಯ ಕೈಗೊಂಡರೂ ಎಂದೂ ಬಿಡದ ಅತಿಯಾದ ಕಳಂಕದಿಂದ ಶೋಷಣೆಗೊಂಡವರು.

ಮೈಲಿಗೆಯು ಪ್ರತಿಬಂಧವು ಈ ಜನರನ್ನು ಹಿಂದೂ ಸಮಾಜದ ಇತರರಿಂದ ಬೇರ್ಪಡಿಸಿದೆ. ಇವರ ಸ್ಪರ್ಶ ಮಾತ್ರದಿಂದಲೇ ಮೈಲಿಗೆಗೊಂಡವರು ಶುದ್ಧೀಕರಣ ಆಚರಣೆಗಳಿಂದ 'ಮಡಿ' ಹೊಂದಿ ಸರಿಹೋಗಬಹುದು. ಆದರೆ ಅಸ್ಪೃಶ್ಯರ ಮೈಲಿಗೆಯನ್ನು ದೂರಗೊಳಿಸುವ ಯಾವುದೇ ಶುದ್ಧೀಕರಣ ವಿಧಾನಗಳು ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿಲ್ಲ. ಸಹಸಂಬಂಧ ಮತ್ತು ವಿವಾಹಗಳಿಗೆ ಸಂಬಂಧಿಸಿದ ಕಟ್ಟಳೆಗಳೂ ತಮ್ಮ ಜಾತಿಯವರೊಂದಿಗೆ ಮಾತ್ರ ಆಹಾರವನ್ನು ಸ್ವೀಕರಿಸಿ, ಅವರೊಂದಿಗೆ ಮಾತ್ರ ವೈವಾಹಿಕ ಸಂಬಂಧಗಳನ್ನೇರ್ಪಡಿಸುವ ಈ ಎಲ್ಲ ಕ್ರಿಯೆಗಳು ಕೂಡ ತಮ್ಮ ಮಡಿಯನ್ನು ಉಳಿಸಿಕೊಳ್ಳುವ ಪ್ರಯತ್ನಗಳೇ.

ಅಂಬೇಡ್ಕರರು ಡಾ. ಕೇತ್ಕರರು ಜಾತಿಯ ಬಗೆಗೆ ಬರೆದ ವಿಷಯವನ್ನು ಚರ್ಚಿಸುತ್ತ, ಜಾತಿಯನ್ನು ವಿವರಿಸಬೇಕಾದರೆ ಅದನ್ನು ಇಡೀ ಜ್ಯಾತಿವ್ಯವಸ್ಥೆಯೊಟ್ಟಿಗೆ ಇಟ್ಟು ವಿಶ್ಲೇಷಿಸಬೇಕಾಗುತ್ತದೆ ಎಂದು ಹೇಳುತ್ತಾರೆ. ಕೇತ್ಕರ್‌ವರು ಜಾತಿಯ ಎರಡು ವಿಶಿಷ್ಟ ಲಕ್ಷಣಗಳ ಮೇಲೆ ಒತ್ತುಕೊಟ್ಟಿದ್ದಾರೆ. ಒಳಬಾಂಧವ್ಯ ವಿವಾಹ ಮತ್ತು ಜನ್ಮದ ಆಧಾರದ ಮೇಲೆ ಜಾತಿಯ ಸದಸ್ಯತ್ವ. ಅಂಬೇಡ್ಕರರ ಅಭಿಪ್ರಾಯದಲ್ಲಿ ಕೇತ್ಕರ್‌ರವರು ತಿಳಿಸಿದ ಎರಡು ಲಕ್ಷಣಗಳು ಒಂದೇ ಲಕ್ಷಣದ ಎರಡು ರೂಪಗಳೇ, ಅಂದರೆ ಅಂತರ್ ವಿವಾಹಗಳನ್ನು ನಿಷೇಧಿಸಿ ಒಳಬಾಂಧವ್ಯ ವಿವಾಹಗಳನ್ನೇ ಏರ್ಪಡಿಸಿದಾಗ ಆ ಜಾತಿಯ ಸದಸ್ಯತ್ವವು ಹುಟ್ಟಿನಿಂದಲೂ ಒಂದೇ ಗುಂಪಿಗೆ ಸೀಮಿತಗೊಳಿಸಿದಂತಾಗುವುದು. ಆದುದರಿಂದ ಜಾತಿಯ ವಿಶಿಷ್ಟ ಲಕ್ಷಣವೆಂದರೆ 'ಎಂಡೋಗಮಿ' ಅಂದರೆ ಅಂತರ್ ಜಾತಿಯ ವಿವಾಹ ನಿಷೇಧ ಅಥವಾ ಒಳಬಾಂಧವ್ಯ ವಿವಾಹ. ಸ್ವ–ಗುಂಪುಗಳಲ್ಲಿಯೇ ಮದುವೆಯಾಗಬೇಕೆಂಬ ಕಟ್ಟಳೆಯೇ ಜಾತಿಯ ವಿಶಿಷ್ಟ ಲಕ್ಷಣವೆಂಬ ಈ ವಾದಕ್ಕೆ ಪ್ರತಿವಾದಗಳೂ ಉಂಟು. ಉದಾಹರಣೆಗೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿನ ನಿಗ್ರೋಗಳು ಮತ್ತು ಬಿಳಿಯರೂ ತಮ್ಮ ತಮ್ಮ ಗುಂಪುಗಳಲ್ಲಿಯೇ ಮದುವೆಯಾಗುವ ಕಟ್ಟಳೆ ಹೊಂದಿದ್ದರೂ ಕೂಡ ಅವರಲ್ಲಿ ಜಾತಿವ್ಯವಸ್ಥೆ ತರಹದ ಸ್ತರೀಕರಣ ಏರ್ಪಡಲಿಲ್ಲವೇಕೆ ? ಅಂಬೇಡ್ಕರರು ಈ ಪ್ರಶ್ನೆಗೆ ಉತ್ತರ ನೀಡಿದ್ದಾರೆ. ಭಾರತೀಯ ಸನ್ನಿವೇಶವು ವಿಶಿಷ್ಟವಾದುದು. ಈ ದೇಶದ ಜನರು ಆರ್ಯ, ದ್ರಾವಿಡ, ಮಂಗೋಲ, ಸ್ಕಿತಿಯನ್ ಜನಾಂಗದ ಸಮ್ಮಿಶ್ರಣ. ಈ ಮೊದಲು ಅವರಲ್ಲಿದ್ದ ಜನಾಂಗೀಯ, ಸಾಂಸ್ಕೃತಿಕ ಭಿನ್ನತೆಗಳು ವಿಲೀನಗೊಂಡು ಒಂದೇ ಜನಾಂಗವಾಗಿ ಹೊರಹೊಮ್ಮಿದೆ. ಈ ಜನಾಂಗೀಯ, ಸಾಂಸ್ಕೃತಿಕ ಏಕತೆಗೆ ಸವಾಲು ಹಾಕಿರುವ ಏಕೈಕ ಸಾಮಾಜಿಕ ವ್ಯವಸ್ಥೆಯೆಂದರೆ ಇಲ್ಲಿನ ಜಾತಿವ್ಯವಸ್ಥೆಯೆ. ಜಾತಿವ್ಯವಸ್ಥೆಯು ಎಲ್ಲ ಭಾರತೀಯರನ್ನು ವಿವಿಧ ಖಂಡಗಳಲ್ಲಿ ವಿಂಗಡಿಸಿ ಒಂದೊಂದು ತಂಡಗಳನ್ನಾಗಿ ಮಾಡಿದೆ. ಈ ತಂಡಗಳು ಮತ್ತೆ ಸಂಯೋಜನೆ ಹೊಂದದಿರುವಂತೆ ಮಾಡಲು ಪ್ರತಿಯೊಬ್ಬರೂ ತಮ್ಮ ಗುಂಪುಗಳಲ್ಲಿಯೇ ವಿವಾಹ

ವಾಗುವ ಕಟ್ಟಳೆಯ ಮೂಲಕ ತಡೆಯಲಾಗುತ್ತದೆ. ಆದುದರಿಂದ ಜಾತಿವ್ಯವಸ್ಥೆಯು ಸ್ವಜಾತಿ(ಗುಂಪು)ಗಳಲ್ಲಿಯೇ ಮದುವೆಯಾಗಬೇಕೆಂಬ ಕಟ್ಟಳೆಯ ಮೇಲೆಯೇ ನಿಂತಿದೆ. ಹೊರಬಾಂಧವ್ಯ ವಿವಾಹ (ಎಕ್ಸೊಗಮಿ) ಅಥವಾ ಹೊರಜಾತಿ ಮದುವೆಗಳನ್ನು ಭಾರತದಲ್ಲಿ ನಿಷೇಧಿಸಲಾಗಿದೆ. ಒಂದು ವೇಳೆ ಹೊರಜಾತಿ ಮದುವೆ ಮಾಡಿಕೊಳ್ಳಬೇಕೆಂಬ ಕಟ್ಟಳೆಯೇನಾದರೂ ಈ ದೇಶದಲ್ಲಿದ್ದರೆ ಇಲ್ಲಿ ಜಾತಿವ್ಯವಸ್ಥೆ ಇರುತ್ತಿರಲಿಲ್ಲ. ಏಕೆಂದರೆ ಈ ತರಹದ ವಿವಾಹಗಳು ವಿವಿಧ ಜನಾಂಗವನ್ನು ಕೂಡಿಸುವ, ಸಂಯೋಜಿಸುವ ಸಾಧನಗಳು.

ಸಾಮಾನ್ಯವಾಗಿ ಜೊತೆ ಜೊತೆಗೆ ಬಾಳುವ ವಿವಿಧ ಸಮುದಾಯಗಳು ಒಂದನ್ನೊಂದು ಸಂಪರ್ಕಿಸಿ ಸಮ್ಮಿಳನ, ತಾದಾತ್ಮ್ಯತೆ ಪಡೆಯುವ ಸಾಧ್ಯತೆ ಮತ್ತು ಅವಕಾಶಗಳನ್ನು ಹೊಂದಿರುತ್ತವೆ. ಈ ಸಾಧ್ಯತೆಯನ್ನು ಹುಸಿ ಮಾಡುವ ಸಲುವಾಗಿಯೇ ಎಲ್ಲ ಜಾತಿಯ ಸಮುದಾಯಗಳ ಮೇಲೆ ಹೊರಜಾತಿಯ ಸಮುದಾಯಗಳೊಂದಿನ ವಿವಾಹಗಳನ್ನು ನಿಷೇಧಿಸಲಾಯಿತು. ಹೊರಜಾತಿಗಳೊಂದಿಗೆ ಮದುವೆಯಾಗದಂತೆ ನಿರ್ಬಂಧಿಸುವದು ಅಷ್ಟೊಂದು ಸುಲಭ ಸಾಧ್ಯವಲ್ಲ. ಪ್ರತಿಯೊಂದು ಸಮುದಾಯದಲ್ಲಿ ಸ್ತ್ರೀ ಪುರುಷರ ಸಂಖ್ಯೆ ಸರಿಸಮಾನವಾಗಿರಬೇಕಾಗುತ್ತದೆ ಮತ್ತು ಒಂದು ವಿಶಿಷ್ಟ ವಯೋಗುಂಪುಗಳಲ್ಲಿನ ಸ್ತ್ರೀ ಪುರುಷ ಜನಸಂಖ್ಯೆಯು ಸರಿಸಮಾನವಾಗಿರಬೇಕು. ಯಾವುದೇ ಒಂದು ಸಮೂಹವು ತಾನು ಒಂದು ಜಾತಿಯಾಗಿ ಪರಿವರ್ತನೆ ಹೊಂದಬೇಕಾದಾಗ ಅದು ತನ್ನಲ್ಲಿರುವ ಸ್ತ್ರೀ ಪುರುಷರ ಜನಸಂಖ್ಯೆಯಲ್ಲಿ ಸಮಾನತೆ ಹೊಂದಿರಲೇಬೇಕು. ಇಲ್ಲವಾದರೆ ತನ್ನ ಗುಂಪುಗಳಲ್ಲಿಯೇ ಮದುವೆಯಾಗುವ ಕಟ್ಟಳೆಯನ್ನು ಮೀರಬೇಕಾಗುವುದು. ಆದುದರಿಂದ ಮದುವೆಯ ವಯಸ್ಸಿನ ಒಂದು ಗುಂಪಿನ ಸ್ತ್ರೀ ಪುರುಷರಲ್ಲಿ ಸಂಖ್ಯೆಯಲ್ಲಿ ಸರಿಸಮಾನತೆಯನ್ನು ಕಾಯ್ದುಕೊಳ್ಳಲೇಬೇಕು. ಈ ಸಂಖ್ಯೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವ್ಯತ್ಯಾಸ ಉಂಟಾದರೆ ಅದು ಜಾತಿಯಾಗಿ ಹೊರಹೊಮ್ಮಲು ಸಾಧ್ಯವಾಗದು.

ಆದುದರಿಂದ ಜಾತಿಯು ತನ್ನಲ್ಲಿನ ಮದುವೆಯ ವಯಸ್ಸಿನ ಸ್ತ್ರೀ ಪುರುಷರ ಜನಸಂಖ್ಯೆಯಲ್ಲಿನ ತಾರತಮ್ಯವನ್ನು ಸರಿಪಡಿಸುತ್ತಲೇ ಇದ್ದು ತನ್ನ ಉಳಿವನ್ನು ಮುಂದುವರಿಸುತ್ತದೆ. ಆದರೆ ಈ ಸಂಖ್ಯೆಯಲ್ಲಿನ ಸಮತೋಲನ ಯಾವಾಗಲೂ ಕಾಯ್ದುಕೊಳ್ಳಲು ಸಾಧ್ಯವಿರಲಿಕ್ಕಿಲ್ಲ. ಉದಾ : ಗಂಡ ಹೆಂಡರುಗಳಲ್ಲಿ ಇಬ್ಬರೂ ಏಕಕಾಲಕ್ಕೆ ಮರಣ ಹೊಂದಿದರೆ ಮಾತ್ರ ಸಮತೋಲನ ಉಳಿಯಬಹುದು. ಇಲ್ಲದಿದ್ದರೆ ಗಂಡ ತೀರಿಕೊಂಡರೆ ಹೆಂಡತಿ – ವಿಧವೆ – ಒಬ್ಬ ಹೆಚ್ಚುವರಿ ಸ್ತ್ರೀ – ಆ ಸಮುದಾಯದಲ್ಲಿ ಉಳಿಯುತ್ತಾಳೆ. ಅಥವಾ ಹೆಂಡತಿ ತೀರಿಕೊಂಡು ಗಂಡ ಬದುಕಿದರೆ – ವಿಧುರ – ಒಬ್ಬ ಹೆಚ್ಚುವರಿ ಪುರುಷ ಆ ಸಮುದಾಯದಲ್ಲಿ ಉಳಿಯುತ್ತಾನೆ.

ಈ ಹೆಚ್ಚುವರಿ ಸ್ತ್ರೀ ಅಥವಾ ಪುರುಷರು ತಮ್ಮ ಸಮುದಾಯದ ಹೊರಗಿನವರೊಂದಿಗೆ ವಿವಾಹವಾಗಿ ಜಾತಿಯೊಳಗೆ ಮದುವೆಯಾಗಬೇಕೆಂದು ಕಟ್ಟಳೆ ಮೀರಬಹುದು. ಆದುದರಿಂದ ಜಾತಿಯು ಇಂತಹ ಪರಿಸ್ಥಿತಿಗಳನ್ನು ನಿಯಂತ್ರಿಸದೇ ಹೋದರೆ ಅದರ ಮೂಲಕ್ಕೆ ಸಂಚಕಾರ ಉಂಟುಮಾಡಬಹುದಾದುದರಿಂದ ಈ ಹೆಚ್ಚುವರಿ ಸ್ತ್ರೀ ಮತ್ತು ಪುರುಷ ಸಮಸ್ಯೆಯನ್ನು ಬಗೆಹರಿಸಲೇಬೇಕು.

ಕಾಲ್ಪನಿಕ ಸಮುದಾಯವು ಈ ಸಮಸ್ಯೆಯನ್ನು ಹೇಗೆ ಬಗೆಹರಿಸುತ್ತದೆ ಎಂಬುದನ್ನು ಗಮನಿಸಬೇಕು. ಮೊದಲು ಹೆಚ್ಚುವರಿ ಸ್ತ್ರೀಯನ್ನು (ವಿಧವೆ) ಜಾತಿಯಲ್ಲಿ ಉಳಿಸಿಕೊಳ್ಳಬೇಕಾದರೆ (ಎಂಡೋಗಮಿ) ಮೊದಲನೆಯದಾಗಿ ಆಕೆಯನ್ನು ಆಕೆಯ ಪತಿಯ ಚಿತೆಯಲ್ಲಿಯೇ ಸುಟ್ಟುಹಾಕುವುದು. ಇದು ತುಂಬ ಕ್ರೂರ ಮತ್ತು ಅವಾಸ್ತವ ಕ್ರಮ. ಕೆಲವೊಮ್ಮೆ ಇದು ಸಂಖ್ಯೆಯಲ್ಲಿನ ತಾರತಮ್ಯ ಸಮಸ್ಯೆಯನ್ನು ಪರಿಹರಿಸಬಹುದು. ಕೆಲವೊಮ್ಮೆ ಇಲ್ಲ. ಪ್ರತಿಯೊಬ್ಬ ವಿಧವೆಯನ್ನು ಸುಟ್ಟು ಹಾಕಲು ಆಗಲಿಕ್ಕಿಲ್ಲ. ಆಗ ಇಂತಹ ಹೆಚ್ಚುವರಿ ಸ್ತ್ರೀಯನ್ನು ಈ ಮೇಲಿನ ಕ್ರಮದಿಂದ ಇಲ್ಲವಾಗಿಸದಿದ್ದರೆ ಆಕೆಯು ಎರಡು ಸಮಸ್ಯೆಗಳನ್ನುಂಟುಮಾಡಬಹುದು.

ಮೊದಲನೆಯದಾಗಿ ಆಕೆಯು ಹೊರಜಾತಿಯ ಪುರುಷನೊಂದಿಗೆ ಮದುವೆಯಾಗಿ ಸ್ವಜಾತಿ ಮದುವೆಯ ನಿರ್ಬಂಧವನ್ನು ಮುರಿದು ಹಾಕಬಹುದು ಅಥವಾ ಜಾತಿಯೊಳಗಿನ ಪುರುಷನನ್ನು ಮದುವೆಯಾಗಿ ಇನ್ನೊಬ್ಬ ಸ್ತ್ರೀಯ ಅವಕಾಶವನ್ನು ತನ್ನದಾಗಿಸಿಕೊಂಡು ಭಾವೀ ವಧುಗಳನ್ನು ಮತ್ತೊಮ್ಮೆ ಹೆಚ್ಚುವರಿ ಸ್ತ್ರೀಯರನ್ನಾಗಿ ಉಂಟುಮಾಡಬಹುದು. ಆದುದರಿಂದ ಚಿತೆಯಲ್ಲಿ ಹಾಕಿ ಕೊಲ್ಲದಿದ್ದ ಪಕ್ಷದಲ್ಲಿ ಇಂತಹ ವಿಧವೆಯರಿಗಾಗಿ ಏನಾದರೊಂದು ಉಪಾಯ ಮಾಡಲೇಬೇಕು.

ಈ ಎರಡನೆಯ ಉಪಾಯವೇ ಆಕೆಯನ್ನು ಜನ್ಮವಿಡೀ ವಿಧವೆಯ ನಿಕೃಷ್ಟ ಜೀವನ ನಡೆಸಲು ಪ್ರೋತ್ಸಾಹಿಸುವುದು. ಇದು ಹೆಚ್ಚು ವ್ಯವಹಾರಕ್ಕೆ ಸಾಧ್ಯವಾದುದು. ಆಕೆಯು ತನ್ನ ಭವಿಷ್ಯದಲ್ಲಿ ಹೆಂಡತಿಯಾಗುವ ತನ್ನ ನೈಸರ್ಗಿಕ ಹಕ್ಕನ್ನು ಕಳೆದುಕೊಂಡು ಬದುಕಬೇಕಾಗುವುದು.

ಇನ್ನು ಹೆಚ್ಚುವರಿ ಪುರುಷನ ಸಮಸ್ಯೆಯು ಇನ್ನೂ ಮಹತ್ವವಾದುದು. ಇಂತಹ ಸಮುದಾಯಗಳಲ್ಲಿ ಸಾಮಾನ್ಯವಾಗಿ ಪುರುಷನನ್ನು ಸ್ತ್ರೀಗಿಂತ ಶ್ರೇಷ್ಠ ಎಂಬ ಭಾವನೆಯಿರುವುದರಿಂದ ಮತ್ತು ಆ ಸಮುದಾಯದ ಎಲ್ಲ ಕಟ್ಟಳೆಗಳನ್ನೂ ಪುರುಷನಿಂದಲೇ ಕ್ರೋಢೀಕರಿಸಿರುವುದರಿಂದ ಹೆಚ್ಚುವರಿ ಸ್ತ್ರೀಯ ಸಮಸ್ಯೆಯಂತೆ ಹೆಚ್ಚುವರಿ ಪುರುಷ ಸಮಸ್ಯೆಯನ್ನು ಪರಿಹಾರ ಮಾಡಲು ಬಾರದು.

ವಿಧುರನನ್ನು ಆತನ ಮರಣ ಹೊಂದಿದ ಸತಿಯ ಚಿತೆಯಲ್ಲಿ ಹಾಕಿ ಸುಡಲಾಗುವುದಿಲ್ಲ. ಏಕೆಂದರೆ ಮೊಟ್ಟಮೊದಲನೆಯದಾಗಿ ಆತ ಪುರುಷ. ಒಂದು ವೇಳೆ ಸುಟ್ಟರೆ ಆ ಸಮುದಾಯವು ಒಬ್ಬ ಶಕ್ತಿಯುತನಾದ ವ್ಯಕ್ತಿಯನ್ನು ಕಳೆದುಕೊಂಡ ಹಾಗೆ. ಆತ ಸಮುದಾಯಕ್ಕೆ ಆಸ್ತಿಯಾಗಿರುವುದರಿಂದ ಬೇರೆ ಉಪಾಯಗಳನ್ನು ಇಲ್ಲಿ ಅಳವಡಿಸಲಾಗುತ್ತದೆ.

ಆತ ಸಮುದಾಯಕ್ಕೆ ಬೇಕಾಗಿರುವಷ್ಟೇ ಸಮುದಾಯಕ್ಕೆ ಒಳಜಾತಿಯ ನಿರ್ಬಂಧವೂ ಅತೀ ಅವಶ್ಯವಾದುದು. ಈ ಎರಡೂ ಅವಶ್ಯಕತೆಗಳನ್ನು ಈಡೇರಿಸುವ ಉಪಾಯವೆಂದರೆ ಆತನನ್ನು ವಿಧುರನಾಗಿಯೇ ಇಡೀ ಜೀವನ ನಡೆಸಲು ಒತ್ತಾಯಿಸುವುದು. ಬ್ರಹ್ಮಚಾರಿ ಜೀವನ ನಡೆಸಿ, ಮುಂದೆ ಪ್ರಪಂಚದ ಸಕಲವನ್ನು ತೊರೆದು ಸನ್ಯಾಸಿಯಾಗಬಹುದು.

ಆದರೆ ಸಾಮಾನ್ಯ ಮಾನವನ ಸ್ವರೂಪಕ್ಕೆ ಈ ತರಹದ ಸಲಹೆ ಸೂಕ್ತವಾದುದಲ್ಲ ಮತ್ತು ಅದನ್ನು ಸಾಧಿಸಲು ಸುಲಭವೂ ಆದುದಲ್ಲ. ಆತನು ಬ್ರಹ್ಮಚಾರಿಯಾಗಿ ಜೀವನ ನಡೆಸಿದುದೇ ಆದರೆ ಆತನನ್ನು ಉಳಿಸಿಕೊಂಡು ಆ ಸಮುದಾಯ ಗಳಿಸುವುದೇನೂ ಇಲ್ಲ. ಆದುದರಿಂದ ಆತನು ಗೃಹಸ್ಥಜೀವನ ನಡೆಸಿದರೆ ಮಾತ್ರ ಆ ಸಮುದಾಯಕ್ಕೆ ಉಪಯೋಗ. ಆದರೆ ಈಗಿರುವ ಸಮಸ್ಯೆ ಏನೆಂದರೆ ಆ ವಿಧುರ (ಹೆಚ್ಚುವರಿ ಪುರುಷ)ನಿಗೆ ತನ್ನ ಸಮುದಾಯದಿಂದ ಗೃಹಸ್ಥಜೀವನ ನಡೆಸಲು ಪತ್ನಿಯನ್ನು ಒದಗಿಸುವದು. ಮೇಲ್ನೋಟಕ್ಕೆ ಇದು ಪರಿಹಾರವಾಗದ ಸಮಸ್ಯೆ (ಏಕೆಂದರೆ ಸಾಮಾನ್ಯವಾಗಿ ಒಂದು ಸಮುದಾಯದಲ್ಲಿ ಒಬ್ಬ ಮಹಿಳೆಗೆ ಒಬ್ಬ ಪುರುಷ ಪ್ರಮಾಣದಲ್ಲಿ ಜನಸಂಖ್ಯೆ ಇದೆ ಎಂಬ ಲೆಕ್ಕಾಚಾರ.) ಪ್ರತಿಯೊಬ್ಬರಿಗೆ ಮದುವೆಯಾಗಲು ಒಂದುಸಲ ಮಾತ್ರ ಅವಕಾಶ ಉಂಟು. ಇಂತಹ ಸಂದರ್ಭಗಳಲ್ಲಿ ಒಬ್ಬ ವಿದುರನಿಗೆ ಮದುವೆ ಮಾಡಿಕೊಡಲು ತಮ್ಮದೆ ಸಮುದಾಯದ ಮದುವೆಯ ವಯಸ್ಸಿಗೆ ಬಾರದ ಸ್ತ್ರೀಯನ್ನು ಈ ವಿಶೇಷ ಸಂದರ್ಭದಲ್ಲಿ ಮದುವೆಯ ವ್ಯವಸ್ಥೆ ಮಾಡಬೇಕಾಗುವುದು. ಈ ಉಪಾಯದಿಂದ ಹೆಚ್ಚುವರಿ ಪುರುಷನನ್ನು ಜಾತಿಯಲ್ಲಿಯೇ ಉಳಿಸಿಕೊಂಡ ಹಾಗಾಯಿತು. ಜಾತಿಯಲ್ಲಿನ ಸಂಖ್ಯೆ ಕಡಿಮೆಯಾಗುವುದು ತಪ್ಪಿಸಿದ ಹಾಗಾಯಿತು ಮತ್ತು ಒಳಜಾತಿಯ ನಿರ್ಬಂಧವನ್ನು ಕಾಪಾಡಿಕೊಂಡ ಹಾಗಾಯಿತು.

ಸ್ತ್ರೀ–ಪುರುಷರ ಸಂಖ್ಯೆಯಲ್ಲಿನ ತಾರತಮ್ಯವನ್ನು ಈ ಕೆಳಗಿನ ಉಪಾಯಗಳಿಂದ ಸರಿಪಡಿಸಲು ಉಪಯೋಗಿಸಿಕೊಳ್ಳಲಾಗಿದೆ. ೧. ವಿಧವೆಯನ್ನು ಆಕೆಯ ಪತಿಯ ಚಿತೆಯಲ್ಲಿ ಸುಟ್ಟು ಹಾಕುವುದು. ೨. ಬಲಾತ್ಕಾರದ ವೈಧವ್ಯ. ೩. ವಿಧುರನನ್ನು ಬ್ರಹ್ಮಚಾರಿಯಾಗಿರಲು ಒತ್ತಾಯಿಸುವುದು. ೪. ಆತನಿಗೆ ಬಾಲ

ವಧುವಿನೊಂದಿಗೆ ವಿವಾಹ ಮಾಡಿಕೊಡುವುದು. ಈ ಮೇಲೆ ತಿಳಿಸಿದ ಉಪಾಯಂಗಳು ಎಂಡೋಗಮಿಯನ್ನು ಮುಂದುವರಿಸಲು ಸಹಾಯ ಮಾಡುತ್ತವೆ.

ಒಂದು ವಿಶಿಷ್ಟಜಾತಿಯ ಕಾರ್ಯವಿಧಿಯನ್ನು ಗಮನಿಸಿದ ನಂತರ ಇಡೀ ಹಿಂದೂ ಸಾಮಾಜಿಕ ವ್ಯವಸ್ಥೆಯ ಕಾರ್ಯವಿಧಿ ಗಮನಿಸಬೇಕು. ಭಾರತದಲ್ಲಿ ಜಾತಿಯು ಅತೀ ಪ್ರಾಚೀನ ಸಂಸ್ಥೆ. ಭಾರತದಲ್ಲಿ ಸಾಮಾಜಿಕ ಇತಿಹಾಸವನ್ನು ಯಾರೂ ದಾಖಲಿಸುವ ಗೋಜಿಗೆ ಹೋಗಲಿಲ್ಲ. ಆದರೂ ಅತೀ ಪ್ರಾಚೀನ ಸಾಮಾಜಿಕ ಸಂಸ್ಥೆಗಳು, ರೂಢಿಗಳು ಉಳಿದಿವೆ ಎಲ್ಲಾ ರೂಢಿ ಸಂಪ್ರದಾಯಗಳು ತಾವು ಬೆಳೆದು ಬಂದ ಬಗೆಯನ್ನು ವಿವರಿಸುವ ತಮ್ಮದೆ ಪಳೆಯುಳಿಕೆಗಳೂ ಅಲ್ಲ. ಆದರೂ ಹಿಂದೂಗಳು ಹೆಚ್ಚುವರಿ ಸ್ತ್ರೀ ಪುರುಷರ ಸಮಸ್ಯೆಯನ್ನು ಬಗೆಹರಿಸಲು ಕೈಗೊಂಡ ಉಪಾಯಗಳ ಮೇಲೆ ನಾವು ನಮ್ಮ ಗಮನ ಕೇಂದ್ರೀಕರಿಸಿದರೆ ಈ ದಿಶೆಯಲ್ಲಿ ಕೆಲಮಟ್ಟಿಗೆ ಜಯಗಳಿಸಬಹುದು.

ಹಿಂದೂ ಸಮಾಜವು ಸಾಮಾನ್ಯ ಕಾರ್ಯವಿಧಾನವು ಮೂರು ಅತೀ ಹೆಮ್ಮೆಯ ಸಂಪ್ರದಾಯಗಳಿಗೆ ಪರಿಗಣಿಸಲ್ಪಟ್ಟ ಮೂಲಕ ಕಾಣಬಹುದು.

೧. ಸತಿ ಪದ್ಧತಿ : ಸತ್ತು ಹೋದ ಪತಿಯ ಚಿತೆಯಲ್ಲಿ ವಿಧವೆಯನ್ನು ಸುಡಬಹುದು.

೨. ಬಲಾತ್ಕಾರದ ವೈಧವ್ಯ : ವಿಧವೆಯನ್ನು ಪುನರ್ ವಿವಾಹವಾಗದಂತೆ ನೋಡಿಕೊಳ್ಳುವುದು.

೩. ಬಾಲವಿವಾಹ.

ಇಲ್ಲಿಯವರೆಗೆ ಈ ಸಂಪ್ರದಾಯಗಳ ಮೂಲ ವಿವರಿಸುವ ಪ್ರಯತ್ನಗಳನ್ನು ಕಾಣಲಾಗಿಲ್ಲ. ಈ ಸಂಪ್ರದಾಯಗಳನ್ನು ಏಕೆ ಗೌರವಿಸಬೇಕು ಎಂಬ ವಿಷಯಕ್ಕೆ ಸಾಕಷ್ಟು ಚರ್ಚೆಗಳು ನಡೆದಿವೆ. ಆದರೆ ಅವು ಹೇಗೆ ಚಲಾವಣೆಯಲ್ಲಿ ಬಂದವು ಎಂಬುದಕ್ಕೆ ಕೇವಲ ಮೌನವೇ ಉತ್ತರ. ಅಂಬೇಡ್ಕರರ ವಿಚಾರದಲ್ಲಿ ಈ ಸಂಪ್ರದಾಯಗಳು ಚಲಾವಣೆಯಲ್ಲಿದ್ದರಿಂದ ಗೌರವಿಸಲ್ಪಟ್ಟವು ಅಷ್ಟೆ. ಅವು ಏಕೆ ಚಲಾವಣೆಯಲ್ಲಿ ಬಂದವು ? ಎನ್ನುವ ಪ್ರಶ್ನೆಗೆ ಉತ್ತರವಿಷ್ಟೆ: ಅವು ಜಾತಿಯ ಹಂದರವನ್ನುಂಟು ಮಾಡಲು ಮತ್ತು ಜಾತಿಗಳನ್ನು ಗೌರವಿಸಲು, ಹೆಚ್ಚು ಪ್ರಚಾರಗೊಳಿಸಲು ಸಹಾಯಕವಾಗಿದ್ದವು. ಅವು ಹಿಂದೂ ಸಮಾಜದ ಉನ್ನತ ಸಾಧನೆಯ ಗುರಿಯಾಗಿಯೂ ಮತ್ತು ಸಾಧನೆಗಳೂ ಆಗಿರುವುದು ವಿಲಕ್ಷಣ. ಆದುದರಿಂದ ಅಂಬೇಡ್ಕರರ ಪ್ರಕಾರ ಸತಿಪದ್ಧತಿ, ಬಲಾತ್ಕಾರದ ವೈಧವ್ಯ ಮತ್ತು ಬಾಲವಿವಾಹ ಸಂಪ್ರದಾಯಗಳು

ಹೆಚ್ಚುವರಿ ಸ್ತ್ರೀ ಪುರುಷ ಸಮಸ್ಯೆಯನ್ನು ಪರಿಹರಿಸಿದೆ. ಜಾತಿಯು ಒಳಬಾಂಧವ್ಯ ವಿವಾಹ ಪದ್ಧತಿಯು ಈ ಸಂಪ್ರದಾಯಗಳ ಅನುಪಸ್ಥಿತಿಯಲ್ಲಿ ಉಳಿಯದು. ಜಾತಿಯು ಒಳಬಾಂಧವ್ಯ ವಿವಾಹ ನಿರ್ಬಂಧವಿಲ್ಲದಿದ್ದರೆ ಉಳಿಯದು.

ಜಾತಿಯ ಮೂಲದ ಬಗ್ಗೆ ಅಂಬೇಡ್ಕರರ ವಿಚಾರಗಳು :

ಜಾತಿಯ ಮೂಲದ ಬಗೆಗಿನ ಅಧ್ಯಯನ ಪ್ರಮುಖವಾಗಿ 'ಯಾವ ವರ್ಗವು ಈ ತರಹದ ನಿರ್ಬಂಧವನ್ನು ತನ್ನ ಸುತ್ತಲೂ ಸೃಷ್ಟಿಸಿಕೊಂಡಿತು ?' ಎಂಬ ಪ್ರಶ್ನೆಗೆ ಉತ್ತರ ಪಡೆಯಬೇಕು. ಈ ಪ್ರಶ್ನೆಗೆ ಡಾ. ಅಂಬೇಡ್ಕರರು ಕೇವಲ ಅಪರೋಕ್ಷವಾಗಿ ಉತ್ತರ ನೀಡುತ್ತಾರೆ. ಈ ಮೇಲೆ ತಿಳಿಸಿದ ಹಿಂದೂ ಸಮಾಜದ ವಿಶಿಷ್ಟ ಸಂಪ್ರದಾಯಗಳಾದ ಸತಿಪದ್ಧತಿ, ಒತ್ತಾಯದ ವೈಧವ್ಯ, ಬಾಲವಿವಾಹ ಗಳೆಲ್ಲವು ತುಂಬ ಕಟ್ಟುನಿಟ್ಟಾಗಿ ಒಂದೇ ಜಾತಿಯಲ್ಲಿ ಕಾಣಬಹುದು. ಅದುವೆ ಬ್ರಾಹ್ಮಣ ಜಾತಿ. ಉಳಿದ ಜಾತಿಗಳಲ್ಲೂ ಅವುಗಳನ್ನು ಕಂಡರೂ ಅದು ಕೇವಲ ಉತ್ತಮ ಜಾತಿಯೆಂದು ಪರಿಗಣಿಸಲ್ಪಟ್ಟ ಬ್ರಾಹ್ಮಣರ ಅನುಕರಣೆಯ ಮೂಲಕ. ಬ್ರಾಹ್ಮಣರೇ ಜಾತಿಪದ್ಧತಿಯನ್ನು ಏಕೆ ನಿರ್ಮಿಸಿದರು ? ಎನ್ನುವುದು ಇನ್ನೊಂದು ಪ್ರಶ್ನೆ.

ತುಂಬ ಕಟ್ಟುನಿಟ್ಟಾಗಿ ಈ ಸಂಪ್ರದಾಯಗಳನ್ನು ಅವರು ಆಚರಿಸುವುದು, ಪುರೋಹಿತಶಾಹಿ ಮೂಲಕ ಸಾಮಾಜಿಕ ಅಂತಸ್ತಿನಲ್ಲಿ ಹೆಚ್ಚಿನ ಸ್ಥಾನಮಾನ ಗಳಿಸು ವುದು ಈ ಎಲ್ಲ ಅಂಶಗಳು ಈ 'ಅನೈಸರ್ಗಿಕ ವ್ಯವಸ್ಥೆಯನ್ನು ಕೃತ್ರಿಮ ವಿಧಾನಗಳ ಮೂಲಕ ಸ್ಥಾಪಿಸಿ ಅದನ್ನು ಪೊರೆಯುತ್ತಿರುವವರು ಯಾರು ಎಂಬುದನ್ನು ತೋರಿ ಸುತ್ತೇವೆ. ಅಂದರೆ ಬ್ರಾಹ್ಮಣರು ಜಾತಿ ವ್ಯವಸ್ಥೆಯ ಸಂಸ್ಥಾಪಕರು.

ಜಾತಿವ್ಯವಸ್ಥೆಯು ಬ್ರಾಹ್ಮಣೇತರರಲ್ಲಿ ಹರಡಿದ ಬಗೆಯನ್ನು ವಿವರಿಸುತ್ತಾ ಡಾ. ಅಂಬೇಡಕರರು ಎರಡು ಪ್ರಮುಖ ಕಾರಣಗಳನ್ನು ಕೊಡುತ್ತಾರೆ. ಕೆಲವು ಜಾತಿಗಳು ಅನುಕರಣೆಯ ಮೂಲಕ ಸ್ಥಾಪಿತವಾದವು. ಅನುಕರಣೆಯನ್ನು ಮಾಡಲು ಎರಡು ಅಂಶಗಳ ಅವಶ್ಯಕತೆ ಇದೆ. ಮೊದಲನೆಯದು ಅನುಕರಣೀಯವಾದುದು. ಸಮುದಾಯದಲ್ಲಿ ಉನ್ನತ ಸ್ಥಾನವನ್ನು ಪಡೆಯಲು ಸಹಾಯಕವಾಗಿರಬೇಕು, ಎರಡನೆಯದಾಗಿ ಸಮುದಾಯಗಳಲ್ಲಿ ವಿವಿಧ ಸದಸ್ಯರೊಂದಿಗೆ ಅತೀ ಹೆಚ್ಚಿನ ಸಂಪರ್ಕ ಏರ್ಪಡಲು ಅವಕಾಶವಿರಬೇಕು. ಈ ಎಲ್ಲ ಅಂಶಗಳು ಭಾರತದಲ್ಲಿ ಪ್ರಚಲಿತವಿದ್ದವು. ಬ್ರಾಹ್ಮಣನು ಭೂಸುರನೆಂದು ಶಾಸ್ತ್ರಗಳು ಹೇಳುತ್ತಿರುವಾಗ, ಪುರೋಹಿತ ಶಾಹಿಗಳ ಅಧಿಕಾರ ತುತ್ತ ತುದಿಗೆ ತಲುಪಿ, ಬ್ರಾಹ್ಮಣನೇ ದೈವ ಸಂಭೂತನೆಂಬ ನಂಬಿಕೆ ಬೆಳೆದಾಗ ಆತನನ್ನೂ ಮತ್ತು ಆತ ಅನುಸರಿಸಿದ ಎಂಡೋ

ಗಮಿಯನ್ನು ಬ್ರಾಹ್ಮಣೇತರ ಜನಾಂಗವು ಬಹಳ ಭಕ್ತಿಯಿಂದ ಅನುಸರಿಸಿರಲೇಬೇಕು. ಸತಿಪದ್ಧತಿ, ಒತ್ತಾಯದ ವೈಧವ್ಯ, ಬಾಲ್ಯವಿವಾಹ ಮುಂತಾದ ಸಂಪ್ರದಾಯುಗಳನ್ನು ಕಟ್ಟುನಿಟ್ಟಾಗಿ ಬ್ರಾಹ್ಮಣರಂತೆ ಅನುಕರಿಸಿದ ಜಾತಿಗಳು ಬ್ರಾಹ್ಮಣರಿಗೆ ಸಾಮಾಜಿಕ ಸಾಮಿಪ್ಯ ಹೊಂದಿದವುಗಳಾದವು. ಕಡಿಮೆ ಪ್ರಮಾಣದಲ್ಲಿ ಈ ಸಂಪ್ರದಾಯಂಗಳನ್ನು ಅನುಸರಿಸಿದ ಜಾತಿಗಳು ಕೀಳು ಜಾತಿಗಳಾದವು.

ಅಂಬೇಡ್ಕರರ ಶೈಕ್ಷಣಿಕ ವಿಚಾರಗಳು :

ಡಾ. ಅಂಬೇಡ್ಕರರು ಅಸ್ಪೃಶ್ಯರ ಏಳಿಗೆಗಾಗಿ ಒಂದು ಸೂತ್ರವನ್ನು ರೂಪಿಸಿದರು. ಕೇವಲ ಈ ಸೂತ್ರವನ್ನು ಅನುಸರಿಸಿದರೆ ಮಾತ್ರ ಯುಗ ಯುಗಗಳ ಶೋಷಣೆಯಿಂದ ಮುಕ್ತಿಪಡೆಯಲು ಸಾಧ್ಯವೆಂದು ಸಾರಿದರು. ಆ ಮಂತ್ರವೇ ಶಿಕ್ಷಣ-ಹೋರಾಟ–ಸಂಘಟನೆ. ಅವರ ಅಭಿಪ್ರಾಯದಲ್ಲಿ ದಲಿತರ ವಿಮೋಚನೆಯು ಸಾಧ್ಯತೆಯು ಅವರು ಪಡೆಯುವ ಶಿಕ್ಷಣದ ಮೇಲೆ ಅವಲಂಬಿತವಾಗಿದೆ. ದಲಿತರಲ್ಲಿ ಅಶಿಕ್ಷಿತತೆಯ ಪ್ರಮಾಣ ಹೆಚ್ಚಿನದು. ಅವರಿಗೆ ಅಕ್ಷರಜ್ಞಾನದ ಅವಶ್ಯಕತೆ ಅತಿ ಹೆಚ್ಚಿನದು. ಅಂಬೇಡ್ಕರರ ಅಭಿಪ್ರಾಯದಲ್ಲಿ ಶಿಕ್ಷಣವೆಂದರೆ ಕೇವಲ ಅಕ್ಷರಜ್ಞಾನ ಪಡೆಯುವುದು ಮಾತ್ರವಲ್ಲ, ಅದು ಅವರಲ್ಲಿ ಜಾಗೃತಿ ಮೂಡಿಸುವಂತಹದಾಗಿರಬೇಕು, ಅವರಲ್ಲಿ ಹೋರಾಟದ ಮನೋಭಾವ ಬಿತ್ತುವುದಾಗಿರಬೇಕು.

ಅಂಬೇಡ್ಕರರು ಕೇವಲ ಔಪಚಾರಿಕ ಶಿಕ್ಷಣಕ್ಕೆ ಒತ್ತುಕೊಡದೆ, ಇಂತಹ ಜನರಲ್ಲಿ ಅರಿವು ಜಾಗೃತಿ ಸಂಪಾದಿಸುವ ಶಿಕ್ಷಣದ ಅವಶ್ಯಕತೆಯನ್ನು ಎತ್ತಿ ತೋರಿಸಿದ್ದಾರೆ. ಔಪಚಾರಿಕ ಶಿಕ್ಷಣದಿಂದ ಪಡೆದ ಪದವಿಗಳು ಮತ್ತು ಜ್ಞಾನ ಆಯಾ ವ್ಯಕ್ತಿಗಳಲ್ಲಿ ಪ್ರತಿಗಾಮಿತ್ವ ಮತ್ತು ಬದಲಾವಣೆ ವಿರೋಧಿ ಮನೋಭಾವನೆಗಳನ್ನು ಬೆಳಸಿಕೊಂಡರೆ ಅದರಿಂದ ಹಾನಿಯೇ ಉಂಟಾಗುವುದೆಂದು ಅವರು ತಿಳಿದಿದ್ದರು. ಶಿಕ್ಷಣವು ಶಿಕ್ಷಣಕ್ಕಾಗಿ ಅಥವಾ ಪದವಿಗಾಗಿ ಎಂಬ ಕಲ್ಪನೆಗಳು ಶ್ರೇಷ್ಠತೆಯ ಭಾವನೆಯನ್ನು ಕುದುರಿಸಿ, ಹೊಸ ವಿವಿಧ ಬ್ರಾಹ್ಮಣಿಕೆಯನ್ನು ಹುಟ್ಟು ಹಾಕಬಹುದು. ಶಿಕ್ಷಣವು ಸಮಾನತೆ, ಪ್ರಜಾಪ್ರಭುತ್ವದ ಅಂಶಗಳನ್ನು ಪುನರ್ ಸ್ಥಾಪಿಸುವ ಸಾಧನವಾಗಬೇಕು.

ಅಂಬೇಡ್ಕರರು ಸುಮಾರು ೧೯೨೭ ರಲ್ಲೆ ಪ್ರಾಥಮಿಕ ಶಿಕ್ಷಣದ ಪರಿಸ್ಥಿತಿಯನ್ನು ಕೂಲಂಕುಷವಾಗಿ ಅಧ್ಯಯನ ಮಾಡಿದ್ದರು, ಅವರು ಆಗ ವ್ಯಕ್ತಪಡಿಸಿರುವ ವಿಚಾರಗಳು ಇಂದಿಗೂ ಪ್ರಸ್ತುತವೆನಿಸುತ್ತವೆ. 'ನಮ್ಮ ಮಕ್ಕಳ ಶಿಕ್ಷಣ ವಿಷಯದಲ್ಲಿ ನಾವು ತುಂಬ ನಿರಾಸಕ್ತಿಯನ್ನು ತೋರುತ್ತಿದ್ದೇವೆ, ಈಗ ಶಿಕ್ಷಣದಲ್ಲಿ ಸಾಧಿಸುತ್ತಿರುವ ಪ್ರಗತಿಯ ಪ್ರಮಾಣ ಇದೇ ರೀತಿಯಲ್ಲಿ ಮುಂದುವರೆದರೆ ನಮ್ಮೆಲ್ಲ ಹುಡುಗರಿಗೆ ಈ

ಶಿಕ್ಷಣ ತಲುಪಲು ಇನ್ನೂ ೪೦ ವರ್ಷಗಳೂ, ಎಲ್ಲ ಹುಡುಗಿಯರಿಗೆ ತಲುಪಲು ೩೦೦ ವರ್ಷಗಳೇ ಬೇಕಾಗುತ್ತವೆ'.

ಡಾ. ಅಂಬೇಡ್ಕರರು ಶಿಕ್ಷಣದ ವಿಷಯದಲ್ಲಿ ಅನೇಕ ಸೃಜನಾತ್ಮಕ ವಿಚಾರಗಳನ್ನೂ ಹೊಂದಿದ್ದರು. ಅವರು ಆಗಿನ ಸರ್ಕಾರದ ಧೋರಣೆಯನ್ನು ಟೀಕಿಸುತ್ತ 'ಸರ್ಕಾರ ವ್ಯಯ ಮಾಡುತ್ತಿರುವ ಹಣದ ಪ್ರಮಾಣಕ್ಕೂ ವಿದ್ಯಾರ್ಥಿಗಳ ಸಂಖ್ಯೆಗೂ ಯಾವುದೇ ಸಂಬಂಧವಿಲ್ಲದಂತಾಗಿದೆ. ಹೇಗೆಂದರೆ ಶಿಕ್ಷಣಕ್ಕಾಗಿ ಸರ್ಕಾರವು ಮೊದಲಿಗಿಂತ ನೂರಕ್ಕೆ ನೂರರಷ್ಟು ಧನಸಹಾಯದಲ್ಲಿ ಹೆಚ್ಚಳ ಮಾಡಿದರೂ ವಿದ್ಯಾರ್ಥಿಗಳ ಸಂಖ್ಯೆಯಲ್ಲಿನ ಹೆಚ್ಚಳ ಮಾತ್ರ ಪ್ರತಿಶತ ೨೯. ಶಿಕ್ಷಣಕ್ಕೆ ಇನ್ನೂ ಹೆಚ್ಚಿನ ಹಣವನ್ನು ನೀಡಬೇಕೆಂದು ಕೇಳಲಿಕ್ಕಾಗದು. ಏಕೆಂದರೆ ಅದು ಪ್ರಾಂತೀಯ ಸರ್ಕಾರಕ್ಕೆ ಕಷ್ಟಸಾಧ್ಯವಾಗುತ್ತದೆ. ಆದರೆ ಅದಕ್ಕೊಂದು ಉಪಾಯವಿದೆ. ಪ್ರಾಂತೀಯ ಸರ್ಕಾರದ ಪರಸ್ಪರ ಭಿನ್ನ ಉದ್ದೇಶವುಳ್ಳ ಎರಡು ಇಲಾಖೆಗಳಿವೆ. ಮೊದಲನೆಯದು ಶಿಕ್ಷಣ ಇಲಾಖೆ. ಇದು ಜನತೆಯಲ್ಲಿ ಸಮಾಜೀಕರಣದ ಮೂಲಕ ನಾಗರಿಕತೆ ಸ್ಥಾಪಿಸುವದು. ಎರಡನೆಯ ಇಲಾಖೆ ಅಬ್ಕಾರಿ ಇಲಾಖೆ. ಇದು ಮೊದಲಿನ ಇಲಾಖೆಯ ವಿರುದ್ಧದ ಕೆಲಸಮಾಡುವಂತಹದು. ಈ ಇಲಾಖೆಯಿಂದ ಗಳಿಸಿದ ಆದಾಯವನ್ನು ಶಿಕ್ಷಣ ಇಲಾಖೆಯ ಅಭಿವೃದ್ಧಿಗಾಗಿ ಖರ್ಚು ಮಾಡುವುದೇ ಉಚಿತ. 'ಈ ರೀತಿಯಾಗಿ ಡಾ. ಅಂಬೇಡ್ಕರರು ಆಗಿನ ಮುಂಬೈ ಪ್ರಾಂತದ ಶಿಕ್ಷಣ ಇಲಾಖೆಯ ಸಚಿವರಿಗೆ ಸಲಹೆ ನೀಡಿದ್ದರು.

ಡಾ. ಅಂಬೇಡ್ಕರರ ಪ್ರಕಾರ ಪ್ರಾಥಮಿಕ ಹಂತದ ಶಿಕ್ಷಣವು ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಅವನ ಜೀವನವಿಡೀ ಅಕ್ಷರಸ್ಥನನ್ನಾಗಿ ಉಳಿಯುವಂತೆ ಮಾಡಬೇಕು. ಶಿಕ್ಷಣದಲ್ಲಿ ಅಪವ್ಯಯ ಮತ್ತು ನಿಲುಗಡೆಗಳನ್ನು ತೊಡೆದುಹಾಕಲೇಬೇಕೆಂದು ಅವರು ವಾದಿಸುತ್ತಿದ್ದರು. ಮುಂಬೈ ಪ್ರಾಂತದಲ್ಲಿನ ಈ ಸಮಸ್ಯೆಗಳ ಪ್ರಮಾಣವನ್ನು ಅಂಬೇಡ್ಕರರು ಅಂಕಿಅಂಶಗಳ ಮೂಲಕ ಈ ರೀತಿಯಾಗಿ ಎತ್ತಿ ತೋರಿಸಿದ್ದಾರೆ. "ಪ್ರತಿ ೧೦೦ ವಿದ್ಯಾರ್ಥಿಗಳು ಪ್ರಾಥಮಿಕ ಶಾಲೆಯ ಪ್ರವೇಶ ಪಡೆದರೆ ಅವರಲ್ಲಿ ಕೇವಲ ೧೮ ವಿದ್ಯಾರ್ಥಿಗಳು ಮಾತ್ರ ೪ನೆಯ ತರಗತಿಯ ವರೆಗೂ ತಮ್ಮ ಓದನ್ನು ಮುಂದುವರೆಸುತ್ತಾರೆ. ಅಂದರೆ ೮೨ ವಿದ್ಯಾರ್ಥಿಗಳು ಮತ್ತೇ ಅಶಿಕ್ಷಿತರಾಗಿಯೇ ಉಳಿದು ಬಿಡುತ್ತಾರೆ. ಈ ಅಪವ್ಯಯ ನಮ್ಮ ಸಮಾಜಕ್ಕೆ ತುಂಬ ಹಾನಿಕರವಾದುದು".

ಮುಂಬೈ ಪ್ರಾಂತದಲ್ಲಿ ಕಾಲೇಜು ಹಂತದ ಶಿಕ್ಷಣದ ಕೆಲಪ್ರಮಾಣದ ಖರ್ಚನ್ನು ವಿದ್ಯಾರ್ಥಿಗಳ ಶುಲ್ಕದಿಂದ ಭರಿಸಲಾಗುತ್ತಿತ್ತು. ಇದರ ಪ್ರಮಾಣವು ೨೫ ರಿಂದ ೪೫ ಪ್ರತಿಶತದಷ್ಟು ಇತ್ತು. ಇದರಿಂದ ಬಡವಿದ್ಯಾರ್ಥಿಗಳಿಗೆ ಇಂತಹ ಶುಲ್ಕವನ್ನು

ಭರಿಸುವುದು ಕಷ್ಟವಾಗಿತ್ತು. ಅನೇಕ ಯೋಗ್ಯ ಬಡವಿದ್ಯಾರ್ಥಿಗಳು ಶಿಕ್ಷಣಕ್ಕೆ ವಿದಾಯ ಹೇಳುವಂತಹ ಪರಿಸ್ಥಿತಿ ಉಂಟಾದಾಗ ಡಾ. ಅಂಬೇಡ್ಕರರು ಇದನ್ನು ಟೀಕಿಸಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು. ಈ ಧೋರಣೆಯು ಶಿಕ್ಷಣವನ್ನು ವ್ಯಾಪಾರೀಕರಣಗೊಳಿಸುವ ಕುತಂತ್ರವೆಂದೂ, ಕೇವಲ ಶ್ರೀಮಂತರಿಗೆ ಮಾತ್ರ ಉನ್ನತ ಶಿಕ್ಷಣದ ಬಾಗಿಲನ್ನು ತೆರೆದಿಟ್ಟು, ಬಡವಿದ್ಯಾರ್ಥಿಗಳನ್ನು ಶಿಕ್ಷಣದಿಂದ ವಿಮುಖಗೊಳಿಸುವ ಕಾರಸ್ಥಾನವೆಂದು ಜರಿದರು. ಶಿಕ್ಷಣವನ್ನು ಸಾರ್ವತ್ರಿಕ ಗೊಳಿಸಲೇ ಬೇಕು. ಶಿಕ್ಷಣದ ಮೆಟ್ಟಿಲನ್ನು ಇತ್ತೀಚೆಗಷ್ಟೆ ಹತ್ತುತ್ತಿರುವ ಸಮಾಜದ ಹಿಂದುಳಿದ ವರ್ಗಗಳ ಮಕ್ಕಳಿಗೆ ಶುಲ್ಕ ಭಾರವಾಗಿರಬಾರದು. ಆದುದರಿಂದ ಉನ್ನತ ಶಿಕ್ಷಣವನ್ನು ದುಬಾರಿಗೊಳಿಸುವ ಪ್ರಯತ್ನ ಕೈಬಿಡಬೇಕೆಂದು ವಾದಿಸಿದರು.

ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಮತ್ತು ಶೈಕ್ಷಣಿಕ ಆಕಾಂಕ್ಷೆಗೂ ಅವರ ಸಾಮಾಜಿಕ ಅಂತಸ್ತಿಗೂ ಸಂಬಂಧವಿರುವುದನ್ನು ಅಂಬೇಡ್ಕರರು ಅರಿತಿದ್ದರು. ಸಾಮಾಜಿಕವಾಗಿ ಮುಂದುವರೆದ ಗುಂಪುಗಳೇ ಶಿಕ್ಷಣ ಕ್ಷೇತ್ರದಲ್ಲಿಯೂ ಮುಂದು ವರೆದುದನ್ನು ಆ ಸಮಯದ ಅಂಕಿಅಂಶಗಳ ಮೂಲಕ ತೋರಿಸಿದ್ದರು. ಅವರ ಪ್ರಕಾರ ಪ್ರತಿ ಎರಡು ಲಕ್ಷ ಜನಸಂಖ್ಯೆಯಲ್ಲಿ ಕಾಲೇಜು ಮೆಟ್ಟಿಲನ್ನು ಹತ್ತಿದ ವಿದ್ಯಾರ್ಥಿಗಳ ಸಂಖ್ಯೆ ಈ ಕೆಳಗಿನಂತಿತ್ತು :

ಮುಂದುವರೆದ ಹಿಂದೂಗಳು	೧೦೦೦ ವಿದ್ಯಾರ್ಥಿಗಳು
ಮುಸ್ಲಿಮರು	೫೨ ವಿದ್ಯಾರ್ಥಿಗಳು
ಮಧ್ಯಮ ವರ್ಗ	೧೪ ವಿದ್ಯಾರ್ಥಿಗಳು
ಹಿಂದುಳಿದ ವರ್ಗ	೦ (ಯಾರೂ ಇಲ್ಲ).

ಈ ಮೇಲಿನ ಸಂಖ್ಯೆಗಳು ಎಲ್ಲ ವರ್ಗದ ಜನರಿಗೆ ಕಾಲೇಜು ಶಿಕ್ಷಣವು ಸಮಾನ ವಾಗಿ ದೊರೆಯುತ್ತಿಲ್ಲವೆಂದು ಸಿದ್ಧಪಡಿಸುತ್ತವೆ. ಹಿಂದುಳಿದ ವರ್ಗಗಳ ವಿದ್ಯಾರ್ಥಿ ಗಳು ಕಾಲೇಜ ಶಿಕ್ಷಣ ಪಡೆಯುವಂತೆ ಪ್ರೋತ್ಸಾಹಿಸಲು ವಿಶೇಷ ಶಿಷ್ಯವೇತನದ ವ್ಯವಸ್ಥೆ ಮಾಡಬೇಕೆಂದು ಅಂಬೇಡ್ಕರರು ಒತ್ತಾಯಿಸಿದ್ದರು. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಇಂತಹ ಶಿಷ್ಯವೇತನದ ದುರುಪಯೋಗ ಮಾಡಿಕೊಳ್ಳುವುದನ್ನೂ ಅಂಬೇಡ್ಕರರು ಸಂಶಯ ವ್ಯಕ್ತಪಡಿಸಿದ್ದರು. ಇಂತಹ ಶಿಷ್ಯವೇತನವು ಬಡ-ಹಿಂದುಳಿದ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ವ್ಯಯವಾಗದೆ ಅವರ ಬಡ ಪೋಷಕರು ಅದನ್ನು ಬಳಸುವ ಸಂದರ್ಭಗಳೇ ಹೆಚ್ಚಾಗಬಹುದು. ಅದರ ಬದಲಾಗಿ ಹಣವನ್ನು ಯೋಗ್ಯ

ಪರಿಸರವುಳ್ಳ ವಸತಿನಿಲಯುಗಳನ್ನು ಸ್ಥಾಪಿಸಿ, ವಿದ್ಯಾರ್ಥಿಗಳಿಗೆ ಅನುಕೂಲ ಮಾಡು ವುದು ಒಳ್ಳೆಯದೆಂದು ಅವರು ಅಭಿಪ್ರಾಯಪಟ್ಟಿದ್ದರು.

ಉನ್ನತಶಿಕ್ಷಣದ ಬಗೆಗಿನ ವಿಚಾರಗಳು :

ವಿಶ್ವವಿದ್ಯಾಲಯುಗಳು ಕೇವಲ ಪರೀಕ್ಷೆ ನಡೆಯಿಸಿ ಪದವಿ ನೀಡುವ ಸಂಸ್ಥೆ ಗಳಾಗಿರದೇ ಉನ್ನತ ಶಿಕ್ಷಣ ನೀಡುವ, ಜಿಜ್ಞಾಸುಗಳನ್ನು ತಯಾರುಮಾಡುವ ಕೇಂದ್ರಗಳಾಗಿರಬೇಕೆಂದು ಅಂಬೇಡ್ಕರ ಹೇಳುತ್ತಿದ್ದರು.

ಮುಂಬೈ ಪ್ರಾಂತದಲ್ಲಿ ವಿಶ್ವವಿದ್ಯಾಲಯ ಸ್ಥಾಪನೆಯಾದ ಪ್ರಾರಂಭದಲ್ಲಿ ಕಾಲೇಜು ಮತ್ತು ವಿಶ್ವವಿದ್ಯಾಲಯುದ ಸಂಯೋಜನೆಗೆ ಸಂಬಂಧಿಸಿದ ಹಾಗೆ ಕೆಲವು ಸಮಸ್ಯೆಗಳು ಉದ್ಭವವಾದವು. ಅವುಗಳಲ್ಲಿ ವಿಶ್ವವಿದ್ಯಾಲಯುದ ಪ್ರಾಧ್ಯಾಪಕರು ಮತ್ತು ಕಾಲೇಜು ಪ್ರಾಧ್ಯಾಪಕರುಗಳಲ್ಲಿನ ಉಚ್ಚ–ನೀಚವೆಂಬ ವೈಷಮ್ಯ ಮುಖ್ಯ ವಾದದ್ದು. ಇಂತಹ ಪರಿಸರವು ಕಲಿಯುವಿಕೆ, ಕಲಿಸುವಿಕೆ ಮತ್ತು ಸಂಶೋಧನೆ ಗಳಂತಹ ಕಾರ್ಯಗಳಿಗೆ ಅನುಕೂಲಕರವಲ್ಲವೆಂದು ಇಂತಹ ಕಾಲೇಜು ಮತ್ತು ವಿಶ್ವವಿದ್ಯಾಲಯುಗಳು ಸಮಾಜಕ್ಕೆ ದ್ರೋಹ ಬಗೆಯುವ ಕೇಂದ್ರಗಳಾಗುವವು ಎಂದು ಡಾ. ಅಂಬೇಡ್ಕರರು ಈ ಸಮಸ್ಯೆಗಳನ್ನೂ ಪರಿಹರಿಸಲು ಅನೇಕ ಸಲಹೆಗಳನ್ನು ನೀಡಿದ್ದರು.

ವಿಶ್ವವಿದ್ಯಾಲಯಗಳ ಸಿನೇಟು, ಅಕೆಡೆಮಿಕ್ ಕೌನ್ಸಿಲ್ ಮತ್ತು ಸಿಂಡಿಕೇಟು ಗಳಿಗೆ ಹಿಂದುಳಿದ ವರ್ಗಗಳ ಪ್ರತಿನಿಧಿಗಳ ನಾಮಕರಣ ಮಾಡಿ, ವಿಶ್ವವಿದ್ಯಾಲಯುದ ಆಡಳಿತದಲ್ಲಿ ಯಾವುದೇ ಬಲಿಷ್ಠ ಕೋಮು ಮೇಲುಗೈ ಪಡೆಯದಂತೆ ತಡೆಯು ಬಹುದು ಮತ್ತು ಪ್ರಜಾಪ್ರಭುತ್ವದ ಸಿದ್ಧಾಂತಗಳಿಗನುಗುಣವಾಗಿ ಆಡಳಿತ ನಡೆಸ ಬಹುದೆಂಬ ವಿಚಾರವನ್ನು ಅವರು ವ್ಯಕ್ತಪಡಿಸಿದ್ದರು.

ಪರಿಕ್ಷಾಮಟ್ಟವನ್ನು ಹೆಚ್ಚಿಸುವುದರಿಂದ ಅಥವಾ ಹೆಚ್ಚು ಕಠಿಣಗೊಳಿಸುವುದ ರಿಂದ ವಿಶ್ವವಿದ್ಯಾಲಯುದ ಶಿಕ್ಷಣಿಕ ಮಟ್ಟವನ್ನು ಹೆಚ್ಚಿಸಬಹುದೆಂಬ ವಿಚಾರವನ್ನು ಅಂಬೇಡ್ಕರರು ತೀವ್ರವಾಗಿ ಆಕ್ಷೇಪಿಸಿದ್ದರು.

ವಿಶ್ವವಿದ್ಯಾಲಯುಗಳು ತಮ್ಮ ಸಂಲಗ್ನ ಕಾಲೇಜುಗಳ ಆಡಳಿತ, ಶೈಕ್ಷಣಿಕ ಮಟ್ಟವನ್ನು ಕಾಪಾಡುವ ಮತ್ತು ನಿಯಂತ್ರಿಸುವ ಅಧಿಕಾರವನ್ನು ಹೊಂದಿರಬೇಕು. ವಿಶ್ವವಿದ್ಯಾಲಯಗಳೇ ಕಾಲೇಜುಗಳ ಉಸ್ತುವಾರಿ ಕಮಿಟಿಗಳನ್ನು ರಚಿಸಿ, ತಮ್ಮ ಅಧೀನದಲ್ಲಿರುವ ಕಾಲೇಜುಗಳನ್ನು ನಿಯಮಿತವಾಗಿ ಪರಿಶೀಲಿಸಿ, ಶೈಕ್ಷಣಿಕ ಮಟ್ಟ ವನ್ನು ಹೆಚ್ಚಿಸುವ ಪ್ರಯತ್ನ ಮಾಡಬೇಕೆಂದು ಅವರು ಸೂಚಿಸಿದ್ದರು.

ವಿಶ್ವವಿದ್ಯಾಲಯುಗಳ ಆಡಳಿತದಲ್ಲಿ ಹೆಚ್ಚಿನ ಉತ್ಸಾಹ ತುಂಬಲು ಉಪ ಕುಲಪತಿ, ಕುಲಸಚಿವ ಹುದ್ದೆಗಳೊಂದಿಗೆ ಹೆಚ್ಚುವರಿಯಾಗಿ ರೆಕ್ಟರ್ ಹುದ್ದೆಯನ್ನು ಸೃಷ್ಟಿಸಲು ಮುಂಬೈ ಪ್ರಾಂತದ ಸರ್ಕಾರವು ವಿಚಾರ ಮಾಡುತ್ತಿರುವಾಗ ಡಾ. ಅಂಬೇಡ್ಕರರು ಈ ಮೂರನೆಯ ಹುದ್ದೆಯ ಅವಶ್ಯಕತೆ ಇಲ್ಲವೆಂದೂ ಒಂದು ವೇಳೆ ಆ ಹುದ್ದೆಯು ನೇಮಕಾತಿಯಾದರೆ, ಗೊಂದಲ ಉಂಟಾಗಿ ವಿಶ್ವವಿದ್ಯಾಲಯದ ಆಡಳಿತವೇ ಮುರಿದು ಬೀಳಬಹುದೆಂದು ಎಚ್ಚರಿಸಿದ್ದರು. ಅಂಬೇಡ್ಕರರ ದೃಷ್ಟಿಯಲ್ಲಿ ವಿಶ್ವವಿದ್ಯಾಲಯ ಎಂದರೆ ಉನ್ನತ ಶಿಕ್ಷಣಕ್ಕಾಗಿ ಮಸೂದೆಗಳನ್ನು, ಕಟ್ಟಳೆಗಳನ್ನು ಪಾಸುಮಾಡುವ ಸಂಸ್ಥೆ ಅಲ್ಲ ಮತ್ತು ಕೇವಲ ಪರೀಕ್ಷೆಗಳನ್ನು ನಡೆಸಿ ಪದವಿಗಳನ್ನು ನೀಡುವುದಷ್ಟೇ ಅದರ ಕರ್ತವ್ಯವಲ್ಲ. ವಿಶ್ವವಿದ್ಯಾಲಯುಗಳು ಉನ್ನತಶಿಕ್ಷಣವನ್ನು ಬಡ ಮತ್ತು ಯೋಗ್ಯ ಜನರ ಬಾಗಿಲಿಗೆ ತಲಪಿಸುವ ಸಂಸ್ಥೆಗಳಾಗಿರಬೇಕು.

ವಿಶ್ವವಿದ್ಯಾಲಯುಗಳ ಶೈಕ್ಷಣಿಕ ವಿಷಯುಗಳಿಗೆ ಸಂಬಂಧಿಸಿದಂತೆ ಸರ್ಕಾರದ ಹಸ್ತಕ್ಷೇಪವಿರಬಾರದು. ಶೈಕ್ಷಣಿಕ ವಿಷಯುಗಳನ್ನು ಆಯಾ ವಿಶ್ವವಿದ್ಯಾಲಯ ಫ್ಯಾಕಲ್ಟಿಗಳೇ ನೋಡಿಕೊಳ್ಳಬೇಕು. ಆದರೆ ಆಡಳಿತ ಮತ್ತು ಮಸೂದೆಗಳನ್ನು ಮಾಡುವ ವಿಷಯದಲ್ಲಿ ಸರ್ಕಾರ ಸ್ವಲ್ಪ ಮಟ್ಟಿಗೆ ಅಧಿಕಾರ ಹೊಂದಿರಬೇಕು. ಇದನ್ನು ವಿ.ವಿ. ಸಿನೇಟ ಮತ್ತು ಸಿಂಡಿಕೇಟುಗಳಿಗೆ ನಾಮಕರಣ ಮಾಡುವುದರಿಂದ ಚಲಾಯಿಸಬಹುದೆಂದು ಅವರು ಅಭಿಪ್ರಾಯಪಟ್ಟಿದ್ದರು.

ಕೆಲವು ವಿಶ್ವವಿದ್ಯಾಲಯಗಳು ಅನೇಕ ಸಂಲಗ್ನ ಕಾಲೇಜುಗಳನ್ನು ಹೊಂದಿದ್ದು, ಅವುಗಳ ಆಡಳಿತ ಮತ್ತು ಪರೀಕ್ಷೆಗಳನ್ನು ನಡೆಸುವಲ್ಲಿ ತುಂಬ ಕಷ್ಟವಾಗಬಹುದು. ಆದುದರಿಂದ ಇನ್ನೂ ಹೆಚ್ಚು ವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸಬೇಕೆಂದು ಅಂಬೇಡ್ಕರರು ೧೯೨೫ ರಲ್ಲಿಯೇ ಅಭಿಪ್ರಾಯಪಟ್ಟು, ಹೊಸವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸಲು ಕೆಲವು ಸ್ಥಳಗಳ ಹೆಸರುಗಳನ್ನು ಸೂಚಿಸಿದ್ದರು. ಅವುಗಳಲ್ಲಿ ಈಗಿನ ಕರ್ನಾಟಕ ವಿಶ್ವವಿದ್ಯಾಲಯವಿರುವ ಧಾರವಾಡ ಕೂಡ ಒಂದಾಗಿತ್ತು.

● ●

ಡಾ. ಅಂಬೇಡಕರ : ಧಾರ್ಮಿಕ ವಿಚಾರಗಳು

● ಎಸ್. ಕೆ. ಕಲ್ಲೋಳಿಕರ

ವಿಶ್ವದ ಧಾರ್ಮಿಕ ಇತಿಹಾಸದಲ್ಲಿ ಡಾ. ಬಾಬಾಸಾಹೇಬ ಅಂಬೇಡಕರ ಅವರದು ಉಜ್ವಲವಾದ ಹೆಸರು. ಅವರು ಮಹಾರ್ ಜನಾಂಗದಲ್ಲಿ ಹುಟ್ಟಿ, ಅಸ್ಪೃಶ್ಯತೆಯ ದಳ್ಳುರಿಯಲ್ಲಿ ಬೆಂದರೂ ಫೀನಿಕ್ಸ್ ಹಕ್ಕಿಯಂತೆ ಮರಳಿ ಜೀವಂತವಾದವರು. ತಮ್ಮ ರಾಜಕೀಯಕ್ಕಾಗಿ ಧರ್ಮವನ್ನು ಭಿಕ್ಷಾಪಾತ್ರೆಯನ್ನಾಗಿಸಿಕೊಂಡವರೊಂದೆಡೆಯಾದರೆ, ಅದೇ ಧರ್ಮದಡಿಯಲ್ಲಿ ಶೋಷಣೆಗೊಂಡು ತಮ್ಮ ಅಸ್ತಿತ್ವಕ್ಕಾಗಿ ಹೋರಾಡುವವರೊಂದೆಡೆ. ಈ ಎರಡನೇ ಗುಂಪಿಗೆ ಸೇರಿದವರು ಬಾಬಾಸಾಹೇಬ ಅಂಬೇಡ್ಕರ. ಈ ದೇಶದ ಇತಿಹಾಸದಲ್ಲಿ ಶೂದ್ರ ಮತ್ತು ಅತಿಶೂದ್ರರು ಧರ್ಮದ ತಪ್ಪುಗಳನ್ನು ಎತ್ತಿ ತೋರಿಸಿದರೆ ಅವನ ಅಂಗಾಂಗಗಳನ್ನು ಕತ್ತರಿಸುವುದರಿಂದ ಮರಣದಂಡನೆ ವಿಧಿಸುವವರೆಗೂ ಕರಾಳಶಾಸನಗಳಿದ್ದ ಕಾಲವೊಂದಿತ್ತು. ಆದರೆ ಬ್ರಿಟಿಷ ಪ್ರಭುತ್ವ ಸ್ಥಾಪನೆಯಾದ ಮೇಲೆ ಈ ಕಾನೂನುಗಳು ಅಳಿದು ಹೋದರೂ ಭಾರತದ ಸವರ್ಣೀಯ ಹಿಂದೂ ಮನಸ್ಸಿನಲ್ಲಿ ಅಡಗಿದ್ದ ಆ ಭಾವನೆಗಳು ಮಾತ್ರ ಮರೆಯಾಗಲೇ ಇಲ್ಲ. ಮನು ರೂಪಿಸಿದ ಕಾನೂನುಗಳಿಂದ ಮುನ್ನಡೆಯುತ್ತಿದ್ದ ಅಸಮಾನತೆಯ ಸಮಾಜವನ್ನು ಧಿಕ್ಕರಿಸಿದವರಲ್ಲಿ ಗೌತಮ ಬುದ್ಧ, ಬಸವೇಶ್ವರ ಮತ್ತು ಫುಲೆ ಅಗ್ರಗಣ್ಯರಾದರೂ ಅವರಿಗಿಂತ ಒಂದು ಮೆಟ್ಟಿಲು ಮೀರಿ ನಿಂತವರೆಂದರೆ ಬಾಬಾಸಾಹೇಬ ಅಂಬೇಡ್ಕರ. ಏಕೆಂದರೆ, ಅಂಬೇಡ್ಕರ ಒಬ್ಬ ಅಸ್ಪೃಶ್ಯ. ಆದಿ ಅನಾದಿಕಾಲದಿಂದಲೂ ಚಂಡಾಲರೆಂದೇ ಹಣೆಪಟ್ಟಿಕಟ್ಟಿ, ಮುಟ್ಟಲು ಮತ್ತು ನೋಡಲು ಸಹ ಅಯೋಗ್ಯರೆಂದು ಊರಹೊರಗಿಟ್ಟ ಒಬ್ಬ ಕೀಳು ಜಾತಿಯವನಾಗಿ ಅಂಬೇಡ್ಕರ ಹಿಂದೂ ಧರ್ಮಕ್ಕೆ ಸವಾಲೆಸೆಯುತ್ತಾರೆ. ಇದು ಧರ್ಮವೇ ಅಲ್ಲವೆಂದು ಸಾರುತ್ತಾರೆ. ಇದು ಶೋಷಣೆಯ ವ್ಯವಸ್ಥೆ, ಜೀವವಿರೋಧಿಯಾದ ಸಂಸ್ಥೆ ಎಂದು ಸಾರಿದಾಗ ಈ ದೇಶದ ಹಿಂದುಗಳಿಗೆ ಹೇಗಾಗಿರಬೇಡ ! ಇಂತಹ ಪರಿಸ್ಥಿತಿ ನಿರ್ಮಾಣವಾದಾಗ, ಅಂಬೇಡ್ಕರ ಹೇಳುವದೆಲ್ಲ ಪೂರ್ವಾಗ್ರಹಪೀಡಿತ ಮನೋಭಾವನೆಯಿಂದ ಎಂದು ಹಿಂದೂ ಧರ್ಮಿಯರು ಹೇಳಿದರು. ಆದರೆ ಹೀಗೆ ಹೇಳುವಾಗ ಅಂಬೇಡ್ಕರ ಒಬ್ಬ ಪ್ರತಿಭಾವಂತ ದಾರ್ಶನಿಕ, ರಾಜಕೀಯದ ವಿಜ್ಞಾನಿ ಮತ್ತು ಮಹಾ ಮಾನವತಾವಾದಿ ಎಂಬುದನ್ನು ಮರೆತ ಹಿಂದುಗಳು, ತಾವೇ ಪೂರ್ವಾಗ್ರಹ ಪೀಡಿತ ಮನೋಭಾವನೆಯಿಂದ ಈತನೊಬ್ಬ ಹೊಲೆಯನೆಂದೆ ಗುರುತಿಸಿದರೇ

ಹೊರತು ಅವರಲ್ಲಿ ಮತ್ತೇನನ್ನೂ ಗುರುತಿಸಲಿಲ್ಲ. ಪರಿಣಾಮವಾಗಿ ಅಂಬೇಡ್ಕರ ಹೇಳಿದ್ದು ಬರೆದದ್ದು ಎಲ್ಲವೂ ಅಸ್ಪೃಶ್ಯವಾಯಿತು. ಈ ದೇಶದಲ್ಲಿ ನಾಯಿನರಿಗಿಂತ ಕಡೆಯಾಗಿ ಬದುಕುತ್ತಿದ್ದ ಅಸ್ಪೃಶ್ಯರನ್ನು ಮೇಲೆತ್ತುವುದಕ್ಕಿಂತ ಹೆಚ್ಚು ಹಿಂದೂ ಮತೀಯವಾದಿಗಳನ್ನು ಮತ್ತು ಆ ಧರ್ಮವನ್ನು ಕುರುಡು ನಂಬಿಕೆಯಿಂದ ಪೋಷಿಸಿ ಕೊಂಡು ಹೋಗುತ್ತಿದ್ದ ಜನರನ್ನು ಪ್ರಜ್ಞಾವಂತರನ್ನಾಗಿಸಲು ಬಹಳಷ್ಟು ಸಮಯ ವನ್ನು ವಿನಿಯೋಗಿಸಿದರು. ಆದರೆ ಅವರ ಶ್ರಮ ಸಾರ್ಥಕವಾಗಲಿಲ್ಲ. ಅದಕ್ಕಾಗಿಯೇ ಜಾತಿ ಮತ್ತು ಅಸ್ಪೃಶ್ಯತೆಗಳೆರಡೂ ಇನ್ನೂ ಅಕ್ಟೋಪಸ್‌ನಂತೆ ತಮ್ಮ ಬಾಹುಗಳನ್ನು ಚಾಚುತ್ತಿವೆ. ಕ್ರಿ. ಶ. ೧೯೧೮ ರಿಂದ ೧೯೫೬ ರ ವರೆಗೆ ನಿರಂತರವಾಗಿ ಮೂವ ತ್ತೆಂಟು (೩೮) ವರ್ಷಗಳವರೆಗೆ ಅಂಬೇಡ್ಕರರ ಧರ್ಮದ ಅಧ್ಯಯನ, ಬರವಣಿಗೆ ಮತ್ತು ಭಾಷಣಗಳು ಹಿಂದೂ ಮತೀಯವಾದಿಗಳ ಕಣ್ಣು ತೆರೆಸಲಿಲ್ಲವೆಂದರೆ ಈ ಧರ್ಮದ ಬೇರುಗಳು ಅದೆಷ್ಟು ಆಳಕ್ಕೆ ಇಳಿದಿರಬಹುದೆನ್ನುವುದಕ್ಕೆ ಇದು ಒಂದು ಸಾಕ್ಷಿ. ಒಂದುವೇಳೆ ಇದೇ ಕ್ರಮವನ್ನು ಬಾಬಾಸಾಹೇಬರು ಕೇವಲ ಅಸ್ಪೃಶ್ಯರ ಏಳ್ಗೆಗಾಗಿ ಕಳೆದಿದ್ದರೆ ಖಂಡಿತವಾಗಿಯೂ ಅಸ್ಪೃಶ್ಯರು ಇಂದಿನದಕ್ಕಿಂತ ಉತ್ತಮ ಪರಿಸ್ಥಿತಿಯಲ್ಲಿರುತ್ತಿದ್ದರೇನೋ ?

ಪ್ರಸಕ್ತ ಈ ಪ್ರಬಂಧದಲ್ಲಿ ಡಾ. ಬಾಬಾಸಾಹೇಬ ಅಂಬೇಡಕರ ಅವರು ಕಂಡ ಹಿಂದೂ ಧರ್ಮ, ಅದರ ತತ್ವಜ್ಞಾನ ಮತ್ತು ಅದರ ಇತಿಹಾಸ ಹಾಗೂ ಭಾರತದಲ್ಲಿ ಅದರ ಸಮಕಾಲೀನ ಇಸ್ಲಾಂ, ಕ್ರಿಶ್ಚಿಯನ್ ಮತ್ತು ಪಾರ್ಸಿ ಧರ್ಮಗಳ ಬಗೆಗೆ ವಿಶ್ಲೇಷಿಸುವುದಲ್ಲದೆ ಭಾರತೀಯ ಮೂಲದ ಬೌದ್ಧ ಧರ್ಮ ಹಾಗೂ ಅಸ್ಪೃಶ್ಯರ ಮತಾಂತರ ಕುರಿತಂತೆ ಚರ್ಚಿಸಲಾಗಿದೆ.

ಹಿಂದೂ ಧರ್ಮದ ತಾತ್ವಿಕತೆ :

ಹಿಂದೂ ಧರ್ಮದ ತಾತ್ವಿಕತೆ ಎಂದರೆ ಏನು ? ಎಂಬುದನ್ನು ತಿಳಿಯುವುದ ಕ್ಕಿಂತ ಮೊದಲು ಧರ್ಮವೆಂದರೇನು ಎಂಬುದನ್ನು ಸ್ಥೂಲವಾಗಿ ನೋಡೋಣ. ಧರ್ಮವೆಂಬುದು ಒಂದು ಜನಸಮುದಾಯ ಪ್ರಾಚೀನ ಕಾಲದಿಂದ ದೈವೀಶಕ್ತಿಯ ಮೇಲಿಟ್ಟ ನಂಬುಗೆಯನ್ನು ತಲೆತಲಾಂತರದಿಂದ, ಭಯದಿಂದ ಪೋಷಿಸಿಕೊಂಡು ಬಂದ ವ್ಯವಸ್ಥೆಯಾದರೂ, ತಾವು ನಂಬಿದ ದೈವೀಶಕ್ತಿಯ ಅಂಜಿಕೆಯ ಹಿನ್ನಲೆಯಲ್ಲಿ ತಪ್ಪುಗಳನ್ನು ಮಾಡದೇ ನೀತಿಪಾಲಕರಾಗಿ ಮುಂದುವರೆಸಿಕೊಂಡು ಹೋಗುವ ವ್ಯವಸ್ಥೆ. ವಿಜ್ಞಾನ ಇನ್ನೂ ಬೆಳೆಯದ ಕಾಲದಲ್ಲಿ ಸೃಷ್ಟಿಯಲ್ಲಿ ಆಗುವ ವೈಚಿತ್ರ್ಯ ಗಳನ್ನು ವಿವರಿಸಲಿಕ್ಕಾಗದೇ ಯಾವುದೋ ಶಕ್ತಿಯೇ ಇದನ್ನು ನಿಂತು ಮಾಡಿಸುತ್ತಿದೆ ಎಂದು ನಂಬಿಕೊಂಡಿದ್ದ ಜನ ಸಂಕೀರ್ಣವಲ್ಲದ ಅತ್ಯಂತ ಸರಳ ಧರ್ಮಗಳನ್ನು

ಪೋಷಿಸಿಕೊಂಡು ಬಂದದ್ದನ್ನು ಜಾಗತಿಕ ಇತಿಹಾಸದಲ್ಲಿ ನಾವು ಕಾಣಬಹುದಾಗಿದೆ. ಒಂದು ಜನಸಮುದಾಯದ ಶೋಷಣೆ ನಡೆದಾಗ ಧರ್ಮದ ಮುಖಾಂತರ ಜನ ಒಗ್ಗಟ್ಟಾಗಿ ಬಂಡೆದ್ದುದನ್ನು ಸಹ ನಾವು ಇತಿಹಾಸದಲ್ಲಿ ಕಾಣುತ್ತೇವೆ. ಒಂದು ವೇಳೆ ಧರ್ಮವೇ ತನ್ನನ್ನು ನೆಚ್ಚಿದ ಜನರ ಶೋಷಣೆಗೆ ಕೈಹಾಕಿದರೆ, ಜನ ಧರ್ಮದ ವಿರುದ್ಧವೇ ಬಂಡೆದ್ದುದನ್ನು ಪ್ರಪಂಚದ ಇತಿಹಾಸದಲ್ಲಿ ಕಂಡಿದ್ದೇವೆ. ಅಂದರೆ ಧರ್ಮದ ತಾತ್ವಿಕತೆ ತನ್ನನ್ನು ನೆಚ್ಚಿರುವ ಜನಸಮುದಾಯಕ್ಕೆ ಪ್ರೀತಿ, ಆದರಗಳನ್ನು ಒದಗಿಸುವ ಮುಖಾಂತರ ಅವರನ್ನು ಶೋಷಣೆಯಿಂದ ದೂರ ಇಡುವುದಲ್ಲದೆ, ಲೌಕಿಕ ಮತ್ತು ಅಲೌಕಿಕ ಪ್ರಪಂಚದಲ್ಲಿ ತಾರತಮ್ಯವನ್ನೆಂದೂ ತೋರದು. ಇದರ ಪರಿಣಾಮವಾಗಿಯೇ ಜಗತ್ತಿನ ಬಹುತೇಕ ಧರ್ಮಗಳು ತಮ್ಮ ಜನರಲ್ಲಿ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಬೋಧಿಸಿದವು.

ಹಿಂದೂ ಧರ್ಮಕ್ಕೆ ಈ ಲಕ್ಷಣಗಳು ಇವೆಯೆ ? ಎಂದು ಪ್ರಶ್ನಿಸಿದರೆ, ಉತ್ತರ ಶೂನ್ಯ. ಆದಕ್ಕಾಗಿಯೇ ಗೌತಮ ಬುದ್ಧ, ಬಸವೇಶ್ವರ, ಫೂಲೆ ಮತ್ತು ಪೆರಿಯಾರ ಅವರು ಹಿಂದೂ ಧರ್ಮದ ಮೂಲವನ್ನೇ ಕೆದಕಿದರು. ಆದಾಗ್ಯೂ ನಾವು ಇಪ್ಪತ್ತೊಂದನೆಯ ಶತಮಾನಕ್ಕೆ ಕಾಲಿಡುತ್ತಿರುವಾಗಲೂ ಅನೇಕ ವ್ಯಕ್ತಿಗಳು 'ಹಿಂದೂಧರ್ಮದಂಥ ಶ್ರೇಷ್ಠ ಮತ್ತು ಉದಾತ್ತಧರ್ಮ ಜಗತ್ತಿನಲ್ಲಿ ಬೇರೊಂದಿಲ್ಲ ವೆಂದು ಹೇಳುವ ಮೂಲಕ ಅದರ ಇತಿಹಾಸವನ್ನೇ ತಿರುಚುತ್ತಿದ್ದಾರೆ. ಗೌತಮ ಬುದ್ಧ ತಾನು ರಾಜನಾದರೂ ಹಿಂದೂ ಧರ್ಮದ ವಿರುದ್ಧ ಏಕೆ ಬಂಡೆದ್ದ ? ಮಹಾವೀರ ತಾನು ಕ್ಷತ್ರಿಯನಾದರೂ ಜೈನ ಧರ್ಮವನ್ನೇಕೆ ಸ್ಥಾಪಿಸಿದ. ಫೂಲೆ, ಪೆರಿಯಾರರು ತಾವು ಶೂದ್ರರಾಗಿ ಹಿಂದೂ ಮತೀಯವಾದಿಗಳ ವಿರುದ್ಧವೇಕೆ ತಮ್ಮ ಧ್ವನಿ ಎತ್ತಿದರು ? ಬಸವಣ್ಣ ಮತ್ತು ಇತರ ಕೆಲವರು ತಾವು ಹುಟ್ಟಿನಿಂದ ಬ್ರಾಹ್ಮಣರಾಗಿದ್ದರೂ ವೈದಿಕ ಸಂಪ್ರದಾಯದ ವಿರುದ್ಧ ಹೋರಾಟಕ್ಕೇಕಿಳಿದರು ? ಹಿಂದೂ ಧರ್ಮದಲ್ಲಿ ಹಾಸುಹೊಕ್ಕಾಗಿರುವ ತಾರತಮ್ಯವೇ ಇದಕ್ಕೆ ಕಾರಣವೆಂದು ಹೇಳಬೇಕಾಗುತ್ತದೆ.

ಹಿಂದೂ ಧರ್ಮದ ತಾತ್ವಿಕತೆಯನ್ನು ವಿಮರ್ಶಿಸಲು ಅಂಬೇಡಕರ ಉಪಯೋಗಿಸುವ ಎರಡು ಮಾನದಂಡಗಳೆಂದರೆ ಉಪಯುಕ್ತತೆ ಮತ್ತು ನ್ಯಾಯ. ವ್ಯಕ್ತಿಗಳ ನಡುವಳಿಕೆಯಲ್ಲಿನ ತಪ್ಪು–ಸರಿಗಳನ್ನು ನಿರ್ಣಯಿಸಲು ಸನಾತನ ಸಮಾಜದಲ್ಲಿ ಉಪಯುಕ್ತತೆಯನ್ನು ಬಳಸಲಾಯಿತು. ಆಧುನಿಕ ಸಮಾಜದಲ್ಲಿ ನ್ಯಾಯವನ್ನು ಮಾನದಂಡವಾಗಿ ಬಳಸಲಾಯಿತು. "ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತೆಗಳಿಗಿರುವ ಮತ್ತೊಂದು ಹೆಸರೇ ನ್ಯಾಯ. ಹಿಂದೂ ಮತದ ವಿಮರ್ಶೆಯಲ್ಲಿ ನ್ಯಾಯ

ವನ್ನು ನಾನು ಈ ಅರ್ಥದಲ್ಲಿ ಬಳಸುತ್ತಿರುವೆ"೧ ಎಂದು ಹೇಳುವ ಅಂಬೇಡಕರ, ಈ ಕೆಳಗಿನಂತೆ ಪ್ರಶ್ನೆಗಳನ್ನು ಕೇಳುತ್ತಾ, ತಾವೇ ವಿಮರ್ಶಿಸುತ್ತಾ ಹೋಗುತ್ತಾರೆ.

ಪ್ರಶ್ನೆ : ಹಿಂದೂ ಮತವು ಸಮಾನತೆಗೆ ಅಂಗೀಕಾರ ನೀಡುತ್ತದೆಯೆ ?

ಅಂಬೇಡಕರ ಹೇಳುತ್ತಾರೆ : "ಈ ಪ್ರಶ್ನೆಯಿಂದ ಮೊದಲು ಹೊಳೆಯುವುದು ಇಲ್ಲಿಯ ಜಾತಿಪದ್ಧತಿ. ಇಲ್ಲಿಯ ಜಾತಿಗಳು ಸಮಾನವಾಗಿರದೆ ಒಂದರ ಮೇಲೊಂದರಂತೆ ಶ್ರೇಣೀಕೃತವಾಗಿರುವುದೇ ಒಂದು ಲಕ್ಷಣ. ಮನು ಜಾತಿಗಳ ಹುಟ್ಟಿಗೆ ಹೊಣೆಗಾರನಲ್ಲದಿದ್ದರೂ ಅವನು ವರ್ಣದ ಶ್ರೇಷ್ಠತೆಯುನ್ನು ಬೋಧಿಸಿದವ. ಅದರ ಅಂತಸ್ತು ಮತ್ತು ದರ್ಜೆಯು (Gradation) ಸಿದ್ಧಾಂತವನ್ನು ಎತ್ತಿ ಹಿಡಿದವ. ಆ ವರ್ಣವ್ಯವಸ್ಥೆಯೇ ಜಾತಿಪದ್ಧತಿಯು ಉಗಮಕ್ಕೆ ಕಾರಣವಾಯಿತು".೨ ವರ್ಣವ್ಯವಸ್ಥೆಯಲ್ಲಿ ಮನು ಬ್ರಾಹ್ಮಣರನ್ನು ಉತ್ತುಂಗ ಶಿಖರದಲ್ಲಿಟ್ಟು ಉಳಿದ ವರ್ಣಗಳಾದ ಕ್ಷತ್ರಿಯ, ವೈಶ್ಯ ಮತ್ತು ಶೂದ್ರರನ್ನು ಕ್ರಮವಾಗಿ ಕೆಳಗಿಡುತ್ತಾ ಬರುತ್ತಾನೆ. ಅತ್ಯಂತ ಕಡೆಯ ದರ್ಜೆಯೇ ಅತಿಶೂದ್ರರದ್ದು. ಈ ರೀತಿಯಾದ ಮನುವಿನ ಅಂತಸ್ತು ಮತ್ತು ದರ್ಜೆಯೇ ಅಸಮಾನತೆಯ ಮೂಲವಾಯಿತು. ಈ ಅಸಮಾನತೆ ಶೋಷಣೆಗೆ ದಾರಿಮಾಡಿತು. ಬ್ರಿಟಿಷರು ಬರುವುದಕ್ಕಿಂತ ಮುಂಚೆ ಅಸಮಾನತೆ ಮತ್ತು ಶೋಷಣೆಗಳು ಎಂತಹ ಉಚ್ಛ್ರಾಯಸ್ಥಿತಿಗೇರಿದ್ದುವೆಂದರೆ ಒಬ್ಬ ಕೀಳು ವರ್ಣದವ ಹುಟ್ಟಿನಿಂದ ಸಾಯುವವರೆಗೂ ಧರ್ಮ ತನಗೆ ಹಾಕಿದ ಪರಿಧಿಯಲ್ಲಿಯೇ ನರಳಬೇಕಾಗಿತ್ತು. ವರ್ಣಧರ್ಮದ ಕಟ್ಟಳೆಯಲ್ಲಿ ಬಂಧಿಯಾಗಬೇಕಿತ್ತು. ಏಕೆಂದರೆ "ಹಿಂದೂ ಧರ್ಮ ಮನುಷ್ಯನ ವ್ಯಕ್ತಿ ಸ್ವಾತಂತ್ರ್ಯವನ್ನು ಗೌರವಿಸುವುದಿಲ್ಲ".೩ ಒಂದು ವೇಳೆ ತನ್ನ ವ್ಯಕ್ತಿ ಸ್ವಾತಂತ್ರ್ಯವನ್ನು ಮುಂದು ಮಾಡಿಕೊಂಡು ಆ ಕಟ್ಟಳೆಗಳನ್ನು ಉಲ್ಲಂಘಿಸಿದ್ದರೆ, ಅವನು ಧರ್ಮ ವಿಧಿಸುವ ಕರಾಳ ಕಾನೂನುಗಳಿಗೆ ಬಲಿಯಾಗಬೇಕಿತ್ತು. ಈ ಹಿನ್ನೆಲೆಯಲ್ಲಿ ಮನು ಕ್ರೋಡೀಕರಿಸಿದ ಕಾನೂನುಗಳನ್ನು ನೋಡಿದರೆ ಮೊದಲಿನಿಂದಲೂ ವರ್ಣವ್ಯವಸ್ಥೆಯ ಸಮಾಜ ಮೇಲು ಕೀಳು ಹೊಂದಿತ್ತೆಂಬುದನ್ನು ಕಾಣಬಹುದು. ಹೀಗಾಗಿ ಹಿಂದೂ ಧರ್ಮವು ಗುಲಾಮಗಿರಿಯನ್ನು ಪ್ರೋತ್ಸಾಹಿಸಿ, ಅದಕ್ಕೆ ಕಾನೂನಿನ ಅಂಗೀಕಾರ ನೀಡುತ್ತದೆ. ಅದಕ್ಕಾಗಿ ಶೂದ್ರ ಮೇಲಿನ ಮೂರು ವರ್ಗದ ಗುಲಾಮನಾಗಿ ಬಾಳಬೇಕಾಗುತ್ತದೆ. ಅಂದರೆ ಎಂತಹ ಪರಿಸ್ಥಿತಿಯಲ್ಲೂ ಕೂಡ ಮೇಲಿನ ವರ್ಗದವರು ಶೂದ್ರ ಕೈಕೊಳ್ಳುವ ವೃತ್ತಿ ಕೈಕೊಳ್ಳತಕ್ಕದ್ದಲ್ಲ ಮತ್ತು ಅವನ ಗುಲಾಮರಾಗತಕ್ಕದ್ದಲ್ಲ. ಮನು, ವಿವಾಹದ ವಿಷಯದಲ್ಲಿ ಕೂಡ ಇದೇ ನಿಯಮವನ್ನು ಬಳಸುತ್ತಾನೆ. ಅಂದರೆ ಒಬ್ಬ ಬ್ರಾಹ್ಮಣ ತನ್ನ ಸ್ವಜಾತಿಯಿಂದ ಹಿಡಿದು ಶೂದ್ರ ಕನ್ಯೆಯವರೆಗೂ ವಿವಾಹವಾಗಬಹುದು. ಆದರೆ ಈ ಸ್ವಾತಂತ್ರ ಮಾತ್ರ ಶೂದ್ರ ಅತಿಶೂದ್ರರಿಗಿಲ್ಲ. ಸಮಾಜದ ಅತ್ಯಂತ ತುತ್ತತುದಿಯಲ್ಲಿರುವ

ಬ್ರಾಹ್ಮಣರು ಪೌರೋಹಿತ್ಯ ವೃತ್ತಿ ವಹಿಸುವುದರ ಮುಖಾಂತರ ಬೆವರು ಸುರಿಸದೇ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಧಾರ್ಮಿಕ ರಂಗಗಳಲ್ಲಿ ತಮ್ಮ ಸ್ವಾಮ್ಯ ವನ್ನು ಸಾಧಿಸಿಕೊಳ್ಳುವ ಮುಖಾಂತರ ಇಡೀ ಸಮಾಜವನ್ನು ತಮ್ಮ ಕಪಿಮುಷ್ಟಿ ಯೊಳಗಿಟ್ಟುಕೊಂಡಿದ್ದರು.

ಕುಡಿಯುವ ನೀರು ಒಂದೇ, ಸುಡುವ ಬೆಂಕಿಯೊಂದೇ, ಉಸಿರಾಡುವ ಗಾಳಿಯೂ ಒಂದೇ ಆದರೂ ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಮಾತ್ರ ಯಾವಕ್ಕೂ ತಾರತಮ್ಯ. ಇದು ಜೀವಿಗಳಲ್ಲಿ ಬೇಧ ಭಾವ ಎನಿಸುತ್ತದೆ. ಮತ್ತು ಸಮಾನ ಅಪರಾಧಕ್ಕೆ ತಾರತಮ್ಯದ ಶಿಕ್ಷೆ ವಿಧಿಸುತ್ತದೆ. ಇಲ್ಲಿಗೇ ನಿಲ್ಲುವುದಿಲ್ಲ, ಈ ತಾರತಮ್ಯ ಆಶ್ರಮ ಧರ್ಮ ಮತ್ತು ವಿಧಿಕ್ರಿಯೆಗಳಿಗೂ ಕೂಡ.[೩] ಅಂಬೇಡಕರರು ಹೇಳುತ್ತಾರೆ, ಜಗತ್ತಿನ ಇತರ ಸಮಾಜಗಳಲ್ಲಿ ಮೇಲು ಕೀಳು ಇರಬಹುದು. ಆದರೆ ಖಂಡಿತ ವಾಗಿಯೂ ಅವುಗಳಿಗೆ ಆ ಧರ್ಮಗ್ರಂಥಗಳ ಸಮ್ಮತಿ ಇಲ್ಲ. ಆದರೆ ಹಿಂದೂ ಧರ್ಮ ಗ್ರಂಥಗಳು ಅಸಮಾನತೆ ಮತ್ತು ಶೋಷಣೆಗೆ ಖಂಡಿತವಾಗಿಯೂ ತಮ್ಮ ಸಮ್ಮತಿ ನೀಡಿವೆ. ಈ ರೀತಿಯಾದ ಶೋಷಣೆ ಮತ್ತು ಅಸಮಾನತೆಗಳನ್ನು, ಹಿಂದೂ ಧರ್ಮವೊಂದನ್ನು ಬಿಟ್ಟರೆ ಬೇರೆ ಯಾವ ಧರ್ಮಗಳೂ ಬೋಧಿಸುವುದಿಲ್ಲ.

ಮನು ಕೇವಲ ವ್ಯಕ್ತಿತ್ವವನ್ನು ಅಲ್ಲಗಳೆಯುವದಕ್ಕಷ್ಟೇ ನಿಲ್ಲುವದಿಲ್ಲ. ಮಾನವ ವ್ಯಕ್ತಿತ್ವಕ್ಕೆ ಉದ್ದೇಶಪೂರ್ವಕವಾಗಿ ಕಳಂಕ ಹಚ್ಚುವುದನ್ನು ಪ್ರತಿಪಾದಿಸು ತ್ತಾನೆ. ಅವನ ಪ್ರಕಾರ ನಾಲ್ಕು ವರ್ಣಗಳನ್ನುಳಿದು ಬೇರೆಲ್ಲ ಜಾತಿಗಳು ಹಾದರಕ್ಕೆ ಹುಟ್ಟಿದವು. ಮನುವಿನ ಪ್ರಕಾರ, ಮಗಧ ಜಾತಿಯು, ವೈಶ್ಯ ಪುರುಷ ಹಾಗೂ ಕ್ಷತ್ರಿಯ ಸ್ತ್ರೀ ಸಂಬಂಧದ ಸಂತತಿ. ವಿದೇಹಕವು ಬ್ರಾಹ್ಮಣ ಸ್ತ್ರೀ ಹಾಗೂ ವೈಶ್ಯ ಪುರುಷರ ಸಂಬಂಧದ ಸಂತತಿ. ಆದರೆ ಪಾಣಿನಿಯ ಪ್ರಕಾರ ಮಾಗಧನು ಮಗಧ ದೇಶವಾಸಿ, ವಿದೇಹಕನು ವಿದೇಹ ದೇಶವಾಸಿ. ಪಾಣಿನಿ ಇದ್ದದ್ದು ಕ್ರಿ. ಪೂ. ೩೦೦ ರ ಸುಮಾರಿನಲ್ಲಿ. ಮನು ಇದ್ದುದು ಕ್ರಿ.ಶ. ೨೦೦ ರಲ್ಲಿ. ಅಂದರೆ ಪಾಣಿನಿಯ ಕಾಲಕ್ಕೆ. ಕಳಂಕರಹಿತರಾಗಿದ್ದವರು ಮನುವಿನ ಕೈಯಲ್ಲಿ ಹೇಗೆ ಕಳಂಕಿತರಾಗಿ ಬಿಟ್ಟರು ?"[೪] ಎಂದು ಅಂಬೇಡ್ಕರರು ಪ್ರಶ್ನಿಸುತ್ತಾರೆ. ಜಗತ್ತಿನ ಬೇರೆ ಬೇರೆ ಧರ್ಮಗಳು ಮನುಷ್ಯನನ್ನು ಉದಾತ್ತಗೊಳಿಸುವ ಕಾರ್ಯದಲ್ಲಿ ತೊಡಗಿದರೆ, ಹಿಂದೂ ಧರ್ಮವು ಅವನನ್ನು ಕಳಂಕಿತಗೊಳಿಸುವ ಮತ್ತು ಇನ್ನಷ್ಟು ಕೆಳಗೆ ತುಳಿಯುವ ಕೆಲಸವನ್ನು ನಿರಾತಂಕವಾಗಿ ಮಾಡುತ್ತದೆ. ಅಂದರೆ ಹಿಂದೂ ಮತವು ಸಮಾನತೆಗೆ ಅಂಗೀಕಾರ ನೀಡುವುದಿಲ್ಲ.

ಡಾ. ಅಂಬೇಡ್ಕರ ಕೇಳುವ ಮತ್ತೊಂದು ಪ್ರಶ್ನೆ ಏನೆಂದರೆ,

ಹಿಂದು ಧರ್ಮವು ಸ್ವಾತಂತ್ರ್ಯವನ್ನು ಅಂಗೀಕರಿಸುತ್ತದೆಯೆ ?

ಸ್ವಾತಂತ್ರ್ಯದ ಕಲ್ಪನೆಯೇ ಹಿಂದೂ ಧರ್ಮಕ್ಕೆ ಪರಕೀಯ ಶಬ್ದ. ಇಲ್ಲಿ ಎಲ್ಲವೂ ಶಾಸ್ತ್ರ, ವೇದ, ಸ್ಮೃತಿ, ಪುರಾಣ ಮತ್ತು ಗೀತೆಗಳ ರೂಪದಲ್ಲಿರುವ ಹಿಂದೂ ಕಾನೂನಿನ ಪ್ರಕಾರವೇ. "ಸ್ವಾತಂತ್ರ್ಯ ಅಸ್ತಿತ್ವದಲ್ಲಿರಬೇಕಾದರೆ ಕೆಲವು ನಿರ್ದಿಷ್ಟ ಸಾಮಾಜಿಕ ಸಮಾನತೆ ಇರಬೇಕು".[೫] ಆದರೆ ಸಮಾನತೆ ಎಂಬುದು ಇಲ್ಲಿ ಗೊತ್ತಿಲ್ಲ ವೆಂದರೆ ಸ್ವಾತಂತ್ರ್ಯದ ಕಲ್ಪನೆ ಊಹೆ ಮಾಡಲಿಕ್ಕೂ ಅಸಾಧ್ಯ. ಧರ್ಮಶಾಸ್ತ್ರಗಳು ಹಾಕಿದ ಕಟ್ಟಳೆಗಳ ಪ್ರಕಾರ ಹುಟ್ಟಿನಿಂದ ಸಾಯುವವರೆಗೂ ಎಲ್ಲ ಕ್ರಿಯೆಗಳು ಧರ್ಮದ ಪರಿಧಿಯಲ್ಲಿ ನಡೆಯುವಾಗ ಸ್ವಾತಂತ್ರ್ಯದ ಪರಿಕಲ್ಪನೆಯೇ ಇಲ್ಲಿ ಬರುವುದಿಲ್ಲ. ಅಂಬೇಡಕರ ಹೇಳುತ್ತಾರೆ : ಮನುವಿನ ಪ್ರಕಾರ ಶೂದ್ರ ಹುಟ್ಟುವದು ಮೇಲ್ವರ್ಗಗಳ ಸೇವೆ ಮಾಡುವದಕ್ಕಾಗಿಯೇ. ಅಂದರೆ ಹಿಂದೂ ಮತದಲ್ಲಿ ವೃತ್ತಿ ಆಯ್ಕೆಗೆ ಸ್ವಾತಂತ್ರ್ಯವಿಲ್ಲ. ಆರ್ಥಿಕ ಸ್ವಾವಲಂಬನೆಯಿಲ್ಲ. ಆಯಾ ವರ್ಣದಲ್ಲಿ ಹುಟ್ಟಿದವರು ತಮ್ಮ ಕುಲದ ಕಸಬುಗಳನ್ನೇ ಮಾಡಬೇಕು. ಒಬ್ಬ ಶೂದ್ರ ಎಷ್ಟೇ ಧೈರ್ಯಶಾಲಿಯಾದರೂ ಅವನು ಆಯುಧಗಳನ್ನು ಹಿಡಿಯುವಂತಿಲ್ಲ. ಬ್ರಾಹ್ಮಣ ಎಷ್ಟೇ ದಡ್ಡನಾದರೂ ಸರಿ ಅವನು ಪುರೋಹಿತನೇ. ಅಂದರೆ ಹುಟ್ಟಿನ ಪೂರ್ವದಲ್ಲಿ ಹಿಂದೂ ಸಮಾಜದಲ್ಲಿ ಕಸಬು, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸ್ಥಾನ ಮಾನಗಳು ನಿರ್ಧರಿಸಲ್ಪಟ್ಟಿರುತ್ತವೆ. ಅದಕ್ಕಾಗಿ ಇಲ್ಲಿ ಯಾವುದಕ್ಕೂ ಆಯ್ಕೆಯ ಸ್ವಾತಂತ್ರ್ಯವೇ ಇಲ್ಲವೆಂದು ಅಂಬೇಡ್ಕರ ಅಭಿಪ್ರಾಯ ಪಡುತ್ತಾರೆ. "ಜಾತಿ ಪ್ರಭುತ್ವಕ್ಕಿಂತ ಸಾಮ್ರಾಜ್ಯಶಾಹಿ ಹೆಚ್ಚು ಸಹನೀಯವಾದುದು. ಈ ಸತ್ಯವನ್ನು ಗುರುತಿಸಿ ಘೋಷಿಸಬೇಕಾಗಿದೆ. ಈ ಅಂಶದಲ್ಲಿ ಯಾವುದೇ ರಾಜಿ ಕೂಡದು. 'ಜಾತಿ' ಬೇಕೆ ಅಥವಾ ಸ್ವರಾಜ್ಯ ಬೇಕೆ ಎಂದು ಹಿಂದೂ ಜನಾಂಗ ನಿರ್ಧರಿಸಲೇ ಬೇಕು; ಇವೆರಡೂ ಒಟ್ಟಿಗೆ ಇರಲು ಸಾಧ್ಯವಿಲ್ಲ."[೬] ಅಂದರೆ ಜಾತಿ ನಿರ್ನಾಮವಾದಾಗಲೇ ಸ್ವಾತಂತ್ರ್ಯದ ನಿಜವಾದ ಕಲ್ಪನೆ ಉದಯವಾಗುವದು ಭಾರತದಲ್ಲಿ.

ಡಾ. ಅಂಬೇಡಕರ ಕೇಳುವ ಮತ್ತೊಂದು ಪ್ರಶ್ನೆ ಏನೆಂದರೆ,

ಹಿಂದೂ ಧರ್ಮವು ಸಹೋದರತ್ವವನ್ನು ಪುರಸ್ಕರಿಸುವುದೇ ?

ಅವರು ಹೇಳುತ್ತಾರೆ : ಸಮಾಜದಲ್ಲಿ ಎರಡು ಶಕ್ತಿಗಳಿರುತ್ತವೆಯೆಂದು. ಒಂದು ವೈಯಕ್ತಿಕತೆ, ಇನ್ನೊಂದು ಒಡನಾಟ. ಸದ್ಭಾವನೆಗೆ ಮತ್ತೊಂದು ಹೆಸರೇ ಸಹೋದರತ್ವ. ಇತರರ ಒಳಿತಿನಲ್ಲಿ ತನ್ನ ಒಳಿತನ್ನು ಗುರುತಿಸಿಕೊಳ್ಳುವ ಭಾವನೆ ಇದು. "ಜಾತಿಗಳಿಂದ ರೂಪಿತವಾಗಿರುವ ಶ್ರೇಣೀಕೃತ ವ್ಯವಸ್ಥೆಯಲ್ಲಿ ಒಂದು ಜಾತಿ ಎತ್ತರದಲ್ಲಿದ್ದು ಶ್ರೇಷ್ಠವೆನಿಸಿಕೊಂಡರೆ ಅದರ ಕೆಳಗಿರುವ ಜಾತಿ ಕೀಳೆನಿಸಿ

ಕೊಳ್ಳುತ್ತದೆ. ಮೇಲುಕೀಳೆಂಬ ಅಂಶಗಳನ್ನು ನಿರ್ಧರಿಸುವ ಅಂಶಗಳು ಮೊದಲನೆಯದಾಗಿ, ಧಾರ್ಮಿಕ ವಿಧಿಕ್ರಿಯೆಗೆ ಸಂಬಂಧಿಸಿದ್ದು: ಎರಡನೆಯದಾಗಿ ಸಾಮೂಹಿಕ ಒಡನಾಟ, ಮೂರನೆಯದಾಗಿ ಸಾಮೂಹಿಕ ಭೋಜನ ಮತ್ತು ಮದುವೆ, ನಾಲ್ಕನೆಯದು ಆರ್ಥಿಕ ಅಂಶಗಳು".[೭] ಈ ಮೇಲೆ ಹೇಳಿದ ಎಲ್ಲ ಅಂಶಗಳು ಹೆಚ್ಚುಕಡಿಮೆ ಹಿಂದೂ ಧರ್ಮದಲ್ಲಿ ಮನುಷ್ಯನ ಅಂತಸ್ತನ್ನು ನಿರ್ಧರಿಸುತ್ತವೆ. ಆದರೆ ಈ ಅಂತಸ್ತನ್ನು ಅಳೆಯುವ ಪಟ್ಟಿ ತಾನು ಹುಟ್ಟುವ ಜಾತಿ. ಕ್ಷತ್ರಿಯ ತಾನೆಷ್ಟು ಬಲಾಢ್ಯನಿರಲಿ, ಬೇಕಾದರೆ ಚಕ್ರವರ್ತಿಯೆ ಆಗಿರಲಿ, ವೈಶ್ಯ ತನ್ನ ಸಿರಿವಂತಿಕೆಯಿಂದ ಕುಬೇರನನ್ನು ಮೀರಿಸಿರಲಿ, ಶೂದ್ರ ಬೇಕಾದಷ್ಟು ಬುದ್ಧಿವಂತನಾಗಿರಲಿ. ಆದರೆ ಬ್ರಾಹ್ಮಣರು ಪಡೆಯುವ ಗೌರವ ಮತ್ತು ಅಂತಸ್ತನ್ನು ಇವರೆಂದೂ ಪಡೆಯುವದಿಲ್ಲವೆಂದು, ಬಾಬಾಸಾಹೇಬ ಅಭಿಪ್ರಾಯ ಪಡುತ್ತಾರೆ. ಹುಟ್ಟಿನಿಂದ ಪ್ರಾರಂಭವಾಗುವ ಈ ಪ್ರತ್ಯೇಕತೆಯ ಹೋರಾಟ ಸತ್ತರೂ ನಿಲ್ಲುವುದಿಲ್ಲ. ಇಲ್ಲಿ ಆಯಾ ವರ್ಣಗಳು ತಮ್ಮ ಹೆಸರಿನಲ್ಲಿ ಸಹ ಹೇಗೆ ಮೇಲು ಕೀಳು ಹೊಂದಿರುತ್ತವೆ ಎಂಬುದನ್ನು ನೋಡೋಣ. ಒಬ್ಬ ಬ್ರಾಹ್ಮಣ ತನ್ನ ಹೆಸರಿನ ಕೊನೆಗೆ ದೇವ ಇಲ್ಲವೆ ದೇವರು ಎಂಬ ಪದನಾಮವನ್ನು, ಕ್ಷತ್ರಿಯನು ವೀರ ಇಲ್ಲವೆ ಶೂರ, ವೈಶ್ಯ ಸಿರಿವಂತಿಕೆ ಮತ್ತು ಶೂದ್ರ ಸೇವೆಯನ್ನು ಸೂಚಿಸುವಂಥ ಹೆಸರು ಹೊಂದಬೇಕಾಗಿತ್ತು. ಭಾರತದ ಇತಿಹಾಸದಲ್ಲಿ ಸಹೋದರತ್ವದ ಲಕ್ಷಣಗಳು ಎಷ್ಟು ಕಡಿಮೆ ಇವೆ ಎನ್ನುವುದನ್ನು ತಿಳಿಯಬೇಕಾದರೆ, ಆ ಚರಿತ್ರೆಯ ಪುಟಗಳನ್ನು ತೆರೆದಾಗಲೇ ಗೊತ್ತಾಗುತ್ತದೆ. ಇತಿಹಾಸದುದ್ದಕ್ಕೂ ಬ್ರಾಹ್ಮಣ ಮತ್ತು ಕ್ಷತ್ರಿಯರ ನಡುವಿನ ಸಂಘರ್ಷ, ಪರಶುರಾಮ ಇಪ್ಪತ್ತೊಂದು ಸಲ ಪೃಥ್ವಿಯನ್ನು ಸುತ್ತುಹಾಕಿ ಕ್ಷತ್ರಿಯರನ್ನು ನಿರ್ನಾಮ ಮಾಡಿದ್ದು, ಮಹಾಭಾರತದ ಯುದ್ಧ ಇವು ಈ ವಾದಕ್ಕೆ ಪುಷ್ಟಿಕೊಡುತ್ತವೆ.

ಭಾರತದಲ್ಲಿ ಅಣ್ಣ ತಮ್ಮಂದಿರನ್ನು, ತಮ್ಮ ಅಣ್ಣಂದಿರನ್ನು ಕೊಂದು ಅಧಿಕಾರಕ್ಕೆ ಬಂದಷ್ಟು ಉದಾಹರಣೆಗಳನ್ನು ಜಗತ್ತಿನ ಯಾವ ದೇಶದ ಇತಿಹಾಸದಲ್ಲೂ ಕಾಣಲಾಗದು. ಏಕೆಂದರೆ, ಹಿಂದೂ ಧರ್ಮದ ತತ್ವಗಳು ಬೋಧಿಸುವದು ಪ್ರೇಮ, ವಾತ್ಸಲ್ಯ, ಕರುಣೆ ಮತ್ತು ಅಹಿಂಸೆಯನ್ನಲ್ಲ. ಅವು ಬೋಧಿಸುವದು ಕ್ರೌರ್ಯ ಮತ್ತು ಅಸಮಾನತೆಗಳನ್ನು. ಒಟ್ಟಾರೆ ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತೆಯ ಕಲ್ಪನೆಗಳು ಹಿಂದೂ ಧರ್ಮಕ್ಕೆ ಪರಕೀಯವಾಗಿ ಕಾಣುತ್ತವೆ.

ಹಿಂದೂ ಧರ್ಮದ ಇತಿಹಾಸ :

ಇತಿಹಾಸವೆಂದರೆ ಆಗಿಹೋದ ಘಟನೆಗಳನ್ನು ಇದ್ದ ಹಾಗೆ ಹೇಳುವುದು. ವಸ್ತುಸ್ಥಿತಿಯನ್ನು ಕುರಿತು, ಇತಿಹಾಸಕಾರ ಬಹಳ ಎಚ್ಚರಿಕೆಯಿಂದ ಈ ಕ್ರಿಯೆ

ಯಲ್ಲಿ ತೊಡಗಬೇಕಾಗುತ್ತದೆ. ನಿಜವಾದ ಇತಿಹಾಸದ ಬರವಣಿಗೆಯಲ್ಲಿ ತಾರತಮ್ಯ ಸಲ್ಲದು. ಅಂದರೆ ಹಿಂದೂ ಧರ್ಮದ ಇತಿಹಾಸದ ಬರವಣಿಗೆ ಇಂಥ ಲೋಪ ದೋಷಗಳಿಂದ ಮುಕ್ತವಾಗಿದೆಯೆ ? ಭಾರತದ ಇತಿಹಾಸ ಬರವಣಿಗೆಯಲ್ಲಿ ಮುಖ್ಯವಾಗಿ ಮೂರು ಶಾಖೆಗಳನ್ನು ನೋಡಬಹುದು. ಒಂದು ಸಾಮ್ರಾಜ್ಯಶಾಹಿ ಇತಿಹಾಸಕಾರರ ಗುಂಪು. ಇನ್ನೊಂದು ರಾಷ್ಟ್ರೀಯವಾದಿ ಇತಿಹಾಸಕಾರರದು. ಮಗುದೊಂದು ಈ ಮೇಲೆ ಹೇಳಿದ ಎರಡೂ ಗುಂಪಿಗೆ ಸೇರದವರದು (ಈ ಮೂರನೆಯ ಗುಂಪಿಗೆ ಸೇರಿದವರು ವಿಚಾರವಾದಿಗಳು, 'ಇತಿಹಾಸಕಾರ'ರೆಂಬ ಹಣೆ ಪಟ್ಟಿಯನ್ನು ಮಾತ್ರ ಇವರು ಹಚ್ಚಿಕೊಳ್ಳಲಿಲ್ಲ). ಬ್ರಿಟಿಷರು ಭಾರತದ ಮೇಲೆ ತಮ್ಮ ಆಳಿಕೆಯನ್ನು ಗಟ್ಟಿಗೊಳಿಸಲು ಸಾಮ್ರಾಜ್ಯಶಾಹಿ ಇತಿಹಾಸಕಾರರನ್ನು ಬಳಸಿ ಕೊಂಡರೆ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸು ರಾಷ್ಟ್ರೀಯವಾದಿ ಇತಿಹಾಸಕಾರ ರನ್ನು (Nationalist school of historians) ಬಳಸಿಕೊಂಡಿತು. ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧ ಭಾರತದ ಹಿತಾಸಕ್ತಿ ಕಾಪಾಡುವ ಪ್ರಶ್ನೆ ಬಂದಾಗ ಸಾಮ್ರಾಜ್ಯಶಾಹಿ ಇತಿಹಾಸಕಾರರು ಮಾಡಿದಂಥ ಅಕ್ಷಮ್ಯ ತಪ್ಪುಗಳನ್ನು ರಾಷ್ಟ್ರೀಯ ವಾದಿ ಇತಿಹಾಸಕಾರರು ಭಾರತದ ಚರಿತ್ರೆಯನ್ನು ಬರೆಯುವಾಗ ಮಾಡಿದರು. ಈ ಹಿನ್ನಲೆಯಲ್ಲಿ ಹಿಂದೂ ಧರ್ಮದ ಚರಿತ್ರೆಯನ್ನು ಇವರಾರೂ ನಿಷ್ಪಕ್ಷಪಾತವಾಗಿ ಬರೆಯಲೇ ಇಲ್ಲ. ಏಕೆಂದರೆ ವೇದ, ಪುರಾಣ, ಶಾಸ್ತ್ರ, ಸ್ಮೃತಿ, ರಾಮಾಯಣ ಮತ್ತು ಮಹಾಭಾರತದಂಥ ಕೃತಿಗಳೇ ಇವರಿಗೆ ಮೂಲ ಆಕರಗಳಾದವು. ಹೀಗಾಗಿ ಕಥೆಯನ್ನು ಇತಿಹಾಸವನ್ನಾಗಿಸಿ, ಸುಳ್ಳನ್ನು ಸತ್ಯವನ್ನಾಗಿಸಿ ಮತ್ತು ಸತ್ಯವನ್ನು ಸುಳ್ಳಾಗಿಸಿ ಇತಿಹಾಸ ಬರೆದರು. ದುರಂತವೆಂದರೆ, ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದು ನಾಲ್ಕು ದಶಕಗಳೇ ಕಳೆದರೂ ಬಹುಸಂಖ್ಯಾತ ಇತಿಹಾಸಕಾರರು ಅದೇ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

ಇನ್ನು ಮೂರನೆಯ ಇತಿಹಾಸಕಾರರ ಗುಂಪೆಂದರೆ – ಮಹಾತ್ಮಾ ಜ್ಯೋತಿರಾವ ಫೂಲೆ, ಸ್ವಾಮಿ ವಿವೇಕಾನಂದ, ಸ್ವಾಮಿ ಧರ್ಮತೀರ್ಥ, ರಾಮಸ್ವಾಮಿ ಪೆರಿಯಾರ ಮತ್ತು ಡಾ. ಅಂಬೇಡಕರ ಅವರದು. ಮೂಲತಃ ಇವರು ಸಮಾಜ ಸುಧಾರಕರು ಮತ್ತು ಸಾಮಾಜಿಕ ಕ್ರಾಂತಿಕಾರರು. ಇವರೆಲ್ಲರೂ ಹಿಂದುಗಳೇ ಆದ್ದರಿಂದ ಸಾಮ್ರಾಜ್ಯಶಾಹಿ ಇತಿಹಾಸಕಾರರಿಗಿದ್ದಂಥ ದೃಷ್ಟಿಕೋನ ಮಾತ್ರ ಇವರಿಗೆ ಇರಲಿಲ್ಲ ಎಂಬುದನ್ನು ನಾವು ನೆನಪಿಡಬೇಕು. ಹೀಗಾಗಿ ಇವರು ಭಾರತೀಯ ರಾಷ್ಟ್ರೀಯವಾದಿ ಇತಿಹಾಸಕಾರರಂತೆ ಸುಳ್ಳನ್ನು ಸತ್ಯವನ್ನಾಗಿಸಲಿಲ್ಲ ಮತ್ತು ಸತ್ಯವನ್ನು ಸುಳ್ಳಾಗಿಸ ಲಿಲ್ಲ. ಅದಕ್ಕೆ ಪ್ರತಿಯಾಗಿ ಹಿಂದೂ ಧರ್ಮದ ಇತಿಹಾಸವನ್ನು ತುಲನಾತ್ಮಕವಾಗಿ, ವಿಮರ್ಶಾತ್ಮಕವಾಗಿ ವಿವೇಚಿಸಿ ವಸ್ತುನಿಷ್ಠ ಸತ್ಯವನ್ನು ಇದ್ದಕ್ಕಿದ್ದಹಾಗೆ ವರದಿ ಮಾಡಿದರು. ಪರಿಣಾಮವಾಗಿ ಹಿಂದೂ ಧರ್ಮದ ಕಾಣದ ಕರಾಳ ಮುಖಗಳು

ಬೆಳಕಿಗೆ ಬಂದವು. 'ಸತ್ಯ ಯಾವಾಗಲೂ ಕಹಿ'ಯಂತೆ. ಹೀಗಾಗಿ ವಿಚಾರವಂತ ರೆಂದು ಕರೆಯಿಸಿಕೊಳ್ಳುವ ಬಹುಸಂಖ್ಯಾತ ಮೇಲ್ವರ್ಗದ ಬುದ್ಧಿಜೀವಿಗಳು ಈ ಮಹನೀಯರ ಟೀಕೆಗಳನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲ. ಕಾರಣ ಇಷ್ಟೇ, ಇವರೆಲ್ಲರೂ ಶೂದ್ರು ಮತ್ತು ಅತಿಶೂದ್ರರು. ಶೂದ್ರು ಮತ್ತು ಅತಿಶೂದ್ರರು ಧರ್ಮದ ಮೇಲೆ ಸವಾರಿ ಮಾಡಿದರೆ ಹೇಗೆ ? ಎಂಬ ಚಿಂತೆಯಲ್ಲಿ ಇಪ್ಪತ್ತನೇ ಶತಮಾನದ ಪುರೋಹಿತ ಶಾಹಿಗಳು ಇನ್ನೂ ವಿಮಂಚನೆ ವ್ಯಕ್ತಪಡಿಸುತ್ತಿದ್ದಾರೆ. ಇತಿಹಾಸದ ಬರವಣಿಗೆಯ ಮೇಲೆ ಕ್ಷಕಿರಣ ಬೀರುವ ಭಗತ್ ಶರಣ ಉಪಾಧ್ಯಾಯ ಅವರ ಹೇಳಿಕೆಯನ್ನು ಇಲ್ಲಿ ಉಲ್ಲೇಖಿಸುವುದು ಉಚಿತವೆನಿಸುತ್ತದೆ : "ರಾಷ್ಟ್ರಪ್ರೇಮ ಅವಗುಣವೇನೂ ಅಲ್ಲ; ಆದರೆ ರಾಷ್ಟ್ರಪ್ರೇಮವನ್ನು ಮೆರೆಯುವುದಕ್ಕಾಗಿ ಐತಿಹಾಸಿಕ ಪರಂಪರೆಯನ್ನು ದೂಷಿತಗೊಳಿಸುವುದು ನಿಜಕ್ಕೂ ಕೆಟ್ಟಕೆಲಸ. ನಾಡಿನ ಮಕ್ಕಳ ಚಾರಿತ್ರ್ಯವನ್ನು ರೂಪಿಸುವ ಸಲುವಾಗಿ ಇತಿಹಾಸದ ಉದಾತ್ತ ವ್ಯಕ್ತಿಗಳ ಚರಿತ್ರೆಯನ್ನು ನಾವು ಹೆಣೆಯಬಹುದು. ಅವರ ಹಿರಿಮೆಯನ್ನು ನಾವು ಹಾಡಿ ಹೊಗಳಬಹುದು – 'ರಾಮಾಯಣ' ಮತ್ತು 'ಮಹಾಭಾರತ'ಗಳಲ್ಲಿ ಮಾಡಿರುವಂತೆ. ಆದರೆ ಅಂಥ ವೀರಗಾಥೆಯನ್ನು ಇತಿಹಾಸವೆಂದು ಹೆಸರಿಸಲು ಸಾಧ್ಯವಾಗುವುದಿಲ್ಲ. ಪ್ರತಿಯೊಂದು ಘಟನೆಯೂ ಸರಪಳಿಯ ಕೊಂಡಿಯಂತಿರುತ್ತದೆ. ಹಾಗೂ ಆ ಕೊಂಡಿಯನ್ನು ಕಿತ್ತುಹಾಕಲಾಗುವದಿಲ್ಲ. ಜೊತೆಗೆ, ಉದಾತ್ತಚರಿತ್ರೆಗಾಗಿ ಇತಿಹಾಸದ ಒಂದು ಪ್ರಸಂಗವನ್ನು ಪ್ರತ್ಯೇಕಿಸಿಕೊಂಡು ಪಾತ್ರಸೃಷ್ಟಿಯಿಂದ ಅದನ್ನು ಪುನಃ ಸಂಘಟಿಸು ವಾಗ, ಅದರ ಒಂದು ಮುಖವನ್ನು ಒತ್ತಿ ಹೇಳುತ್ತೇವೆ; ಇನ್ನೊಂದು ಮುಖವನ್ನು ಮರೆಮಾಡುತ್ತೇವೆ. ಈ ಬಗೆಯ ಇತಿಹಾಸವು ಇತಿಹಾಸವೆನಿಸಿಕೊಳ್ಳುವದಿಲ್ಲ. ರಾಷ್ಟ್ರದ ಅನುಕೂಲಕ್ಕಾಗಿ ಮುಂದಿರಿಸಿದಂಥ ರಾಜಕೀಯ ಸಂಕಲನವೆಂದೆನಿಸಿಕೊಳ್ಳುತ್ತದೆ. ಕೆಲವು ದೃಷ್ಟಿಯಿಂದ ಅದು ಸ್ತುತ್ಯವೂ ಆಗಿರಬಹುದು; ಆದರೆ, ಅದಕ್ಕೆ ಇತಿಹಾಸ ವೆಂಬ ಹೆಸರು ಕೊಡುವದು ಅನುಚಿತವಾಗುತ್ತದೆ; ದೋಷಪೂರ್ಣವಾಗುತ್ತದೆ."೮

ಅಂಬೇಡಕರರ ಧರ್ಮದ ಮೇಲಿನ ಅಧ್ಯಯನವನ್ನು ವೇದಗಳಿಂದಲೇ ಪ್ರಾರಂ ಭಿಸೋಣ. ಏಕೆಂದರೆ, ವೇದಗಳು ಹಿಂದೂ ಧರ್ಮದ ಪ್ರಪ್ರಥಮ ದಾಖಲೆಗಳೆಂದು ಪರಿಗಣಿಸಲ್ಪಟ್ಟಿವೆ. ವೇದಗಳ ಕಾಲದಲ್ಲಿ ವರ್ಣವರ್ಣಗಳ ನಡುವೆ ಬಿರುಕು ಇರಲಿಲ್ಲ. ವೃತ್ತಿ ಆಯ್ಕೆಗೂ ವರ್ಣಕ್ಕೂ ಸಂಬಂಧವೇ ಇರಲಿಲ್ಲವೆಂದು ಹೇಳಿಕೆ ಕೊಡುವ ವಿದ್ವಾಂಸರಿಗೇನೂ ಕೊರತೆ ಇಲ್ಲ. ಮಹಾತ್ಮಾ ಗಾಂಧಿಯವರು ಕೂಡ ಅಂಬೇಡ್ಕರ ರಿಗೆ ಇದೇ ಮಾತನ್ನು ಹೇಳುತ್ತಿದ್ದರು. ಅಂಬೇಡ್ಕರ, ಋಗ್ವೇದದ 'ಪುರುಷಸೂಕ್ತ' ದಲ್ಲಿ ಉಲ್ಲೇಖವಾಗಿರುವ ಶೂದ್ರ, ವರ್ಣ ಮತ್ತು ವೃತ್ತಿಯ ಬಗ್ಗೆ ಹೇಳಿದರೆ, ಗಾಂಧೀಜಿ ಅದು ನಂತರದ ದಿವಸದಲ್ಲಿ ಸೇರಿಸಿದ ಭಾಗ (interpolation) ಎಂದು ಹೇಳುತ್ತಿದ್ದರು. ಆದರೆ ವೇದಗಳ ಅಧ್ಯಯನವನ್ನು ತೆರೆದ ಮನಸ್ಸಿನಿಂದ ಮಾಡಿದರೆ

ಖಂಡಿತವಾಗಿಯೂ ಪೌರೋಹಿತ್ಯ ಕೇವಲ ಬ್ರಾಹ್ಮಣರಿಗೆ ಮೀಸಲಾಗಿತ್ತು. ರಾಜ್ಯ ಭಾರ ಮಾಡುವದು ಕ್ಷತ್ರಿಯರ ಕೆಲಸವಾಗಿತ್ತು. ಅದರಂತೆ ವೈಶ್ಯರು ಕೃಷಿ ಮತ್ತು ವ್ಯಾಪಾರ, ಶೂದ್ರರು ಉಳಿದವರ ಸೇವೆಯನ್ನು ಮಾಡಬೇಕಾಗಿತ್ತು. "ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ವರ್ಣದವರಾರೂ ಪೌರೋಹಿತ್ಯವನ್ನು ಕೈಕೊಂಡ ಒಂದು ಉದಾಹರಣೆಯೂ ಋಗ್ವೇದ ಮತ್ತು ಇತರ ವೇದಗಳಲ್ಲಿ ಸಿಗುವುದಿಲ್ಲ. ವೇದಗಳು ರಚನೆಯಾಗುವ ಪೂರ್ವದಲ್ಲಿ ಪೌರೋಹಿತ್ಯವೃತ್ತಿ ಅನುವಂಶಿಕವಾಗಿತ್ತು. ಬ್ರಾಹ್ಮಣರು ಬೇಕಾದಷ್ಟು ಧಡ್ಡರಾದರೂ ಸರಿ ಅವರು ಪೌರೋಹಿತ್ಯವನ್ನೇ ಕೈಗೊಳ್ಳುತ್ತಿದ್ದರು. ಅದರಂತೆ ರಾಜ್ಯಭಾರ ಮಾಡುವ ಮತ್ತು ದೊರೆಯಾಗುವ ಹಕ್ಕು ಕೇವಲ ಕ್ಷತ್ರಿಯರಿಗಿದ್ದಿತು. ವೈಶ್ಯರಾದವರಾರೂ ರಾಜರಾದ ಬಗ್ಗೆ ಒಂದೂ ನಿರ್ದಿಷ್ಟವಾದ ಪುರಾವೆ ಯಾವ ವೇದದಲ್ಲೂ ಸಿಗಲಾರದು. ಏಕೆಂದರೆ, ಅರಸೊತ್ತಿಗೆ ಕೂಡಾ ವಂಶಪರಂಪರೆಯಾಗಿ ಮುಂದುವರೆದಿತ್ತು".*

ಡಾ. ಅಂಬೇಡ್ಕರ ನೇರವಾಗಿ ವೇದಗಳ ಬಗ್ಗೆ ತಮ್ಮ ಟೀಕೆಯನ್ನು ಮಾಡೇವುದಿಲ್ಲವಾದರೂ ಬೃಹಸ್ಪತಿ, ಚಾರ್ವಾಕ, ಗೌತಮ, ಜೈಮಿನಿ ಮತ್ತು ಯಕ್ಷ ಮುಂತಾದವರ ಟೀಕೆಗಳನ್ನು ಮುಂದೆ ಮಾಡಿಕೊಂಡು 'ವೇದಗಳು ದೇವರು ನಿರ್ಮಿಸಿದ್ದಲ್ಲ. ಬ್ರಾಹ್ಮಣರು ಹೊಟ್ಟೆಹೊರೆಯಲು ಸೃಷ್ಟಿಸಿದ ಸಾಹಿತ್ಯ. ಈ ವೇದಗಳಲ್ಲಿದ್ದಷ್ಟು ಹಿಂಸೆ, ಕ್ರೌರ್ಯ ಮತ್ತು ಲೈಂಗಿಕ ಅಶ್ಲೀಲತೆ ಜಗತ್ತಿನ ಯಾವ ಗ್ರಂಥಗಳಲ್ಲೂ ದೊರೆಯುವದಿಲ್ಲ'ವೆಂದು** ಹೇಳುತ್ತಾರೆ. ಇಂಥ ಕ್ರೌರ್ಯ, ಹಿಂಸೆ ಮತ್ತು ಲೈಂಗಿಕ ಅಶ್ಲೀಲತೆ ತುಂಬಿದ ವೇದಗಳು ಹಿಂದೂ ಧರ್ಮಕ್ಕೆ ಬುನಾದಿಯಾದವು. ಈ ತಮ್ಮ ದಗಲುಬಾಜಿತನ ಬೇರೆಯವರಿಗೆ ಗೊತ್ತಾಗಬಾರದೆಂದು ಶೂದ್ರ ಅತಿಶೂದ್ರ ಮತ್ತು ಮಹಿಳೆಯರಿಗೆ ಸಂಸ್ಕೃತ ಮತ್ತು ವೇದಾಧ್ಯಯನದಿಂದ ದೂರ ಇಟ್ಟರು ಎಂದು ಅಂಬೇಡಕರ ಅಭಿಪ್ರಾಯಪಡುತ್ತಾರೆ. ಆದಕ್ಕಾಗಿ ಹಿಂದೂ ಧರ್ಮದ ವಿರುದ್ಧ ನಡೆದಷ್ಟು ಧಾರ್ಮಿಕ ಬಂಡಾಯಗಳು ಜಗತ್ತಿನ ಯಾವ ಧರ್ಮದಲ್ಲಿಯೂ ನಡೆದಿಲ್ಲ. ಇದನ್ನು ಮನಗಂಡ ಬ್ರಾಹ್ಮಣರು, ಗೋಸುಂಬೆಗಳಂತೆ ತಮ್ಮ ಬಣ್ಣ ಬದಲಾಯಿಸುತ್ತ ವೇದ, ಸ್ಮೃತಿ, ಶಾಸ್ತ್ರ, ಪುರಾಣ, ರಾಮಾಯಣ, ಮಹಾಭಾರತ ಮತ್ತು ಗೀತೆಗಳನ್ನು ಒಂದೊಂದಾಗಿ ಬದಲಿಸುತ್ತಾ ಇಡಿ ಧರ್ಮವನ್ನೇ ಗೊಂದಲಮಯವಾಗಿ ಮಾಡಿದ್ದನ್ನು ಚರಿತ್ರೆಯಲ್ಲಿ ಕಾಣಬಹುದಾಗಿದೆ. ಆದರೆ ಅಂಬೇಡಕರ ಹಿಂದೂ

* ಹೆಚ್ಚಿನ ವಿವರಗಳಿಗಾಗಿ ಡಾ. ಬಿ. ಆರ್. ಕಾಂಬಳೆಯವರ 'ದಿ ಕ್ಯಾಸ್ಟ ಆ್ಯಂಡ್ ಫಿಲೋಸಾಫಿ ಇನ್ ಪ್ರೀ ಬುದ್ಧಿಸ್ಟ್ ಇಂಡಿಯಾ', ಪರಿಮಳ ಪ್ರಕಾಶನ, ೧೯೭೯ ನೋಡಬಹುದು.

** ವಿವರಗಳಿಗಾಗಿ 'ಬಿ. ಆರ್. ಅಂಬೇಡ್ಕರ ರೈಟಿಂಗ್ಸ್ & ಸ್ಪೀಚಿಸ್', ವ್ಯಾಲ್ಯೂಂ, ೩ ನೋಡಿರಿ.

ಧರ್ಮಗ್ರಂಥಗಳನ್ನಾವುದನ್ನೂ ಬಿಡದೇ ಅಲ್ಲಿಯ ದೋಷಗಳನ್ನು ಹುಡುಕುತ್ತಲೇ ಹೋಗುತ್ತಾರೆ.

ರಾಮಾಯಣದ 'ರಾಮ' ಮತ್ತು ಮಹಾಭಾರತದ 'ಕೃಷ್ಣ'ನನ್ನು ಬ್ರಾಹ್ಮಣರು ದೈವತ್ವಕ್ಕೇರಿಸಿದರೆ, ಅಂಬೇಡ್ಕರ ತಮ್ಮ ಅಧ್ಯಯನದ ಮುಖಾಂತರ ಅವರಿಬ್ಬರೂ ಸಾಮಾನ್ಯರಲ್ಲಿ ಸಾಮಾನ್ಯರು ಎಂದು ಹೇಳುತ್ತಾರೆ. ಅಂಬೇಡಕರರು, ರಾಮನ ಬಗ್ಗೆ ಬರೆಯುತ್ತಾ – "ರಾಮನ ಹುಟ್ಟೇ ವ್ಯಭಿಚಾರದಿಂದ ಪ್ರಾರಂಭವಾಗುತ್ತದೆ. ಅವನು ಹುಟ್ಟಿದ್ದು ದಶರಥನಿಗಲ್ಲ, ಶೃಂಗಮುನಿಗೆ. ರಾಮನ ವಿವಾಹವೂ ಟೀಕೆಯಿಂದ ಮುಕ್ತವಾಗಿಲ್ಲ. ಏಕೆಂದರೆ ಬೌದ್ಧರಾಮಾಯಣದ ಪ್ರಕಾರ ಸೀತೆ ರಾಮನ ತಂಗಿ. ವಾಲ್ಮೀಕಿರಾಮಾಯಣ ಇದನ್ನು ಒಪ್ಪುವದಿಲ್ಲವಾದರೂ ಅಲ್ಲಿ ಸೀತೆಯ ಹುಟ್ಟು ಮತ್ತು ತಂದೆ ತಾಯಿಗಳ ಬಗ್ಗೆ ಖಚಿತ ಪ್ರಸ್ತಾಪ ಇಲ್ಲ. ಆರ್ಯರಲ್ಲಿ ಪ್ರಚಲಿತವಿದ್ದ 'ಸಹೋದರ-ಸಹೋದರಿಯರ ವಿವಾಹ ಪದ್ಧತಿ'ಗೆ ಇದು ಅನುಗುಣವಾಗಿದೆ. ಆದಕ್ಕಾಗಿ ಇದು ಆದರ್ಶ ವಿವಾಹವಲ್ಲ. ಮತ್ತು ರಾಮನು ಏಕಪತ್ನಿ ವ್ರತಸ್ಥನೂ ಅಲ್ಲ. ರಾಮನಿಗೆ ಹಲವಾರು ಪತ್ನಿಯರು ಇದ್ದರೆಂಬುದನ್ನು ವಾಲ್ಮೀಕಿಯೇ ಬರೆಯುತ್ತಾನೆ."೯ ರಾಮನು ಯುದ್ಧದಲ್ಲಿ ರಾವಣನನ್ನು ಕೊಂದು ಸೀತೆಗೆ "ನಾನು ನಿನ್ನ ಶೀಲವನ್ನು ಶಂಕಿಸುತ್ತೇನೆ. ನೀನು ರಾವಣನಿಂದ ಕೆಡಿಸಲ್ಪಟ್ಟಿರಬಹುದು. ನಿನ್ನನ್ನು ನೋಡುವುದಕ್ಕೆ ನನಗೆ ಅಸಹ್ಯವಾಗುತ್ತದೆ. ... ...ನಿನ್ನಂತಹ ಸುಂದರಿಯಾದ ಹೆಣ್ಣನ್ನು ರಾವಣನು ಸುಖಿಸದೇ ಬಿಟ್ಟಿರಲಾರ ಎಂದು ನನಗೆ ಅನಿಸುತ್ತದೆ".೧೦ ನಂತರ ಅವಳನ್ನು ಅಗ್ನಿಪರೀಕ್ಷೆಗೆ ಒಳಪಡಿಸಿ ನಿಂದೆಯ ಮಾತುಗಳಿಗೆ ಅಂಜಿ, ಗರ್ಭಿಣಿಯಾದಾಗ ಒಯ್ದು ಅರಣ್ಯಕ್ಕೆ ಬಿಡುತ್ತಾನೆ. ರಾಮನ ಈ ವರ್ತನೆ ಅವನೊಬ್ಬ ಕೀಳು ಮನಸ್ಸಿನವನೆಂದು ಸಾದರಪಡಿಸುತ್ತದೆ. ವಾಲಿಯನ್ನು ಮೋಸದಿಂದ ಕೊಲ್ಲುವದು ಶಂಭೂಕ ತಪಸ್ಸಿಗೆ ಕುಳಿತಾಗ ಅವನಿಗೆ ಎಚ್ಚರ ನೀಡದೇ ತಲೆ ಕತ್ತರಿಸುವುದನ್ನೂ ಕಂಡರೆ ರಾಮ ಒಬ್ಬ ಹೇಡಿ ಮತ್ತು ಕ್ರೂರಿ ಎಂದೇ ಮನದಟ್ಟಾಗುತ್ತದೆ.

ಇನ್ನು ಕೃಷ್ಣನ ಬಗ್ಗೆ ಬರೆಯುತ್ತಾ, 'ಕೃಷ್ಣ ಒಬ್ಬ ಸ್ತ್ರೀ ಲಂಪಟ. ಮದುವೆಯಾದ ಗೃಹಿಣಿಯರ ಜೊತೆಗಿನ ಅವನ ಅನೈತಿಕ ಸಂಬಂಧ ಮತ್ತು ಅವನ ವರ್ತನೆ ಅವನು ಒಬ್ಬ ಸಾಮಾನ್ಯ ಮನುಷ್ಯನಾಗಲೂ ಸಹ ಅನರ್ಹ"ನೆಂದು ಅಂಬೇಡ್ಕರ ರುಜುವಾತುಪಡಿಸುತ್ತಾರೆ. ಒಟ್ಟಿನಲ್ಲಿ ಹಿಂದೂ ಧರ್ಮಗ್ರಂಥಗಳೆಲ್ಲಾ ಮೋಸ, ವಂಚನೆ, ಕೊಲೆ, ಸುಲಿಗೆ ಮತ್ತು ಲೈಂಗಿಕ ಅಶ್ಲೀಲತೆಯಿಂದ ಕೂಡಿವೆ ಎಂದು ಹೇಳುವ ಅಂಬೇಡ್ಕರ, ಸ್ಮೃತಿಗಳನ್ನು ಕಂಡು ರೋಸಿ ಹೋಗುತ್ತಾರೆ. ಮನು ಒಬ್ಬ ಹುಚ್ಚ ಮತ್ತು ಲಂಪಟ ಎಂದು ಕರೆಯುವ ಅಂಬೇಡ್ಕರ ಮನುಸ್ಮೃತಿಯನ್ನು

ಸುಟ್ಟುಹಾಕಿದರು. ಏಕೆಂದರೆ ಮನುಸ್ಮೃತಿ ಬಹುಸಂಖ್ಯಾತ ಭಾರತೀಯರ ಸ್ವಾತಂತ್ರ್ಯವನ್ನು ಹರಣಗೊಳಿಸಿತ್ತು. ಆದರೆ "ಅವರು ಬ್ರಾಹ್ಮಣ ಧರ್ಮವನ್ನೇ ತಮ್ಮ ಧರ್ಮ ಮತ್ತು ಸಂಸ್ಕೃತಿ ಎಂದು ಒಪ್ಪಿಕೊಂಡು ಅದರ ಅನ್ಯಾಯಗಳಿಗೂ ಅಸತ್ಯಗಳಿಗೂ ಒಳಗಾಗಬೇಕಾಯಿತು. ತಲೆತಲಾಂತರದಿಂದ ಗುಲಾಮಗಿರಿಯ ವಾತಾವರಣದಲ್ಲಿ ಹುಟ್ಟಿ ಬೆಳೆದ ಅವರು ಅದರ ಪಾಪದಲ್ಲೇ ಪುಣ್ಯವನ್ನು, ವಂಚನೆಯಲ್ಲಿ ವಿವೇಕವನ್ನು, ಗುಲಾಮಗಿರಿಯಲ್ಲೇ ಸ್ವಾತಂತ್ರ್ಯವನ್ನೂ, ಕಾಣುತ್ತಿದ್ದಾರೆ. ಅದೆಂದೂ ಒಂದು ಸ್ಥಿರ ಸಿದ್ಧಾಂತವನ್ನು ಅಥವಾ ತತ್ವವನ್ನು ಪ್ರತಿನಿಧಿಸಿಲ್ಲ".೧೧ ಹೀಗಾಗಿ ಹಿಂದೂ ಧರ್ಮ ಎಷ್ಟು ಸಂಕೀರ್ಣವಾಗಿದೆಯೆಂದರೆ ಒಬ್ಬ ಹಿಂದೂವಿಗೆ ತಾನೇಕೆ ಹಿಂದೂ ಎನ್ನುವದೇ ಗೊತ್ತಿಲ್ಲ.

"ಒಬ್ಬ ಪಾರ್ಸಿಗೆ ನೀನೇಕೆ ಪಾರ್ಸಿ ಎಂದು ಪ್ರಶ್ನೆ ಕೇಳಿದರೆ ಅವನು ಹೇಳುತ್ತಾನೆ, ತಾನು 'ಝೋರೋಸ್ಟರ'ನ ಅನುಯಾಯಿ ಅದಕ್ಕಾಗಿಯೇ ನಾನು ಪಾರ್ಸಿ ಎಂದು. ಇದೆ ಪ್ರಶ್ನೆಯನ್ನು ಕ್ರಿಶ್ಚಿಯನ್ ಒಬ್ಬನಿಗೆ ಕೇಳಿದರೆ ತಾನು ಏಸುಕ್ರಿಸ್ತನಲ್ಲಿ ನಂಬಿಕೆಯಿಟ್ಟಿದ್ದೇನೆಂದು, ಮುಸ್ಲಿಮನಿಗೆ ಕೇಳಿದರೆ ತಾನು ಇಸ್ಲಾಂ ಧರ್ಮದಲ್ಲಿ ನಂಬಿಕೆಯಿಟ್ಟಿದ್ದೇನೆ, ಅದಕ್ಕಾಗಿಯೇ ನಾನು ಮುಸ್ಲಿಂ ಎಂದು ಹೇಳುತ್ತಾನೆ. ಇದೆ ಪ್ರಶ್ನೆಯನ್ನು ಹಿಂದೂ ಒಬ್ಬನಿಗೆ ಕೇಳಿದರೆ ಆತ ತಬ್ಬಿಬ್ಬುಗೊಂಡು ಏನು ಹೇಳಬೇಕೆಂಬುದೇ ಗೊತ್ತಾಗುವುದಿಲ್ಲ". ಏಕೆಂದರೆ ಹಿಂದೂ ಧರ್ಮಕ್ಕೆ ವ್ಯವಸ್ಥಿಬದ್ಧವಾದ ಹುಟ್ಟು, ಬೆಳವಣಿಗೆ ಮತ್ತು ಸಿದ್ಧಾಂತ ಇಲ್ಲವೇ ಇಲ್ಲ. "Hinduism is almost indefinable, because it is hotch potch of almost every fear, dream and delusion which has ever drifted through the tangled shadowy jungle of man's brain".೧೨ ಎಂಬ ವಿದೇಶಿ ಪತ್ರಿಕಾಕರ್ತ ನಿಕಾಲ್ಸ್ ಬೆವರ್ಲಿಯ ಈ ಮಾತು ಎಷ್ಟು ಪ್ರಸ್ತುತವೆನಿಸುತ್ತದೆ! ಬೆವರ್ಲಿಯ ಇನ್ನೊಂದು ಮಾತು ಹೀಗಿದೆ; 'Hinduism has no church, It has no pope, no Bible. But most important of all no history'. ಇದೇ ಅಂಶವನ್ನು ಡಾ. ಅಂಬೇಡ್ಕರ ನೂರಾರು ಬಾರಿ ಹೇಳಿದ್ದರು. ಹಿಂದೂಗಳಿಗೆ ಸಮಾಲೋಚಿಸುವ ಮತ್ತು ಅವರ ಅಸ್ತಿತ್ವವನ್ನೆ ಪ್ರಶ್ನೆ ಮಾಡುವ ಅಂಬೇಡ್ಕರರ ಒಂದು ಉಲ್ಲೇಖವನ್ನು ನೋಡೋಣ. 'The first and foremost thing that must be recognised is that Hindu society is a myth. The name Hindu is itself a foreign name. It was given by the Mohammedans to the natives for the purpose of distinguishing themselves. It does not occur in any sanskrit work prior to the Mohammedans invasion. They did not feel the necessity of a common name because they had no

conception of their having eonstituted a community. Hindu society as such does not exist. It is only collection of castes."೧೩

ಡಾ. ಅಂಬೇಡ್ಕರ ಮತ್ತು ಭಾರತದಲ್ಲಿಯ ಇತರ ಧರ್ಮಗಳು :

ಬಾಬಾಸಾಹೇಬರು ಕೇವಲ ಹಿಂದೂ ಧರ್ಮದ ಅಧ್ಯಯನವನ್ನಷ್ಟೇ ಕೈಗೊಳ್ಳಲಿಲ್ಲ. ಭಾರತದಲ್ಲಿ ಇತರ ಧರ್ಮಗಳಾದ ಇಸ್ಲಾಂ, ಕ್ರಿಶ್ಚಿಯನ್, ಮತ್ತು ಪಾರ್ಸಿ ಧರ್ಮಗಳ ಅಧ್ಯಯನ ಕೈಗೊಂಡರು. ಭಾರತದಲ್ಲಿ ಪರಕೀಯ ಧರ್ಮಗಳು ಹಿಂದೂ ಧರ್ಮದ ಪ್ರಭಾವದ ಕಾರಣ ಅವು ಕೂಡ ಅಸ್ಪೃಶ್ಯತೆಯನ್ನು ಆಚರಿಸುವ ಮಟ್ಟಕ್ಕೆ ಹೋಗಿದ್ದವೆಂದು ಕಂಡುಕೊಂಡರು. ಎಂತಹ ಕ್ರಾಂತಿಕಾರಕ ಧರ್ಮವೊಂದು ಹಿಂದೂ ಧರ್ಮದ ನೆರಳಿನಲ್ಲಿ ತನ್ನತನವನ್ನು ಕಳೆದುಕೊಳ್ಳುವದೆಂದು ಗೊತ್ತಾಯಿತು. ಎ. ಆರ್. ದೇಸಾಯಿಯವರ ಪ್ರಕಾರ 'ಹಿಂದೂ ಧರ್ಮವು, ಪರಕೀಯರ ಆಕ್ರಮಣದ ವೇಳೆಯಲ್ಲಿ ಅಂಜುಬುರಕ ಧರ್ಮ. ಅದು ಆಗ ಎಲ್ಲಿಯೂ ಕಾಣಸಿಗುವದಿಲ್ಲ. ಆದರೆ ಸಮಾಜದಲ್ಲಿ ಶಾಂತಿ ನೆಲೆಸಿದಾಗ ತನ್ನ ವೈರಿಗಳ ಮೇಲೆ ಆದಿಪತ್ಯ ಸಾಧಿಸಿ ನಿರ್ನಾಮಗೊಳಿಸುತ್ತದೆ. ಬೌದ್ಧ. ಜೈನ, ವೀರಶೈವ ಇನ್ನೂ ಎಷ್ಟೋ ಬಂಡಾಯ (Protestant) ದ ಧರ್ಮಗಳನ್ನು ನುಂಗಿ ನೀರು ಕುಡಿದ ಹಿಂದೂ ಧರ್ಮ ಇತಿಹಾಸದುದ್ದಕ್ಕೂ ಇಸ್ಲಾಂ, ಕ್ರಿಶ್ಚಿಯನ್, ಪಾರ್ಸಿ ಮತ್ತು ಇನ್ನೂ ಅನೇಕ ಧರ್ಮಗಳನ್ನು ಹಿಂದೂಕರಣ (Hinduisation) ಗೊಳಿಸಿದೆ. ಅಂತೆಯೇ ಮುಸ್ಲಿಂ ರಾಷ್ಟ್ರಗಳಲ್ಲಿ ಇದ್ದಂಥ ಉಡಿಗೆ ತೊಡಿಗೆ ಮತ್ತು ಸಾಂಸ್ಕೃತಿಕ ಬಂಧನಗಳು ಭಾರತದ ಮುಸ್ಲಿಮರಲ್ಲಿ ಕಾಣುವದೇ ಇಲ್ಲ. ಗ್ರಾಮಾಂತರ ಪ್ರದೇಶದಲ್ಲಂತೂ ಮುಸ್ಲಿಂ ಮತ್ತು ಹಿಂದುಗಳಲ್ಲಿ ಭಿನ್ನ ಇಲ್ಲವೇನೋ ಅನ್ನುವಷ್ಟರ ಮಟ್ಟಿಗೆ ಮುಸ್ಲಿಮರು ಮೂಲ ಧರ್ಮದ ಗುರುತು (identity) ಕಳೆದುಕೊಂಡಿದ್ದಾರೆ. ಅಂದರೆ ಮುಸ್ಲಿಮರು ತಮ್ಮ ಧರ್ಮಗ್ರಂಥ ಖುರಾನ ಪ್ರಕಾರ ಅಸ್ಪೃಶ್ಯತೆಯನ್ನು ಆಚರಿಸುವಂತಿಲ್ಲ. ಆದರೆ ಅದಕ್ಕೆ ತದ್ವಿರುದ್ಧವಾಗಿ ಬಹುಸಂಖ್ಯಾತ ಮುಸ್ಲಿಮರು ಅಸ್ಪೃಶ್ಯತೆಯನ್ನು ಆಚರಿಸುತ್ತಿದ್ದಾರೆ. ೧೯೩೪ ರಲ್ಲಿ ದೌಲತಾಬಾದ ಕೋಟೆಯನ್ನು ನೋಡಲು ಹೋದಾಗ ಬಾಬಾಸಾಹೇಬ ಅಂಬೇಡಕರರ ಅನುಯಾಯಿಗಳು ಕೋಟೆಯಲ್ಲಿನ ನೀರನ್ನು ಬಳಸಿದಾಗ "ವಯಸ್ಸಾದ ಬಿಳಿ ಗಡ್ಡ ಬಿಟ್ಟದ್ದ ಮುಸ್ಲಿಂ ವೃದ್ಧನೊಬ್ಬ ಅರೇ ! 'ಧೇಡ್'ರೆಲ್ಲಾ ನೀರನ್ನು ಅಪವಿತ್ರಗೊಳಿಸಿದರು ಎಂದು ಬೊಬ್ಬೆಯಿಟ್ಟ. ಕೆಲವೇ ಕ್ಷಣಗಳಲ್ಲಿ ಕೋಟೆಯಲ್ಲಿ ನೂರಾರು ಜನ ಮುಸ್ಲಿಮರು ಕೂಡಿ ಈ 'ಧೇಡ್'ರೆಲ್ಲಾ ಸೊಕ್ಕಿಗೆ ಬಂದಿದ್ದಾರೆ ! ಇವರು ತಮ್ಮ ಧರ್ಮವೇನೆಂಬುದನ್ನು ಮರೆತಿದ್ದಾರೆ, ಇವರಿಗೆ ಪಾಠ ಕಲಿಸಬೇಕಾಗಿದೆ".೧೪ ಎಂದು ಅತ್ಯಂತ ಕಠೋರ ಮತ್ತು ಹೊಲಸು ಶಬ್ದಗಳಿಂದ ಬಯ್ಯತೊಡಗಿದರು. ನಾವೇನಾದರೂ ಸ್ವಲ್ಪ

ಸ್ಥಿವಿಂತ ಕಳೆದುಕೊಂಡಿದ್ದರೆ ಅಲ್ಲಿ ನೂರಾರು ಕೊಲೆಗಳು ನಡೆದೆ ಹೋಗುತ್ತಿದ್ದವೆಂದು ಅಂಬೇಡ್ಕರ ಬರೆಯುತ್ತಾರೆ. ಆ ಕೋಟೆ ಭಾರತ ಸರಕಾರದ ಪುರಾತತ್ವ ಇಲಾಖೆಯು ಸಂರಕ್ಷಣೆ ಅಡಿಯಲ್ಲಿದ್ದ ಕಾರಣ ಅಂಬೇಡ್ಕರ ಸಿಟ್ಟಿಗೆದ್ದು ಅಲ್ಲಿಯು ಅಧಿಕಾರಿಗಳನ್ನು 'ನಾವು ಕೋಟೆ ನೋಡಬೇಕೊ ಇಲ್ಲ ಬೇಡವೊ ಹೇಳಿ' ಎಂದಾಗ, ಅಧೀಕ್ಷಕ ಹೇಳಿದ ನಂತೆ 'ನೀವು ಕೋಟೆಯುನ್ನು ನೋಡಬಹುದು ಆದರೆ ಇಲ್ಲಿ ಏನೂ ಮುಟ್ಟುವಂತಿಲ್ಲ' ಎಂದು ಅಂಬೇಡಕರ ಅತ್ಯಂತ ಖೇದದಿಂದ ಹೇಳುತ್ತಾರೆ. ನಾವು ಕೇವಲ ಹಿಂದುಗಳಿಗೆ ಮಾತ್ರ ಅಸ್ಪೃಶ್ಯರಲ್ಲ. ಮುಸ್ಲಿಮರಿಗೂ ಕೂಡ. ಈ ಹಿನ್ನೆಲೆಯಲ್ಲಿ ಅವರು ಇಸ್ಲಾಂ ಧರ್ಮದತ್ತ ತಿರುಗಿ ಸಹ ನೋಡಲಿಲ್ಲ.

ಅಸ್ಪೃಶ್ಯತೆ ಆಚರಿಸುವಂತಹ ಇಂಥ ಘಟನೆಗಳು ಮುಸ್ಲಿಮರಿಗಷ್ಟೆ ಸೀಮಿತ ವಾಗಿರಲಿಲ್ಲ. ಪಾರ್ಸಿ ಮತ್ತು ಕ್ರಿಶ್ಚಿಯನ್‌ರೂ ಕೂಡ. ಅಂತಹ ಮತ್ತೊಂದು ಘಟನೆ ಅದು ಬಾಬಾಸಾಹೇಬರೇ ಎದುರಿಸಿದ್ದು.

೧೯೧೩ ರಿಂದ ೧೯೧೭ ರ ವರೆಗೆ ಬರೋಡಾದ ಸಯ್ಯಾಜಿರಾವ ಗಾಯಕವಾಡ ಅವರಿಂದ ಶಿಷ್ಯವೇತನ ಪಡೆದು ಉನ್ನತ ವ್ಯಾಸಂಗಕ್ಕೆಂದು ಅಂಬೇಡಕರರು ಕೋಲಂ ಬಿಯಾ ವಿಶ್ವವಿದ್ಯಾಲಯ ಮತ್ತು ಲಂಡನ್ ಸ್ಕೂಲ ಆಪ್ ಇಕನಾಮಿಕ್ಸಗೆ ಸೇರಿದರು. ಒಪ್ಪಂದದ ಪ್ರಕಾರ, ವ್ಯಾಸಂಗ ಮುಗಿಸಿ, ಅಂಬೇಡಕರರು ಬರೋಡಾ ರಾಜ್ಯಕ್ಕೆ ಸೇವೆ ಸಲ್ಲಿಸಬೇಕಾಗಿತ್ತು. ತಮ್ಮ ಅಧ್ಯಯನ ಮುಗಿಸಿ ಬರೋಡಾ ಸೇವೆಗೆ ಸೇರಿ ದರು. ಆದರೆ ಬರೋಡಾ ಸರಕಾರ ಅವರ ವಸತಿಗೆಂದು ಏನೂ ವ್ಯವಸ್ಥೆ ಮಾಡಲಿಲ್ಲ. ಹಿಂದೂ ವಸತಿಗೃಹಗಳಲ್ಲಿ ಅಸ್ಪೃಶ್ಯರಿಗೆ ಪ್ರವೇಶವೇ ಇರಲಿಲ್ಲ. ಹೀಗಾಗಿ ಅವರು ಪಾರ್ಸಿ ಛತ್ರದಲ್ಲಿ ಉಳಿದುಕೊಂಡರು. ಆದರೆ ಪಾರ್ಸಿಗಳಿಗೆ ಅಂಬೇಡಕರ ಅಸ್ಪೃಶ್ಯ ನೆಂದು ಗೊತ್ತಿರಲಿಲ್ಲ. ಹನ್ನೊಂದನೆ ದಿವಸ ಅವರು ಆಫೀಸಿಗೆ ಹೋಗುವ ತಯ್ಯಾರಿ ಯಲ್ಲಿದ್ದಾಗ ಹತ್ತು ಹದಿನೈದು ಪಾರ್ಸಿ ಜನರು ಕೈಯಲ್ಲಿ ಲಾಠಿ ಮತ್ತು ಮಾರಕಾಸ್ತ್ರ ಗಳನ್ನು ಹಿಡಿದುಕೊಂಡು ಅಂಬೇಡಕರರತ್ತ ಭಯಂಕರವಾಗಿ ನೋಡುತ್ತಾ "ಯಾರು ನೀನು ? ಇಲ್ಲಿ ಏತಕ್ಕೆ ಬಂದಿರುವೆ ? ಪಾರ್ಸಿ ಛತ್ರದಲ್ಲಿ ಉಳಿಯಲು ನಿನಗೆಷ್ಟು ಧೈರ್ಯ ? ನೀಚನೇ ಈ ಪಾರ್ಸಿ ಛತ್ರವನ್ನು ಅಪವಿತ್ರಗೊಳಿಸಿದೆ !"[೧೫] ಎಂದು ಬಯ್ಯಲು ಪ್ರಾರಂಭಿಸಿದರು. ಈ ರೀತಿಯಾದ ಪ್ರಶ್ನೆಗಳಿಂದ ಮತ್ತು ಬಂದವರ ಮುಖದಲ್ಲಿನ ಕ್ರೌರ್ಯವನ್ನು ಕಂಡಾಗ ಅಂಬೇಡಕರರ ಜಂಗಾಬಲವೇ ಉಡುಗಿ ಹೋಯಿತು. ಅವರ ಬಾಯಿಂದ ಮಾತೇ ಬರಲಿಲ್ಲ. ಇನ್ನೇನು ಕೊಂದು ಹಾಕು ತ್ತಾರೇನೋ ಎಂದು ಭಾವಿಸಿದ್ದರು, ಅಂಬೇಡ್ಕರ. ಅವರಲ್ಲಿ ಒಬ್ಬ "ನೀಚನೇ ನೀನು 'ಹಿಂದೂ' ಎಂದು ನಮಗೆ ಸುಳ್ಳು ಹೇಳಿ ಮೋಸ ಮಾಡಿರುವಿ. ಇನ್ನು ಕ್ಷಣಕಾಲ ಕೂಡ ನೀನು ಇಲ್ಲಿ ಇರಕೂಡದು" ಎಂದು ಹೇಳಿ ಹೊರ ದಬ್ಬಿದರು. 'ಹರಕು

ಮುರುಕು ಸಾಮಾನುಗಳು, ಉಪಯೋಗಕ್ಕೆಬಾರದ ಕುರ್ಚಿ ಟೇಬಲ್ಲುಗಳನ್ನು ಒಂದು ಕಡೆ ಮೂಲೆಯಲ್ಲಿ ಇಟ್ಟಿದ್ದರು. ಗಾಳಿ ಮತ್ತು ಬೆಳಕಿನ ಸುಳಿವೆ ಅಲ್ಲಿ ಇರಲಿಲ್ಲ. ಪ್ರಾಣಿಗಳ ವಾಸಕ್ಕೂ ಕೂಡ ಯೋಗ್ಯವಲ್ಲದ ಈ ಛತ್ರ ನನ್ನ ಪಾಲಿಗೆ ಸ್ವರ್ಗವಾಗಿತ್ತು' ಎಂದು ಹೇಳುತ್ತಾರೆ. ಅಂಬೇಡಕರರಿಗೆ ಬರೋಡಾದಲ್ಲಿ ಅನೇಕ ಗೆಳೆಯರಿದ್ದರು. ಅವರಲ್ಲಿ ಒಬ್ಬ ಇಂಡಿಯನ್ ಕ್ರಿಶ್ಚಿಯನ್. ಆತ ಕೆಂಬ್ರಿಜ್‌ದಲ್ಲಿ ಇವರ ಸಹಪಾಟಿ. ಕೊನೆಗೆ ಆತನಲ್ಲಿ ಆಶ್ರಯ ಕೋರಿ ಅಂಬೇಡ್ಕರ ಅವನ ಮನೆಗೆ ಹೋದರು. ಆ ಭೂಪ ಹೇಳಿದ ನನ್ನ ಹೆಂಡತಿಯನ್ನು ಕೇಳಿ ಹೇಳುತ್ತೇನೆಂದು. ಅಂಬೇಡಕರರಿಗೆ ಅವನ ಉತ್ತರದ ಮರ್ಮ ಗೊತ್ತಾಯಿತು. ಅವರ ಪರಿಸ್ಥಿತಿ ಕಂಡು ಅವರಿಗೆಯೇ ಅವರ ಮೇಲೆ ಕೋಪ ಬಂದು ಅವರೆಷ್ಟು ಅತ್ತರೋ ಗೊತ್ತಾಗಲಿಲ್ಲ. ಆದರೆ ಭಾರತದಲ್ಲಿ ಪಾರ್ಸಿ, ಕ್ರಿಶ್ಚಿಯನ್ ಮತ್ತು ಇಸ್ಲಾಂ ಧರ್ಮಗಳು ಹಿಂದೂ ಧರ್ಮಕ್ಕಿಂತ ಭಿನ್ನವಿಲ್ಲವೆಂದು ಗೊತ್ತುಮಾಡಿಕೊಂಡರು. ಆದಕ್ಕಾಗಿಯೇ ಅವರು ಹೇಳುತ್ತಾರೆ, ಯಾವ ಮನುಷ್ಯನು ಹಿಂದುಗಳಿಗೆ ಅಸ್ಪೃಶ್ಯನಾಗಿದ್ದಾನೋ ಆತ ಮುಸ್ಲಿಂ, ಕ್ರಿಶ್ಚಿಯನ್ ಮತ್ತು ಪಾರ್ಸಿಗಳಿಗೂ ಕೂಡ ಅಸ್ಪೃಶ್ಯನಾಗಿಯೇ ಇದ್ದಾನೆ. ಅಸ್ಪೃಶ್ಯತೆ ಆಚರಣೆಯ ಒಂದು ಚಿತ್ರಣ ಇಲ್ಲಿ ನೋಡಿ ಎಷ್ಟು ಹೀನಾಯಮಾನ !

"…. …. Dr. Ambedkar in the eyes of the 180 million caste Hindus, is 'untouchable'. A person to bring pollution if his Mayfair dinner - jacket should happen to brush against their dothis. A creature from whose touch the extreme orthodox must fly as though he were a leper, a monster whose slightest contact compels them to precipitate themselves into the nearest bath tub, to soap and pray, and pray and soap, and soap and pray, so that the filth of Dr. Ambedkar — (M.A. London) — the shame of Dr. Ambedkar — (high honours at Columbia University) — the plague and scourge of Dr. Ambedkar — (special distinction at Heidelberg) — should be washed for ever from their immaculate and immortal souls."[೧೬]

ಅಸ್ಪೃಶ್ಯರಿಗೆ ಹಿಂದೂ ವರ್ಣವ್ಯವಸ್ಥೆಯ ಅಡಿಯಲ್ಲಿ ಸ್ಥಾನವಿಲ್ಲ. ಅವರು ಪಂಚಮರೆಂದೇ ಕರೆಯಲ್ಪಟ್ಟಿದ್ದಾರೆ. ಹಿಂದೂ ಧರ್ಮದ ವರ್ಣವ್ಯವಸ್ಥೆಯಲ್ಲಿ ಶೂದ್ರರ ಪರಿಸ್ಥಿತಿ ಹೀಗಿರುವಾಗ, ಅಸ್ಪೃಶ್ಯರ ಸ್ಥಿತಿ ಇನ್ನೆಷ್ಟು ಶೋಚನೀಯವಾಗಿರಬಹುದು ಎಂಬುದು ಗೊತ್ತಾಗುತ್ತದೆ. ಬ್ರಾಹ್ಮಣರ ಸಾಮ್ರಾಜ್ಯಗಳಲ್ಲೆಲ್ಲ ಅಸ್ಪೃಷ್ಯರ

ಪಾಡು ಹೇಳತೀರದು. ಪೂನಾ ಪೇಶ್ವೆಗಳ ಆಳ್ವಿಕೆಯಲ್ಲಿ ಅಸ್ಪೃಶ್ಯರು ಮುಂಜಾನೆ ಮತ್ತು ಸಂಜೆ ಹೊತ್ತಿನಲ್ಲಿ ಸಾರ್ವಜನಿಕ ಬೀದಿಗಳಲ್ಲಿ ಹೋಗುವಹಾಗಿರಲಿಲ್ಲ. ಏಕೆಂದರೆ, ಅವರ ನೆರಳು ಸ್ಪೃಶ್ಯರ ಮನೆಯ ಮೇಲೆ ಬಿದ್ದು ಅವು ಅಪವಿತ್ರಗೊಳ್ಳುವ ವೆಂದು ಭಾವಿಸಲಾಗಿತ್ತು. ಹೀಗಾಗಿ ಕೇವಲ ಮಧ್ಯಾಹ್ನದ ಹೊತ್ತಿನಲ್ಲಿ ಅವರು ಊರೊಳಗೆ ಹೋಗಬೇಕಾಗಿತ್ತು. ಅದೂ ಕೊರಳಲ್ಲಿ ಮಣ್ಣಿನ ಪಾತ್ರೆ ಮತ್ತು ಟೊಂಕಕ್ಕೆ ಝಾಡು ಕಟ್ಟಿಕೊಂಡು. ಏಕೆಂದರೆ ಅವನು ಹಾದಿಬೀದಿಗಳಲ್ಲಿ ಉಗುಳು ತಕ್ಕದ್ದಲ್ಲ. ತನ್ನ ಕೊರಳಲ್ಲಿ ಜೋತುಬಿದ್ದ ಮಣ್ಣಿನ ಪಾತ್ರೆಯಲ್ಲಿಯೇ ಉಗುಳಬೇಕು. ಮತ್ತು ಸಾರ್ವಜನಿಕ ರಸ್ತೆಯ ಮೇಲೆ ಅವನ ಪಾದದ ಗುರುತು ಬೀಳಬಾರದು. "ಮಹಾತ್ಮಾ ಜ್ಯೋತಿರಾವ ಫುಲೆ ಕಾಲಕ್ಕೆ ಇಂಥ ದೃಶ್ಯವನ್ನು ಒಳಗೊಂಡ ನಾಟಕ ವನ್ನು ಸಾರ್ವಜನಿಕವಾಗಿ ಆಡುವ ಮುಖಾಂತರ ಜನರಲ್ಲಿಯ ವೈಧ್ಯವನ್ನು ಕಡಿಮೆ ಮಾಡಬಹುದೆಂದು ಎಣಿಸಿ ನಾಟಕವಾಡಲು ಕೆಲವರು ಯೋಚಿಸಿದರಂತೆ. ಆದರೆ ಅಸ್ಪೃಶ್ಯನ ಪಾತ್ರವಹಿಸಬೇಕಿದ್ದ ಪಾತ್ರಧಾರಿ ಕೊರಳಲ್ಲಿ ಮಣ್ಣಿನ ಪಾತ್ರೆ ಮತ್ತು ಟೊಂಕಕ್ಕೆ ಝಾಡು ಕಟ್ಟಿಕೊಂಡು ರಂಗ ಮಂದಿರದ ಮೇಲೆ ಬರಲು ನಿರಾಕರಿ ಸಿದನಂತೆ".

ಹಿಂದೂ ಧರ್ಮದ ಹೆಸರಿನಲ್ಲಿ ದಲಿತರನ್ನು ಶೋಷಿಸಿ ಅವಮಾನಗೊಳಿಸಿದಷ್ಟು ಜಗತ್ತಿನ ಬೇರೆ ಯಾವ ಧರ್ಮದವರು ತಮ್ಮ ಜನರನ್ನು ಹಿಂಸಿಸಿರಲಿಕ್ಕಿಲ್ಲ. ಹಿಂದೂಗಳ ಧಾರ್ಮಿಕ ಮತ್ತು ಸಾಮಾಜಿಕ ಇತಿಹಾಸ ದಲಿತರ ಶೋಷಣೆಯ ಇತಿಹಾಸವಾಗಿದೆ. ಹಿಂದೂಗಳ ಸಂಸ್ಕೃತಿ ಅನಾಗರಿಕ ಸಂಸ್ಕೃತಿ ಎಂದು ಡಾ. ದಯಾನಂದ ಮಾನೆ ಅಭಿಪ್ರಾಯಪಡುತ್ತಾರೆ. "ಹಿಂದೂ ಧರ್ಮ ಕೇವಲ ಧರ್ಮವಾಗಿರದೇ ಶೋಷಕ ವ್ಯವಸ್ಥೆಯಾಗಿದೆ. ಅದರ ಸಿದ್ಧಾಂತ ಶೋಷಣೆಯ ಸಿದ್ಧಾಂತವಾಗಿದೆ"೧೭ ಎಂದು ಬಾಬಾಸಾಹೇಬ ಹೇಳುತ್ತಾರೆ. ಹಿಂದೂ ಧರ್ಮ ಮತ್ತು ಅಸ್ಪೃಶ್ಯರ ಸಂಬಂಧ ಯಜಮಾನ ಮತ್ತು ಗುಲಾಮರ ನಡುವಿನ ಸಂಬಂಧದಂತೆ ಇರುವದೆಂದು ಹೇಳಿದ ಅಂಬೇಡ್ಕರ, 'ಒಂದು ದೇಶ ಮತ್ತೊಂದು ದೇಶವನ್ನಾಳುವದು ತಪ್ಪು' ಎಂದು ಜೆ. ಎಸ್. ಮಿಲ್‌ನ ಹೇಳಿಕೆಯನ್ನು ಕಂಠಪಾಠ ಮಾಡಿದ ಕಾಂಗ್ರೆಸ್ಸಿಗರಿಗೆ, 'ಒಂದು ವರ್ಗ ಮತ್ತೊಂದು ವರ್ಗವನ್ನಾಳುವದೂ ತಪ್ಪು' ಎಂದು ಹೇಳಿದರು. ಕಾಂಗ್ರೆಸ್ಸಿ ಗರ ಡಂಭಾಚಾರ ಕಂಡು ರೋಸಿ ಹೋದ ಅಂಬೇಡ್ಕರ ಹೇಳುತ್ತಾರೆ, 'Every Hindu is a Social Tory and Political radical' ಎಂದು. ಇಂಥ Social Tory ಗಳ ಹಿಡಿತದಿಂದ ತನ್ನ ಜನರ ವಿಮೋಚನೆಯಾಗಬೇಕೆಂದು ಬಯಸಿದ ಅಂಬೇಡ್ಕರ ಅವಿರತವಾಗಿ ಹೋರಾಟ ಮಾಡಬೇಕಾಯಿತು.

ಆದರೆ ಈ ಹೋರಾಟ ಏಕಮುಖವಾದರೆ ಸಾಲದು. ಏಕೆಂದರೆ ಅಸ್ಪೃಶ್ಯತೆಯನ್ನು ಕೇವಲ ದಲಿತರೇ ನಿರ್ಮಿಸಿಕೊಂಡದ್ದಲ್ಲ. ಮತ್ತು ಇದಕ್ಕಾಗಿ ಅವರು ಎಳ್ಳಷ್ಟೂ ಜವಾಬ್ದಾರರಲ್ಲವೆಂದು ಹೇಳುವ ಅಂಬೇಡ್ಕರ "ಈ ದೇಶದ ಹಿಂದೂಗಳು ತಮ್ಮ ಹಿತಾಸಕ್ತಿ ಕಾಪಾಡಿಕೊಳ್ಳಲು ನಿರ್ಮಿಸಿದಂಥ ದೂರ್ತವ್ಯವಸ್ಥೆ. ಸವರ್ಣೀಯ ಮನಸ್ಸುಗಳು ಕಲುಷಿತಗೊಳ್ಳುವ ಮೂಲಕ ಅವರ ಮೆದುಳಿಗೆ ಕ್ಯಾನ್ಸರ್ ಹಿಡಿಯುವ ಮೂಲಕ ಅಸ್ಪೃಶ್ಯತೆ ಭಯಂಕರ ರೂಪು ತಳೆದಿದೆ. ಅಸ್ಪೃಶ್ಯರು ಈ ಅಮಾನವೀಯ ವ್ಯವಸ್ಥೆಯಿಂದ ವಿಮುಕ್ತಿ ಹೊಂದಬೇಕಾದರೆ ಹಿಂದೂ ಮನಸ್ಸುಗಳ ರಿಪೇರಿ ಅತ್ಯಗತ್ಯ."೧೮ ಅದಕ್ಕಾಗಿಯೇ ಅವರು ಧರ್ಮದ ಮೇಲೆ ಸಾಕಷ್ಟು ಅಧ್ಯಯನ ಮಾಡಿ ಅನೇಕ ಗ್ರಂಥಗಳನ್ನು, ಬಹುಸಂಖ್ಯಾತ ಹಿಂದೂ ವಿದ್ಯಾವಂತರು ಓದಲೆಂದು ಪ್ರಕಟಿಸಿದರು. ಆದರೆ ಅದರ ಪರಿಣಾಮ ಮಾತ್ರ ಶೂನ್ಯ. ಸವರ್ಣೀಯರಿಂದ ನಿರೀಕ್ಷಣೆಯು ಮಟ್ಟಿಗೆ ಪ್ರತಿಕ್ರಿಯೆ ಬರದಾಗ ಅಂಬೇಡ್ಕರ ತಮ್ಮ ಹೋರಾಟದ ದಿಕ್ಕನ್ನು ಬದಲಿಸಬೇಕಾಯಿತು. ದಲಿತರನ್ನುದ್ದೇಶಿಸಿ "Self elevation is not achieved by the blessings of others but only by one's own struggle and deed."೧೯ ಎಂದು ಉಪದೇಶಿಸಿದರು.

ಪುಣೆಯ ಕಾಳಾರಾಂ ಮಂದಿರ ಪ್ರವೇಶ ಮತ್ತು ಚೌಡರ ಕೆರೆಯು ಸತ್ಯಾಗ್ರಹದಲ್ಲಿ ಹಿಂದುಗಳು ಅದೆಷ್ಟು ಕ್ರೂರಿ ಮತ್ತು ಅಜ್ಞಾನಿಗಳಾಗಿದ್ದಾರೆಂಬುದನ್ನು ಅಂಬೇಡಕರ ಮನಗಂಡರು.

ಇಲ್ಲಿಯುವರೆಗಿನ ಅವರ ಹೋರಾಟ ಹಿಂದೂ ಧರ್ಮವನ್ನು ಸುಧಾರಿಸಲು ಇಂಥ ಕಾರ್ಯಕ್ರಮ ಹಾಕಿಕೊಂಡಾಗಿತ್ತು. ಆದರೆ ಚೌಡರ ಕೆರೆಯು ನೀರನ್ನು ಮುಟ್ಟಿದಾಗ, ಚಳುವಳಿ ಹಿಂಸೆಯು ದಾರಿ ಹಿಡಿಯಿತು. ಚೌಡಾರದ ಹಿಂದೂ ಗೂಂಡಾಗಳು ಮಾರಕ ಆಯುಧಗಳಿಂದ ಅಂಬೇಡ್ಕರ ಅವರ ಅನುಯಾಯಿಗಳನ್ನು ಚುಚ್ಚಿದರು. "ಅಸ್ಪೃಶ್ಯರು ಮುಟ್ಟಿ ಮೈಲಿಗೆಯಾದ ನೀರನ್ನು, ನೂರಾಎಂಟು ಕೊಡ ಆಕಳ ಮೂತ್ರ ಮತ್ತು ಶೆಗಣಿಯನ್ನು ಕೆರೆಗೆ ಚೆಲ್ಲಿ ಪವಿತ್ರಗೊಳಿಸಲಾಯಿತು. ಅಂದೇ ಅಂಬೇಡ್ಕರರಿಗೆ ಗೊತ್ತಾಯಿತು"೨೦ "ಭಾರತದಲ್ಲಿ ಅಸ್ಪೃಶ್ಯರ ಅಸ್ತಿತ್ವ ಶಗಣಿ ಮತ್ತು ಮೂತ್ರಕ್ಕಿಂತಲೂ ಕೀಳಾಗಿದೆ" ಎಂದು. ಪರಕೀಯರಾದ ಮುಸ್ಲಿಂ, ಪಾರ್ಸಿ, ಕ್ರಿಶ್ಚಿಯನ್‌ರನ್ನು ತಮ್ಮ ಮನೆಗೆ ಅಹ್ವಾನಿಸಿ ಸಹಭೋಜನ ಮಾಡುವ ಹಿಂದುಗಳು ತಮ್ಮ ಸಹೋದರರೇ ಆದ ಅಸ್ಪೃಶ್ಯರನ್ನು ನಾಯಿ, ಹಂದಿಗಳಿಗಿಂತ ಕೀಳಾಗಿ ಕಾಣುವದನ್ನು ಕಂಡು ರೋಸಿ ಹೋದರು. ಮುಂದಿನ ಹೋರಾಟದಲ್ಲಿ ಅವರು ಮಂದಿರ ಪ್ರವೇಶದ ಹೋರಾಟವನ್ನು ಬಿಟ್ಟುಕೊಟ್ಟರು. "ನಿಕಾಲ್ಸ ಬೆರ್ಮ ಹೇಳುವಂತೆ, "... ... ... enlightned rulers and statesmen, who

have thrown open temples to all comers. But what happens ? As soon as the untouchables flock in, the orthodox flock out. The temple becomes an 'untouchable' temple, it is tainted, unholy, and as such it ceases to be an object of reverence even to the untouchable themselves".೨೧

ಅಸ್ಪೃಶ್ಯರು ಹಿಂದೂಗಳೇ ಅಲ್ಲ !

೧೯೩೬ ರ 'ಯೋಲಾ' ಸಮಾವೇಶದಲ್ಲಿ ಅಸ್ಪೃಶ್ಯರು ಇನ್ನು ಮುಂದೆ ಗುಡಿ-ಗುಂಡಾರಗಳು ಮತ್ತು ಮಂದಿರಗಳಿಗೆ ಹೋಗಿ ತಮ್ಮ ಹಣ ಮತ್ತು ಸಮಯ ವನ್ನು ಹಾಳು ಮಾಡಬಾರದು, ಏಕೆಂದರೆ, ಅಸ್ಪೃಶ್ಯರು ಹಿಂದೂಗಳೇ ಅಲ್ಲವೆಂಬು ದನ್ನು ಸವರ್ಣೀಯರೇ ಸಾಧಿಸಿ ತೋರಿಸಿದ್ದಾರೆಂದು ಅಂಬೇಡ್ಕರ ಸಾರಿದರು. "ನಾನು ಹಿಂದೂ ಆಗಿ ಹುಟ್ಟಿರುವೆ; ಆದರೆ, ಹಿಂದೂ ಆಗಿ ಸಾಯಲಾರೆ" ಎಂಬ ಐತಿಹಾಸಿಕವಾದ ತೀರ್ಮಾನವನ್ನು ಸಹ ಅಂಬೇಡಕರ ಈ ಸಮಾವೇಶದಲ್ಲಿ ತೆಗೆದು ಕೊಂಡರು. "ಹಿಂದೂ ಧರ್ಮವೆಂಬುದು ಉರಿಯುತ್ತಿರುವ ಮನೆ ಇದ್ದಹಾಗೆ, ಅದರಲ್ಲಿ ಪ್ರವೇಶಿಸಿದವರೆಲ್ಲ ಸುಟ್ಟು ಬೂದಿಯಾಗುವದು ಖಚಿತ." ಎಂದು ಹೇಳಿದ ಅಂಬೇಡ್ಕರ "ನಿಮಗೆ ಕರುಣೆ ತೋರದ ಸ್ವಾತಂತ್ರ್ಯ, ಸಮಾನತೆ ನೀಡದ ಧರ್ಮದಲ್ಲಿ ನೀವೇಕೆ ಗುಲಾಮರಾಗಿ ಬದುಕಲು ಇಚ್ಛಿಸುತ್ತೀರಿ ?" ಎಂದು ಪ್ರಶ್ನಿಸಿದರು. ಹಿಂದೂ ಧರ್ಮದಲ್ಲಿರುವವರೆಗೆ ನಿಮ್ಮ ಪ್ರಗತಿ ಸಾಧ್ಯವಿಲ್ಲವೆಂದು ಹೇಳಿದ ಅಂಬೇಡ್ಕರ "Because of untouchability your merrit go unawarded, there is no appreciation of your mental and physical qualities ... ...untouchability is a curse that has ruined your worldly existence, honour and name".೨೨ ಆದಕ್ಕಾಗಿ ಧಾರ್ಮಿಕ ಸಂಕೋಲೆಗಳನ್ನು ಕಿತ್ತು ಹಾಕಿದಾಗಲೇ ನಿಮ್ಮ ಉದ್ಧಾರ ಸಾಧ್ಯ ಎಂದು ಹೇಳಿ "ಹಕ್ಕುಗಳನ್ನು ಭಿಕ್ಷೆ ಬೇಡಿ ಪಡೆಯದೇ ಹೋರಾಟ ಮಾಡಿ ಪಡೆಯಿರಿ" ಎಂದು ದಲಿತರಿಗೆ ಕರೆಕೊಟ್ಟರು.

ಅಂಬೇಡಕರ ಮತ್ತು ಧರ್ಮಾಂತರ :

೧೯೩೫ ಅಕ್ಟೋಬರ ೧೩ ರಂದು "ನಾನು ಹಿಂದೂ ಆಗಿ ಹುಟ್ಟಿರುವೆ ಆದರೆ ಹಿಂದೂ ಆಗಿ ಸಾಯಲಾರೆ" ಎಂದು ಘೋಷಿಸಿದಾಗ ಇಡೀ ಜಗತ್ತೇ ಅಂಬೇಡಕರರತ್ತ ಉಸಿರು ಬಿಗಿ ಹಿಡಿದು ನೋಡಹತ್ತಿತ್ತು. ಸಾವಿರಾರು ವರ್ಷಗಳಿಂದ ಆಳುವ ವರ್ಗ ಗಳ ಮತ್ತು ಸವರ್ಣೀಯರ ಬದುಕಿನ ಬೆನ್ನೆಲಬು ಆಗಿದ್ದ ಅಸ್ಪೃಶ್ಯರು ಮತಾಂತರ ಕೈಗೊಂಡರೆ ಹಿಂದೂ ಧರ್ಮ ಚಿಂದಿಯಾಗುವದೆಂದು, ಗಾಂಧೀಜಿ ಮತ್ತು ಇತರ ಕಾಂಗ್ರೆಸ್ ನಾಯಕರು ಚಿಂತಿಸಿದರು. ಪ್ರತಿ ಧರ್ಮದವರು ಅಂಬೇಡಕರರನ್ನು

ತಮ್ಮ ಧರ್ಮದತ್ತ ಸೆಳೆಯಲು ಪ್ರಯತ್ನಿಸಿದರು. ಆದರೆ ಧರ್ಮಾಂತರವೆಂಬುದು ಅಷ್ಟು ಸುಲಭವಾಗಿರಲಿಲ್ಲ. ಬಹುಸಂಖ್ಯಾತ ದಲಿತರು ಇನ್ನೂ ಅಜ್ಞಾನಿಗಳಾಗಿದ್ದರು. ಸಾವಿರಾರು ವರ್ಷಗಳಿಂದ ಈ ಧರ್ಮದ ಅಡಿಯಲ್ಲಿ ನರಳಿದರೂ, ಒಮ್ಮೆಲೆ ಇದನ್ನು ತೊರೆಯುವಷ್ಟು ಮಾನಸಿಕವಾಗಿ ಸಿದ್ಧರಾಗಿರಲಿಲ್ಲ. ಅವರನ್ನು ಪ್ರಜ್ಞಾವಂತರನ್ನಾಗಿಸದೇ ಅಂಬೇಡ್ಕರರು ಧರ್ಮಾಂತರ ಮಾಡುವ ಹಾಗಿರಲಿಲ್ಲ. ಹೀಗಾಗಿ ತಾನು ೧೯೩೬ ರಲ್ಲಿ ಈ ವಿಷಯ ಘೋಷಿಸಿದರೂ, ಅಂಬೇಡ್ಕರ ೧೯೫೬ ರ ವರೆಗೆ ಕಾಯ ಬೇಕಾಯಿತು. ಈ (೨೦) ಇಪ್ಪತ್ತು ವರ್ಷಗಳಲ್ಲಿ ಅವರು ಪ್ರಪಂಚದ ಎಲ್ಲ ಧರ್ಮಗಳ ಅಧ್ಯಯನವನ್ನು ಮಾಡಿದರು. ಆದರ ಪ್ರತಿಫಲವಾಗಿ ಮತಾಂತರಕ್ಕೆ ಬೌದ್ಧ ಧರ್ಮವನ್ನು ಆಯ್ದುಕೊಂಡರು. ಬೌದ್ಧ ಧರ್ಮವನ್ನು ತಾವೇಕೆ ಆಯ್ಕೆ ಮಾಡಿಕೊಂಡರೆಂಬುದಕ್ಕಿಂತ ಮುಂಚೇ ಅವರ ಪರಿಕಲ್ಪನೆಯ ಧರ್ಮ ಹೇಗಿತ್ತೆಂದು ನೋಡೋಣ.

ಅಂಬೇಡ್ಕರ ಖಂಡಿತವಾಗಿಯೂ ಧರ್ಮವಿರೋಧಿಯಾಗಿರಲಿಲ್ಲ. ಆದರೆ ಧರ್ಮದ ಹೆಸರಿನಲ್ಲಿಯ ಡಂಬಾಚಾರವನ್ನು ಮಾತ್ರ ಅವರು ಎಂದೂ ಸಹಿಸಲಿಲ್ಲ. ಅಂಬೇಡಕರರ ಹೋರಾಟ (೧೯೧೮ ರಿಂದ ೧೯೫೬ ರ ವರೆಗೆ) ಹಿಂದೂ ಧರ್ಮವನ್ನು ಸುಧಾರಿಸುವದೇ ಆಗಿತ್ತು. ಪ್ರಥಮ ಹಂತದ ಹೋರಾಟದಲ್ಲಿ ಅಸ್ಪೃಶ್ಯರ ಜಾತಿವಾಚಕ ಹೆಸರುಗಳನ್ನು ಬದಲಿಸುವದು, ಜನಿವಾರ ತೊಡಿಸುವದು. ಮತ್ತು ಮಂದಿರ ಪ್ರವೇಶಗಳ ಚಳುವಳಿಯನ್ನು ಕೈಕೊಳ್ಳುವ ಮುಖಾಂತರ ಅಸ್ಪೃಶ್ಯರನ್ನು ಸಾಮಾಜಿಕವಾಗಿ ಮೇಲೆತ್ತುವದೇ ಆಗಿತ್ತು. ಆದರೆ ಹಿಂದೂಗಳಿಗೆ ಈ ಪರಿಯಾದ ಹೋರಾಟ ಸರಿಬರಲಿಲ್ಲ. ಮತ್ತು ಈ ರೀತಿಯಾದ ಸಂಸ್ಕೃತೀಕರಣ ಅಸ್ಪೃಶ್ಯರ ಮೂಲ ಸಮಸ್ಯೆಗಳನ್ನು ಪರಿಹಾರ ಮಾಡುವ ಸ್ಥಿತಿಯಲ್ಲಿ ಇರದ ಕಾರಣ ಅಂಬೇಡಕರ ಮನಸಾರೆಯಾಗಿ ಈ ತೆರನಾದ ಹೋರಾಟವನ್ನು ಬಿಟ್ಟುಕೊಟ್ಟರು. ಅಸ್ಪೃಶ್ಯರು ಮುಟ್ಟಿದ ನೆಲ ಜಲ ಅಸ್ಪೃಶ್ಯವಾಗಿದ್ದವು. ಅವರು ಪ್ರವೇಶಿಸಿದ ಮಂದಿರಗಳು ಮತ್ತು ದೇವರುಗಳು ಅಸ್ಪೃಶ್ಯವಾದಾಗ, ಅಂಬೇಡ್ಕರ ರಾಜಕೀಯ ಹಕ್ಕುಗಳಿಗೋಸ್ಕರ ಹೋರಾಟಕ್ಕೆ ತಯ್ಯಾರಾದರು. ಸ್ವಾತಂತ್ರ್ಯ ಸಿಕ್ಕ ಮೇಲೆ ನೆಹರು ಮಂತ್ರಿಮಂಡಲದಲ್ಲಿ 'ಹಿಂದೂ ಕೋಡ ಬಿಲ್' ಮಂಡಿಸಿದರು. ಅವರ ಉದ್ದೇಶ ಈ ಮಸೂದೆಯನ್ನು ತರುವ ಮುಖಾಂತರ ಕಾನೂನಿನ ಅಡಿಯಲ್ಲಿ ಹಿಂದೂ ಧರ್ಮವನ್ನು ಸುಧಾರಿಸುವುದೇ ಆಗಿತ್ತು. ಇದು ಅವರಿಗೆ ಸಿಕ್ಕ ಕೊನೆಯ ಅವಕಾಶವೂ ಆಗಿತ್ತು. ಆದರೆ ಪಾರ್ಲಿಮೆಂಟಿನಲ್ಲಿ ಈ ಮಸೂದೆ ಬಿದ್ದುಹೋದಾಗ ಅನಿವಾರ್ಯವಾಗಿ ತಮ್ಮ ರಾಜೀನಾಮೆ ನೀಡಿ ಮಂತ್ರಿಮಂಡಲದಿಂದ ಹೊರಬಂದರು. ಹಿಂದೂ ಧರ್ಮವನ್ನು ಸುಧಾರಿಸುವ ಇಂಥ ಪ್ರಯತ್ನವನ್ನು ಇತಿಹಾಸದುದ್ದಕ್ಕೂ ಯಾರೂ ಮಾಡಿಲ್ಲವೆಂದೇ ಹೇಳಬೇಕು.

ಅಂಬೇಡಕರರ ಧರ್ಮದ ಪರಿಕಲ್ಪನೆ :

ತಮ್ಮ ನಿರಂತರ ಧರ್ಮದ ಅಧ್ಯಯನದ ಫಲವಾಗಿ ಅಂಬೇಡಕರ ತಮಗೆ ಎಂತಹ ಧರ್ಮ ಬೇಕೆನ್ನುವದನ್ನು ಕಂಡುಕೊಂಡರು. ಮತ್ತು ಆ ಧರ್ಮದ ಮುಖಾಂತರ ಅಸ್ಪೃಶ್ಯರ ಏಳ್ಗೆಯಾಗುವದನ್ನೂ ಕೂಡ ಬಯಸಿದರು. ಈ ಕೆಳಗಿನ ಅಂಶಗಳು ಅವರ ಪರಿಕಲ್ಪನೆಯ ಧರ್ಮದ ತತ್ವಗಳಾಗಿದ್ದವು :

೧. ಮುಕ್ತ ಸಮಾಜಕ್ಕೆ ಧರ್ಮ ಅವಶ್ಯಕ.

೨. ಧರ್ಮವು ಮಾನವನ ಜೀವನದ ಸುತ್ತ ಸುತ್ತಬೇಕೇ ಹೊರತು ಆತ್ಮ ಪರಮಾತ್ಮ, ಸ್ವರ್ಗ ಮತ್ತು ನರಕದತ್ತಲ್ಲ.

೩. ದೇವರನ್ನು ಧರ್ಮದ ಕೇಂದ್ರಬಿಂದುವನ್ನಾಗಿ ಮಾಡುವದು ತಪ್ಪು.

೪. ಕೇವಲ ಮನುಷ್ಯ ಮತ್ತು ನೈತಿಕತೆಯೇ ಧರ್ಮದ ಕೇಂದ್ರ ಬಿಂದು ಆಗಬೇಕು.

೫. ಧರ್ಮದ ಕಾರ್ಯಗಳು ಹೊಸ ಮತ್ತು ಸುಖದಾಯಕ ಜಗತ್ತನ್ನು ನಿರ್ಮಿಸಲು ಉಪಯೋಗವಾಗಬೇಕೇ ಹೊರತು ವಿಶ್ವ, ದೇವರು ಮತ್ತು ಅಲೌಕಿಕ ವಿಷಯಗಳನ್ನು ವಿಶ್ಲೇಷಿಸುವದಕ್ಕಾಗಿ ಅಲ್ಲ.

೬. ಅಶಾಂತಿ ಮತ್ತು ದುಃಖಗಳಿಗೆ ಕಾರಣವಾದದ್ದು ಆಶೆ. ಆ ಆಶೆಯನ್ನು ತೊರೆದು ಒಳ್ಳೆಯ ಮಾರ್ಗ ಹಿಡಿಯಬೇಕು.

೭. ಖಾಸಗಿ ಮಾಲಿಕತ್ವದ ಆಸ್ತಿ ಕೇವಲ ಒಂದು ವರ್ಗಕ್ಕೆ ಅಧಿಕಾರವನ್ನು ತಂದುಕೊಟ್ಟರೆ ಬೇರೆ ವರ್ಗಗಳಿಗೆ ಕಷ್ಟವನ್ನು ತಂದೊಡ್ಡುತ್ತದೆ.

೮. ಜಗತ್ತಿನಲ್ಲಿ ಯಾವುದು ಸುನಿಶ್ಚಯ (infalliable) ವಾದುದಲ್ಲ. ಯಾವ ಕಟ್ಟಳೆಗಳೂ ಶಾಶ್ವತವಲ್ಲ. ಪ್ರತಿಯೊಂದೂ ಪರೀಕ್ಷೆಗೆ ಒಳಪಡಲೇ ಬೇಕು.

೯. ಜಗತ್ತಿನಲ್ಲಿ ಯಾವುದೂ 'ಸನಾತನ'ವಲ್ಲ ಪ್ರತಿಯೊಂದು ಬದಲಾಗಲೇ ಬೇಕು.

ಮತಾಂತರಕ್ಕೆ ಬೌದ್ಧ ಧರ್ಮವೇ ಏಕೆ ?

ಬೌದ್ಧ ಧರ್ಮವು ಭಾರತದಲ್ಲಿ ಹುಟ್ಟಿಕೊಂಡದ್ದು ಪುರೋಹಿತಶಾಹಿ ಮತ್ತು ಜಾತಿವಾದಿಗಳ ದಬ್ಬಾಳಿಕೆಯನ್ನು ತಡೆದು ಭಾರತೀಯ ಸಮಾಜದಲ್ಲಿ ಶಾಂತಿ, ಸಹ ಬಾಳ್ವೆ ಮತ್ತು ಸಮಾನತೆ ತರಲು. ಹಿಂದೂ ದರ್ಮವು ಕೇವಲ ಗೊಡ್ಡು ಆಚಾರ ವಿಚಾರ ಮತ್ತು ಮೂಢನಂಬಿಕೆಗಳ ಮೇಲೆ ನಿಂತರೆ ಬೌದ್ಧಧರ್ಮ ಅಹಿಂಸಾ, ಸಮಾನತೆ, ಸ್ವಾತಂತ್ರ್ಯ ಮತ್ತು ಸಹೋದರತೆಯ ಅಂಶಗಳ ಮೇಲೆ ನಿಂತಿದೆ. ಗೌತಮ ಬುದ್ಧ, ದೇವರು, ಮೂರ್ತಿ ಪೂಜೆ, ಯಜ್ಞ-ಯಾಗಾದಿ, ಪಾಪ-ಪುಣ್ಯ ಮತ್ತು ಕರ್ಮ ಇತ್ಯಾದಿಗಳನ್ನು ತಿರಸ್ಕರಿಸುತ್ತಾನೆ. ಜಗತ್ತಿನ ಇತರ ಧರ್ಮಗಳ ಸಂಸ್ಥಾಪಕರ ಜೊತೆ ಬುದ್ಧನನ್ನು ಹೋಲಿಸಿದರೆ ಆತ ನಿಗರ್ವಿ. ಕ್ರೈಸ್ತ ಧರ್ಮದ ಪ್ರವಾದಿ ಏಸುಕ್ರಿಸ್ತ ತಾನು ದೇವರ ಮಗನೆಂದು ಹೇಳಿಕೊಂಡರೆ, ಇಸ್ಲಾಂ ಧರ್ಮದ ಪ್ರವಾದಿ ಮಹಮ್ಮದ ಪೈಗಂಬರ ನಾನು ದೇವರ ಕೊನೆಯ ದೂತನೆಂದುಕೊಳ್ಳು ತ್ತಾನೆ. ಹಿಂದೂ ಧರ್ಮದ ಕೃಷ್ಣ ನಾನು 'ದೇವಾದಿ ದೇವ'ನೆಂದು ಘೋಷಿಸುತ್ತಾನೆ. ಇವರೆಲ್ಲರೂ ತಾವೇ ಮೋಕ್ಷದಾತರೆಂದು ಕರೆದುಕೊಂಡರೆ, ಬುದ್ಧ ಮಾತ್ರ 'ನಾನು ಮಾರ್ಗದಾತ' ಎಂದು ನಮ್ರತೆಯಿಂದ ಹೇಳುತ್ತಾನೆ. ಭಾರತೀಯ ಸಮಾಜದಲ್ಲಿ ಯಾವ ಹಿಂದೂ ಧರ್ಮ ಶೂದ್ರರಿಗೆ, ಅತಿಶೂದ್ರರಿಗೆ ಮತ್ತು ಮಹಿಳೆಯರಿಗೆ ತನ್ನ ಬಾಗಿಲು ಮುಚ್ಚಿತ್ತೊ, ಅವರಿಗೆ ಬೌದ್ಧ ಧರ್ಮದ ಬಾಗಿಲುಗಳು ತೆರೆದವು. ಬೌದ್ಧ ಧರ್ಮ ಬಹುಸಂಖ್ಯಾತರ ಧರ್ಮ. ಅದು ಬಹು ಜನ ಹಿತಾಯ ಬಹು ಜನ ಸುಖಾಯ ಸರ್ವರಿಗೂ ಸಮ ಬಾಳು, ಸರ್ವರಿಗೆ ಸಮಪಾಲು ಎಂಬ ತತ್ವದಲ್ಲಿ ನಂಬಿಕೆ ಇಟ್ಟಿದೆ. ಆದರೆ ಹಿಂದೂ ಧರ್ಮ ಕೇವಲ ಅಲ್ಪಸಂಖ್ಯಾತರ (ಪುರೋಹಿತರ) ಧರ್ಮವಾಗಿದೆ ಎಂದು ಅಂಬೇಡಕರ ಹೇಳಿದರು. ೧೯೫೬ ಮೇ ತಿಂಗಳು ಅವರು ಬಿ.ಬಿ.ಸಿ. ಲಂಡನ್‌ದಿಂದ ತಾವೇಕೆ ಬೌದ್ಧಧರ್ಮ ಸೇರುತ್ತಿದ್ದೇವೆಂಬುದಕ್ಕೆ ಪ್ರಸಾರ ಭಾಷಣ ಮಾಡಿದರು. ತಮ್ಮ ಭಾಷಣದಲ್ಲಿ, ಬೌದ್ಧಧರ್ಮದಲ್ಲಿರುವ ಮೂರು ಮುಖ್ಯ ಅಂಶಗಳಾದ ಪ್ರಜ್ಞಾ, ಕರುಣಾ ಮತ್ತು ಸಮತಾ ತತ್ವಗಳಿಗೆ ಮಾರು ಹೋಗಿದ್ದೇನೆಂದು ಹೇಳಿದರು. ತನ್ನ ಜನ ಬೌದ್ಧಧರ್ಮವನ್ನು ಸೇರುವ ಮುಖಾಂತರ ಅದರ ಕೆಳಗೆ ಒಗ್ಗಟ್ಟಾಗಿ ಆಳುವ ವರ್ಗವಾಗುವರೆಂದು ಅಂಬೇಡಕರ ನುಡಿದರು.

ಬೌದ್ಧಧರ್ಮ ಭಾರತದ ರಾಷ್ಟ್ರೀಯ ಧರ್ಮ. "ಮೊಟ್ಟ ಮೊದಲಿಗೆ ಬೌದ್ಧಧರ್ಮ ಸಮಾನವಾದ ಸಾಂಸ್ಕೃತಿಕ ಸಮನ್ವಯ ಮತ್ತು ಸಂಘಟನೆಯಿಂದ ಭಾರತವನ್ನು ಒಗ್ಗೂಡಿಸಿತು. ಬ್ರಾಹ್ಮಣಧರ್ಮ ಪ್ರತಿಷ್ಠಿತ ವರ್ಗಗಳ ಧರ್ಮ ವಾದರೆ ಬೌದ್ಧಧರ್ಮ ಜನಸಾಮಾನ್ಯರ ಮೊಟ್ಟಮೊದಲ ಧರ್ಮ; ಅದು ಜನರ

ಮೇಲೆ ಬಲವಂತವಾಗಿ ಹೇರಿದ ಧರ್ಮವಲ್ಲ. ಜನರೇ ಸ್ವೇಚ್ಛೆಯಿಂದ ಸಂತೋಷದಿಂದ ಒಪ್ಪಿಕೊಂಡ ಧರ್ಮ; ವಿಜ್ಞಾನ ಮತ್ತು ಕಲೆ, ಸಾಹಿತ್ಯ ಮತ್ತು ಧರ್ಮ, ವಾಣಿಜ್ಯ ಮತ್ತು ಕೈಗಾರಿಕೆ, ಆಂತರಿಕ ಅಭಿವೃದ್ಧಿ ಮತ್ತು ಅಂತರ್‌ರಾಷ್ಟ್ರೀಯ ಖ್ಯಾತಿ – ಮುಂತಾದ ರಂಗಗಳಲ್ಲಿ ರಾಷ್ಟ್ರದ ಅಪಾರ ಅಂತಃಶಕ್ತಿಯನ್ನು ಪೂರ್ಣ ಪ್ರಮಾಣದಲ್ಲಿ ಬೌದ್ಧಧರ್ಮ ಹೊರಗೆಡಹಿತು. ಒಟ್ಟಿನಲ್ಲಿ ಅಂದಿನಿಂದ ಇಂದಿನವರೆಗೂ ಭಾರತವನ್ನು ಒಂದು ಮಹಾನ್ ರಾಷ್ಟ್ರವನ್ನಾಗಿ ಬೌದ್ಧ ಧರ್ಮ ಬೆಳೆಸಿದಂತೆ ಬೇರಾವ ಧರ್ಮವೂ ಬೆಳೆಸಲು ಶಕ್ತವಾಗಿಲ್ಲ". ಈ ಅಂಶ ಬಾಬಾಸಾಹೇಬರಿಗೆ ಚೆನ್ನಾಗಿ ತಿಳಿದಿತ್ತು. ಆದರೆ ಇಷ್ಟೆಲ್ಲ ಕಾಣಿಕೆ ನೀಡಿದ ಬೌದ್ಧ ಧರ್ಮವನ್ನು ಹಿಂದೂ ಧರ್ಮ ನುಂಗಿ ನೀರು ಕುಡಿಯಿತು. ಬುದ್ಧನನ್ನು ವಿಷ್ಣುವಿನ ಅವತಾರವೆಂದು ಘೋಷಿಸಿತು. ಆದರೆ ತಾನು ಹುಟ್ಟಿದ ನಾಡಿಗಾಗಿ ದೇಶದ ಸಮಗ್ರತೆಗಾಗಿ ಮತ್ತು ಪೂರ್ಣ ಪ್ರಗತಿಗಾಗಿ ಬಾಬಾಸಾಹೇಬ 'ಬುದ್ಧ ಮತ್ತು ಅವನ ಧರ್ಮ' ಎಂಬ ಗ್ರಂಥವನ್ನು ಪ್ರಕಟಿಸಿ ಬೌದ್ಧಧರ್ಮವನ್ನು ಪುನರುಜ್ಜೀವನಗೊಳಿಸಿದರು.

ಬುದ್ಧನಿಗೆ ಶರಣು :

ಸಪ್ಟಂಬರ್ ೨೩, ೧೯೫೬ ರಂದು ಅಂಬೇಡ್ಕರ ಒಂದು ಹೇಳಿಕೆ ನೀಡಿ ಈ ದೇಶದ ಅಸ್ಪೃಶ್ಯರನ್ನು ದಮನ ಮಾಡಿದ ಕ್ರೂರ ಹಿಂದೂ ಧರ್ಮವನ್ನು ಧಿಕ್ಕರಿಸಿ ಸಮತಾ ಸಮಾಜದ ನಿರ್ಮಾಣಕ್ಕೆ ತಾವೆಲ್ಲ ಅಕ್ಟೋಬರ ೧೪, ೧೯೫೬ ರಂದು ಬೌದ್ಧ ಧರ್ಮವನ್ನು ಸ್ವೀಕರಿಸುತ್ತಿದ್ದೇವೆಂದು ಘೋಷಿಸಿದರು. ಧರ್ಮಾಂತರದ ಮುಂಚಿನ ದಿನ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುವಾಗ ಕೆಲವು ಪತ್ರಿಕಾಕರ್ತರು, ನೀವು ಬೌದ್ಧಧರ್ಮವನ್ನು ಸೇರುವ ಔಚಿತ್ಯವೇನು ? ಎಂದು ಅಂಬೇಡಕರರಿಗೆ ಪ್ರಶ್ನಿಸಿದಾಗ "ಈ ಪ್ರಶ್ನೆಯನ್ನು ಸಾವಿರಾರು ವರ್ಷಗಳಿಂದ ಅಸ್ಪೃಶ್ಯರನ್ನು ಶೋಷಣೆ ಮಾಡಿದ ನಿಮ್ಮ ಮುತ್ಸದ್ದಿತರನ್ನೇ ಕೇಳಿ" ಎಂದು ಖಾರವಾಗಿ ನುಡಿದರು. ಕೇವಲ ಕೆಲವೇ ಕೆಲ ಸವಲತ್ತುಗಳಿಗಾಗಿ ನಾವು ಹಿಂದೂ ಧರ್ಮದ ಕೊಳಚೆಯಲ್ಲಿ ಇರಬೇಕಾಗಿಲ್ಲ. ನಾವು ನಮಗಿರುವ ಸವಲತ್ತುಗಳನ್ನು ಈ ದೇಶದ ಬ್ರಾಹ್ಮಣರಿಗೂ ಕೊಡುತ್ತೇವೆ. ಅವರು ಅಸ್ಪೃಶ್ಯರಾಗಲು ಬಯಸುತ್ತಾರೆಯೇ ? ಎಂದು ಅಂಬೇಡ್ಕರ ಕೇಳಿದರು. ಧರ್ಮ ಮಾರಾಟದ ವಸ್ತುವಲ್ಲ ಎಂದು ಹೇಳುವ ಅಂಬೇಡ್ಕರ ಬೌದ್ಧ ಧರ್ಮವನ್ನು ಸೇರುವ ಇನ್ನೊಂದು ಮುಖ ಬಹಳ ಸ್ಪಷ್ಟವಾಗಿದೆ. ಅದು ಅಂಬೇಡಕರರ ಅಪ್ಪಟ ದೇಶಾಭಿಮಾನವನ್ನು ಎತ್ತಿ ತೋರಿಸುತ್ತದೆ. "I shall choose only least harmful way for the country and that is the greatest benefit. I am conferring on the country by embracing Buddhism ... ... Buddhism is part of Bharatiya (not Hindu) culture. I have

taken care that my conversion will not harm the tradition, culture and history of this land."೨೩ ಅಂಬೇಡ್ಕರರ ಈ ರೀತಿಯಾದ ದೇಶಾಭಿಮಾನ ಭಾರತದ ಇತರ ನಾಯಕರಿಗಿದ್ದಿದ್ದರೆ ಖಂಡಿತವಾಗಿಯೂ ಈ ದೇಶಕ್ಕೆ ಇಂದಿನ ಪರಿಸ್ಥಿತಿ ಬರುತ್ತಿರಲಿಲ್ಲ.

ಅಂಬೇಡಕರ ಕಾಂಗ್ರೆಸ್ ಮತ್ತು ಹಿಂದೂ ಧರ್ಮ :

ಕಾಂಗ್ರೆಸ್ಸ್ ಮತ್ತು ಹಿಂದೂ ಧರ್ಮದಲ್ಲಿ ಅಂತಹ ವ್ಯತ್ಯಾಸವನ್ನೇನು ಡಾ. ಬಾಬಾಸಾಹೇಬ ಅಂಬೇಡಕರ ಕಾಣಲಿಲ್ಲ. ಬುದ್ಧನ ತರುವಾಯ ಉಚ್ಛ್ರಾಯ ಸ್ಥಿತಿಗೇರಿದ್ದ ಬೌದ್ಧಧರ್ಮದ ವಿರುದ್ಧ ಸೆಣಸುವದರಲ್ಲೆ ಹಿಂದೂ ಧರ್ಮ ಮುಸ್ಲಿಂ ದಾಳಿಗಳ ಹೊಡೆತಕ್ಕೆ ಸಿಕ್ಕು ನುಚ್ಚುನೂರಾಗುವದರಲ್ಲಿತ್ತು. ಅಷ್ಟರಲ್ಲೇ ಬ್ರಿಟಿಷ್ ಆಳ್ವಿಕೆ ಪ್ರಾರಂಭವಾಗಿ ಅದು ಸಮಾಧಾನದ ಉಸಿರು ಬಿಟ್ಟಿತು. ಯಾವುದೇ ಪರಕೀಯ ಆಳ್ವಿಕೆಗಳಿಗಿಂತ ಬ್ರಿಟಿಷರ ಆಳ್ವಿಕೆಯಲ್ಲಿ ಹಿಂದೂ ಧರ್ಮ ಬಲಾಢ್ಯ ವಾಯಿತು. ಇಲ್ಲಿ ಸ್ವಾಮಿ ಧರ್ಮತೀರ್ಥರು ಒಂದು ಉಲ್ಲೇಖವನ್ನೇ ನೋಡೋಣ. "ಬ್ರಿಟಿಷ್ ಆಳ್ವಿಕೆಯಲ್ಲಿ ಬ್ರಾಹ್ಮಣಧರ್ಮ ಸಂವಿಧಾನಾತ್ಮಕ ಸ್ಥಾನವನ್ನೂ ಕಾನೂನಿನ ಬಲವನ್ನೂ ಪಡೆದುಕೊಂಡಿತು. ಜಾತಿ ಭೇದಗಳು ಯಾಂತ್ರಿಕವಾಗಿ ಉಗ್ರವಾದವು. ಜಾತಿ ಕಟ್ಟಳೆಯೇ ಎಲ್ಲಾ ಹಿಂದೂಗಳಿಗೂ ಅಲಿಖಿತ ಸಮಾನ ಕಾನೂನಾಯಿತು. ಬ್ರಾಹ್ಮಣಧರ್ಮದ ಸತ್ವ ಕ್ಷೀಣಿಸಿದರೂ ಅದರ ರೂಪುಗಳು ಹರಳುಗೊಂಡವು. ಸಾಮಾಜಿಕ ಧಾರ್ಮಿಕ ಪದ್ಧತಿಗಳಿಗೆ ಕಾನೂನು ರಾಜಕೀಯ ಆರ್ಥಿಕ ಮೌಲ್ಯಗಳನ್ನು ಅರ್ಥಗಳನ್ನು ಹಚ್ಚಿದ್ದರಿಂದ ಅವು ಬ್ರಿಟಿಷ್ ಇಂಡಿಯಾದ ಕಾಯಿದೆ ಮತ್ತು ಆಡಳಿತ ವ್ಯವಸ್ಥೆಯಲ್ಲಿ ಶಾಶ್ವತ ಸ್ಥಾನವನ್ನು ಗಿಟ್ಟಿಸಿಕೊಂಡುಬಿಟ್ಟವು".

ಕಾಂಗ್ರೆಸ್ಸು ಸಹ ಹಿಂದೂ ಧರ್ಮದಂತೆಯೇ ಬೆಳೆಯಿತು. ಹಿಂದೂ ಧರ್ಮದಲ್ಲಿ ಕೇವಲ ಪುರೋಹಿತ ವರ್ಗ ಬಹುಸಂಖ್ಯಾತರ ಶ್ರಮದ ಫಲವನ್ನು ಉಣ್ಣುವಂತೆ ಕಾಂಗ್ರೆಸ್ಸಿನಲ್ಲಿ ಪುರೋಹಿತಶಾಹಿಗಳ ದುಷ್ಟಕೂಟ ಹಿಂದುಳಿದ, ಅಲ್ಪಸಂಖ್ಯಾತರ ಮತ್ತು ದಲಿತರ ಮತಗಳಿಂದ ಅಧಿಕಾರವನ್ನು ತಮ್ಮ ಕೈಯಲ್ಲಿ ಹಿಡಿದುಕೊಂಡಿದೆ. ಅದಕ್ಕಾಗಿ ಜಾತಿ ವಿನಾಶವಾಗುವವರೆಗೂ ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ಬೇಡ ವೆಂದು ಹೇಳಿದ್ದರು. ದಲಿತರ ಮತ್ತು ಅಲ್ಪಸಂಖ್ಯಾತರ ಕೆಲವು ಬೇಡಿಕೆಗಳು ಬ್ರಿಟಿಷರ ಎದುರಿಗೆ ಬಂದಾಗ ಕಾಂಗ್ರೆಸ್ ನಾಯಕರು ಅದನ್ನು ವಿರೋಧಿಸಿದರು. ಆಗ ಅಂಬೇಡ್ಕರ "What to do the Hindus stand for ? Are they fighting for freedom ? are they fighting for power ?೨೪ ಎಂದು ಕೇಳಿದರು. ಕಾಂಗ್ರೆಸ್ಸಿಗೆ ಅಧಿಕಾರ ಕೊಟ್ಟರೆ ಅದು ಹಿಂದೂಗಳಿಗೆ ಕೊಟ್ಟ ಅಧಿಕಾರ. ಒಂದು ವೇಳೆ ದಲಿತರ ಮತ್ತು ಅಲ್ಪಸಂಖ್ಯಾತರ ಹಿತಾಸಕ್ತಿಯನ್ನು

ಕಡೆಗಣಿಸಿ ಹಿಂದೂಗಳಿಗೆ (ಕಾಂಗ್ರೆಸ್ಸಿಗೆ) ಅಧಿಕಾರವನ್ನು ನೀಡಿದರೆ ಅವರು ಬೇರಾವ ಜನಾಂಗಕ್ಕಿಂತಲೂ ಹೆಚ್ಚು ಹಿಂಸಾತ್ಮಕರೂ ಸಾಮ್ರಾಜ್ಯಶಾಹಿಗಳೂ ಆಗುತ್ತಾರೆ' ಎಂದು ಅಂಬೇಡ್ಕರ ಅಭಿಪ್ರಾಯಪಟ್ಟರು.

ಸ್ವಾತಂತ್ರ್ಯ ಸಮರದಲ್ಲಿ ಕಾಂಗ್ರೆಸ್ಸಿಗರಿಗೆ ವೇದ, ಸ್ಮೃತಿ, ರಾಮಾಯಣ ಮತ್ತು ಮಹಾಭಾರತ, ಗೀತೆ ಮುಂತಾದವುಗಳೇ ಮಾರ್ಗದರ್ಶಿಗಳಾದವು. ಶೂದ್ರರ ತಲೆ ಕಡಿದು, ಭೋಗವಿಲಾಸದ ಮತ್ತಿನಲ್ಲಿ ರಾಜಧರ್ಮವನ್ನು ಮರೆತು, ಸ್ತ್ರೀ ಕುಲವನ್ನೆಲ್ಲ ಕೀಳಾಗಿ ಕಂಡ 'ರಾಮ' ಕಾಂಗ್ರೆಸ್ಸಿಗರಿಗೆ ಆದರ್ಶನಾದ. ಅಸ್ಪೃಶ್ಯರ ರಕ್ಷಣೆಗಿಂತ ಗೋರಕ್ಷಣೆ ಕಾಂಗ್ರೆಸ್ಸಿಗರ ಮುಖ್ಯ ಧ್ಯೇಯವಾಯಿತು. ಸೆಕ್ಯೂಲರ ಎಂದು ಹೇಳಿಕೊಂಡ ಕಾಂಗ್ರೆಸ್ಸು ಹಿಂದೂ ಮಹಾಸಭೆಯಡಿಯಲ್ಲಿ ತನ್ನ ಅಧಿವೇಶನ ವನ್ನು ನಡೆಸಿತು. ಅದು ತನ್ನ ಹುಟ್ಟಿನಿಂದಲೂ ಅಸಮಾನತೆಯ, ಪ್ರಜಾಪ್ರಭುತ್ವದ ವಿರೋಧಿಯಾದ ಮತ್ತು ಜೀವವಿರೋಧಿಯಾದ ಹಿಂದೂ ಧರ್ಮವನ್ನು ಪೋಷಿಸಿ ಕೊಂಡು ಬಂತು. ಹೀಗಾಗಿಯೇ ಅಂಬೇಡಕರ ಕಾಂಗ್ರೆಸ್ಸಿನಿಂದ ದೂರ ಉಳಿದರು ಮತ್ತು ತನ್ನ ಜನರಿಗಾಗಿ ಪ್ರತ್ಯೇಕವಾಗಿ ಹೋರಾಟ ಮಾಡಿದರು.

ಉಪಸಂಹಾರ :

ಒಟ್ಟಾರೆ, ಈ ಪ್ರಬಂಧದಲ್ಲಿ ಡಾ. ಬಿ. ಆರ್. ಅಂಬೇಡಕರ ಅವರ ಧಾರ್ಮಿಕ ಚಿಂತನೆಯನ್ನು ಶೂದ್ರ ಮತ್ತು ಅತಿಶೂದ್ರರ ಏಳ್ಗೆಗೆ ಸಂಬಂಧಪಟ್ಟಂತೆ ಒಂದು ಸ್ಥೂಲ ಚೌಕಟ್ಟಿನಲ್ಲಿ ಹಿಡಿದಿಡಲು ಪ್ರಯತ್ನಿಸಲಾಗಿದೆ. ಏಕೆಂದರೆ ಅಂಬೇಡ್ಕರರ ಒಟ್ಟಾರೆ ಗ್ರಂಥಗಳನ್ನು ಸಮೀಕ್ಷೆ ಮಾಡಿದರೆ ಅವುಗಳಲ್ಲಿಯ ಹೆಚ್ಚಿನ ಭಾಗ ಧರ್ಮಗಳ ಕುರಿತೇ ಇದೆ. ಅವರ ವಿಚಾರಗಳನ್ನು ಇಂಥ ಒಂದು ಚಿಕ್ಕ ಪ್ರಬಂಧದಲ್ಲಿ ಹಿಡಿದಿಡು ವುದು ಅತ್ಯಂತ ಕಠಿಣವಾದ ಕಾರ್ಯ. ಅದು ಕೇವಲ ಒಂದು ಮುಖವನ್ನು ತೋರಿಸಿ ಇನ್ನೊಂದನ್ನು ಕತ್ತಲೆಯಲ್ಲಿ ಇಟ್ಟ ಹಾಗೆನಿಸುತ್ತದೆ. ಆದರೂ ಇಲ್ಲಿ ಅವರ ವಿಚಾರ ಗಳನ್ನು ಇನ್ನುಳಿದ ದಾರ್ಶನಿಕರ ವಿಚಾರಗಳ ಜೊತೆ ತುಲನಾತ್ಮಕವಾಗಿ ವಿಮರ್ಶಿಸ ಲಾಗಿದೆ.

ಅಂಬೇಡ್ಕರರ ಧಾರ್ಮಿಕ ವಿಚಾರಗಳು, ಸಂಪ್ರದಾಯವಾದಿಗಳಿಗೆ ಹಿಡಿಸುವ ದಿಲ್ಲ. ಏಕೆಂದರೆ ಅವರು ಹಿಂದೂ ಧರ್ಮವನ್ನು ಹಾಳು ಮಾಡಲು ಕರೆಕೊಟ್ಟರು ಎಂದು ತಪ್ಪುತಿಳಿಯಲಾಗಿದೆ. ಅಂಬೇಡಕರರು ವಿರೋಧಿಸಿದ್ದು ವೈದಿಕ ಸಂಸ್ಕೃತಿ, ವರ್ಣವ್ಯವಸ್ಥೆ ಮತ್ತು ಜಾತಿಪದ್ಧತಿ ಹಾಗೂ ಅಸ್ಪೃಶ್ಯತೆಗಳನ್ನು. ಈ ಎಲ್ಲ ಅನಿಷ್ಟ ಗಳು ಹುಟ್ಟಿದ್ದು ಬ್ರಾಹ್ಮಣ ಧರ್ಮದಿಂದಲೇ. ಅದಕ್ಕಾಗಿ ಅವರು "kill brahma-nism and save Hinduism" ಎಂದು ಹೇಳಿದ್ದರು. ಹೀಗಾಗಿ ಅಂಬೇಡಕರರನ್ನು

ಪೂರ್ವಪೀಡಿತ ಕಲ್ಪನೆ ತೊರೆದು ಓದುವುದು ಬಹು ಮುಖ್ಯವಾಗಿದೆ. ವರ್ಣಾಶ್ರಮ ಧರ್ಮದ ಅನಿಷ್ಟಗಳನ್ನು ಪಟ್ಟಿಮಾಡುತ್ತ ಹೋಗುವ ಅಂಬೇಡಕರ ಅವರು 'ಆ ಧರ್ಮದಿಂದಲೇ ದೇಶ ದಾಸ್ಯವಾಯಿತು' ಎಂಬ ಮಾತು ಎಷ್ಟು ಮನೋಜ್ಞಕಾರಿಯಾಗಿದೆ ! ಬ್ರಾಹ್ಮಣಧರ್ಮ ಜನರ ಸಾಮೂಹಿಕ ಬದುಕಿಗೆ ಮತ್ತು ಅವರ ಒಗ್ಗಟ್ಟಿಗೆ ಮಾರಕವಾದುದರಿಂದಲೇ ಈ ದೇಶವನ್ನು ಎಷ್ಟೆಷ್ಟೊ ಜನ ಪರಕೀಯರು ಆಳಿದರು. ಈ ಧರ್ಮದಲ್ಲಿ ಮನುಷ್ಯ ತನ್ನ ವೈಯಕ್ತಿಕತೆ ಮತ್ತು ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾನೆ. ಅದನ್ನು ಕಳೆದುಕೊಂಡಾಗ ಬಲಹೀನನಾಗಿ ಬೇರೆಯವರಿಗೆ ಶರಣು ಹೋಗುತ್ತಾನೆ. ರಾಜಕೀಯ ಸ್ವಾತಂತ್ರ್ಯ ಅನುಭವಿಸಬೇಕೆಂದರೆ ಸಮಾಜದಲ್ಲಿ ಸಾಮಾಜಿಕ,ಆರ್ಥಿಕ ಮತ್ತು ಧಾರ್ಮಿಕ ಅವಕಾಶಗಳು ಸರ್ವರಿಗೂ ಸಮನಾಗಿರಬೇಕು. ಆದರೆ ಭಾರತದ ಸ್ವಾತಂತ್ರ್ಯ ಹೋರಾಟಗಾರರು ಇದನ್ನು ಅರಿಯಲಿಲ್ಲ. ಅದಕ್ಕಾಗಿಯೇ ಇಂದು ದೇಶ ಹೊತ್ತಿ ಉರಿಯುತ್ತಿದೆ. ಅದಕ್ಕೆ ಮೂಲಕಾರಣ ಅಸಮಾನತೆ ತುಂಬಿಕೊಂಡಿರುವ ಹಿಂದೂ ಧರ್ಮ ಮತ್ತು ನಿಜ ಸ್ವಾತಂತ್ರ್ಯದ ಪರಿಕಲ್ಪನೆ ಇಲ್ಲದ ಕಾಂಗ್ರೆಸ್ಸು. ಹೀಗಾಗಿ ಭಾರತದಲ್ಲಿ ಅಂಬೇಡಕರರು ಇನ್ನು ಮುಂದೆ ಬಹಳ ಪ್ರಸ್ತುತ ಆಗುವ ಕಾಲವೂ ದೂರ ಉಳಿದಿಲ್ಲ.

ಅಡಿಟಿಪ್ಪಣಿಗಳು :

೧] ಗಂಗಾಧರ ಮೂರ್ತಿ, 'ಹಿಂದೂ ಧರ್ಮದ ತಾತ್ವಿಕತೆ' ಬೆಂಗಳೂರು, ೧೯೯೦. ಪಿಪಿ ಪುಟ ೮

೨] ಅಂಬೇಡಕರ ಬಿ. ಆರ್, "ರೈಟಿಂಗ್ಸ್ & ಸ್ಪೀಚಿಸ್" ವ್ಯಾಲೂಂ. ೩, ಮಹಾರಾಷ್ಟ್ರ ಸರಕಾರ ೧೯೮೭, ಪುಟ ೨೫

೩] ಗಂಗಾಧರ ಮೂರ್ತಿ. ರೆಫೆರೆನ್ಸ್ ೧ ನೋಡಿ, ಪುಟ ೯

೪] ಅಂಬೇಡಕರ ಬಿ. ಆರ್, ರೆಫೆರೆನ್ಸ್ ೨ ನೋಡಿ, ಪುಟ ೩೭

೫] ಗಂಗಾಧರ ಮೂರ್ತಿ, ರೆಫೆರೆನ್ಸ್ ೧ ನೋಡಿ, ಪುಟ ೧೩

೬] ಸ್ವಾಮಿ ಧರ್ಮತೀರ್ಥ, 'ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ' (ಅನು. ಭಗವಾನ) ಮಹಿಮ, ಮೈಸೂರು, ಪುಟ ೩೪೧

೭] ಗಂಗಾಧರ ಮೂರ್ತಿ, ರೆಫೆರೆನ್ಸ್ ೧, ಪುಟ ೧೧

೮] ಭಗತ್‌ಶರಣ ಉಪಾಧ್ಯಾಯ, 'ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ' ನವಕರ್ನಾಟಕ, ಬೆಂಗಳೂರು, ಪುಟ ೩೨೩

೯] ಅಂಬೇಡ್ಕರ ಬಿ. ಆರ್, 'ರೈಟಿಂಗ್ಸ್ & ಸ್ಪೀಚಿಸ್' ವ್ಯಾಲೂಂ. ೪ ಮಹಾರಾಷ್ಟ್ರ ಸರಕಾರ ೧೯೮೭, ಪುಟ ೩೨೩

೧೦] ಅಂಬೇಡಕರ ಬಿ. ಆರ್, ರಾಮಕೃಷ್ಣ (ಅನು,) ಹೊಸದಿಕ್ಕು ಪ್ರಕಾಶನ, ಬೆಂಗಳೂರು, ಪುಟ ೪

೧೧] ಸ್ವಾಮಿ ಧರ್ಮತೀರ್ಥ, ರೆಫೆರೆನ್ಸ್ ೬ ನೋಡಿ, ಪುಟ ೯

೧೨] ಬೆರ್ಮೆ ನಿಕಾಲ್ಸ, 'ವೆರ್ಡಿಕ್ಟ ಆನ್ ಇಂಡಿಯಾ' ಥ್ಯಾಕರ ಪಬ್ಲಿಕೇಶನ್, ಬಾಂಬೆ ೧೯೪೬, ಪುಟ ೬೭

೧೩] ಅಂಬೇಡಕರ ಬಿ. ಆರ್., 'ಆ್ಯನಿಹಿಲೇಶನ್ ಆಫ್ ಕ್ಯಾಸ್ಟ' ಆನಂದ ಸಾಹಿತ್ಯ ಸದನ, ಅಲಿಗಡ್ ೧೯೮೯, ಪುಟ ೪೩

೧೪] ಅಂಬೇಡಕರ ಬಿ. ಆರ್., 'ವೇಟಿಂಗ್ ಫಾರ ಎ ವೀಸಾ' ಸಿದ್ಧಾರ್ಥ ಪಬ್ಲಿಕೇಶನ್, ಬಾಂಬೆ ೧೯೯೧, ಪುಟ ೨೨

೧೫] ಅಂಬೇಡಕರ ಬಿ. ಆರ್., 'ವೇಟಿಂಗ್ ಫಾರ ಎ ವೀಸಾ' ಸಿದ್ಧಾರ್ಥ ಪಬ್ಲಿಕೇಶನ್, ಬಾಂಬೆ ೧೯೯೧, ಪುಟ ೧೪

೧೬] ಬೆರ್ಮೆ ನಿಕಾಲ್ಸ್, ರೆಫೆರೆನ್ಸ್ ೧೨, ಪುಟ ೩೦

೧೭] ಮಾನೆ ದಯಾನಂದ, 'ಧರ್ಮ, ದಾಸ್ಯ, ಧರ್ಮಾಂತರ' ಮಂಗಳೂರು ವಿಶ್ವವಿದ್ಯಾಲಯ, ಅಂಬೇಡಕರ ವಿಚಾರ ಸಂಕೀರಣಕ್ಕೆ ಮಂಡಿಸಿದ ಪ್ರಬಂಧ, ಪುಟ ೨

೧೮] ಕಲ್ಲೋಳಿಕರ ಎಸ್. ಕೆ., 'ಭಾರತದ ಸ್ವಾತಂತ್ರ್ಯ ಹೋರಾಟ ಮತ್ತು ಅಂಬೇಡಕರ' ಮಂಗಳೂರ ವಿಶ್ವವಿದ್ಯಾಲಯ, ಅಂಬೇಡಕರ ವಿಚಾರ ಸಂಕೀರಣಕ್ಕೆ ಮಂಡಿಸಿದ ಪ್ರಬಂಧ ಪುಟ ೬

೧೯] ಕೀರ ಧನಂಜಯ, 'ಅಂಬೇಡಕರ ಲೈಫ್ ಆ್ಯಂಡ ಮಿಶನ್' ಪಾಪ್ಯೂಲರ ಪ್ರ., ಭಾಂಬೆ ೧೯೮೧, ಪುಟ ೭೩

೨೦] ಕೀರ ಧನಂಜಯ, 'ಅಂಬೇಡಕರ ಲೈಫ್ ಆ್ಯಂಡ ಮಿಶನ್' ಪಾಪ್ಯೂಲರ ಪ್ರ., ಬಾಂಬೆ ೧೯೮೧, ಪುಟ ೭೩

೨೧] ಬೆರ್ಮೆ ನಿಕಾಲ್ಸ್. ರೆಫೆರೆನ್ಸ್ ೧೨, ಪುಟ ೩೩

೨೨] ಕೀರ ಧನಂಜಯ, ರೆಫೆರೆನ್ಸ್ ೧೯, ಪುಟ ೨೭೩

೨೩] ಭಾರಿಯಲ್ ಚಂದ್ರಾ, 'ಸೋಶಿಯಲ್ & ಪಾಲಿಟಿಕಲ್ ಐಡಿಯಾಸ್ ಆಫ್ ಬಿ. ಆರ್. ಅಂಬೇಡಕರ' ಆಲೇಖ, ಜೈಪುರ ೭೭, ಪುಟ ೨೪೭

೨೪] ಅಂಬೇಡಕರ ಬಿ. ಆರ್., 'ಮಿ. ಗಾಂಧಿ ಆ್ಯಂಡ ಇಮ್ಯಾನ್ಸಿಪೇಶನ್ ಆಫ್ ಅನ್‌ಟಚ್ಚೇಬಲ್ಸ್' ಪುಟ ೭೩

● ●

ಅಂಬೇಡಕರರು ಕಂಡಂತೆ : ಬೌದ್ಧ ಧರ್ಮ, ಮಾರ್ಕ್ಸ್‌ನ ವರ್ಗಹೋರಾಟ ಮತ್ತು ಸಾಮಾಜಿಕ ಸಮಾನತೆ

● ಇಂಗ್ಲೀಷ ಮೂಲ : ಬಿ. ಕೃಷ್ಣಮೂರ್ತಿ
ಕನ್ನಡಕ್ಕೆ : ಎ. ಮುರಿಗೆಪ್ಪ

ಸಾರಾಂಶ :

ದೇಶೀಯವಾದ ಜಾತಿಪದ್ಧತಿ ವಿರುದ್ಧ ಅಂಬೇಡ್ಕರರ ಸಂಘಟನೆಗೆ ಪ್ರತಿಕ್ರಿಯೆಯಾಗಿ ಗಾಂಧೀಜಿಯವರಂತಹ ಮುಖಂಡರ ಕೊಂಕುಧೋರಣೆ ಹಾಗೂ ಮೌಲ್ಯಗಳನ್ನು ಪ್ರಸ್ತಾವನೆ ಪರಿಚಯಿಸುತ್ತದೆ.

ಬೌದ್ಧಧರ್ಮ ಮತ್ತು ಮಾರ್ಕ್ಸ್‌ನ ವರ್ಗಹೋರಾಟವು ಸಾಮಾಜಿಕ ಪರಿವರ್ತನೆಯ ಮಾಧ್ಯಮವಾಗಿ ಹೊಂದಿರುವ ಸಾಪೇಕ್ಷ ಗುಣಗಳನ್ನು ಕುರಿತ ಅಂಬೇಡ್ಕರರ ದೃಷ್ಟಿಕೋನವನ್ನು ಚಿತ್ರಿಸುವುದು ಲೇಖನದ ಮುಖ್ಯ ಉದ್ದೇಶ. ಗುಣಮಟ್ಟದ ದೃಷ್ಟಿಯಿಂದ ಭಿನ್ನವಾಗಿರುವ ಈ ಎರಡರ ವಿಶೇಷ ಅಂಶಗಳನ್ನು ಅಂಬೇಡ್ಕರರ ಮುಖಾಂತರ ಓದುಗರ ಮುಂದಿಡುವುದು ಮತ್ತು ಮೌಲ್ಯಮಾಪನಕ್ಕೊಳಪಡಿಸುವುದಲ್ಲದೆ ಲೇಖನವು ಅಂಬೇಡಕರರ ಹಿಂಹಾ ಸಿದ್ಧಾಂತವನ್ನು ಪರಿಶೀಲನೆಗೊಳಪಡಿಸುತ್ತದೆ. ಅವರು ಮೌಲ್ಯೀಕರಣಕ್ಕೊಳಪಡಿಸುವ ಚೌಕಟ್ಟಿಗೆ ವಿರುದ್ಧವಾದ ವಾಸ್ತವತೆಯನ್ನೂ ಪರಿಶೀಲಿಸುತ್ತದೆ.

ಲೇಖನದ ಅಂತ್ಯಭಾಗದಲ್ಲಿ, ಸಾಮಾಜಿಕ ಜೀವನಕ್ಕೆ ಅವಶ್ಯಕವಾದ ಕ್ರಾಂತಿಯೋತ್ತರ ಘಟ್ಟದಲ್ಲಿ ಸಾಮಾಜಿಕ ಅರಿವು ಅವಶ್ಯಕ. ಅಂಬೇಡಕರರ ಅತ್ಯಂತ ಆಂತರಿಕವಾದ ಸಲಹೆಯನ್ನು ಆಧರಿಸಿ ರೂಪಗೊಳ್ಳಬಹುದಾದ ಸಾಮೂಹಿಕ ಅರಿವನ್ನು ನಿರ್ಮಿಸುವಲ್ಲಿ ಬೌದ್ಧಧರ್ಮವು ವಹಿಸಬಹುದಾದ ಕ್ರಿಯಾತ್ಮಕ ಪಾತ್ರವನ್ನು ವಿಶ್ಲೇಷಿಸಲಾಗಿದೆ.

ಅಂಬೇಡಕರರನ್ನು ಕುರಿತಂತೆ — ಪ್ರಸ್ತಾವನ :

ಇತಿಹಾಸ ನಿರ್ಮಾಣವಾಗತೊಡಗಿತ್ತು. ಸಾವಿರಾರು ಬ್ರಿಟೀಷರನ್ನು ಹೊರ ಹಾಕುವದರ ಮೂಲಕ ಜನಸಾಮಾನ್ಯರು ಸ್ವಂತತೆಯನ್ನು ಕಂಡುಕೊಳ್ಳುವ ಹೊಣೆ

ಗಾರಿಕೆಯ ಅರಿವಿನಿಂದಾಗಿ, ಇತಿಹಾಸ ನಿರ್ಮಿಸಬಲ್ಲೆವೆಂಬ ಪರಿಜ್ಞಾನ ದೇಶದಲ್ಲಿ ಪ್ರಪ್ರಥಮವಾಗಿ ರೂಪುಗೊಳ್ಳತೊಡಗಿತ್ತು. ಈ ಒಂದು ಐತಿಹಾಸಿಕ ಹಿನ್ನೆಲೆಗೆ ಎದುರಾಗಿ ಅಂಬೇಡಕರರು ಇತಿಹಾಸ ಪ್ರವೇಶ ಮಾಡಿದರು. ತಮ್ಮನ್ನು ಹಿಂದುಳಿದವರ ಸಮಸ್ಯೆಗಳೊಂದಿಗೆ ಸಮೀಕರಿಸಿಕೊಳ್ಳುವುದರ ಮೂಲಕ ಅದರಲ್ಲಿಯೂ ಪರಿಶಿಷ್ಟಜಾತಿಯನ್ನು ಕುರಿತಂತೆ, ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ವೈಚಾರಿಕವಾಗಿ ಅಲಿಖಿತ ಕಾರಣಗಳ ಮೂಲಕ ಸಾವಿರಾರು ವರ್ಷಗಳಿಂದ ಈ ನಾಡಿನಲ್ಲಿ ತುಳಿತಕ್ಕೆ ಒಳಗಾದ ಜನರ ಸರ್ವಾಂಗೀಣ ಉದ್ಧಾರಕ್ಕಾಗಿ ಭಾರತೀಯ ಇತಿಹಾಸದಲ್ಲಿ ಹಿಂದೆಂದೂ ಕಾಣಸಿಗದ ದೃಢನಿರ್ಧಾರದಿಂದ ಅವರು ಇತಿಹಾಸ ಪ್ರವೇಶ ಮಾಡಿದರು. ಅವರೆಲ್ಲ ಕುರುಡರೂ, ಕಿವುಡರೂ, ಮೂಕರೂ ಆಗಿದ್ದರು. (ಆ ಮಟ್ಟಿಗೆ ದೇಶೀಯವಾದ ನೆಲದ ಕಾನೂನುಗಳು ಅತ್ಯಂತ ಪರಿಣಾಮಕಾರಿಯಾಗಿದ್ದವು.) ಅವರೆಲ್ಲರೂ ಇಂತಹ ಅಮಾನುಷಕೃತ್ಯಗಳ ಸಂಕೋಲೆಗಳನ್ನು ಸ್ವತಃ ಅಲ್ಲಾಡಿಸಿ ಮುಕ್ತರಾಗಬೇಕು. ಕನಿಷ್ಟಪಕ್ಷ ಇತರರಿಗೆ ಸಮಾನರಾಗಿ ಬಾಳಬೇಕೆಂದು ಅಂಬೇಡ್ಕರರು ಬಯಸುತ್ತಿದ್ದರು. ಬ್ರಿಟೀಷರ ವಸಾಹತುಶಾಹಿ ಆಳ್ವಿಕೆಗೆದುರಾಗಿ, ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಚಳುವಳಿ ರೂಪಗೊಳ್ಳುತ್ತಿದ್ದಂತೆಯೇ, ಗಾಂಧೀಜಿ ಹಾಗೂ ಇತರರು ನಿರ್ಮಿಸುತ್ತಿರುವ ಇತಿಹಾಸವು ಎಷ್ಟು ಅಪೂರ್ಣವಾಗಿದೆ ಎಂಬುದನ್ನು ಇಡಿಯಾಗಿ ಮನಗಂಡು ತೋರಿಸಿಕೊಡುವಲ್ಲಿ ಶೀಘ್ರುವರ್ತಿಗಳಾದರು (ಅತಿ ಜಾಗ್ರುತರಾದರು.) ದೇಶದುದ್ದಕ್ಕೂ ಪಸರಿಸುತ್ತಿರುವ ಚಳುವಳಿಯು ವಾಸ್ತವವೂ ಸಮಂಜಸವೂ ಆಗಬೇಕಾದರೆ, ಪರಿಶಿಷ್ಟಜಾತಿಯ ಉದ್ಧಾರದ ಹೊಣೆಗಾರಿಕೆಯನ್ನು ತನ್ನ ಅವಿಭಾಜ್ಯ ಅಂಶವಾಗಿರಿಸಿಕೊಳ್ಳಬೇಕು. (ವಾಸ್ತವವಾಗಿ ಕೆಳವರ್ಗದವರ ಜೀವನವೇ ಆಗಿ ಪರಿಣಮಿಸಿರುವ ಸಂಕಷ್ಟಗಳ ಹುಟ್ಟುಹಾಕುವಿಕೆಯು ಮಾಲಿಕರ ಬದಲಾವಣೆಯನ್ನು ಬಯಸುವುದಿಲ್ಲವಾದರೆ) ಇದರರ್ಥ, ಕ್ರಾಂತಿಕಾರಕ ಬದಲಾವಣೆ, ಒಳತಿಗಾಗಿ ಬದಲಾವಣೆ, ಮೂಲತಃ ಜಾತಿಪದ್ಧತಿಯ ಉಚ್ಚಾಟನೆ.

ಭಾರತೀಯ ಜಾತಿಪದ್ಧತಿ, ಎಂದಿನಿಂದಲೂ ದೇಶಕ್ಕೆ ಮಾರಕವಾಗಿ ಪರಿಣಮಿಸಿರುವ, ಎಂದಿನಿಂದಲೂ ಈ ದೇಶವಾಸಿಗಳ ಬೌದ್ಧಿಕ ಪ್ರವಾಹವನ್ನೇ ತಣ್ಣಗಾಗಿಸಿರುವ ಪ್ರಮುಖ ಅಪರಾಧಿಯನ್ನು ಗಾಂಧೀಜಿ ಹಾಗೂ ಇನ್ನಿತರ ರಾಷ್ಟ್ರೀಯ ಚಳುವಳಿ ನಾಯಕರು ವೃತ್ತಿ ಮೂಲವಾಗಿ ವಿಭಜಿಸಿ, ಚಾತುರ್ವರ್ಣ ಎಂಬಿತ್ಯಾದಿಯಾಗಿ ಅವಹೇಳನೀಯ ಮತ್ತು ಅವೈಚಾರಿಕವಾದ ಪ್ರತ್ಯೇಕತಾ ಸೀಮಾರೇಖೆಗಳ ಜಾಡ್ಯ ಲೌಕಿಕತೆಯನ್ನು ಮುಂದಿರಿಸಿ, ಸರಿ ಎನ್ನುವುದುಂಟು, ಸಮರ್ಥಿಸುವುದುಂಟು. ಹೀಗಾಗಿ ಗಾಂಧೀಜಿ ಹಾಗೂ ಇನ್ನಿತರ ಮುಖಂಡರ ಮುಂದಾಳತ್ವದ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯ ಮುಖ್ಯಪ್ರವಾಹ ಬುನಾದಿಯಲ್ಲಿಯೇ ಅಪೂರ್ಣವಾಗಿದೆ.

ಅಂಬೇಡಕರರ ಸಾಮಾಜಿಕ ಪರಿವರ್ತನೆಯ ಅನುಷ್ಠಾನ ವಿಧಾನವು, ಆರ್ಥಿಕ, ಸಾಮಾಜಿಕ, ರಾಜಕೀಯ ಅಸಮಾನತೆಯನ್ನು ಕುರಿತು ಅವರ ಅಚಲವಾದ ವಿರೋಧ ವನ್ನು ಆಧರಿಸಿದೆ. ಆದರೆ ಈ ಅಸಮಾನತೆಗಳನ್ನು ನೀಗಿಸುವಾಗ, ತಂತ್ರಗಳನ್ನು ರೂಪಿಸುವಾಗ, ಸ್ವಾತಂತ್ರ್ಯ ಚಳುವಳಿಯ ಸ್ವರೂಪದಲ್ಲಿ ಏನೆಲ್ಲ ನಡೆಯುತ್ತಿದೆ. ಈ ಚಳುವಳಿಯಲ್ಲಿ ಭಾಗವಹಿಸಿದ ಮುಂದಾಳುಗಳ ಸಾಮಾಜಿಕ, ರಾಜಕೀಯ ಧೋರಣೆ ಗಳೇನು ? ಅದರಲ್ಲಿಯೂ ಜಾತಿಪದ್ಧತಿಗೆ ಸಂಬಂಧಿಸಿದವರ, ಪರಿಶಿಷ್ಟಜಾತಿಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಅವರ ವಿಚಾರಗಳೇನು ? ಎಂಬುದನ್ನು ಅವರು ಗಮನಿಸಬೇಕಾಗಿತ್ತು. ಆಶ್ಚರ್ಯದ ಸಂಗತಿಯೆಂದರೆ ಚಳುವಳಿ ನಾಯಕರ ಧೋರಣೆ ಗಳು ಅಂಬೇಡಕರರು ಗಮನಿಸಿದಂತೆ ಎಳಸು, ಅರೆಬೇದದ್ದು.

ಅಂಬೇಡಕರರ ಸಾಮಾಜಿಕ ಪರಿವರ್ತನೆಯ ತಂತ್ರಗಳು, ವಿಧಾನಗಳು ಸರಿ ಯಾದ ದೃಷ್ಟಿಕೋನದಿಂದ ಮೆಚ್ಚುಗೆಯನ್ನು ಗಳಿಸಬೇಕಾದರೆ, ಈ ಹಿನ್ನಲೆಗೆ ಎದುರಾಗಿ ರೂಪುಗೊಂಡು ಮೌಲ್ಯೀಕರಣಕ್ಕೊಳಪಡಿಸಬೇಕಾಗಿತ್ತು.

ಇತಿಹಾಸವೆಂಬುದೊಂದು ಚಲನೆ. ಎಣಿಕೆಗೆ ಸಿಗದಂತೆ ಅದು ಚಲಿಸುತ್ತಿರು ತ್ತದೆ. ಅಂಬೇಡಕರರ ಅಂದಿನ ಇತಿಹಾಸ ಪರಿಸರ ನಿಶ್ಚಿತವಾಗಿಯೂ ಅವರ ಸಾಮಾಜಿಕ ಬದಲಾವಣೆಯ ಕಾಣಿಕೆಯನ್ನು, ಸಾಮಾಜಿಕ ಬದಲಾವಣೆಯ ತಂತ್ರ ವಿಧಾನವನ್ನು ತೊಂದರೆಗೀಡು ಮಾಡಿರಬೇಕು. ಆದರೆ ಯಾವುದೋಂದು ದರ್ಶನದ ಕಾರ್ಯರೂಪವನ್ನು ದರ್ಶನದ ಗಟ್ಟಿತನವಷ್ಟೇ ಅಲ್ಲ. ಐತಿಹಾಸಿಕ ಸಾಧ್ಯತೆಯೂ ನಿರ್ಣಯಿಸುತ್ತದೆ ಎಂಬುದನ್ನು ಮನಗಾಣಬೇಕಾಗುತ್ತದೆ. ಬಸವಣ್ಣನವರಿಂದ ಅಂಬೇಡ್ಕರರವರೆಗೆ ಜಾತಿರಹಿತ ಸಮಾಜದ ದರ್ಶನವನ್ನು ಕಾಣುತ್ತ ಬಂದಿದ್ದೇವೆ. ಆದರೆ ಆಶ್ಚರ್ಯವೆಂದರೆ ನಮ್ಮ ದಿನಗಳಲ್ಲಿಯೇ ಗಾಂಧೀಜಿಯವರು ಮಾತ್ರ ಜಾತಿ ಪದ್ಧತಿಯಿರುವುದು ಕೆಟ್ಟದ್ದೇನೂ ಅಲ್ಲ. ಅದೇಕೆ, ಇದು ಅವಶ್ಯಕ ಕೂಡಾ ಎನ್ನುತ್ತಾರೆ.

ಆದ್ದರಿಂದಲೇ ಅಂಬೇಡಕರರು ವಿಶ್ವಚಾಣಾಕ್ಷರಾಗಿದ್ದರು. ಅವರು ನಮಗಾಗಿ ವಿಚಾರಗಳ ಕಣಜವನ್ನು ಬಿಟ್ಟು ಹೋಗಿದ್ದಾರೆ. ಅವುಗಳಲ್ಲಿ ಕೆಲವೊಂದು ವಿಚಾರ ಗಳನ್ನು ಇಂದಿನ ವಿಸ್ತಾರವಾದ, ಬದಲಾದ, ಬದಲಾಗುತ್ತಿರುವ ಐತಿಹಾಸಿಕ ಪರಿಸರದ ಸಂದರ್ಭಕ್ಕೆ ಸರಿಹೊಂದುವಂತೆ ಪ್ರಸ್ತುತತೆಯ ವರ್ಧನೆಗಾಗಿ ಪುನರ್ಘಟಿಸಬೇಕಾಗಿದೆ.

ಈ ಒಂದು ಹಿನ್ನೆಲೆಯಲ್ಲಿ ಬೌದ್ಧಧರ್ಮ ಮತ್ತು ಮಾರ್ಕ್ಸನ ವರ್ಗಹೋರಾಟ ವನ್ನು ಮಾಧ್ಯಮವಾಗಿಸಿ, ಸಾಮಾಜಿಕ ಬದಲಾವಣೆಯನ್ನು ತರುವ ಐತಿಹಾಸಿಕ ಸಾಧ್ಯತೆಯಲ್ಲಿ ಮೆಚ್ಚತಕ್ಕ ಪ್ರಯತ್ನವನ್ನು ಮಾಡಲಾಗಿದೆ.

ಬೌದ್ಧಧರ್ಮ, ಮಾರ್ಕ್ಸ್‌ನ ವರ್ಗಹೋರಾಟ ಮತ್ತು ಸಾಮಾಜಿಕ ಸಮಾನತೆ :

ಸಮಾನತೆ – ಸ್ವಾತಂತ್ರ್ಯಗಳು ಫ್ರೆಂಚ ಕ್ರಾಂತಿಯ ಮೂಲತತ್ವಗಳಾಗಿದ್ದವು. ಇವು ಅಂಬೇಡಕರರು ಕಾಣಬಯಸಿದ ನವಸಮಾಜ ಮತ್ತು ಸಂಸ್ಕೃತಿಯ ದರ್ಶನಗಳಾಗಿದ್ದವು. ಪ್ರಸ್ತುತ ಸಮಾಜದ ಸಾಮಾಜಿಕ ವಿಧಾನದಲ್ಲಿ ಯಾವುದೇ ಕಡಿತ ಇಲ್ಲದಂತೆ ಸಂಪೂರ್ಣ ರೂಪಾಂತರವೇ ನಿಶ್ಚಿತವಾಗಿ ಕ್ರಾಂತಿಯಾಗಿತ್ತು. ಅಂಬೇಡಕರ ಸಾಮಾಜಿಕ ಬದಲಾವಣೆಯ ತತ್ವವನ್ನು ಸರಿಯಾಗಿ ಅರ್ಥೈಸಿಕೊಳ್ಳಲು, ಅವರು ನಿರೂಪಿಸಿದ ಮತ್ತು ಬಳಸಿದ ವಿಧಾನಗಳಾವವು ? ಅವರು ಬದಲಾವಣೆಗೊಳಪಡಿಸುವ ಪ್ರಸ್ತುತ ಸಮಾಜ ಸ್ವರೂಪದಲ್ಲಿ ಅದರ ಪ್ರಸ್ತುತತೆ ಯಾವ ಬಗೆಯದು ? ಅವರು ನಿರೂಪಿಸಿದ ವಿಧಾನದ ಮೂಲಕ ಅವರು ಕಾಣಬಯಸಿದ ಸಮಾಜದ ಸಾಕಾರತೆಯಲ್ಲಿ ಐತಿಹಾಸಿಕ ಸಾಧ್ಯತೆಗಳೇನು ? ಎಂಬೆಲ್ಲ ಸಮಸ್ಯೆಗಳನ್ನು ಗಾಢವಾಗಿ ಗಮನಿಸುವುದು ತೀರ ಅವಶ್ಯಕ.

ಬೌದ್ಧಧರ್ಮ ಮತ್ತು ಮಾರ್ಕ್ಸ್‌ನ ವರ್ಗಹೋರಾಟ ಅಂಬೇಡಕರರು ಕಾಣಬಯಸಿದ ಸಮಾಜನಿರ್ಮಾಣದ ಮಾಧ್ಯಮವಾಗಿ ಎಷ್ಟು ಪ್ರಸ್ತುತ ಎಂಬುದನು ತೂಗಿ ನೋಡುವಲ್ಲಿ ಪ್ರಸ್ತುತ ಲೇಖನ ಕೇಂದ್ರೀಕೃತವಾಗಿದೆ.

ವರ್ಗಶೋಷಣೆಯಿಂದ ಹುಟ್ಟಬಹುದಾದ ಸಾಮಾಜಿಕ, ಆರ್ಥಿಕ ಸಮಸ್ಯೆಗಳಿಗೆ ಧಾರ್ಮಿಕ ಪರಿಹಾರವಿದೆಯೆ ? ಎಂಬ ಪ್ರಶ್ನೆಗೆ ಇದೆ ಎನ್ನುತ್ತಾರೆ ಅಂಬೇಡ್ಕರರು. ಇದೆಯೆನ್ನುವುದು ಮಾತ್ರವಲ್ಲ, ಶೋಷಣೆಗೊಳಗಾದವರು ಕ್ರಾಂತಿಕಾರಕ ಹೋರಾಟದಿಂದ ಪಡೆಯುವ ಪರಿಹಾರಕ್ಕಿಂತಲೂ ಧರ್ಮದ ಮುಖಾಂತರ ಪಡೆಯುವ ಪರಿಹಾರ ಉತ್ತಮವೂ ದೀರ್ಘಕಾಲವೂ ಆಗಿರುತ್ತದೆಂಬುದನ್ನು ಖಚಿತಪಡಿಸುತ್ತಾರೆ.

ಅಂಬೇಡಕರರ ಸಾಮಾಜಿಕ ಬದಲಾವಣೆಯ ಹೋರಾಟ ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳುವ ಪೂರ್ವದಲ್ಲಿ, ಧರ್ಮದ ಕಲ್ಪನೆ ಮತ್ತು ಮಾರ್ಕ್ಸ್‌ನ ವರ್ಗ ಹೋರಾಟ ಕಲ್ಪನೆಯನ್ನು ತಿಳಿದುಕೊಳ್ಳುವುದು ಅವಶ್ಯಕ. ಬೌದ್ಧಧರ್ಮದ ವಿಶೇಷ ಅಂಶಗಳನ್ನು ಅಂಬೇಡಕರರು ಇಪ್ಪತ್ತೈದಾಗಿ ಪಟ್ಟಿ ಮಾಡಿದ್ದಾರೆ. ಪ್ರಸ್ತುತ ಲೇಖನಕ್ಕೆ ಕೆಳಗಿನವು ಅತಿ ಮುಖ್ಯ ಅಂಶಗಳಾಗಿವೆ :

೧. ಮುಕ್ತ ಸಮಾಜಕ್ಕೆ ಧರ್ಮ ಅವಶ್ಯಕ.

೨. ಧರ್ಮವು ವ್ಯಕ್ತಿಯ ಜೀವನ ಮತ್ತು ವಾಸ್ತವತೆಯನ್ನು ಕೂಡಿಸುವ ಕೊಂಡಿಯಾಗಿರಬೇಕೇ ವಿನಃ ಆತ್ಮ, ಸ್ವರ್ಗ, ಮರ್ತ್ಯ, ದೇವರನ್ನು ಕುರಿತು ಸಿದ್ಧಾಂತಗಳನ್ನು ಒದಗಿಸುವ ಕಲ್ಪನೆಯಾಗಬಾರದು.

೩. ದೇವರನ್ನು ಧರ್ಮದ ಕೇಂದ್ರವಾಗಿಸುವುದು ತಪ್ಪು.

೪. ವ್ಯಕ್ತಿ ಮತ್ತು ಸಾತ್ವಿಕತೆ ಧರ್ಮದ ಕೇಂದ್ರವಾಗಿರಬೇಕು.

೫. ಧರ್ಮದ ಕಾರ್ಯ ಜಗತ್ತಿನ ನಿರ್ಮಾಣ ಮತ್ತು ಅದನ್ನು ಸುಖಮಯ ವಾಗಿರಿಸುವುದೇ ಹೊರತು, ಜಗತ್ತಿನ ಆದಿ ಅಂತ್ಯಗಳ ವಿವರಣೆಯಲ್ಲ.

೬. ಆಸಕ್ತಿಯ ವಿಚ್ಛೇದತೆಯೇ ಜಾಗತಿಕ ಅಶಾಂತಿಗೆ ಕಾರಣ. ಇದನ್ನು ನಿವಾರಿಸುವ ಏಕೈಕ ಉಪಾಯ ಅಷ್ಟಾಂಗಮಾರ್ಗದ ಆಚರಣೆ.

೭. ಖಾಸಗಿ ಆಸ್ತಿಯ ಒಡೆತನವು ಒಂದು ವರ್ಗಕ್ಕೆ ಅಧಿಕಾರವನ್ನೂ ಇನ್ನೊಂದು ವರ್ಗಕ್ಕೆ ದುಃಖವನ್ನೂ ಉಂಟುಮಾಡುತ್ತವೆ.

೮. ಯಾವುದೂ ತಪ್ಪಿಗೊಳಗಾಗದು. ಯಾವುದೂ ನಿರಂತರವಾಗಿ ಕಟ್ಟಳೆ ಯಾಗಿರುವುದಿಲ್ಲ. ಪ್ರತಿಯೊಂದು ವಿಚಾರಣೆಗೆ, ಪರೀಕ್ಷೆಗೆ ಒಳಪಡು ತ್ತವೆ.

೯. ಸನಾತನವೂ, ಶಾಶ್ವತವೂ ಆದುದು ಯಾವುದೂ ಇಲ್ಲ. ಪ್ರತಿಯೊಂದು ವಸ್ತುವೂ ಬದಲಾವಣೆಗೆ ಒಳಗಾಗುತ್ತದೆ. ಇರುವುದು ಎಂದರೆ ಆಗುವುದು ಎಂದರ್ಥ.

ಇನ್ನಿತರ ಧರ್ಮಗಳಿಗಿಂತ ಬೌದ್ಧಧರ್ಮವು ವೈಚಾರಿಕವಾಗಿದೆ ಎಂಬುದನ್ನು ಮೇಲಿನ ಅಂಶಗಳು ಹೆಚ್ಚು ವಿಷದಪಡಿಸುತ್ತವೆ. ಅಶಾಂತಿಗೆ ಪ್ರಮುಖವಾದ ಕಾರಣ ಆಸ್ತಿಯ ಖಾಸಗಿ ಒಡೆತನ. ಈ ಧರ್ಮದ ಮೂಲಕ ಜಗತ್ತನ್ನು ಪುನರ್ನಿ ರ್ಮಿಸಬಹುದು. ಖಾಸಗಿ ಆಸ್ತಿಯ ಒಡೆತನದಿಂದ ಹುಟ್ಟಬಹುದಾದ ಸಮಸ್ಯೆ ಗಳನ್ನು ಬೌದ್ಧಧರ್ಮಸ್ವೀಕರಿಸುವುದರಿಂದ ಹೋಗಲಾಡಿಸಬಹುದು.

ಇತಿಹಾಸ ಮತ್ತು ಐತಿಹಾಸಿಕ ಚಲನೆಯನ್ನು ಕುರಿತ ಮಾರ್ಕ್ಸ್‌ನ ಪರಿಕಲ್ಪನೆ ಯನ್ನು ಕುರಿತು ಬರೆಯುತ್ತ ಅಂಬೇಡಕರರು ಕೆಳಗಿನ ಅಂಶಗಳನ್ನು ಪಟ್ಟಿ ಮಾಡಿ ಹೇಳಿದ್ದಾರೆ.

೧. ಜಾಗತಿಕ ಪುನರ್ನಿರ್ಮಾಣವು ತತ್ವಶಾಸ್ತ್ರದ ಉದ್ದೇಶವಾಗಿರಬೇಕೇ ವಿನಃ ವಿಶ್ವದ ಉಗಮ ಮತ್ತು ಬೆಳವಣಿಗೆಯ ವಿವರಣೆ ಅಲ್ಲ.

೨. ಇತಿಹಾಸಪಥವನ್ನು ಸಾಕಾರಗೊಳಿಸುವ ಅಂಶಗಳು ಮೂಲತಃ ಆರ್ಥಿಕ ಸ್ವರೂಪದ್ದಾಗಿರುತ್ತವೆ.

೩. ಸಮಾಜವು ಒಡೆಯರು ಮತ್ತು ಸೇವಕರು ಎಂದು ಎರಡು ಭಾಗಗಳಾಗಿ ವಿಭಜಿಸಲ್ಪಟ್ಟಿದೆ.

೪. ಈ ಎರಡು ವರ್ಗಗಳ ನಡುವೆ ವರ್ಗಸಂಘರ್ಷ ಎಂದಿಗೂ ನಡದೇ ಇದೆ.

೫. ನೌಕಾರರ ಬೆವರಿನ ಫಲವಾದ ಹೆಚ್ಚಿನ ಆದಾಯವನ್ನು ದುರುಪಯೋಗ ಪಡಿಸಿಕೊಳ್ಳುವುದರ ಮೂಲಕ ಒಡೆಯರು ಎಂದಿನಿಂದಲೂ ನೌಕರರನ್ನು ಶೋಷಿಸುತ್ತಿದ್ದಾರೆ.

೬. ಉತ್ಪಾದನೆಯ ಮೂಲವನ್ನು ರಾಷ್ಟ್ರೀಕರಣಗೊಳಿಸುವುದರ ಮೂಲಕ ಅಂದರೆ ಖಾಸಗಿ ಒಡೆತನವನ್ನು ರದ್ದುಪಡಿಸುವುದರ ಮೂಲಕ ಈ ಶೋಷಣೆಯನ್ನು ಅಂತ್ಯಗೊಳಿಸಬಹುದಾಗಿದೆ.

೭. ಈ ಶೋಷಣೆಯು ನೌಕರರನ್ನು ಹೆಚ್ಚು ಹೆಚ್ಚು ಬಡವರನ್ನಾಗಿಸುತ್ತದೆ.

೮. ವೃದ್ಧಿಸುತ್ತಿರುವ ನೌಕರರ ಬಡತನವು ಅವರಲ್ಲಿ ಚಳುವಳಿಯ ಹುಮ್ಮಸ್ಸನ್ನು ಉಂಟುಮಾಡುತ್ತದೆ. ಅಲ್ಲದೆ ವರ್ಗಸಂಘರ್ಷವನ್ನು ವರ್ಗ ಹೋರಾಟವನ್ನಾಗಿ ಪರಿವರ್ತಿಸುತ್ತದೆ.

೯. ಒಡೆಯರ ಮೇಲೆ ನೌಕರರ ಆಧಿಕ್ಯತೆಯುಂಟಾಗುತ್ತದೆ. ನೌಕರರು ದೇಶವನ್ನು ಅಧೀನಪಡಿಸಿಕೊಳ್ಳುತ್ತಾರೆ. ತಮ್ಮ ಆಳ್ವಿಕೆಯನ್ನು ಸ್ಥಾಪಿಸುತ್ತಾರೆ. ಇದನ್ನು ಆತ ನೌಕರರ (ದುಡಿಯುವವರ) ಸಾರ್ವಭೌಮತ್ವ ಎಂದು ಕರೆಯುತ್ತಾನೆ.

೧೦. ಈ ಅಂಶಗಳನ್ನು ನಿಯಂತ್ರಿಸಲಾಗದು. ಹೀಗಾಗಿ ಸಮಾಜವಾದ ಅನಿವಾರ್ಯವಾಗುತ್ತದೆ.

ಬೌದ್ಧಧರ್ಮ ಮತ್ತು ಮಾರ್ಕ್ಸ್ ಸಿದ್ಧಾಂತಗಳ ನಡುವೆ ಸಾಮಾಜಿಕ ಗುರಿಯಲ್ಲಿರುವ ಸಾಮ್ಯತೆಯನ್ನು ಗುರುತಿಸುವುದಷ್ಟೇ ಅಲ್ಲದೆ, ವರ್ಗಸಂಘರ್ಷ ಮತ್ತು ಇದರಿಂದ ಫಲಿತವಾಗುವ ದುಃಖ ಮತ್ತು ಸಾಮಾಜಿಕ ಜೀವನದ ಸಂಕಷ್ಟಗಳಿಗೆ ಕಾರಣಗಳಲ್ಲಿ ಅತ್ಯಂತ ಪ್ರಮುಖವಾದ ಖಾಸಗಿ ಆಸ್ತಿ ಒಡೆತನವನ್ನು ಗುರುತಿಸುವಲ್ಲಿ ಬೌದ್ಧಧರ್ಮ ಮತ್ತು ಮಾರ್ಕ್ಸ್ ಸಿದ್ಧಾಂತಗಳ ವಿಶ್ಲೇಷಣಾ ವಿಧಾನ ಸಾಮ್ಯತೆಯನ್ನು ಗುರುತಿಸುವ ಮಟ್ಟಕ್ಕೆ ವಿಚಾರಕ್ಕಿಳಿಯುತ್ತಾರೆ. ಸಮಾನತೆಯ ಆಧಾರದ ಮೇಲೆ ನಿರ್ಮಿಸ ಬಯಸುವ, ಈ ಸಂಘರ್ಷ ಹಾಗೂ ಕೋಟಲೆಗಳಿಂದ ಮುಕ್ತವಾದ

ಸಂಘರ್ಷರಹಿತ ಸಮಾಜಜೀವನ ಕಲ್ಪನೆಯನ್ನು ಹೊಂದಿರುವ ಬೌದ್ಧಧರ್ಮ ಮತ್ತು ಮಾರ್ಕ್ಸ್‌ಸಿದ್ಧಾಂತಗಳೆರಡನ್ನೂ ತೂಗಿ ನೋಡುತ್ತಾರೆ. ವ್ಯಕ್ತಿಯ ನೈತಿಕ ಧೋರಣೆಯನ್ನು ಬದಲಾಯಿಸುವುದರ ಮೂಲಕ ಸ್ವಯಂಪ್ರೇರಣೆಯಿಂದ ತನ್ನ ಮಾರ್ಗವನ್ನು ಅನುಸರಿಸುವಂತೆ ಮಾಡುವುದು ಬೌದ್ಧಧರ್ಮ. ಅಂತೆಯೇ ಮಾರ್ಕ್ಸ್ ಸಿದ್ಧಾಂತ ವಿಧಾನವು ಅಷ್ಟೇ ತಿಳಿಯಾಗಿದೆ, ಸರಳವಾಗಿದೆ, ಜಾಗೃತವಾಗಿದೆ ಎನ್ನುತ್ತ ಮುಕ್ತಾಯ ಮಾಡುತ್ತಾರೆ ಅಂಬೇಡಕರರು.

ಹಾಗಾದರೆ ಇವೆರಡರಲ್ಲಿ ಹೆಚ್ಚು ಪರಿಣಾಮಕಾರಿಯಾದುದು ಯಾವುದು ? ಎಂಬ ಪ್ರಶ್ನೆಗೆ ಉತ್ತರಿಸುತ್ತ "ಒತ್ತಡಪೂರ್ವಕವಾಗಿರುವ ಒಂದು ಸರಕಾರಿ ಮಾಧ್ಯಮ ಮತ್ತು ಮಾನಸಿಕ ಪರಿವರ್ತನೆ ಮಾಧ್ಯಮದ ಒಂದು ಸರಕಾರಿ ಮಾಧ್ಯಮ ಇವೆರಡರಲ್ಲಿ ಒಂದನ್ನು ಆರಿಸಬೇಕಾಗಿದೆ" ಎನ್ನುತ್ತಾರೆ ಅಂಬೇಡಕರರು.

ಮೇಲಿನ ಅಂಶಗಳಿಂದ ತಿಳಿದುಬರುವ ಅಂಶಗಳಿವು : ಅಂಬೇಡಕರರಿಗೆ ಕಮ್ಯುನಿಸ್ಟ್ ಸಿದ್ಧಾಂತದ ಬಗ್ಗೆ, ಕಮ್ಯುನಿಸ್ಟ್ ಸಮಾಜದ ಬಗ್ಗೆ ಹೆಚ್ಚಿನ ಪ್ರಶಂಸೆ ಯಿದೆ. ಆದರೆ ಸರ್ವಾಧಿಕಾರ ಮತ್ತು ಹಿಂಸೆಗೆ ಎಡೆಮಾಡಿಕೊಡುವ ಕಮ್ಯುನಿಸ್ಟ್ ವಿಧಾನದ ಬಗ್ಗೆ ವಿರೋಧವಿದೆ. ಸರ್ವಾಧಿಕಾರತ್ವವಿಲ್ಲದೆ, ಒತ್ತಡ, ಒತ್ತಾಸೆಗಳಿಲ್ಲದೆ ಕಮ್ಯುನಿಸಂ ಉದ್ದೇಶಿಸಿರುವ ಸಮಾನತೆಯ ಕಲ್ಪನೆಯ ಆಧಾರದ ಮೇಲೆ ನಿರ್ಮಿಸಲಾಗುವ ಸಮಾಜವನ್ನು ಬೌದ್ಧಧರ್ಮ ರಚಿಸಬಲ್ಲುದು ಎಂಬ ನಂಬಿಕೆ ಅಂಬೇಡಕರರದು.

ಆದರೆ ಜಾಗತಿಕ ಇತಿಹಾಸವನ್ನು ಗಮನಿಸಿದಾಗ ವರ್ಗಸಂಘರ್ಷವನ್ನು ಅಂತ್ಯ ಗೊಳಿಸಲು ಬೌದ್ಧಧರ್ಮದ ಪರಿಹಾರೋಪಾಯ ಮಾರ್ಗದ ಅಳವಡಿಕೆಗೆ ಅವಕಾಶವೇ ದೊರಕಲಿಲ್ಲ. ಆಳುವವರ್ಗದ ಪೂರ್ಣಪ್ರಮಾಣದ ಹೃತ್ಪರಿವರ್ತನೆ ಮತ್ತು ಮನ ಪರಿವರ್ತನೆ ಆಗಲೇ ಇಲ್ಲ. ಇದೊಂದು ಸೈದ್ಧಾಂತಿಕವಾದ ಭರವಸೆಯಾಗಿತ್ತು. ಆದರೆ ಜಾಗತಿಕ ಇತಿಹಾಸವು ಈ ಎಲ್ಲ ಭರವಸೆಗಳನ್ನೂ ಹುಸಿಗೊಳಿಸಿದೆ. "ಜನವರಿ ೨೬, ೧೯೫೦ ರಂದು ನಾವು ರಾಜಕೀಯ ಸಮಾನತೆಯನ್ನು ಹಾಗೂ ಆರ್ಥಿಕ, ಸಾಮಾಜಿಕ ಅಸಮಾನತೆಯನ್ನು ಪಡೆಯಲಿದ್ದೇವೆ. ಆದಷ್ಟು ಬೇಗ ಇಂತಹ ವೈಪರಿತ್ಯ ವನ್ನು ನಾವು ತೊಡೆದುಹಾಕಬೇಕಿದೆ. ಇಲ್ಲವಾದಲ್ಲಿ ಅಸಮಾನತೆಯಿಂದ ತೊಳಲು ತ್ತಿರುವವರು ರಾಜಕೀಯ ಪ್ರಜಾಪ್ರಭುತ್ವವ್ಯವಸ್ಥೆಯನ್ನೆ ಧೂಳೀಕರಿಸುತ್ತಾರೆ" ಎನ್ನುವಲ್ಲಿ, ಅಂಬೇಡಕರರು ಆತ್ಮಪರಿವರ್ತನೆಯ ಪೂಜನೀಯ ಹೇಳಿಕೆಯಿಂದ ದೂರಸರಿದಂತೆ ಕಾಣುತ್ತದೆ. ಒಂದುವೇಳೆ ಈ ಅಸಮಾನತೆಯನ್ನು ತೊಡೆದು ಹಾಕುವಲ್ಲಿ ವಿಫಲವಾದರೆ, ಈ ಬದಲಾವಣೆಗೆ ಅವಶ್ಯಕವಾದ ಒತ್ತಡದ ಬಳಕೆಯಾಗ

ದಿದ್ದರೆ ಇಡೀ ವ್ಯವಸ್ಥೆಯನ್ನೆ ಧೂಳೀಕರಿಸುವುದು ಅನಿವಾರ್ಯವಾಗುತ್ತದೆ ಎಂಬ ಸೂಚನೆ ಅಂಬೇಡಕರರ ಹೇಳಿಕೆಯಲ್ಲಿ ಕಂಡುಬರುತ್ತದೆ.

ಹೀಗಿದ್ದರೂ ಹಿಂಸೆಯನ್ನು ವರ್ಗಹೋರಾಟದೊಡನೆ ಸಮೀಕರಿಸುವ ಅವರ ದೃಷ್ಟಿಕೋನ, ಚಳುವಳಿ ಮತ್ತು ಕಮ್ಯುನಿಸ್ಟ್ ಸಮಾಜದ ನಿರಂತರ ಸರ್ವಾಧಿಕಾರ ವನ್ನು ಪರೀಕ್ಷಿಸಿ ನೋಡಬೇಕಾಗುತ್ತದೆ.

ಸಾಮಾಜಿಕ ಪ್ರಕ್ರಿಯೆಯಲ್ಲಿ ಅಂಬೇಡಕರರ ಹಿಂಸಾಸಿದ್ಧಾಂತವು ತೀರ ಸರಳ ವಾಗಿದೆ. ಸಾಮಾಜಿಕ ಮೂಲಬದಲಾವಣೆಗಾಗಿ ಇತಿಹಾಸದಲ್ಲಿ ಒಡಮೂಡಿದ, ಮಾರ್ಕ್ಸ್‌ವಾದಿಗಳಿಂದ ಅಳವಡಿಸಲ್ಪಟ್ಟ ಹಿಂಸಾಮಾರ್ಗ ಹಾಗೂ ವರ್ಗಹೋರಾಟದ ಸಮೀಕರಣವು ದೇಶದ ಹಿನ್ನೆಲೆಯಲ್ಲಿ ಇರುವುದಕ್ಕಿಂತ ಬೌದ್ಧಧರ್ಮದ ನೈಜತೆ ಯಿಂದಾಗಿ ಅವರ ಮನದಲ್ಲಿ ಬೇರೂರಿದೆ.

ವರ್ಗಾಧಾರಿತವಾದ ದೇಶವು ತುಳಿತಕ್ಕೊಳಗಾದವರ ಶೋಷಣೆಯ ಉಪಕರಣ ವಾಗಿರುವುದರಿಂದ ಸಹಜವಾಗಿಯೇ ಹಿಂಸೆಯಿಂದ ಕೂಡಿರುತ್ತದೆ. ಅಂತಹ ದೇಶವು ಹಿಂಸೆಯ ಮೇಲೆಯೇ ನಿಂತಿರುತ್ತದೆ. ಅದರ ಅಸ್ತಿತ್ವದ ಯಾವುದೇ ಸವಾಲನ್ನು ಹಿಂಸಾ ಮಾರ್ಗದಿಂದಲೇ ಮೊಟಕುಗೊಳಿಸುತ್ತದೆ. ಹೀಗಾಗಿ ಮಹತ್ತರವಾದ ಸಂದರ್ಭಗಳಲ್ಲಿ ತುಳಿತಕ್ಕೆ ಒಳಗಾದ ವರ್ಗವು ಹಿಂಸೆಗೆ ಮೊರೆಹೋಗುವುದರ ಮೂಲಕ ತಾನು ಒಳಗಾದ ತುಳಿತಕ್ಕೆ ವ್ಯಕ್ತಪಡಿಸುವ ಪ್ರತಿಕ್ರಿಯೆಯಾಗಿರುತ್ತದೆ. "ಹೊಸತನ್ನು ಗರ್ಭೀಕರಿಸಿಕೊಂಡಿರುವ ಯಾವುದೇ ಪುರಾತನ ಸಮಾಜದ ದಾರಿಯೇ ದಬ್ಬಾಳಿಕೆ" ಎಂದು ಮಾರ್ಕ್ಸ್ ಹೇಳುವಾಗ, ಆತ ಕೇವಲ ಪರಿಶೀಲನೆಯನ್ನು ಮಾಡುತ್ತಿದ್ದಾನೆ. ಈವರೆಗಿನ ಬದಲಾವಣೆಗಳು ಮೂಲತಃ ಹಿಂಸಾರಹಿತವಾಗಿ ನಡೆದಿಲ್ಲ ಎಂಬ ವಾಸ್ತ ವತೆಯನ್ನು ಆಧರಿಸಿ ಆತನ ಪರಿಶೀಲನೆಯಿದೆ. ಇದು ಆತನ ಪರಿಶೀಲನೆ ಹೊರತು ಹಿಂಸೆಯ ಪರವಾಗಿ ವಾದವಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕು.

ಇದರಿಂದಾಗಿ ಪರಸ್ಪರ ವಿರುದ್ಧ ವರ್ಗಗಳಿರುವಾಗ, ಒಂದು ವರ್ಗಾಧಾರಿತ ಸಮಾಜ ಮತ್ತು ಅಧಿಕಾರಕ್ಕಾಗಿ ಅನಿವಾರ್ಯ ಹೋರಾಟವಿರುವಾಗ, ಆಳುವ ವರ್ಗ ಸಹಜವಾಗಿಯೇ ಅಧಿಕಾರವನ್ನು ಉಳಿಸಿಕೊಳ್ಳುವ ಸಲುವಾಗಿ ಹೋರಾಟವನ್ನು ಹತ್ತಿಕ್ಕುತ್ತಿರುತ್ತದೆ. ಇದರಿಂದಾಗಿ ಶೋಷಿತವರ್ಗವು ತುಳಿಯುವ ವರ್ಗವನ್ನು ಪ್ರತಿರೋಧಿಸುತ್ತದೆ. ಆಗ ಸಾಮಾಜಿಕ ಪ್ರಕ್ರಿಯೆಯಲ್ಲಿ ಹಿಂಸೆ ನಿರ್ಮಾಣವಾಗುತ್ತದೆ. ಅದರಲ್ಲಿಯೂ ಖಾಸಗಿ ಆಸ್ತಿಯ ನಿಷೇಧದಂತಹ ಮೂಲಭೂತ ಬದಲಾವಣೆಯನ್ನು ಬಯಸಿದಾಗ ಇದು ಹೆಚ್ಚು ತೀವ್ರವಾಗಿ ವ್ಯಕ್ತವಾಗುತ್ತದೆ.

ಸಮಾರೋಪ :

ವಿರೋಧಾಸಕ್ತಿಯ ವರ್ಗಗಳಿರುವಾಗ ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯಲ್ಲಿ ಹಿಂಸೆಯು ಅಂತರ್ಗತವಾಗಿರುತ್ತದೆ. ಆಳುವ ವರ್ಗಸ್ಥಾನವನ್ನು ಕಲ್ಪಿಸಿ ಕೊಟ್ಟಿರುವ ವ್ಯವಸ್ಥೆಯನ್ನು ಕಾಯ್ದುಕೊಳ್ಳುವ ಸಲುವಾಗಿ ಆಳುವ ವರ್ಗ ಸಂಘರ್ಷಕ್ಕಿಳಿಯುತ್ತದೆ. ಈ ಪ್ರಕ್ರಿಯೆಯಲ್ಲಿ ಆಳುವ ವರ್ಗವನ್ನು ಕಿತ್ತೊಗೆಯುವ ಮತ್ತು ತಾನೇ ಆಳುವ ಸ್ಥಾನವನ್ನು ಪಡೆಯುವ ಸಲುವಾಗಿ ಶೋಷಿತವರ್ಗ ಶ್ರಮಿಸುತ್ತದೆ. ತೂಕಬದ್ಧವಾದ ಪರಸ್ಪರರ ನಡುವಿನ ಈ ಚಳುವಳಿಯಲ್ಲಿ ತೊಡಗಿರುವ ಈ ವರ್ಗಗಳಾವುವೂ ಹಿಂಸೆಯನ್ನು ಆಯ್ದುಕೊಳ್ಳುವುದಿಲ್ಲ. ಆದರೆ ಅಧಿಕಾರಕ್ಕೆ ನಡೆಯುವ ಈ ಹೋರಾಟದಲ್ಲಿ ಹಿಂಸೆಯೂ ಅನಿವಾರ್ಯ ಸಹಭಾಗಿಯಾಗುತ್ತದೆ.

ಕಮ್ಯುನಿಸ್ಟ್ ಚಳುವಳಿಯು ಸರ್ವಾಧಿಕಾರವನ್ನು ಅದರಲ್ಲಿಯೂ ನಿರಂತರವಾದ ಸರ್ವಾಧಿಕಾರವನ್ನು ಸ್ಥಾಪಿಸುತ್ತದೆ ಎಂಬುದು ಅಂಬೇಡಕರರ ಮತ್ತೊಂದು ವಿರೋಧ. ಆದರೆ ಮಾರ್ಕ್ಸನ ಪ್ರಕಾರ ನೌಕರವರ್ಗದ ಸರ್ವಾಧಿಕಾರವು ಚಳುವಳಿಯನ್ನು ಬಲಿಷ್ಠಗೊಳಿಸಲಿರುವ ತಾತ್ಕಾಲಿಕ ಸರ್ವಾಧಿಕಾರವೇ ವಿನಃ ಇದು ಎಂದಿಗೂ ನಿರಂತರ ಸರ್ವಾಧಿಕಾರವನ್ನು ಸ್ಥಾಪಿಸುವುದಿಲ್ಲ. ಮಾರ್ಕ್ಸವಾದಿಗಳ ದೇಶೀಯ ಸಿದ್ಧಾಂತದ ಪ್ರಕಾರ ಯಾವುದೇ ಒಂದು ನಿರ್ದಿಷ್ಟ ಸಮುದಾಯದ ಆಸಕ್ತಿಗನುಗುಣವಾಗಿ ವರ್ತಿಸುವ ದೇಶೀಯ ವ್ಯವಸ್ಥೆ ನಿರ್ಮಾಣವಾಗುವ ವಾಸ್ತವತೆ ಉಂಟಾಗುತ್ತಲೇ ಇದು ಇಲ್ಲವಾಗುತ್ತದೆ. ಅಂದರೆ ವರ್ಗರಹಿತ ಸಮಾಜದಲ್ಲಿ ವ್ಯವಸ್ಥೆಯ ಅಸ್ತಿತ್ವಕ್ಕೆ ಆಧಾರವೇ ಇರಲಾರದು. ವರ್ಗಾಧರಿತ ವ್ಯವಸ್ಥೆ ಇಲ್ಲವಾಗುತ್ತಿದ್ದಂತೆಯೇ ನೂತನವಾದ ಸಾಮಾಜಿಕ ಹಾಗೂ ವ್ಯಕ್ತಿ ನಿಯಂತ್ರಣ ವಿಧಾನ ನಿರ್ಮಾಣವಾಗುತ್ತದೆ. ಇದು ಪರಿಣಾಮಕಾರಿಯಾದ ಮೌಲ್ಯ ಹಾಗೂ ವೈಚಾರಿಕತೆಯಿಂದ ಪ್ರೇರಿತವಾದ ವ್ಯಕ್ತಿಗತ ಸ್ವಯಂಸೇವಾಭಾವನೆಯನ್ನು ಕೇಂದ್ರೀಕರಿಸಿಕೊಂಡಿರುತ್ತದೆ.

ನಂತರ ಹುಟ್ಟಬಹುದಾದ ಎಲ್ಲ ಪ್ರಶ್ನೆಗಳಿಗೆ ಮಾರ್ಕ್ಸ ಸಿದ್ಧಾಂತದಲ್ಲಿ ಉತ್ತರವಿರಲಿಕ್ಕಿಲ್ಲ. ಇದು ಸಹಜವೂ ಆಗಿದೆ. ಲೆನಿನ್ ಮಾರ್ಕ್ಸನ ವಿಶ್ಲೇಷಣೆಯನ್ನು ಕುರಿತು ಬರೆಯುತ್ತ "ನಿರ್ದಿಷ್ಟ ಸಂದರ್ಭಕ್ಕೆ ಖಚಿತವಾದ ವಿಶ್ಲೇಷಣೆ" ಎನ್ನುತ್ತಾರೆ.

ಜಾಗತಿಕ ಇತಿಹಾಸದ ಬೆಳವಣಿಗೆಯಲ್ಲಿ ವರ್ಗ ನಿರ್ಮಾಣಕ್ಕೆ ಎಡೆಮಾಡುವ ಸಂಕೀರ್ಣ, ಆರ್ಥಿಕ–ಸಾಮಾಜಿಕ ಅಂಶಕ್ಕೆ ಸಂಬಂಧಿಸಿದಂತೆ ಸೂಕ್ತ ಕಾರಣಗಳನ್ನು ಕಾಣಲಾಗದು. ಅವುಗಳ ವೈದೃಶ್ಯ ಸ್ವರೂಪವನ್ನು ತಿಳಿದಲ್ಲಿ ಧರ್ಮದ ಶಾಂತಿಪೂರ್ವಕ ಕೋರಿಕೆಯ ಮೂಲಕ ಅದನ್ನು ನಿವಾರಿಸಬಹುದು. ತದನಂತರದಲ್ಲಿ ಸಮಾನತೆಯ ಆಧರಿಸಿದ ಸಮಾಜವನ್ನು ರೂಪಿಸಬಹುದು. ವರ್ಗಹೋರಾಟ

ವೆಂಬುದು ಅನಿವಾರ್ಯ ಇತಿಹಾಸ. ನಮ್ಮನ್ನು ಹೀಗಾಗಿಯೇ ಮುಖಾಮುಖಿಯಾಗಿಸುತ್ತದೆ.

ಸಮಾನತೆಯ ಆಧಾರದ ಮೇಲೆ ವ್ಯಕ್ತಿನಿಷ್ಠವಾದ ವ್ಯಕ್ತಿತ್ವವನ್ನು ಸುವ್ಯವಸ್ಥಿತಗೊಳಿಸಲು ಮಾಡಿದ ಅತ್ಯಂತ ವೈಚಾರಿಕ ಸ್ವರೂಪದ, ಮನುಕುಲದ ಬೆಳವಣಿಗೆಗೆ ಅತ್ಯುತ್ತಮ ಮಾರ್ಗಗಳಲ್ಲಿ ಒಂದಾದ ಧರ್ಮದ ಪಾತ್ರವನ್ನು ನಿರಾಕರಿಸುವುದು ಮುಗ್ಧಸಿದ್ಧಾಂತವಾದೀತು. ಧರ್ಮದ ಮೂಲಕ ಅಂಬೇಡಕರರು ತರಬಯಸಿದ ಮಹತ್ವಪೂರ್ಣ ಬದಲಾವಣೆಯ ಪರವಾದ ಅವರ ವಾದ ಕಾರ್ಯರೂಪಕ್ಕೆ ಬರಲೇ ಇಲ್ಲ. ಆದಾಗ್ಯೂ ಈ ವಾದವನ್ನು ಶೋಷಿತ ವರ್ಗವು ವರ್ಗಹೋರಾಟದ ಸಂಘಟನೆಯ ವಿರುದ್ಧ ಬಳಸಬಹುದು.

"ತಮ್ಮೆಲ್ಲ ಶಕ್ತಿಯನ್ನು ಹಿಂದೆಪಡೆದ ನಂತರ ಅಂತಿಮ ಸಮಯದಲ್ಲಿ ಕಮ್ಯುನಿಸಂ ಅನ್ನು ನಿಯಂತ್ರಿಸಲು ಬೌದ್ಧಧರ್ಮವನ್ನು ಕಮ್ಯುನಿಸ್ಟರು ಬಳಸಬಹುದು" ಎಂದು ಅಂಬೇಡಕರರು ತಮ್ಮ ಟಿಪ್ಪಣಿಯೊಂದರಲ್ಲಿ ಅಭಿಪ್ರಾಯಪಡುತ್ತಾರೆ. ಭಾರತೀಯ ಜನಸಮೂಹಕ್ಕೆ ಸಾಕಷ್ಟು ಸುಳುಹುಗಳನ್ನು ಇದು ಗರ್ಭೀಕರಿಸಿಕೊಟ್ಟಿದೆ. ಬೌದ್ಧಧರ್ಮವು ತನ್ನ ವೈಚಾರಿಕ ವ್ಯವಸ್ಥೆಯಿಂದಾಗಿ ಐತಿಹಾಸಿಕ ರಚನಾ ವಿನ್ಯಾಸದಿಂದ ದೂರವಾದರೂ, ಕೆಲವು ಮೂಲಭೂತವಾದ ವ್ಯಕ್ತಿಕ್ರಿಯೆಗಳಿಗೆ ನೇರವಾಗಿ ಸ್ಪಂದಿಸುವುದರಿಂದ, ಇದನ್ನು ಆಚರಿಸುವವರಲ್ಲಿ ಸಮಾನತೆಯನ್ನು ರೂಪಿಸುವುದರಿಂದ, ಇನ್ನುಳಿದ ಅನೇಕ ಧರ್ಮಗಳಲ್ಲಿರುವಂತೆ, ಅನೇಕ ನೈಸರ್ಗಿಕ ಶಕ್ತಿಗೆ ಮೀರಿದ ನಂಬಿಕೆಗಳಿಲ್ಲದಿರುವ ಕಾರಣ, ಚಳುವಳಿಯೋತ್ತರ ಘಟ್ಟದಲ್ಲಿ ಶೋಷಣೆಗೆ ಮೂರ್ತ ಮೂಲಗಳೆಲ್ಲವೂ ನಾಶವಾದ ಕಾರಣ, ಶೋಷಣೆರಹಿತ ಸಮಾಜಕ್ಕೆ ಅನುವಾಗುವ ಮಾನಸ್ಥಿತಿಯನ್ನು ಪುನರ್ರಚಿಸಲು, ಪುರಾತನ ಸಮಾಜದ, ಸಾಯುತ್ತಿರುವ ಧೋರಣೆ ಹಾಗೂ ಮೌಲ್ಯಗಳಿಗೆ ಅವಶೇಷವಾಗುವ ವ್ಯಕ್ತಿಯ ಸೈದ್ಧಾಂತಿಕ ಬೆಳವಣಿಗೆಗೆ ಒಂದು ಮುಖ್ಯ ಆಧಾರವಾಗಿ ಸೇವೆ ಸಲ್ಲಿಸಲು ಸೂಕ್ತವಾಗುತ್ತದೆ.

ಬೌದ್ಧಧರ್ಮತತ್ವಗಳಲ್ಲಿ ಅತಿ ಪ್ರಮುಖವಾದ, ಸಾಮಾಜಿಕ, ಸಾಮೂಹಿಕ ಆಸಕ್ತಿಯ ಸಲುವಾಗಿ ವೈಯಕ್ತಿಕ ಆಸಕ್ತಿಗಳನ್ನು ಹತ್ತಿಕ್ಕುವ ಸಾಮೂಹಿಕ ಜಾಗ್ರತಿಯ ತಳಹದಿಯ ಮೇಲೆ, ವ್ಯಕ್ತಿಗತ ಧೋರಣೆಯನ್ನು ತಾತ್ವಿಕವಾಗಿ ಪುನರ್ರಚನೆಗೊಳಪಡಿಸುವ ಚಳುವಳಿಯೋತ್ತರ ಪ್ರಕ್ರಿಯೆಯಲ್ಲಿ ಬೌದ್ಧಧರ್ಮವನ್ನು ಸಹಭಾಗಿಯಾಗಿಸಬಹುದು.

ರಷ್ಯ ಹಾಗೂ ಇನ್ನಿತರ ಕೆಲವು ರಾಷ್ಟ್ರಗಳಲ್ಲಿ ಸಾಮೂಹಿಕ ಜಾಗ್ರತಿಯನ್ನು ಜನರಲ್ಲಿ ಮೂಡಿಸುವಲ್ಲಿನ ವಿಫಲತೆಯೇ ಈ ದೇಶಗಳಲ್ಲಿ ಸಮಾಜವಾದಿ ಜೀವನವು ನಶಿಸಲು ಕಾರಣಗಳಲ್ಲಿ ಒಂದು ಎಂಬುದಕ್ಕೆ ಪುಷ್ಟಿನೀಡುತ್ತದೆ.

ಆದ್ದರಿಂದ ಚಳುವಳಿಯೋತ್ತರ ಯುಗಕ್ಕೆ ಅವಶ್ಯಕವಾದ ನೈತಿಕ, ಆತ್ಮವಿಶ್ವಾಸದ ಹಾಗೂ ತಾತ್ವಿಕ ಬೆಳವಣಿಗೆಗೆ ಅವಶ್ಯಕವಾದ ಪಾತ್ರವನ್ನು ತನ್ನ ವೈಚಾರಿಕ ಗುಣಗಳಿಂದಾಗಿ ಬೌದ್ಧಧರ್ಮವು ನಿರ್ವಹಿಸಬಲ್ಲುದು.

Primary Sources & Reference

Vasant Moon (Ed.) : Dr. Baba Saheb Ambedkar; Writings and spceches, Education Department Government of Maharashtra, Bombay 1987, Vol. 1, 2 and 3.

Kuber W. N. : Dr. Ambedkar; A Critical Study, People's Publishing House, Bombay 1973

Aplekar H. : The Nature of Democracy, Freedom and Revolution, Nationl Book Agency Private Ltd., Calcutta 1967.

Lenin V. : The State and Revolution, Progrenn Publishers, Moscow 1977.

Marx K. : Das Capital Progrenn Publishers, Moscow 1960 Vol. 1.

● ●

ಡಾ. ಅಂಬೇಡಕರ : ಅರ್ಥೈಸಿಕೊಳ್ಳುವ ಒಂದು ಪ್ರಯತ್ನ

● ದಯಾನಂದ ಮಾನೆ

ಡಾ. ಬಾಬಾಸಾಹೇಬ ಅಂಬೇಡ್ಕರರು ಇಪ್ಪತ್ತನೆಯ ಶತಮಾನದ ವಿಶ್ವದ ಬುದ್ಧಿಜೀವಿಗಳ ಸಾಲಿಗೆ ಸೇರಿದ ಅಗ್ರಪಂಕ್ತಿಯ ಮಹಾನ್ ಚಿಂತಕ. ಅವರ ಅಗಾಧ ಪಾಂಡಿತ್ಯ, ಪಾಶ್ಚಿಮಾತ್ಯ ಶಿಕ್ಷಣ ಮತ್ತು ದೀನದಲಿತರ ಬಗ್ಗೆ ಇರುವ ಅಪಾರ ಕಾಳಜಿ ಅವರನ್ನು ಸಾಮಾಜಿಕ ಕ್ರಾಂತಿಕಾರಿಯನ್ನಾಗಿ ಮಾರ್ಪಾಟು ಮಾಡಿತು. ಡಾ. ಅಂಬೇಡ್ಕರರು ಹುಟ್ಟುಹೋರಾಟಗಾರರು, ಸಂಘಟನಕಾರರು ಮತ್ತು ಅಪ್ರತಿಮ ದೂರದರ್ಶಿತ್ವವುಳ್ಳ ವ್ಯಕ್ತಿಯಾಗಿದ್ದರು. ಜೀವನದುದ್ದಕ್ಕೂ ಅಸಮಾನತೆ ಮತ್ತು ಅನ್ಯಾಯದ ವಿರುದ್ಧ ಸಿಡಿದೆದ್ದವರು. ಅಂದು ಅಂಬೇಡ್ಕರ ಅನ್ಯಾಯ ಮತ್ತು ದಮನಕಾರಿ ಶಕ್ತಿಗಳ ವಿರುದ್ಧ ಎಬ್ಬಿಸಿದ ಬಂಡಾಯದ ಕೂಗು, ಇಂದು ಪ್ರತಿಯೊಬ್ಬ ಶೋಷಿತನಲ್ಲೂ ಪ್ರತಿಧ್ವನಿಸುತ್ತಿದೆ. ಅವರು ತಮ್ಮ ಜೀವಿತದ ಕಾಲದಲ್ಲಿ ಪ್ರತಿಯೊಂದು ಕ್ಷಣವನ್ನು ದಲಿತರ ವಿಮೋಚನೆಗಾಗಿ ಉಪಯೋಗಿಸುತ್ತಿದ್ದರು. ಯಾವುದೇ ಒಂದು ರಾಜಕೀಯ ಪಕ್ಷ ಅಥವಾ ಮಹಾತ್ಮನಿಂದ ಒಂದು ಸಮಾಜದ ಅಥವಾ ವ್ಯಕ್ತಿಯ ಪ್ರಗತಿ ಸಾಧ್ಯವಿಲ್ಲ. ಪ್ರತಿಯೊಬ್ಬರೂ ಸಹ ತಮ್ಮನ್ನು ಬಂಧಿಸಿಟ್ಟ ಸಂಕೋಲೆಗಳನ್ನು ಕಿತ್ತೊಗೆಯಲು ಸಂಘಟಿತ ಹೋರಾಟ ಅವಶ್ಯವೆಂದು ಪ್ರತಿಪಾದಿಸುತ್ತಿದ್ದರು.

ಡಾ. ಅಂಬೇಡ್ಕರ ರೋಗಗ್ರಸ್ತ ಹಿಂದೂ ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯ ವಿರುದ್ಧ ತಮ್ಮ ಧ್ವನಿಯನ್ನು ಎತ್ತಿ ಅವುಗಳ ನ್ಯೂನತೆಯನ್ನು ಸರಿಪಡಿಸಲು ಸತತವಾಗಿ ಪರಿಶ್ರಮಿಸಿದವರು. ಅವರನ್ನು "ಕ್ರಾಂತಿಯ ಸಂಕೇತ" (Symbol of Revolt) ಎಂದು ಭಾರತೀಯ ಮತ್ತು ಪಾಶ್ಚಿಮಾತ್ಯ ಸಮಾಜ ವಿಜ್ಞಾನಿಗಳು ಕರೆದದ್ದುಂಟು. ಅವರ ವ್ಯಕ್ತಿತ್ವ ಮತ್ತು ಕ್ರಾಂತಿಕಾರಕ ವಿಚಾರಗಳು ಮೇಲೆ ಕೆಲವು ಅಂಶಗಳು ಸಾಕಷ್ಟು ಪರಿಣಾಮ ಬೀರಿವೆ. ೧. ೧೮೬೫ರ ಅಮೇರಿಕ ಸಂಯುಕ್ತ ಸಂಸ್ಥಾನದ ಸಂವಿಧಾನದ ೧೪ ನೇಯ ತಿದ್ದುಪಡಿ ಅಮೇರಿಕದಲ್ಲಿ ನಿಗ್ರೋಗಳಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಾನತೆ ಕೊಟ್ಟಂತೆ, ಭಾರತದಲ್ಲಿಯ ಕೋಟ್ಯಾಂತರ ದಲಿತರಿಗೂ ಸಮಾನತೆಯ ಹಕ್ಕನ್ನು ಭಾರತದ ಸಂವಿಧಾನದಲ್ಲಿ ತರಲು ಶ್ರಮಿಸಿದರು. ೨. ೧೯ನೇಯ ಶತಮಾನದ

ಆದಿಯಲ್ಲಿ ಅಮೇರಿಕದ ಕರಿಯರ ಶೈಕ್ಷಣಿಕ ಪ್ರಸಾರಕ್ಕಾಗಿ ಬೂಕರ್ ಟಿ. ವಾಷಿಂಗ್‌ಟನ್ ಎಂಬವರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಸ್ವತಃ ಗಣಿ ಕಾರ್ಮಿಕನಾದ ಬೂಕರ್ ಟಿ. ವಾಷಿಂಗ್‌ಟನ್ ಕಾಲುನಡಿಗೆಯಿಂದಲೇ ನಿಗ್ರೋ ಕಾರ್ಮಿಕರನ್ನು ಸಂಘಟಿಸಿ, ನಿಗ್ರೋಗಳ ಪ್ರಗತಿಗೆ ಶಿಕ್ಷಣವೇ ಸೂಕ್ತ ಪರಿಹಾರವೆಂದು ಮನದಟ್ಟುಮಾಡಿ, ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸುವುದರ ಮುಖಾಂತರ ಅವರಲ್ಲಿ ವೈಚಾರಿಕ ಕ್ರಾಂತಿಯನ್ನು ತಂದ ಮಹಾನುಭಾವನಾಗಿದ್ದಾನೆ. ಅದರಂತೆ ಡಾ. ಬಾಬಾ ಸಾಹೇಬ ಅಂಬೇಡ್ಕರರೂ ಪೀಪಲ್ಸ್ ಎಜ್ಯುಕೇಶನ್ ಸೊಸೈಟಿಯ ಅಡಿಯಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದರು. ೩. ಮಹಾತ್ಮಾ ಜೋತಿಬಾ ಫುಲೆ ಮೊದಲ ಸಾಮಾಜಿಕ ಕ್ರಾಂತಿಯ ಪಿತಾಮಹ, ಅವರ ಚಳುವಳಿಯಿಂದ ಅಂಬೇಡ ಕರರು ಪ್ರೇರಿತರಾದರು. ೪. ಪಾಶ್ಚಿಮಾತ್ಯ ಸಾಮಾಜಿಕ ಮತ್ತು ರಾಜಕೀಯ ಮೌಲ್ಯಗಳ ಪ್ರಭಾವ ಅಂಬೇಡ್ಕರರ ಮೇಲೆ ಸಾಕಷ್ಟಾಗಿದೆ. ೫. ಬಾಬಾಸಾಹೇಬ ಸ್ವತಃ ಅಸ್ಪೃಶ್ಯನಾಗಿ, ಎಲ್ಲ ನೋವುಗಳನ್ನು ಅನುಭವಿಸಿದರು. ಇಂತಹ ನೋವುಗಳು ನನ್ನ ಮುಂದಿನ ಜನಾಂಗಕ್ಕೆ ಇರಬಾರದು ಎಂಬ ಮಾನವೀಯ ಕಾಳಜಿಯನ್ನು ಇಟ್ಟುಕೊಂಡು, ದೀನದಲಿತರ ಉತ್ತಮ ಬದುಕಿಗಾಗಿ ಶ್ರಮಿಸಿದರು.

ಡಾ. ಬಾಬಾಸಾಹೇಬ ಅಂಬೇಡ್ಕರರನ್ನು ಆಧುನಿಕ ಇತಿಹಾಸಕಾರರು ವಿಕೃತ ವಾಗಿ ತಮ್ಮ ಬರವಣಿಗೆಗಳಲ್ಲಿ ಚಿತ್ರಿಸಿದ್ದಾರೆ. ಅವರೊಬ್ಬ 'ರಾಷ್ಟ್ರವಿರೋಧಿ', 'ಬ್ರಿಟಿಷರ ಕೈಗೊಂಬೆ', 'ಆಧುನಿಕ ಮನು' ಮತ್ತು 'ಮಹಾರ ಮನು' ಎಂದು ನಾಮಾಂಕಿತ ಕೊಟ್ಟು, ಅವರ ವ್ಯಕ್ತಿತ್ವಕ್ಕೆ ತಪ್ಪಾಗಿ ಅರ್ಥೈಸಲು ಪ್ರಯತ್ನಿಸಿದ್ದಾರೆ. ಪ್ರಸ್ತುತ ಪ್ರಬಂಧದಲ್ಲಿ ೧. ಡಾ. ಅಂಬೇಡ್ಕರ ಸ್ವಾತಂತ್ರ್ಯ ಚಳುವಳಿಯಲ್ಲಿ ಏಕೆ ಭಾಗವಹಿಸಲಿಲ್ಲ ? ಅವರು ಸ್ವಾತಂತ್ರ್ಯ ವಿರೋಧಿಯಾಗಿದ್ದರೆ ಅಥವಾ ಬ್ರಿಟಿಷರ ಕೈಗೊಂಬೆಯಾಗಿದ್ದರೆ ? ೨. ಗಾಂಧಿ ಮತ್ತು ಅಂಬೇಡ್ಕರರಲ್ಲಿ ಅಸ್ಪೃಶ್ಯರ ಸಮಸ್ಯೆ ಗಳ ಬಗೆಗೆ ಉದ್ಭವಿಸಿದ ಭಿನ್ನಾಭಿಪ್ರಾಯಗಳು ಎಂಬ ವಿಷಯಗಳನ್ನು ಕುರಿತು ಸ್ಥೂಲವಾಗಿ ಚರ್ಚಿಸಲು ಪ್ರಯತ್ನಿಸಲಾಗಿದೆ.

೧. ಡಾ. ಬಾಬಾಸಾಹೇಬ ಅಂಬೇಡ್ಕರ ಸ್ವಾತಂತ್ರ್ಯ ಚಳುವಳಿಯ ವಿರೋಧಿ ಯಾಗಿದ್ದರೆ ?

ಡಾ. ಬಾಬಾಸಾಹೇಬ ಅಂಬೇಡ್ಕರ ಸ್ವತಂತ್ರಭಾರತಕ್ಕೆ ಸಂವಿಧಾನವನ್ನು ನೀಡಿದ ಶಿಲ್ಪಿ, ಸ್ವತಂತ್ರಭಾರತದ ಮೊದಲ ಕಾನೂನು ಮಂತ್ರಿ, ಮಾನವ ಹಕ್ಕುಗಳ ಸಂರಕ್ಷಕ, ನೊಂದವರ ಧ್ವನಿ, ಶೋಷಿತರ ಶಕ್ತಿಯಾಗಿ ತಮ್ಮ ಜೀವನದುದ್ದಕ್ಕೂ ನಿರಂತರವಾಗಿ ಶ್ರಮಿಸಿದ ಮಹಾನ್ ಹೋರಾಟಗಾರ. ಇಂಥ ಧೀಮಂತ ವ್ಯಕ್ತಿತ್ವ ವನ್ನು ಹೊಂದಿದಂಥ ಡಾ. ಬಾಬಾಸಾಹೇಬ ಅಂಬೇಡ್ಕರರನ್ನು ಕೆಲವರು ಅವರೊಬ್ಬ

ರಾಷ್ಟ್ರದ್ರೋಹಿ, ಬ್ರಿಟೀಷರ ಕೈಗೊಂಬೆ ಎಂದು ಚಿತ್ರಿಸಲು ಪ್ರಯತ್ನಿಸಿದ್ದಾರೆ. ಅಂಬೇಡಕರ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸದೆ ಇರುವುದಕ್ಕೆ ಅನೇಕ ಕಾರಣಗಳಿವೆ. ಅವರು ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿಲ್ಲ ಎಂಬ ಒಂದೇ ಕಾರಣಕ್ಕಾಗಿ ಅವರನ್ನು ಸ್ವಾತಂತ್ರ್ಯ ವಿರೋಧಿ ಅಥವಾ ರಾಷ್ಟ್ರದ್ರೋಹಿ ಎಂದು ಕರೆಯುವುದು ತಪ್ಪು. ಅಂಬೇಡ್ಕರರ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ಅವರು ಬದುಕಿದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ರಾಜಕೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ತಿಳಿದುಕೊಳ್ಳುವದು ಅವಶ್ಯ.

ಡಾ. ಅಂಬೇಡ್ಕರರು ಮೊಟ್ಟಮೊದಲು ಸಾರ್ವಜನಿಕ ಜೀವನದಲ್ಲಿ ಕಾಣಿಸಿಕೊಂಡದ್ದು ೧೯೧೮ರ ಸೌಥ ಬೋರೊ ಕಮೀಟಿಯ ಮುಂದೆ. ಈ ಕಮೀಟಿಯ ಮುಂದೆ ತಮ್ಮ ವಾದವನ್ನು ಮಂಡಿಸಿ ಅಸ್ಪೃಶ್ಯರಿಗೆ ಪ್ರತ್ಯೇಕ ಮತದಾನದ ಹಕ್ಕನ್ನು ಕೊಡಬೇಕೆಂದು ಕೇಳಿಕೊಂಡರು. "ಸವರ್ಣೀಯರು ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯವನ್ನು ಪಡೆದುಕೊಳ್ಳುವ ಮುನ್ನ ಅಸ್ಪೃಶ್ಯರನ್ನು ಸುಶಿಕ್ಷಿತರನ್ನಾಗಿ ಮಾಡಿ, ಅವರಲ್ಲಿ ತಿಳುವಳಿಕೆ ಮೂಡಿಸಿ, ಅವರನ್ನು ಮೇಲೆತ್ತಬೇಕು. ಇಲ್ಲದೆ ಹೋದರೆ ತಾವು ಪಡೆದುಕೊಳ್ಳುವ ಸ್ವರಾಜ್ಯಕ್ಕೆ ಯಾವುದೇ ಬೆಲೆ ಇಲ್ಲದಂತಾಗುವುದು"[೧] ಎಂದು ಸ್ಪಷ್ಟವಾಗಿ ಹೇಳಿದರು. ಅಂಬೇಡ್ಕರ ಎಂದೂ ಸ್ವಾತಂತ್ರ್ಯ ವಿರೋಧಿಯಾಗಿರಲಿಲ್ಲ. ಬದಲಾಗಿ ಅವರ ನಿಲುವು ಏನಿತ್ತೆಂದರೆ, ಶತಶತಮಾನಗಳಿಂದಲೂ ಯಾವ ಸವರ್ಣೀಯರು ಅಸ್ಪೃಶ್ಯರನ್ನು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಧರ್ಮ ಮತ್ತು ಜಾತೀಯ ಹೆಸರಿನಲ್ಲಿ ತುಳಿದಿದ್ದರೋ, ಅಂಥ ಜನಗಳಿಗೆ ಬ್ರಿಟಿಷರು ಅಧಿಕಾರ ಕೊಟ್ಟದ್ದಾದರೆ ಅಸ್ಪೃಶ್ಯರ ಬದುಕಿನಲ್ಲಿ ಯಾವ ಬದಲಾವಣೆಯಾಗಲಿಕ್ಕೆ ಸಾಧ್ಯವಿಲ್ಲ. ಕಾರಣ ಬ್ರಿಟೀಷರು ಭಾರತವನ್ನು ಬಿಟ್ಟು ತೊಲಗುವ ಮುಂಚೆ ಅಸ್ಪೃಶ್ಯರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮಸ್ಯೆಗಳತ್ತ ಗಮನಹರಿಸಿ, ಅವರ ಇಡೀ ಸಮಸ್ಯೆಗಳಿಗೆ ರಾಜಕೀಯವಾಗಿ ಪರಿಹಾರ ಕಂಡು ಹಿಡಿಯಬೇಕೆಂದು ಒತ್ತಾಯಿಸುತ್ತಿದ್ದರು, ಹೀಗಾಗಿ ಅವರು ರಾಜಕೀಯ ಸ್ವಾತಂತ್ರ್ಯಕ್ಕೆ ಅಷ್ಟು ಮಹತ್ವ ಕೊಡದೆ, ಸಾಮಾಜಿಕ ಮತ್ತು ಆರ್ಥಿಕ ಸಮಾನತೆಗೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಡುತ್ತಿದ್ದರು. ಸ್ವತಃ ಅಸ್ಪೃಶ್ಯರಾದ ಅಂಬೇಡ್ಕರ ಅಸ್ಪೃಶ್ಯರ ಹೀನಾಯವಾದ ಬದುಕನ್ನು ಕಂಡು ಮಮ್ಮಲಮರುಗಿದವರು. ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳನ್ನು ತೊಡೆದುಹಾಕಿ, ಅಸ್ಪೃಶ್ಯರ ಬಾಳಿನಲ್ಲಿ ಹಾಸು ಹೊಕ್ಕಾಗಿರುವ ಕಗ್ಗತ್ತಲೆಯನ್ನು ಹೊಡೆದೋಡಿಸಿ, ಅವರ ಬಾಳಿನಲ್ಲಿ ಆಶಾಕಿರಣವನ್ನು ಮೂಡಿಸಲು ಪ್ರಯತ್ನಿಸಿದ ಆಶಾವಾದಿ. ಅಸ್ಪೃಶ್ಯರ ಸ್ವಾತಂತ್ರ್ಯ, ಸಮಾನತೆ

---

೧. ದಿ ಟೈಮ್ಸ್ ಆಫ್ ಇಂಡಿಯಾ, ೧೬.೧.೧೯೧೮.

ಮತ್ತು ಅವರ ಪ್ರಗತಿಯ ಬಗ್ಗೆ ಅಸಡ್ಡೆಭಾವನೆಯನ್ನು ತೋರಿದ ಸವರ್ಣೀಯ ಹಿಂದೂಗಳಿಂದ ಅಂಬೇಡ್ಕರರು ಏನನ್ನು ಅಪೇಕ್ಷಿಸಲು ಸಾಧ್ಯ ? ಸಾವಿರ ಸಾವಿರ ವರ್ಷಗಳಿಂದಲೂ ಧರ್ಮದ ಹೆಸರಿನ ಮೇಲೆ ಅಸ್ಪೃಶ್ಯರನ್ನು ಅವಮಾನಿಸಿ, ಶೋಷಣೆಗೊಳಗುಮಾಡಿ, ಅವರನ್ನು ಎಲ್ಲ ರಂಗಗಳಿಂದಲೂ ದೂರವಿಟ್ಟ ಹಿಂದೂಗಳಿಂದ ಸ್ವಾತಂತ್ರ್ಯವನ್ನು ಅಪೇಕ್ಷಿಸುವುದು ಹೇಗೆ ಸಾಧ್ಯ ? ಬ್ರಿಟೀಷರು ಕೇವಲ ಭಾರತೀಯರನ್ನು ಒಂದುನೂರಾ ಐವತ್ತುವರ್ಷಗಳವರೆಗೆ ಆಳಿದರೆ, ಸವರ್ಣೀಯರು ಅಸ್ಪೃಶ್ಯರನ್ನು ೫೦೦೦ ವರ್ಷಗಳವರೆಗೆ ಆಳಿ, ದಲಿತರ ಹಕ್ಕುಗಳ ಬಗ್ಗೆ ಎಂದಾದರೂ ಪ್ರಾಮಾಣಿಕವಾಗಿ ಚಿಂತಿಸಿದ್ದಾರೆಯೇ ? ಎಂಬ ಗುಮಾನಿ ಅಂಬೇಡ್ಕರರಿಗಿದ್ದುದು ಸಹಜ. ಹಿಂದೂಗಳು ಅಷ್ಟು ಅಮಾನವೀಯರಾಗಲು ಇಲ್ಲಿಯ ಧಾರ್ಮಿಕ ಮೌಢ್ಯತೆ, ಸಾಮಾಜಿಕ ಕಟ್ಟಳೆ ಮತ್ತು ದ್ವಂದ್ವ ನೀತಿಯ ಆರ್ಥಿಕ ಮೌಲ್ಯಗಳೇ ಕಾರಣ ಎಂದು ಅಂಬೇಡ್ಕರರ ಸ್ಪಷ್ಟ ನಿಲುವಾಗಿತ್ತು. ಅವರ ಪ್ರಕಾರ "The Hindus have an innate and invertated conservatism and they have a religion which is incompetable to liberty, equality and fraternity i.e. democracy".[೨] ಹಿಂದೂ ಸಂಸ್ಕೃತಿಯನ್ನು ವಿರೋಧಿಸಿ ಅಸ್ಪೃಶ್ಯರ, ಶೂದ್ರರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಾನತೆಗಾಗಿ ಹೋರಾಡಿದವರೆಲ್ಲರನ್ನೂ ಹಿಂದೂಧರ್ಮ ವಿರೋಧಿಸಿತು. ಬುದ್ಧ, ಬಸವ ಮತ್ತು ಅಂಬೇಡ್ಕರರು ಇದಕ್ಕೆ ಹೊರತಲ್ಲ. ಅಸ್ಪೃಶ್ಯರ ಹಾಗೂ ಶೂದ್ರರ ಹಕ್ಕುಗಳ ಬಗ್ಗೆ ಮಾತನಾಡಿದವರೆಲ್ಲರೂ ದೇಶದ್ರೋಹಿಗಳೆಂದು ಹೇಳುವುದು ಸರಿಯಲ್ಲ. ಇಂಥ ವ್ಯವಸ್ಥಿತ ಪ್ರಚಾರಗಳಿಗೆ ಅಂಬೇಡ್ಕರ ಬಲಿಯಾದದ್ದು ದುರ್ದೈವದ ಸಂಗತಿ. ಕೆಲವು ವಿದ್ವಾಂಸರ ಪ್ರಕಾರ ಅಂಬೇಡ್ಕರರು ಸ್ವಾತಂತ್ರ್ಯ ಚಳುವಳಿಯಲ್ಲಿ ಅಸ್ಪೃಶ್ಯರ ಹಕ್ಕುಬಾಧ್ಯತೆಗಳನ್ನು ಕೇಳಿದ್ದು ತಪ್ಪು. ಏಕೆಂದರೆ ಜಾತೀಯತೆ ಮತ್ತು ಅಸ್ಪೃಶ್ಯತೆ ಆದೊಂದು ಆಂತರಿಕ ಸಮಸ್ಯೆ. ಸ್ವಾತಂತ್ರ್ಯ ಪಡೆದುಕೊಂಡ ಮೇಲೆ ಈ ಸಮಸ್ಯೆಗಳನ್ನು ಬಗೆಹರಿಸಬಹುದಾಗಿತ್ತು. ಇದು ಗಾಂಧೀಜಿಯವರ ನಿಲುವೂ ಆಗಿತ್ತು. ಆದರೆ ಅಂಬೇಡ್ಕರರಿಗೆ ಸವರ್ಣೀಯ ರಾಜಕೀಯ ಧುರೀಣರಲ್ಲಿ ಹಾಗೂ ಅವರ ಪಕ್ಷಗಳಲ್ಲಿ ಎಳ್ಳಷ್ಟೂ ನಂಬಿಕೆಯಿರಲಿಲ್ಲ. ಏಕೆಂದರೆ ಅಂಬೇಡ್ಕರರು "Hindus are social tories and political radicals" ಎಂದು ನಂಬಿದ್ದರು. ದಲಿತರ ಸಮಸ್ಯೆಗಳನ್ನು ಯಾವುದೇ ಒಬ್ಬ ಮುಖಂಡ ಅಥವಾ ಪಕ್ಷ ಕೇವಲ ರಾಜಕೀಯಕ್ಕಾಗಿ ಬಳಸಿಕೊಂಡದ್ದಾದರೆ ಅಂಥವರ ಬಗ್ಗೆ ಅಂಬೇಡ್ಕರರಿಗೆ ಅಪಾರ ಸಿಟ್ಟು ಬರುತ್ತಿತ್ತು. ಅವರೇ ಹೇಳುವ ಹಾಗೆ

---

೨. B. R. Ambedkar, **Mr. Gandhi and the Emancipation of the Untouchables,** Thacker & Co. Ltd., Bombay, 1943, P. 66.

"I have injustice, tyranny, pompousness and humbug and my hatredness embraccs all those who are guilty of them".೩ ಅಂದರೆ ಅಂಬೇಡ್ಕರರ ಸಿಟ್ಟು ವೈಯಕ್ತಿಕವಾಗಿರದೆ ತನ್ನ ಸಮಾಜದ ಮೇಲಾಗಿರುವ ದಬ್ಬಾಳಿಕೆ ಮತ್ತು ಅನ್ಯಾಯದ ವಿರುದ್ಧ ಪ್ರತಿಭಟನೆ ಎಂದು ತಿಳಿದುಕೊಳ್ಳುವುದು ಸೂಕ್ತ.

ಬಹಳ ಮುಖ್ಯವಾದ ಪ್ರಶ್ನೆಯೇನೆಂದರೆ, ಅಂಬೇಡ್ಕರ ಮತ್ತು ಗಾಂಧೀಜಿಯವರು ಏಕಕಾಲಕ್ಕೆ ಅಸ್ಪೃಶ್ಯರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಅವುಗಳ ಪರಿಹಾರಕ್ಕಾಗಿ ಸತತವಾಗಿ ಶ್ರಮಿಸಿದವರು. ಆದರೆ ಅವರಿಬ್ಬರಲ್ಲಿರುವ ಮುಖ್ಯ ವ್ಯತ್ಯಾಸವೇನೆಂದರೆ ಗಾಂಧೀಜಿಯವರು ಸವರ್ಣೀಯರಾಗಿ ಅಸ್ಪೃಶ್ಯರ ಸಮಸ್ಯೆಗಳನ್ನು ಬಾಹ್ಯದಿಂದ ಕಂಡವರು. ಹಾಗೂ ಅಸ್ಪೃಶ್ಯರ ಸಮಸ್ಯೆಗಳಿಗೆ ಪ್ರಾಮಾಣಿಕವಾಗಿ ಸ್ಪಂದಿಸದೆ ಕೇವಲ ತಮ್ಮ ರಾಜಕೀಯಕ್ಕಾಗಿ ಅಸ್ಪೃಶ್ಯರ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುತ್ತಿದ್ದರು. ಗಾಂಧೀಜಿಯವರಿಗೆ ನಿಜವಾಗಲೂ ದಲಿತರ ಬಗ್ಗೆ ಪ್ರಾಮಾಣಿಕ ಕಾಳಜಿ ಇರಲಿಲ್ಲ. ಗಾಂಧೀಜಿಯವರ ದಲಿತ ಕಾಳಜಿ ಕೇವಲ ದಾದಿಯ ಕಾಳಜಿಯಾಗಿತ್ತು. ಆದರೆ ಅಂಬೇಡ್ಕರ ಸ್ವತಃ ಅಸ್ಪೃಶ್ಯನಾದ್ದರಿಂದ ದಲಿತರ ಘೋರ ಬದುಕಿನ ಪರಿಚಯವಿತ್ತು, ಆದ್ದರಿಂದಲೇ ಅವರು ತನ್ನ ಜನಾಂಗದ ಸಮಸ್ಯೆಗಳಿಗೆ ತೀವ್ರವಾಗಿ ಸ್ಪಂದಿಸಿ, ಅವುಗಳ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದರು. ಹೀಗಾಗಿ ಅಸ್ಪೃಶ್ಯರು ಅಂಬೇಡ್ಕರರನ್ನು ತಮ್ಮ ನೈಜ ಪ್ರತಿನಿಧಿಯೆಂದು ಒಪ್ಪಿಕೊಂಡಿದ್ದರು; ಏಕೆಂದರೆ ಅಂಬೇಡ್ಕರರ ದಲಿತ ಕಾಳಜಿ ತಾಯಿಯ ಕಾಳಜಿಯಂತೆ ಇದ್ದುದು ಸಹಜ. ಕೆಲವು ಸಲ ಗಾಂಧೀಜಿ ಮತ್ತು ಅಂಬೇಡ್ಕರರಲ್ಲಿ ತಾತ್ವಿಕ ಭಿನ್ನಾಭಿಪ್ರಾಯ ಕೂಡ ಮೂಡಿಬರುತ್ತಿತ್ತು. ಏಕೆಂದರೆ ಗಾಂಧೀಜಿಯವರು ಅಸ್ಪೃಶ್ಯರ ಸಮಸ್ಯೆಗಳನ್ನು ಹೆಚ್ಚು ಕಲುಷಿತ (Politicisation) ಮಾಡಿ ದಲಿತರಿಗೆ ಸೌಲತ್ತುಗಳನ್ನು ಕೊಡುವ ಪ್ರಶ್ನೆ ಬಂದಾಗ ಅವನ್ನು ಕಟುವಾಗಿ ವಿರೋಧಿಸುತ್ತಿದ್ದರು. ಗಾಂಧೀಜಿಯವರ ಇಂಥ ಅಪ್ರಾಮಾಣಿಕತೆ ಮತ್ತು ದಗಲಬಾಜಿತನವನ್ನು ಅಂಬೇಡ್ಕರ ಯಾವುದೇ ಸಾರ್ವಜನಿಕ ಸಭೆಗಳಲ್ಲಿ ಮುಲಾಜಿಯಿಲ್ಲದೆ ಟೀಕಿಸುವಾಗ ಗಾಂಧೀಜಿಯವರಿಗೆ ಮತ್ತು ಅವರ ಅನುಯಾಯಿಗಳಿಗೆ ಎದೆಯಲ್ಲಿ ಬಾಂಬು ಸಿಡಿದಂತಾಗುತ್ತಿತು. ಗಾಂಧೀಜಿಯವರಿಗೆ ಅಂಬೇಡ್ಕರರ ನಿಸ್ವಾರ್ಥತೆ, ಪ್ರಾಮಾಣಿಕತೆ ಮತ್ತು ದೇಶಪ್ರೇಮಗಳ ಅರಿವಿದ್ದಿತು. ಅದನ್ನು ಒಪ್ಪಿಕೊಳ್ಳದೆ ಅಂಬೇಡ್ಕರರನ್ನು

೩. B. R. Ambedkar, **Ranade, Gandhi and Jinnah**, Bheem Patrika Publication, Jullundhur, 1964, Preface, P. III.

ರಾಜಕೀಯದಿಂದ ದೂರವಿರಿಸಿ, ದಲಿತರಲ್ಲಿ ಅಂಬೇಡ್ಕರರ ಬಗ್ಗೆ ಅಪನಂಬಿಕೆ ಹುಟ್ಟಿಸಿ ಅಸ್ಪೃಶ್ಯರ ನೈಜಪ್ರತಿನಿಧಿ ನಾನೇ ಎಂದು ಛಾಪು ಮೂಡಿಸಲು ಕಾಂಗ್ರೆಸ್ಸಿಗರು ತಿಣುಕುತ್ತಿದ್ದರು. ಗಾಂಧೀಜಿ ಮತ್ತು ಕಾಂಗ್ರೆಸ್ಸಿಗರ ಪೊಳ್ಳುತನವನ್ನು ಅಂಬೇಡ್ಕರರು ಬೈಲಿಗೆಳೆದಾಗ ಗಾಂಧೀಜಿಯವರ ಅನುಯಾಯಿಗಳು ಅಂಬೇಡ್ಕರರನ್ನು ದೇಶದ್ರೋಹಿ, ಬ್ರಿಟಿಷರ ಕೈಗೊಂಬೆ ಹಾಗೂ ಸ್ವಾತಂತ್ರ್ಯ ವಿರೋಧಿಯೆಂದು ಅಪಪ್ರಚಾರ ಮಾಡಿದರು. ರಾವಬಹದ್ದೂರ ಮೆಹರಚಂದ ಖನ್ನಾ ಎಂಬ ಕಾಂಗ್ರೇಸ್ ಮತ್ತು ಗಾಂಧೀಜಿಯವರ ಅನುಯಾಯಿ, ಎಪ್ರಿಲ್ ೧೨, ೧೯೪೫ ರಂದು ಪೇಶಾವರದಲ್ಲಿ ಡಿಪ್ರೆಸ್ಡ್ ಕ್ಲಾಸಿಸ್ ಲೀಗನ್ನು ಉದ್ದೇಶಿಸಿ ಮಾತನಾಡುತ್ತಾ "ನಿಮ್ಮಲ್ಲಿ ಕೆಲವರು ಅಂಬೇಡ್ಕರರ ಬೆನ್ನು ಹತ್ತಿರುವಿರಿ. ಅವರೊಬ್ಬ ಬ್ರಿಟೀಷರ ಕೈಗೊಂಬೆ ಅವರು ನಿಮ್ಮನ್ನು ಉಪಯೋಗಿಸಿಕೊಂಡು ಬ್ರಿಟೀಷರ ಕೈ ಬಲಪಡಿಸಿ, ದೇಶವನ್ನು ಒಡೆಯಲು ಪ್ರಯತ್ನಿಸಿ, ಬ್ರಿಟೀಷರು ಭಾರತದಲ್ಲಿ ಉಳಿಯಲು ಸಹಕಾರಿಯಾಗುತ್ತಿದ್ದಾರೆ. ಆದ್ದರಿಂದ ಬಂಧುಗಳೇ ನಿಮ್ಮಲ್ಲಿ ವಿನಂತಿಸಿಕೊಳ್ಳುವದೇನೆಂದರೆ ನಿಮ್ಮ ನಿಜವಾದ ವೈರಿ ಮತ್ತು ಗೆಳೆಯ ಯಾರೆಂಬುದನ್ನು ತಿಳಿದುಕೊಳ್ಳುವದು ಅವಶ್ಯ"[೪] ಎಂದು ಹೇಳಿದರು.

ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಗಾಂಧೀಜಿಯನ್ನು ವಿರೋಧಿಸುವ ತಾಕತ್ತು ಯಾರಿಗೂ ಇರಲಿಲ್ಲ. ಯಾಕೆಂದರೆ ಆಗ ಅವರೊಬ್ಬ ಅಪ್ರಶ್ನಾತೀತ ಧುರೀಣ ಹಾಗೂ ಅನಭಿಷಕ್ತ ರಾಜ (Uncrowned King) ಎಂದು ಜನ ನಂಬಿದ್ದರು. ಗಾಂಧೀಜಿಯನ್ನು ವಿರೋಧಿಸುವದೆಂದರೆ ಇಡೀ ದೇಶವನ್ನೇ ವಿರೋಧಿಸಿದ ಹಾಗೆ ಮತ್ತು ಅಂಥ ಟೀಕಾಕಾರರನ್ನು ಜನ ದೇಶದ್ರೋಹಿಯೆಂದು ಪರಿಗಣಿಸುತ್ತಿದ್ದುದು ತೀರ ಸಹಜವಾಗಿತ್ತು. ಅಂಬೇಡ್ಕರ ಗಾಂಧೀಜಿಯವರನ್ನಷ್ಟೇ ಟೀಕೆ ಮಾಡದೆ ಪಂಡಿತ ಜವಾಹರಲಾಲ ನೇಹರೂರವರನ್ನೂ ಸಹ ಅಷ್ಟೇ ಕಟುವಾಗಿ ಟೀಕಿಸುತ್ತಿದ್ದರು. "He (Nehru) draws his inspiration from Jeffersonian declaration but has he expressed any shame or remoures about the conditions of the sixty million Untouchables ? Has he referred to them in the torment of literature that flows from his pen ?"[೫] ಆದರೆ ಅಪ್ರತಿಮ ದೂರದರ್ಶಿತ್ವವುಳ್ಳ ನೆಹರೂರವರಿಗೆ ಅಂಬೇಡ್ಕರರ ವ್ಯಕ್ತಿತ್ವದ ಬಗ್ಗೆ ಗೊತ್ತಿತ್ತು. ಆದ್ದರಿಂದಲೇ ನೆಹರೂರವರು ಅಂಬೇಡ್ಕರರನ್ನು ತುಂಬ ಗೌರವದಿಂದ ಕಾಣುತ್ತಿದ್ದರು. ಅಂಬೇಡ್ಕರ ಎಂದೂ ಯಾವ ಧುರೀಣ

---

೪. ಫ್ರೀ ಪ್ರೆಸ್ ಜರ್ನಲ್, ೧೪.೪.೧೯೪೫ ರಿಂದ ಅನುವಾದಿಸಲಾಗಿದೆ.

೫. B. R. Ambedkar, op. cit., PP. 70-71.

ನನ್ನ ವೈಯಕ್ತಿಕ ನೆಲೆಯಲ್ಲಿ ಟೀಕಿಸಿಲ್ಲ. ಆದರೆ ಅವರ ಟೀಕೆ ಮೌಲ್ಯಗಳ ಆಧಾರದ ಮೇಲೆ ಇರುತ್ತವೆ ಎಂದು ನೆಹರೂ ತಿಳಿದಿದ್ದರು. ಸ್ವತಃ ನೆಹರೂರವರೆ ಹೇಳುವ ಹಾಗೆ "perhaps Ambedkar used strong language some times hurt people but let us forget that the main thing was he revolted against which all ought to have revolted".[೬]

ಡಾ. ಅಂಬೇಡಕರರು ಗಾಂಧೀಜಿಯವರ ಮುಖಂಡತ್ವ ಒಪ್ಪಿಕೊಳ್ಳದ ಅವರ ಸಿದ್ಧಾಂತ ಮತ್ತು ಹರಿಜನೋದ್ಧಾರ ಕಾರ್ಯಕ್ರಮಗಳನ್ನು ಒಪ್ಪಿಕೊಳ್ಳದ ಮಾತ್ರಕ್ಕೆ ಅಂಬೇಡ್ಕರರನ್ನು ಬ್ರಿಟಿಷರ ಕೈಗೊಂಬೆ ಎಂದು ಕರೆಯುವದು ತಪ್ಪಾಗುತ್ತದೆ. ಹಾಗಾದರೆ ಗಾಂಧೀಜಿಯವರು ಕಾಂಗ್ರೆಸ್ ಪಕ್ಷದ ಧುರೀಣರಾಗಿ ಹಿಂದೂಗಳ ಹಿತಾಸಕ್ತಿಯನ್ನು ಕಾಪಾಡುವುದರಲ್ಲಿ ಸತತವಾಗಿ ಪ್ರಯತ್ನಿಸಿದವರು, ಈ ಒಂದೇ ಕಾರಣಕ್ಕಾಗಿ ಗಾಂಧೀಜಿಯವರನ್ನೂ ಹಿಂದೂಗಳೇತರರು ತಪ್ಪಾಗಿ ಭಾವಿಸಿ ಅವರನ್ನು ಬ್ರಿಟೀಷರ ಕೈಗೊಂಬೆಯೆಂದು ಕರೆಯಲು ಸಾಧ್ಯವೇ ?

ದೇಶದ ಸಮಗ್ರತೆಗಾಗಿ ಧುರೀಣರು ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನು ಮರೆತು, ತಮ್ಮ ತಮ್ಮ ನೆಲೆಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡುತ್ತಿದ್ದುದು ಸರ್ವ ವಿದಿತ. ಅದರಂತೆ ಅಂಬೇಡಕರ ಕೂಡ ಅಸ್ಪೃಶ್ಯರ ನೇತಾರರಾಗಿ ಅವರ ಹಕ್ಕು ಬಾಧ್ಯತೆಗಾಗಿ ಹೋರಾಡಲೇಬೇಕಾಗಿತ್ತು. ಏಕೆಂದರೆ ಹರಿಜನರ ಸಮಸ್ಯೆಗಳನ್ನು ಯಾವ ಹಿಂದೂ ಧುರೀಣನೂ ಗಂಭೀರವಾಗಿ ತೆಗೆದುಕೊಂಡಿರಲಿಲ್ಲ. ಅಂಬೇಡ್ಕರ ಕೇವಲ ದೇಶದ ರಾಜಕೀಯ ಸ್ವಾತಂತ್ರ್ಯಕ್ಕಾಗಿ ತಮ್ಮ ಶಕ್ತಿಯನ್ನು ಉಪಯೋಗ ಮಾಡಿದ್ದಲ್ಲಿ ಅಸ್ಪೃಶ್ಯರ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಸಿಗದೆ, ಅವು ಹಾಗೇಯೆ ಉಳಿದು ಸ್ವತಂತ್ರ ಭಾರತದಲ್ಲಿ ದಲಿತರು ಅನಾಥರಾಗಿರುತ್ತಿದ್ದರೇನೋ ಎಂಬ ಶಂಕೆ ಮೂಡಿಬರುತ್ತದೆ. ಅಂಬೇಡ್ಕರ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸದೆ ಕೇವಲ ಅಸ್ಪೃಶ್ಯರ ಸಮಸ್ಯೆಗಳತ್ತ ಗಮನಹರಿಸಿದ್ದು, ಐತಿಹಾಸಿಕ ಅನಿವಾರ್ಯವಾಗಿತ್ತು. ಡಾ. ರಾಮ ಮನೋಹರ ಲೋಹಿಯಾ ಅಂಬೇಡ್ಕರರ ಬಗ್ಗೆ ತಮ್ಮ ಅಭಿಪ್ರಾಯ ಹೀಗೆ ವ್ಯಕ್ತಪಡಿಸಿದ್ದಾರೆ : "Dr. Ambedkar was a man of integrity, courage and independence, he could be shown to the outside the world as a symbol of upright India, but he was bitter and exclusive. He refuse to become the leader of the non-Harijans. I can well understand the agony of the last five thousand years and their

---

೬. ಟೈಮ್ಸ್ ಆಫ್ ಇಂಡಿಯಾ, ಡಿಶೆಂಬರ ೬, ೧೯೫೭ ರಂದು ಮಾಡಿದ ಭಾಷಣ.

continuing impact on the Harijans. Such a great Indian as Dr. Ambedkar, I had hoped he would some day able to rise above the situation but the death came early".[೭]

ಗಾಂಧೀಜಿ ಮತ್ತು ಅಂಬೇಡ್ಕರರಲ್ಲಿರುವ ಭಿನ್ನಾಭಿಪ್ರಾಯಗಳು :

ಅಂಬೇಡ್ಕರರಿಗೆ ಗಾಂಧೀಜಿಯವರ ನೇತೃತ್ವ ಹಾಗೂ ಕಾಂಗ್ರೆಸ್ ಪಕ್ಷದಲ್ಲಿ ಎಂದೂ ನಂಬಿಕೆ ಇರಲಿಲ್ಲ. ಕಾಂಗ್ರೆಸ್ ಕೇವಲ ಬನಿಯಾ ಮತ್ತು ಬ್ರಾಹ್ಮಣರಿಂದ ಕೂಡಿದ್ದು, ಅದು ಕೇವಲ ಉಚ್ಚವರ್ಗದ ಹಿತಾಸಕ್ತಿಗಳನ್ನು ಮಾತ್ರ ಕಾಪಾಡುತ್ತದೆ. ಅಸ್ಪೃಶ್ಯರು ಮತ್ತು ಶೂದ್ರರು ಕಾಂಗ್ರೆಸ್ ಪಕ್ಷದಲ್ಲಿ ರಾಜಕೀಯವಾಗಿ ಅನಾಥರಾಗುತ್ತಾರೆ. ಕಾಂಗ್ರೆಸ್ ಪಕ್ಷದಲ್ಲಿಯ ಸಾಮಾಜಿಕ ಬದಲಾವಣೆ ವಿರೋಧಿಗಳಿದ್ದುದು ಅಂಬೇಡ್ಕರರಿಗೆ ಆ ಪಕ್ಷದ ಬಗ್ಗೆ ನಿರಾಶೆಯನ್ನುಂಟು ಮಾಡಿತ್ತು. ಆದ್ದರಿಂದಲೇ ಅಂಬೇಡ್ಕರರು "I can not leave so important question as protection of my people to conventions and understandings...... Mahatmas have came and gone but the Untouchables have remained as Untouchables".[೮]

ಗಾಂಧೀಜಿಯವರು ತಮ್ಮ ಜೀವಿತ ಕಾಲದಲ್ಲಿ ಎಂದೂ ಹರಿಜನರ ಉದ್ಧಾರಕ್ಕಾಗಿ ಪ್ರಾಮಾಣಿಕವಾಗಿ ಶ್ರಮಿಸಿದವರಲ್ಲ. ಅವರ ಹರಿಜನೋದ್ಧಾರ ಕಾರ್ಯಕ್ರಮಗಳು ರಾಜಕೀಯ ಪ್ರೇರಣೆಯಿಂದ ಕೂಡಿದ್ದವು. ಅವರು ತಮ್ಮ ರಾಜಕೀಯಕ್ಕೋಸ್ಕರ ಹರಿಜನರನ್ನು ರಾಜಕೀಯ ದಾಳವನ್ನಾಗಿ ಉಪಯೋಗಿಸಿಕೊಂಡದ್ದು ಸರ್ವವಿದಿತ. ಶ್ರೀ ವ್ಹಿ. ವ್ಹಿ. ಶ್ರೀನಿವಾಸ ಐಯಂಗಾರ್ ಎಂಬವರು ಗಾಂಧೀಜಿಯವರ ರಾಜಕೀಯ ಮುಖವಾಡವನ್ನು ಮೈಸೂರಿನಲ್ಲಿ ನಡೆದ ಸನಾತನಿಷ್ಟ ಮೀಟಿಂಗಿನಲ್ಲಿ ಮಾಡಿದ ಭಾಷಣದಲ್ಲಿ ಸ್ಪಷ್ಟವಾಗಿ ಬೈಲಿಗೆಳೆದಿದ್ದಾರೆ : "Mr. Gandhi is the greatest protagonist of temple entry had proclaimed that the movement was not political but religious one...... In my opinion it was a great political movement. It was nece-

---

೭. R. M. Lohia, **The Caste System**, Navahind, Hydrabad, 1964, P. 37.

೮. B. R. Ambedkar, **What Congress and Gandhi have done to the Untouchaeles**, Thacker & Com. Ltd., Bombay, 1945, P. 315.

ssary for politics of Gandhi present to the government a united front to placket the Harijans".[೯] ಗಾಂಧೀಜಿಯವರು ನಿಜವಾಗಲೂ ದಲಿತ ರೂವಾರಿಯಾಗಿದ್ದರೆ ? ದಲಿತರ ಬದುಕಿನಲ್ಲಿ ಬದಲಾವಣೆ ತರಲು ಅವರು ಹೆಣಗಿದ್ದಾರೆಯೆ ? ಗಾಂಧೀಜಿಯವರ ಹರಿಜನೋದ್ಧಾರ ಕಾರ್ಯಕ್ರಮಗಳು ನಿಜವಾಗಲೂ ದಲಿತರಿಗೆ ತಲುಪಿದೆಯೇ ? ಎಂಬ ಇತ್ಯಾದಿ ಪ್ರಶ್ನೆಗಳು ಉದ್ಭವಿಸುವುದು ಸಹಜ. ಆದ್ದರಿಂದಲೇ ಡಾ. ಅಂಬೇಡ್ಕರವರು ಗಾಂಧೀಜಿಯವರ ಹರಿಜನೋದ್ಧಾರ ಕಾರ್ಯಕ್ರಮಗಳು ಕೇವಲ ರಾಜಕೀಯ ಪ್ರೇರಣೆಯಿಂದ ಕೂಡಿದ್ದು, ಅವರು ಎಂದಿಗೂ ಹರಿಜನರಿಗಾಗಿ ತಮ್ಮ ಸೇವೆಯನ್ನು ಮೀಸಲಾಗಿಡಲಿಲ್ಲ, ಬದಲಾಗಿ ಹರಿಜನರನ್ನು ರಾಷ್ಟ್ರೀಯ ಪ್ರವಾಹದಿಂದ ದೂರ ಇಡಲು ಹೇಗೆ ಪ್ರಯತ್ನಿಸಿದರು ಎಂದು ತವ್ಮ ಅಮೂಲ್ಯ ಗ್ರಂಥವೊಂದರಲ್ಲಿ[೧೦] ಮಾರ್ಮಿಕವಾಗಿ ವಿಶ್ಲೇಷಿಸಿದ್ದಾರೆ.

ಕಾಂಗ್ರೆಸ್ ಪಕ್ಷ ಮತ್ತು ಗಾಂಧೀಜಿಯವರು ಅಸ್ಪೃಶ್ಯರಿಗಾಗಿ ಏನು ಮಾಡಿದ್ದಾರೆ ಎಂಬುದನ್ನು ಡಾ. ಅಂಬೇಡ್ಕರ ಅವರು "What Congress and Gandhi have done to the Untouchables" ಎಂಬ ತಮ್ಮ ಕೃತಿಯಲ್ಲಿ ವಿವರವಾಗಿ ಚರ್ಚಿಸಿದ್ದಾರೆ. ಅವುಗಳನ್ನು ಹೀಗೆ ನಿರೂಪಿಸಬಹುದು : ೧೯೨೧ರಲ್ಲಿ ಗಾಂಧೀಜಿಯವರು ದಲಿತೋದ್ಧಾರಕ್ಕಾಗಿ ಒಂದುಕೋಟಿ ಮೂವತ್ತೈದು ಲಕ್ಷ ರೂಪಾಯಿಗಳನ್ನು **'ತಿಲಕ ಸ್ವರಾಜ್ಯ ಫಂಡ'** ಎಂಬ ವಂತಿಗೆಯನ್ನು ಕೂಡಿಸಿ ಈ ಹಣವನ್ನು ಕೇವಲ ಅಸ್ಪೃಶ್ಯರಿಗಾಗಿ ಖರ್ಚು ಮಾಡಬೇಕೆಂದು ಆಶಿಸಿದ್ದರು. ಏಕೆಂದರೆ ಅಸ್ಪೃಶ್ಯರ ಈ ಸ್ಥಿತಿಯನ್ನು ತೊಲಗಿಸದೆ ಸ್ವಾತಂತ್ರ್ಯಕ್ಕೆ ಯಾವ ಬೆಲೆಯೂ ಇಲ್ಲ ಎಂದು ಗಾಂಧೀಜಿಯವರು ನಂಬಿದ್ದರು. ಆದರೆ ಒಂದು ಕೋಟಿ ಮೂವತ್ತೈದು ಲಕ್ಷ ವಂತಿಗೆಯಿಂದ ಕೇವಲ ನಲವತ್ತು ಸಾವಿರ ರೂಪಾಯಿಗಳನ್ನು ಅಸ್ಪೃಶ್ಯರಿಗಾಗಿ ಖರ್ಚು ಮಾಡಲಾಯಿತು. ಇನ್ನುಳಿದ ಹಣವನ್ನು ಹರಿಜನರಿಗಾಗಿ ಖರ್ಚು ಮಾಡಬೇಕೆಂದು ಗಾಂಧೀಜಿಯವರು ಏಕೆ ಒತ್ತಾಯಿಸಲಿಲ್ಲ ?

೧೯೨೨ರಲ್ಲಿ ಹರಿಜನರ ಸ್ಥಿತಿಗತಿಗಳನ್ನು ಸುಧಾರಿಸಲು **"ಬಾರಡೋಲಿ"** ಎಂಬ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಯಿತು. ಈ ಕಾರ್ಯಕ್ರಮದ ರೂಪರೇಷೆಗಳನ್ನು ತಯಾರಿಸಲು ಒಂದು ಕಮೀಟಿಯನ್ನು ಸಹ ನಿಯಮಿಸಲಾಯಿತು. ಆದರೆ

---

೯. Quoted in M. K. Gandhi, **My Souls Agony,** 27.1.1933, PP. 142-43.

೧೦. B. R. Ambedkar, **What Congress and Gandhi Have Done to the Untouchables.**

ದುರ್ದೈವದ ಸಂಗತಿಯೆಂದರೆ ಈ ಕಮಿಟಿ ಎಂದೂ ಕಾರ್ಯಾರಂಭಿಸಲಿಲ್ಲ. ಏಕೆಂದರೆ ಇದಕ್ಕೆ ಕೊಡಮಾಡಿದ ಹಣ ಕೇವಲ ೫೦೦ ರೂಪಾಯಿ ಮಾತ್ರ. ಇದನ್ನು ವಿರೋಧಿಸಿ ಸ್ವಾಮಿ ಶ್ರದ್ಧಾನಂದ ಎಂಬುವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯೊಂದಿಗೆ ಸಮಾಲೋಚಿಸಿದರೂ ಯಾವುದೇ ಹೆಚ್ಚಿನ ಹಣ ಬಿಡುಗಡೆಯಾಗಲಿಲ್ಲ. ಇದನ್ನು ಗಾಂಡೀಜಿಯವರು ಏಕೆ ಪ್ರತಿಭಟಿಸಲಿಲ್ಲ ?

ಗಾಂಧೀಜಿಯವರು ತಮ್ಮ ರಾಜಕೀಯ ಪ್ರಚಾರ ಕೈಕೊಂಡಾಗ ಸ್ವರಾಜ್ಯವನ್ನು ಪಡೆಯಲಿಕ್ಕೆ ಐದು ಶರತ್ತುಗಳನ್ನು ಹಾಕಿಕೊಂಡಿದ್ದರು. ೧) ಹಿಂದೂ-ಮುಸ್ಲೀಮ್ ಐಕ್ಯತೆ ೨) ಅಸ್ಪೃಶ್ಯತಾ ನಿವಾರಣೆ ೩) ಸಾರ್ವತ್ರಿಕ ಖಾದಿ ಧಾರಣೆ ೪) ಸಂಪೂರ್ಣ ಅಹಿಂಸೆ ೫) ಬ್ರಿಟಿಷರ ವಿರುದ್ಧ ಸಂಪೂರ್ಣ ಅಸಹಕಾರ. ಈ ಶರತ್ತುಗಳಂತೆ ಗಾಂಧೀಜಿಯವರು ೧೯೨೨ರಲ್ಲಿ ಹಿಂದೂ-ಮುಸ್ಲಿಮ್ ಐಕ್ಯತೆಗಾಗಿ, ೧೯೨೪ ರಲ್ಲಿ ಖಾದಿಗಾಗಿ ಸತ್ಯಾಗ್ರಹ ಆಚರಿಸಿದರು. ಆದರೆ ಅಸ್ಪೃಶ್ಯತೆ ನಿವಾರಣೆಯಾಗಲೆಂದು ಅವರು ಒಮ್ಮೆಯಾದರೂ ಏಕೆ ಉಪವಾಸ ಕೈಕೊಳ್ಳಲಿಲ್ಲಾ ?

ಗಾಂಧೀಜಿಯವರು ತಮ್ಮ ಜೀವಿತ ಕಾಲದಲ್ಲಿ ಬ್ರಿಟಿಷರ ವಿರುದ್ಧ ಅನೇಕ ಬಾರಿ ಸತ್ಯಾಗ್ರಹ ಕೈಕೊಂಡು, ಅವರ ಮೇಲೆ ನೈತಿಕ ಒತ್ತಡ ತಂದಿದ್ದರು. ಇದೇ ತಂತ್ರವನ್ನು ಹಿಂದೂಗಳ ಮೇಲೆಯೂ ಉಪಯೋಗಿಸಿ ಅಸ್ಪೃಶ್ಯರಿಗೆ ಸಾರ್ವಜನಿಕ ಗುಡಿ ಮತ್ತು ಬಾವಿಗಳಿಗೆ ಏಕೆ ಪ್ರವೇಶ ಕೊಡಿಸಲಿಲ್ಲಾ ?

ಅಸ್ಪೃಶ್ಯರೂ ಗಾಂಧೀಜಿಯವರ ಕರೆಯಂತೆ ೧೯೨೯ರ ತರುವಾಯ ಸಾರ್ವಜನಿಕ ಗುಡಿ ಮತ್ತು ಬಾವಿಗಳಿಗೆ ಪ್ರವೇಶಕೊಡಿ ಎಂದು ಹಿಂದೂಗಳ ವಿರುದ್ಧ ಸತ್ಯಾಗ್ರಹ ಕೈಕೊಂಡಾಗ, ಸ್ವತಃ ಗಾಂಧೀಜಿಯವರೇ ಅಸ್ಪೃಶ್ಯರ ಸತ್ಯಾಗ್ರಹವನ್ನು ಕಟುವಾಗಿ ಟೀಕಿಸಿದ್ದರು. ಇದು ಗಾಂಧೀಜಿಯವರ ದಲಿತ ವಿರೋಧಿ ನೀತಿಯಲ್ಲವೇ ?

ಅಸ್ಪೃಶ್ಯರಿಗೆ ಗುರುವಾಯೂರ ಗುಡಿಪ್ರವೇಶ ನಿರಾಕರಿಸಿದ್ದೆ ಆದರೆ ಉಪವಾಸ ಸತ್ಯಾಗ್ರಹ ಕೈಕೊಳ್ಳುತ್ತೇನೆಂದು ಗಾಂಧೀಜಿಯವರು ಹೋದ ಹೋದಲ್ಲೆಲ್ಲ ಹೇಳುತ್ತಿದ್ದರು. ಆದರೆ ಗುರುವಾಯೂರ ಮಂದಿರಕ್ಕೆ ದಲಿತರ ಪ್ರವೇಶವನ್ನು ಖಾಯಂ ಆಗಿ ನಿಷೇಧಿಸಲಾಯಿತು. ಇದರ ವಿರುದ್ಧ ಗಾಂಧೀಜಿಯವರು ಏಕೆ ಉಪವಾಸ ಸತ್ಯಾಗ್ರಹ ಕೈಕೊಳ್ಳಲಿಲ್ಲಾ ?

ಕಾಂಗ್ರೆಸ್ ಪಕ್ಷದ ಧುರೀಣ ಶ್ರೀ ರಂಗಾ ಐಯ್ಯರವರು ಹರಿಜನರ ಗುಡಿ ಪ್ರವೇಶ ಗೊತ್ತುವಳಿಯನ್ನು ಕೇಂದ್ರ ಶಾಸಕಾಂಗದಲ್ಲಿ ಮಂಡಿಸುವದಾಗಿ ಹೇಳಿದ್ದರು. ಈ ಗೊತ್ತುವಳಿಯನ್ನು ಆಗಿನ ಗವ್ಹರ್ನರ್ ಜನರಲ್ ನಿರಾಕರಿಸಿದ್ದೇ ಆದರೆ ಆ

ಅಧಿಕಾರಿಯ ವಿರುದ್ಧ ಸತ್ಯಾಗ್ರಹ ಮಾಡುವದಾಗಿ ಗಾಂಧೀಜಿಯವರು ೧೯೩೭ರಲ್ಲಿ ಬೆದರಿಕೆ ಹಾಕಿದ್ದರು. ಆದರೆ ಕಾಂಗ್ರೆಸ್ ಪಕ್ಷವು ಹೊಸದಾಗಿ ಚುನಾವಣೆಯನ್ನು ಘೋಷಿಸಿದ್ದರಿಂದ ಆ ಗೊತ್ತುವಳಿಯನ್ನು ಹಿಂತೆಗೆದುಕೊಂಡಿತು. ಗಾಂಧೀಜಿಯವರು ನಿಜವಾಗಲೂ ದಲಿತರ ಹಿತಚಿಂತಕರೆ ಆಗಿದ್ದಲ್ಲಿ ಕಾಂಗ್ರೆಸ್ ಧೋರಣೆಯ ವಿರುದ್ಧ ಅವರೇಕೆ ಪ್ರತಿಭಟಿಸಲಿಲ್ಲಾ ? ಇದು ಗಾಂಧೀಜಿಯವರ ಹರಿಜನರ ಬಗೆಗಿನ ದ್ವಂದ್ವ ನೀತಿಯಲ್ಲವೆ ?

ಸವರ್ಣೀಯರು ಸತತವಾಗಿ ಧರ್ಮ ಮತ್ತು ಜಾತಿಯ ಹೆಸರಿನ ಮೇಲೆ ಅಸ್ಪೃಶ್ಯರಿಗೆ ದೈಹಿಕ ಮತ್ತು ಮಾನಸಿಕ ಹಿಂಸೆಕೊಟ್ಟು ಅವರನ್ನು ಸಾಮಾಜಿಕವಾಗಿ ಬಹಿಷ್ಕರಿಸಿ ಅವರ ವಿರುದ್ಧ ಆರ್ಥಿಕ ದಿಗ್ಬಂಧನ ಹಾಕಿದಾಗಲೂ ಹರಿಜನ ಸೇವಕ ಸಂಘವವತಿಯಿಂದ ಗಾಂಧೀಜಿಯವರು ದಲಿತರ ಹಕ್ಕುಗಳನ್ನು ಸಂರಕ್ಷಿಸಲು ಏಕೆ ಮುಂದೆ ಬರಲಿಲ್ಲಾ ?

ಹರಿಜನ ಸೇವಕ ಸಂಘದಲ್ಲಿ ಹಿಂದೂಗಳು ಮತ್ತು ಅಸ್ಪೃಶ್ಯರು ಒಟ್ಟಾಗಿ ಕೆಲಸ ಮಾಡುತ್ತಿದ್ದರು. ಆದರೆ ಗಾಂಧೀಜಿಯವರು ಅಸ್ಪೃಶ್ಯರನ್ನು ಹರಿಜನ ಸೇವಕ ಸಂಘ ನಿರ್ವಹಣಾ ಸಮಿತಿಯಿಂದ ದೂರವಿಟ್ಟದ್ದು ಏಕೆ ?

ಅಂಬೇಡ್ಕರರು ಹರಿಜನರಿಗಾಗಿ ಪ್ರತ್ಯೇಕ ಮತದಾನ ವ್ಯವಸ್ಥೆ ಇರಬೇಕೆಂದು ಕೇಳಿಕೊಂಡಾಗ ಅದನ್ನು ಗಾಂಧೀಜಿಯವರು ವಿರೋಧಿಸಿ, ಅಸ್ಪೃಶ್ಯರನ್ನು ರಾಜಕೀಯವಾಗಿ ದುರ್ಬಲರನ್ನಾಗಿ ಮಾಡುವ ಏಕೈಕ ಗುರಿಯಿಂದಲೇ ಆಮರಣ ಉಪವಾಸ ಕೈಕೊಂಡದ್ದು ಸರಿಯಾದ ಉಪಕ್ರಮವಲ್ಲ.

'ಪೂನಾ-ಒಪ್ಪಂದ'ವನ್ನು ಅಸ್ಪೃಶ್ಯರು ಒಪ್ಪಿಕೊಂಡಾಗಲೂ ಕಾಂಗ್ರೆಸ್ ಸರಕಾರದ ಮಂತ್ರಿಮಂಡಳಗಳಲ್ಲಿ ಅಸ್ಪೃಶ್ಯರಿಗೆ ಎಂದೂ ಸಂಪುಟದರ್ಜೆಯ ಮಂತ್ರಿ ಸ್ಥಾನಗಳು ಲಭಿಸಿರಲಿಲ್ಲ. ದಲಿತರನ್ನು ವಂಚಿಸುವ ಕಾಂಗ್ರೆಸ್ ಕುತಂತ್ರಿ ಧುರೀಣರ ವಿರುದ್ಧ ಗಾಂಧೀಜಿಯವರು ಕೈಕೊಂಡ ಕ್ರಮವಾದರೂ ಏನು ? ಗಾಂಧೀಜಿಯವರಿಗೆ ಅಸ್ಪೃಶ್ಯರ ಬಗೆಗೆ ನಿಜವಾದ ಕಳಕಳಿ ಇದ್ದಿದ್ದೆಯಾದರೆ ಕಾಂಗ್ರೆಸ್ ಪಕ್ಷದ ಮೇಲೆ ಒತ್ತಾಯ ತಂದು ಅಸ್ಪೃಶ್ಯರಿಗೆ ಉನ್ನತ ಹುದ್ದೆಗಳಲ್ಲಿ ಪ್ರಾತಿನಿಧ್ಯ ಕೊಡಿಸಬಹುದಾಗಿತ್ತಲ್ಲಾ !

ಸೆಂಟ್ರಲ್ ಪ್ರಾವಿನ್ಸ್ (C.P.) ನಲ್ಲಿ ಶ್ರೀ ಅಗ್ನಿಭೋಜ ಎಂಬ ಸಮರ್ಥ ಅಸ್ಪೃಶ್ಯ ನಾಯಕನನ್ನು ಡಾ. ಖಾರೆಯವರು ತಮ್ಮ ಮಂತ್ರಿಮಂಡಳದಲ್ಲಿ ಸಂಪುಟ

ದರ್ಜೆಯ ಸಚಿವರನ್ನಾಗಿ ನೇಮಿಸಿಕೊಂಡಾಗ ಗಾಂಧೀಜಿಯವರು ಅದಕ್ಕೆ ತಮ್ಮ ಒಪ್ಪಿಗೆಯನ್ನು ಏಕೆ ಕೊಡಲಿಲ್ಲ ?[೧೧]

ಗಾಂಧೀಜಿಯವರ ಹರಿಜನ ಸೇವಕ ಸಂಘದ ಮುಖ್ಯ ಉದ್ದೇಶ ದಲಿತರನ್ನು ಮೇಲೆತ್ತುವುದಾಗಿರಲಿಲ್ಲ. ಬದಲಾಗಿ ಅವರನ್ನು ತನ್ನ ಕಪಿಮುಷ್ಠಿಯಲ್ಲಿ ನಿರಂತರವಾಗಿ ಇಟ್ಟುಕೊಳ್ಳುವದೇ ಆಗಿತ್ತು. ಅಂಬೇಡ್ಕರ ಅದನ್ನು ಹೀಗೆ ಹೇಳುತ್ತಾರೆ : "The whole object of the Sangha is to create a slave mentality among the Uutouchables towards their Hindu masters".[೧೨] ಅಂಬೇಡ್ಕರರು ಗಾಂಧೀಜಿಯವರ ದ್ವಂದ್ವ ನೀತಿ, ಹರಿಜನ ವಿರೋಧಿ ನಿಲುವನ್ನು ಕಟುವಾಗಿ ಟೀಕಿಸಿ ಗಾಂಧೀಜಿ ಒಬ್ಬ **ನಯವಂಚಕ, ವಿಶ್ವಾಸಘಾತುಕ** ಮತ್ತು ತನ್ನ ಮೃದು ಮಾತಿನಿಂದ ಸಾರ್ವತ್ರಿಕವಾಗಿ ಶೋಷಣೆ ಮಾಡುವ ಒಬ್ಬ ಪಕ್ಕಾ **ಹಿಂದೂ ಮತಾಂಧ** ಎಂದು ಪರಿಗಣಿಸಿದ್ದರು. ಅಂಬೇಡ್ಕರರು ಗಾಂಧೀಜಿಯವರ ನಿಲುವನ್ನು ಕಟುವಾಗಿ ಟೀಕಿಸಿದ್ದಾರೆ : "His anti-untouchabilty campaign is looked upon as a fad if not a side show. That is why Hindus respond to his political biddings but never to his social or religious preaching. The momentum of his anti-untouchability compaign must therefore remain nullity. Mr. Gandhi is a political shoe maker. He must stick to his political last".[೧೩]

ಗಾಂಧೀಜಿ ಮತ್ತು ಅಂಬೇಡ್ಕರರಲ್ಲಿರುವ ಭಿನ್ನಾಭಿಪ್ರಾಯಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಅಂಬೇಡ್ಕರರನ್ನು ತಪ್ಪಾಗಿ ಅರ್ಥೈಸುವಂತಾಗಬಾರದು. ಗಾಂಧೀಜಿ, ಕಾಂಗ್ರೆಸ್ ಮತ್ತು ಅವರ ಅನುಯಾಯಿಗಳ ಕಣ್ಣಲ್ಲಿ ಅಂಬೇಡ್ಕರರು ದೇಶದ್ರೋಹಿ ಎಂದು ಕಂಡದ್ದು ಒಂದು ಸೋಜಿಗದ ಸಂಗತಿ.

ಅಸ್ಪೃಶ್ಯರು ಎಲ್ಲ ವರ್ಗಗಳಿಗಿಂತ ವಿಭಿನ್ನ ರಂಗಗಳಲ್ಲಿ ದುರ್ಬಲರಾಗಿರುವದರಿಂದ ಅವರಿಗೆ ಬ್ರಿಟಿಷ ಸರಕಾರ ಹೆಚ್ಚು ಸೌಲತ್ತು ಕೊಟ್ಟು ಅವರನ್ನು ಸಶಕ್ತರನ್ನಾಗಿ ಮಾಡಬೇಕು. ಈ ಪ್ರಕ್ರಿಯೆಯಲ್ಲಿ ಹಿಂದೂಗಳು ಬ್ರಿಟಿಷರಿಗೆ ಸಹಾಯ ಮಾಡಬೇಕು ಎಂಬ ವಾದ ಅಂಬೇಡ್ಕರರದಾಗಿತ್ತು. ಆದರೆ ಇದನ್ನು ತಪ್ಪಾಗಿ ಭಾವಿಸಿ ಅಂಬೇಡ್ಕರರನ್ನು ರಾಜಕೀಯವಾಗಿ ದೂರಿಡಲು ಕೆಲವು ಸಂಘಟನೆಗಳು ಮತ್ತು

೧೧. Ibid., PP. 251-254.
೧೨. Ibid., P. 250.
೧೩. Ibid., PP. 247-48.

ಅವರ ಧುರೀಣರು ವಿಫಲ ಪ್ರಯತ್ನ ಮಾಡಿದ್ದರು. ಡಾ. ಅಂಬೇಡ್ಕರರು ತಮ್ಮ ಜನಾಂಗಕ್ಕೆ ಆದ ಅನ್ಯಾಯವನ್ನು ಅನುಭವಿಸಿ, ನೊಂದು ಈ ಕೆಳಗಿನ ಮಾತುಗಳನ್ನು ಉದ್ಗರಿಸಿದ್ದಾರೆ. "The Hindus have been opposing the political demands of the Untouchables with the tenacity of bulldog and a perversity of a renegade. The press is theirs and they make a systematic attempt to ignore the Untouchables. When they fail to ignore them they buy their leaders, and where they find a leaders not open to purchase they systematically abuse him, misinterpret him, blackmail him, and do everything possible that lies in their power to suppress him and silence him. Any such leader who is determined to fight for the cause of Untouchables he and his followers are condemned as anti-nationol".೧೪ ಡಾ. ಅಂಬೇಡ್ಕರರು ಅಸ್ಪೃಶ್ಯರನ್ನು ಸಂರಕ್ಷಿಸಲು ಪಣತೊಟ್ಟು, ತನ್ನ ಜನಾಂಗಕ್ಕೆ ಸ್ವತಂತ್ರ ಭಾರತದ ಸಂವಿಧಾನದಲ್ಲಿ ಅನೇಕ ಮೀಸಲಾತಿಯ ಸೌಲತ್ತುಗಳನ್ನು ಕಲ್ಪಿಸಿ ಕೊಟ್ಟಿದ್ದಾರೆ.

ಅಂಬೇಡ್ಕರರಿಗೆ ಕೇವಲ ರಾಜಕೀಯ ಸಮಾನತೆಯಲ್ಲಿ ನಂಬಿಕೆ ಇರಲಿಲ್ಲ. ಬದಲಾಗಿ ಭಾರತದ ಎಲ್ಲ ಸಮುದಾಯದ ಜನರಿಗೆ ಸಮಾನತೆಯನ್ನು ಒದಗಿಸಬೇಕೆಂಬ ಅಪಾರ ಕಳಕಳಿಯಿತ್ತು. ಆದರೆ ಕಾಂಗ್ರೆಸ್ ಧುರೀಣರು ಅಂಬೇಡ್ಕರರ ಪ್ರಯತ್ನವನ್ನು ನಿಷ್ಫಲಗೊಳಿಸಿದಾಗ, ನಿರಾಶೆಗೊಂಡ ಅಂಬೇಡ್ಕರ ಸಂವಿಧಾನವನ್ನು ರಾಷ್ಟ್ರಕ್ಕೆ ಸಮರ್ಪಿಸುವಾಗ "On January 26, 1950 we are entering into contradictions. In political sphear we have one man one value but in social and economic sphear there is a discrimination and the present constitution should set right. the things immediately otherwise people will blowup this constitution".೧೫

ಸ್ವತಂತ್ರ ಭಾರತದಲ್ಲಿ ಸವರ್ಣೀಯ ಹಿಂದೂಗಳು ಅಸ್ಪೃಶ್ಯರ ಮತ್ತು ಅಲ್ಪಸಂಖ್ಯಾತರ ಹಕ್ಕುಗಳನ್ನು ನಿರಾಕರಿಸಬಹುದು. ಮತ್ತು ಈ ಜನಾಂಗ ಬಹುಸಂಖ್ಯಾತ ಕೋಮುವಾದಿಗಳ ಕೈಯಲ್ಲಿ ಸಿಕ್ಕು ನಿರಂತರ ದಮನಕ್ಕೆ ಒಳಗಾಗಬಹುದು ಎಂಬ ಭೀತಿಯಿಂದ ಅಂಬೇಡ್ಕರರು "Democracy and democratic life, justice and conscience which has sustained by a belief in

೧೪. Dr. B. R. Ambedkar, **Mr. Gandhi and Emancipation of the Untouchables**, op.cit., P. 61.

೧೫. ಅದೇ.

democratic principle are foreign to the Hindu mind. To leave democracy and freedom in such torry hands would be the greatest mistake democrats could commit".[೧೬] ಅಂಬೇಡ್ಕರರನ್ನು ರಾಷ್ಟ್ರದ್ರೋಹಿ, ಬ್ರಿಟಿಷರ ಕೈಗೊಂಬೆ ಮತ್ತು ಸ್ವಾತಂತ್ರ್ಯ ವಿರೋಧಿ ಎಂದು ಹೇಳುವವರು ಅಂಬೇಡ್ಕರರ ಸಾಮಾಜಿಕ ಧಾರ್ಮಿಕ, ಆರ್ಥಿಕ ಮತ್ತು ರಾಜಕೀಯ ವಿಚಾರಗಳನ್ನು ತಿಳಿದು ಕೊಳ್ಳುವುದು ಅವಶ್ಯ. ಅಂಬೇಡ್ಕರ ಅಸ್ಪೃಶ್ಯರ ಹಕ್ಕುಗಳಿಗಾಗಿ ಹೋರಾಟ ಮಾಡಿದಾಗ ಗಾಂಧೀಜಿಯವರ ಅನುಯಾಯಿಗಳು ಮತ್ತು ಕಾಂಗ್ರೆಸ್ಸಿಗರು ಅಂಬೇಡ್ಕರರನ್ನು ದೇಶದ್ರೋಹಿ ಎಂದು ಅಪಪ್ರಚಾರ ಮಾಡಿದರು. ಅಂಬೇಡ್ಕರ ಕೇವಲ ಅಸ್ಪೃಶ್ಯರ ಹಕ್ಕುಗಳಿಗಾಗಿ ಹೋರಾಡದೆ ಇಡೀ ಮಾನವ ಜನಾಂಗದ ಸಂಕೋಲೆಗಳನ್ನು ಕತ್ತರಿಸಿಹಾಕಲು ಹೆಣಗಿದ ಮಹಾ ಮಾನವತಾವಾದಿ ಹಾಗೂ ಅಂತರ್ ರಾಷ್ಟ್ರೀಯ ಮಾನವ ಹಕ್ಕುಗಳ ಸಂರಕ್ಷಕರು.

● ●

೧೬. B. R. Ambedkar, **Mr. Gandhi and the Emancipation of the Untouchables**, op.cit., P. 71.

ನ್ಯಾಯ-ವೈಶೇಷಿಕರ ಅಧ್ಯಾತ್ಮತತ್ತ್ವ

● ಎನ್. ವ್ಹಿ. ಕೊಪ್ಪಳ

ಯದಾ ಚರ್ಮವದಾಕಾಶಂ ವೇಷ್ಟಯಿಷ್ಯಂತಿ ಮಾನವಾಃ ।
ತದಾ ಶಿವಮವಿಜ್ಞಾಯ ದುಃಖಸ್ಯಾಂತೋ ಭವಿಷ್ಯತಿ ॥

— **ಸರ್ವದರ್ಶನ ಸಂಗ್ರಹ** (ಸಾಯಣಕೃತ)

'ಮಾನವರು ಯಾವಾಗ ಆಕಾಶವನ್ನು ಚರ್ಮದಂತೆ ಹೊದೆಯಲು ಸಮರ್ಥರಾಗುವರೊ ಆಗ ಶಿವನನ್ನು ಅರಿಯದಿದ್ದರೂ ಅವರಿಗೆ ದುಃಖದ ಕೊನೆಯು ಸಂಭವಿಸುತ್ತದೆ' — ಇದು ಶ್ವೇತಾಶ್ವತರ ಉಪನಿಷತ್ತಿನ ಪ್ರಮಾಣ ವಚನ. ಪ್ರತಿಯೊಬ್ಬ ಮಾನವನು ಒಂದಿಲ್ಲೊಂದು ರೀತಿಯಿಂದ ದುಃಖವನ್ನು ಅನುಭವಿಸುತ್ತಿರುತ್ತಾನೆ. ವಿವೇಕಿ ಪುರುಷನು ಮಾತ್ರ ದುಃಖವನ್ನು ಪರಿಹರಿಸಿಕೊಳ್ಳಬೇಕೆಂದು ಉತ್ಸುಕನಾಗಿ ತಾತ್ವಿಕ ಸ್ವರೂಪವನ್ನು ಅರಿಯಲು ಮಾರ್ಗವನ್ನು ಹುಡುಕುತ್ತಾನೆ; ಪರಮಾತ್ಮನ ಸಾಕ್ಷಾತ್ಕಾರವೊಂದೇ ಅದಕ್ಕೆ ಪರಮೋಪಾಯವೆಂದು ತಿಳಿಯುತ್ತಾನೆ.

ಈ ದಿಸೆಯಲ್ಲಿ ವಸ್ತುವಿನ ಸತ್ಯಭೂತವಾದ ತಾತ್ವಿಕ ಸ್ವರೂಪವನ್ನು ಅರಿಯಲು ಸುಮಾರು ವಿಕ್ರಮಪೂರ್ವ ೪೦೦ ರಿಂದ ೨೦೦ ರ ಅವಧಿಯಲ್ಲಿ ಅನೇಕ ದರ್ಶನಗಳು ಮೂಡಿಬಂದವು. ಅವು ತಮ್ಮ ಧ್ಯೇಯಗಳ ಮುಖಾಂತರ ಮನುಷ್ಯನನ್ನು ಐಹಿಕ ಚಿಂತನೆಯಿಂದ ಮುಕ್ತಗೊಳಿಸಿ, ಪಾರಲೌಕಿಕ ಚಿಂತನೆಯನ್ನು ಮಾಡುವದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟವು.

ಭಾರತೀಯ ದರ್ಶನಗಳಲ್ಲಿ ಆಸ್ತಿಕ ಹಾಗೂ ನಾಸ್ತಿಕ ಎಂದು ವಿಂಗಡಿಸಲ್ಪಟ್ಟಿದ್ದು, ಈಶ್ವರನ ಸತ್ಯತ್ವವನ್ನು ಅಂಗೀಕರಿಸುವವರನ್ನು ಆಸ್ತಿಕರೆಂದೂ, ಅದನ್ನು ನಿಷೇಧಿಸುವವರನ್ನು ನಾಸ್ತಿಕರೆಂದೂ ಕರೆಯುವುದು ಸಾಮಾನ್ಯ ರೂಢಿಯಾಗಿದೆ. ಅಷ್ಟಾಧ್ಯಾಯಿಯಲ್ಲಿ (೪-೪-೬೦) ಆಸ್ತಿಕ, ನಾಸ್ತಿಕ ಹಾಗೂ ದೈಷ್ಟಿಕ ಎಂಬ ಶಬ್ದಗಳ ವ್ಯುತ್ಪತ್ತಿ ಇದ್ದು, ಅಲ್ಲಿ ಪಾಣಿನಿಯು – 'ಅಸ್ತಿ ಪರಲೋಕಃ ಇತಿ ಮತಿರ್ಯಸ್ಯ ಸ ಆಸ್ತಿಕಃ ।' ಅಂದರೆ 'ಪರಲೋಕವು ಇದೆ ಎಂದು ನಂಬುವ ವ್ಯಕ್ತಿಯೆ ಆಸ್ತಿಕ' ಎನ್ನುತ್ತಾನೆ. ಆದರೆ ದರ್ಶನ ಗ್ರಂಥಗಳಲ್ಲಿ ಈ ಅರ್ಥಗಳಿಗಿಂತ ಭಿನ್ನವಾದ

ಮತ್ತೊಂದು ಅರ್ಥದಲ್ಲಿ ಆಸ್ತಿಕ-ನಾಸ್ತಿಕ ಶಬ್ದಗಳು ಪ್ರಯೋಗಗೊಂಡಿವೆ. ವೇದಗಳ ಪ್ರಾಮಾಣ್ಯದ ವಿಷಯದಲ್ಲಿ ನಂಬಿಕೆ ಇರುವುದಕ್ಕೆ 'ಆಸ್ತಿಕ'ವೆಂದೂ, ವೇದಗಳ ಪ್ರಮಾಣವನ್ನು ಒಪ್ಪದೆ ಅದನ್ನು ನಿಂದಿಸುವದಕ್ಕೆ 'ನಾಸ್ತಿಕ' ಎಂದೂ ಹೇಳಲಾಗಿದೆ. ಹೀಗೆ ಭಾರತೀಯ ದರ್ಶನಗಳಲ್ಲಿ ವೇದದ ಪ್ರಾಮಾಣ್ಯವನ್ನು ಅಂಗೀಕರಿಸುವ ನ್ಯಾಯ-ವೈಶೇಷಿಕ, ಸಾಂಖ್ಯಯೋಗ, ಪೂರ್ವಮೀಮಾಂಸಾ ಹಾಗೂ ಉತ್ತರ ಮೀಮಾಂಸಾ ದರ್ಶನಗಳನ್ನು ಆಸ್ತಿಕದರ್ಶನಗಳೆಂದೂ, ವೇದದ ಪ್ರಾಮಾಣ್ಯವನ್ನು ಒಪ್ಪದಿರುವ ಚಾರ್ವಾಕ, ಬೌದ್ಧ ಹಾಗು ಜೈನದರ್ಶನಗಳನ್ನು ನಾಸ್ತಿಕದರ್ಶನ ಗಳೆಂದೂ ವಿದ್ವಾಂಸರು ಪರಿಗಣಿಸಿದ್ದಾರೆ. ಈ ದರ್ಶನಗಳಲ್ಲಿ ನ್ಯಾಯ ಹಾಗೂ ವೈಶೇಷಿಕದರ್ಶನಗಳು ಪ್ರಾಚೀನದರ್ಶನಳೆಂದು ಖ್ಯಾತಿ ಪಡೆದಿವೆ.

ನ್ಯಾಯದರ್ಶನ :

ವೈದಿಕಧರ್ಮದ ಸ್ವರೂಪಾನುಸಂಧಾನಕ್ಕೆ ನ್ಯಾಯ ಅರ್ಥಾತ್ ತರ್ಕವು ಉಪಯುಕ್ತವಾಗಿದೆ. ವಾತ್ಸಾಯನನ ನ್ಯಾಯಭಾಷ್ಯೆಯ ದೃಷ್ಟಿಯಲ್ಲಿ ನ್ಯಾಯ ವಿದ್ಯೆಯ ಮಹತ್ವ ಹೀಗಿದೆ :

ಪ್ರದೀಪಃ ಸರ್ವವಿದ್ಯಾನಾಂ ಉಪಾಯಃ ಸರ್ವಕರ್ಮಣಾಮ್ ।
ಆಶ್ರಯಃ ಸರ್ವಧರ್ಮಾಣಾಂ ವಿದ್ಯೋದ್ದೇಶೇ ಪ್ರಕೀರ್ತಿತಾ ॥

ಗೌತಮಋಷಿಯು ನ್ಯಾಯದರ್ಶನದ ಪ್ರತಿಷ್ಠಾಪಕನು; ಅಕ್ಷಪಾದನೆಂಬುದು ಅವನ ಇನ್ನೊಂದು ಹೆಸರು. ಈ ದರ್ಶನವು ಮುಖ್ಯವಾಗಿ ಬೌದ್ಧಿಕ, ತರ್ಕಬದ್ಧ ಹಾಗೂ ಪ್ರಮಾಣಮೀಮಾಂಸೆಯ ಮೂಲಕ ವಸ್ತುನಿರ್ಣಯವನ್ನು ಮಾಡುತ್ತದೆ. ನ್ಯಾಯದರ್ಶನಕ್ಕೆ ತರ್ಕಶಾಸ್ತ್ರ, ಪ್ರಮಾಣಶಾಸ್ತ್ರ, ಹೇತುವಿದ್ಯಾ, ಆನ್ವೀಕ್ಷಕೀ ಮುಂತಾದ ಹೆಸರುಗಳುಂಟು.

ಗೌತಮನ 'ನ್ಯಾಯಸೂತ್ರ'ಗಳು ಈ ದರ್ಶನದ ಮೊದಲ ಕೃತಿ. ಇದಕ್ಕೆ ವಾತ್ಸಾಯನನು 'ನ್ಯಾಯಭಾಷ್ಯ' ಎಂಬ ಟೀಕಾಗ್ರಂಥವನ್ನು ಬರೆದಿದ್ದಾನೆ. ವಾತ್ಸಾ ಯನನ ನ್ಯಾಯಭಾಷ್ಯಕ್ಕೆ ಉದ್ಯೋತಕರನು ವಾರ್ತಿಕವನ್ನು ರಚಿಸಿದ್ದಾನೆ. ಈ ವಾರ್ತಿಕದ ಮೇಲಿನ ವಾಚಸ್ಪತಿಕೃತ 'ತಾತ್ಪರ್ಯಟೀಕಾ' ಎಂಬ ಗ್ರಂಥವು ಪ್ರಸಿದ್ಧ ವಿದೆ. ಅಲ್ಲದೆ ಉದಯನನ 'ನ್ಯಾಯ ಕುಸುಮಾಂಜಲೀ', ಜಯಂತನ 'ನ್ಯಾಯ ಮಂಜರೀ' ಎಂಬವು ಈ ದರ್ಶನದ ಉತ್ಕೃಷ್ಟ ಗ್ರಂಥಗಳು.

ವೈಶೇಷಿಕ ದರ್ಶನ :

'ಕಣಾದಂ ಪಾಣಿನೀಯಂ ಚ ಸರ್ವಶಾಸ್ತ್ರೋಪಕಾರಕಮ್' ಎಂಬುದು ಪಂಡಿತರಲ್ಲಿ ಪ್ರಚಲಿತವಾದ ಆರ್ಯೋಕ್ತಿ. ಕಣಾದನ ದರ್ಶನ ಹಾಗೂ ಪಾಣಿನಿಯ ವ್ಯಾಕರಣ – ಇವು ಸಮಸ್ತ ಹಿಂದೂ ಶಾಸ್ತ್ರಗಳಿಗೆ ಆದರ್ಶಪ್ರಾಯವಾಗಿವೆ. ವೈಶೇಷಿಕ ದರ್ಶನದಲ್ಲಿಯ ಪದಾರ್ಥಸ್ವರೂಪದ ವಿವರಗಳು ಅಭ್ಯಾಸಿಗಳಿಗೆ ಬಹಳ ಉಪಯುಕ್ತವಾಗಿವೆ.

ವೈಶೇಷಿಕದರ್ಶನಕ್ಕೆ ಔಲೂಕ್ಯದರ್ಶನ, ಕಣಾದದರ್ಶನ ಎಂಬ ಹೆಸರುಗಳೂ ಇವೆ. ಈ ದರ್ಶನದ ಗ್ರಂಥಗಳು ವಿಪುಲವಾಗಿವೆ. ವೈಶೇಷಿಕಸೂತ್ರಗಳ ಮೇಲಿನ 'ಭಾರದ್ವಾಜ ವೃತ್ತಿಯು' ಪ್ರಾಚೀನವೆಂದು ತಿಳಿದುಬರುತ್ತದೆ. ಪ್ರಶಸ್ತಪಾದನ 'ಪದಾರ್ಥಧರ್ಮಸಂಗ್ರಹ'ವು ಕಣಾದನ ವೈಶೇಷಿಕಸೂತ್ರಗಳ ಮೇಲೆ ರಚಿತವಾದ ಅತ್ಯುತ್ತಮ ಭಾಷ್ಯಗ್ರಂಥ. ಈ ಭಾಷ್ಯದ ಮೇಲೆ ಉದಯನ ಹಾಗೂ ಶ್ರೀಧರ ಎಂಬುವರು ವೃತ್ತಿಯನ್ನು ಬರೆದಿದ್ದಾರೆ. ಅಲ್ಲದೆ, ಶ್ರೀಧರಾಚಾರ್ಯನ 'ನ್ಯಾಯ ಕಂದಲೀ', ವಲ್ಲಭಾಚಾರ್ಯನ 'ನ್ಯಾಯಲೀಲಾವತೀ', ಶ್ರೀವತ್ಸನ 'ನ್ಯಾಯ ಲೀಲಾವತೀ ವ್ಯಾಖ್ಯಾನ', ಶಂಕರಮಿಶ್ರನ 'ಕಣಾದ ರಹಸ್ಯ' ಹಾಗೂ 'ಉಪಸ್ಕಾರ' ಗಳು, ಪ್ರಶಸ್ತಪಾದನ ಭಾಷ್ಯದ ಮೇಲೆ ಜಗದೀಶ ಭಟ್ಟಾಚಾರ್ಯನು ರಚಿಸಿದ 'ಸೂಕ್ತಿ', ಶಿವಾದಿತ್ಯಮಿಶ್ರನ 'ಸಪ್ತಪದಾರ್ಥೀ', ವಿಶ್ವನಾಥನ 'ನ್ಯಾಯಸೂತ್ರ ವೃತ್ತಿ', ಅನ್ನಂಭಟ್ಟನ 'ತರ್ಕಸಂಗ್ರಹ' ಹಾಗೂ 'ದೀಪಿಕಾ' ಮುಂತಾದ ವೈಶೇಷಿಕ ದರ್ಶನದ ಪ್ರಸಿದ್ಧ ಗ್ರಂಥಗಳು.

ನ್ಯಾಯ–ವೈಶೇಷಿಕ ದರ್ಶನಗಳ ಸಂಬಂಧ :

ಪ್ರಾರಂಭದಲ್ಲಿ ಈ ದರ್ಶನಗಳು ಸ್ವತಂತ್ರವಾಗಿ ಉತ್ಪನ್ನವಾದವು. ಮೊದಲು ನ್ಯಾಯದರ್ಶನವು ಮೀಮಾಂಸಾದರ್ಶನದ ಶಾಖೆಯಾಗಿತ್ತು. ಕಾಲಾಂತರದಲ್ಲಿ ನ್ಯಾಯ ಹಾಗೂ ವೈಶೇಷಿಕ ದರ್ಶನಗಳು ಹೊಂದಿಕೊಂಡು ಬೆಳೆದವು. ಅಂತೆಯೆ ವಾತ್ಸ್ಯಾಯನನು ವೈಶೇಷಿಕವನ್ನು 'ಪರತಂತ್ರ ಸಿದ್ಧಾಂತ' ಎಂದು ಕರೆದಿದ್ದಾನೆ. 'ಶತಶಾಸ್ತ್ರ'ದಲ್ಲಿ ಆರ್ಯದೇವನೆಂಬುವನು ಹಲವು ನ್ಯಾಯಸೂತ್ರಗಳನ್ನು ಉದಾಹರಿಸಿದ್ದಾನೆ; ಅವುಗಳನ್ನೇ, ವ್ಯಾಖ್ಯಾನಕಾರನು ವೈಶೇಷಿಕಸೂತ್ರಗಳೆಂದು ಉಲ್ಲೇಖಿಸಿದ್ದಾನೆ. ೧೧ನೆಯ ಶತಮಾನದ ಶಿವಾದಿತ್ಯನು ತನ್ನ 'ಸಪ್ತಪದಾರ್ಥೀ' ಎಂಬ ಗ್ರಂಥದಲ್ಲಿ ನ್ಯಾಯ ಹಾಗೂ ವೈಶೇಷಿಕ ದರ್ಶನಗಳನ್ನು ಸಮನ್ವಯಗೊಳಿಸಿದ್ದಾನೆ.

ನ್ಯಾಯದರ್ಶನವು ತರ್ಕ ಹಾಗೂ ಪ್ರಮಾಣಶಾಸ್ತ್ರಜ್ಞಾನವನ್ನು ವಿಸ್ತರಿಸಿದರೆ, ಸಮಾನತಂತ್ರವೆನಿಸುವ ವೈಶೇಷಿಕದರ್ಶನವು ತನ್ನ ತತ್ತ್ವಶಾಸ್ತ್ರವನ್ನು ವಿವರಿಸುತ್ತದೆ.

ಈ ಎರಡೂ ದರ್ಶನಗಳ ದೃಷ್ಟಿಯಲ್ಲಿ ಐಹಿಕಜೀವನವು ದುಃಖದ ನೆಲೆವೀಡಾಗಿದೆ. ಆತ್ಮನಿಗೆ ಬಂಧಕವೂ ಆಗಿದೆ; ದುಃಖದ ಸಂಪೂರ್ಣನಾಶವೆ ಮೋಕ್ಷವೆನಿಸಿದೆ. ಅಜ್ಞಾನವೆ ಬಂಧನಕ್ಕೆ ಕಾರಣವೆಂದೂ ಹಾಗೂ ವಸ್ತುವಿನ ಸಮ್ಯಕ್ ಜ್ಞಾನವೆ ಮೋಕ್ಷಕ್ಕೆ ಕಾರಣವೆಂದು ಎರಡೂ ತಂತ್ರಗಳು ಒಪ್ಪುತ್ತವೆ. 'ತತ್ತ್ವಜ್ಞಾನಾತ್ ದುಃಖಾತ್ಯಂತೋಚ್ಛೇದಲಕ್ಷಣಂ ನಿಶ್ರೇಯಸಂ ಭವತೀತಿ ಸಮಾನತಂತ್ರೇಽಪಿ ಪ್ರತಿಪಾದಿತಮ್ ।' (ನ್ಯಾ.ಸೂ. ೧-೧. ೧.)

ಆದರೆ ಪ್ರಾಮುಖ್ಯ ಸಂಗತಿಗಳ ಬಗೆಗೆ ಎರಡೂ ದರ್ಶನಗಳಲ್ಲಿ ಭಿನ್ನಾಭಿಪ್ರಾಯವಿದೆ. ನ್ಯಾಯವು ಪ್ರಮಾಣ, ಪ್ರಮೇಯ ಮುಂತಾದ ೧೬ ಪದಾರ್ಥಗಳನ್ನೊಪ್ಪಿದರೆ, ತನ್ನ 'ಪ್ರಮೇಯ' ಪದಾರ್ಥದಲ್ಲಿಯೆ ವೈಶೇಷಿಕರ ಸಪ್ತಪದಾರ್ಥಗಳನ್ನು ಅಡಗಿಸಿದೆ. ವೈಶೇಷಿಕವು 'ದ್ರವ್ಯಗುಣಕರ್ಮಸಾಮಾನ್ಯ ವಿಶೇಷಸಮವಾಯಾಭಾವಾಃ ಸಪ್ತಪದಾರ್ಥಾಃ' ಎಂದು ಏಳು ಪದಾರ್ಥಗಳನ್ನು ಗಮನಿಸುತ್ತದೆ. ನ್ಯಾಯವು ಪ್ರತ್ಯಕ್ಷ, ಅನುಮಾನ, ಉಪಮಾನ ಹಾಗೂ ಶಬ್ದವೆಂಬ ನಾಲ್ಕು ಪ್ರಮಾಣಗಳನ್ನು ಸ್ವೀಕರಿಸಿದರೆ, ವೈಶೇಷಿಕವು ಪ್ರತ್ಯಕ್ಷ ಹಾಗೂ ಅನುಮಾನ ಪ್ರಮಾಣಗಳನ್ನು ಅಂಗೀಕರಿಸುತ್ತದೆ.

ಆಧ್ಯಾತ್ಮತತ್ತ್ವ :

ನ್ಯಾಯ-ವೈಶೇಷಿಕರ ಪದಾರ್ಥಗಳ ಅಭ್ಯಾಸ, ಈಶ್ವರಕಲ್ಪನೆ, ಮೋಕ್ಷ ವಿಚಾರಗಳು ಅಧ್ಯಾತ್ಮತತ್ತ್ವವೆಂದು ಪರಿಗಣಿಸಬಹುದಾಗಿದೆ. ನ್ಯಾಯದರ್ಶನದ ೧೬ ಪದಾರ್ಥಗಳು ಹಾಗೂ ವೈಶೇಷಿಕ ದರ್ಶನದ ೭ ಪದಾರ್ಥಗಳು ವಿಶ್ವದ ಸಮಸ್ತ ವಸ್ತುಗಳ ಯಥಾರ್ಥಜ್ಞಾನವನ್ನು ಮಾಡಿಕೊಡುವಲ್ಲಿ ಸಹಾಯಕವಾಗಿವೆ. ಅದರಿಂದ ಈ ದರ್ಶನಗಳಲ್ಲಿ ಪಾರಮಾರ್ಥಿಕ ತತ್ತ್ವವೆಂದು ಬೋಧಿಸಲಾದ ಈಶ್ವರನ ಸತ್ಯತ್ವವನ್ನೂ ಹಾಗೂ ಮೋಕ್ಷದ ಪರಾಕಾಷ್ಠೆಯನ್ನೂ ಅರಿತುಕೊಳ್ಳಲು ಪ್ರೇರಣೆಯುಂಟಾಗುತ್ತದೆ.

ನ್ಯಾಯದರ್ಶನದ ೧೬ ಪದಾರ್ಥಗಳ ಸೂಕ್ಷ್ಮ ಪ್ರಭೇದಗಳನ್ನು ಪರಿಶೀಲಿಸದೆ ಸ್ಥೂಲ ಪರಿಚಯವನ್ನು ಇಲ್ಲಿ ನೋಡಬಹುದು.

ಯಾವುದರ ಮೂಲಕ ನಮಗೆ ವಸ್ತುವಿನ ಜ್ಞಾನವಾಗುತ್ತದೆಯೊ ಅದು **ಪ್ರಮಾಣ** (ಪ್ರಮಾಕರಣಂ ಪ್ರಮಾಣಂ). ಯಥಾರ್ಥ ಜ್ಞಾನದಲ್ಲಿ ಯಾವುದು ತೋರುತ್ತದೆಯೊ ಅದು **ಪ್ರಮೇಯ** (ಪ್ರಮಾಯಾಂ ಯದ್ಧಿ ಪ್ರತಿಭಾಸತೇ ತತ್ ಪ್ರಮೇಯಮ್ । ತಚ್ಚ ದ್ವಾದಶಪ್ರಕಾರಮ್ । ಆತ್ಮಶರೀರೇಂದ್ರಿಯಾರ್ಥ

ಬುದ್ಧಿ ಮನಃ ಪ್ರವೃತ್ತಿ ದೋಷಪ್ರೇತ್ಯಭಾವಫಲ ದುಃಖಾಪವರ್ಗ ಭೇದಾತ್); ನಿಶ್ಚಯಾತ್ಮಕ ಜ್ಞಾನವೇ **ಸಂಶಯ**; ಯಾವ ವಿಷಯವನ್ನುದ್ದೇಶಿಸಿ ಮನುಷ್ಯನಲ್ಲಿ ಕಾರ್ಯಪ್ರವೃತ್ತಿಯುಂಟಾಗುತ್ತದೆಯೊ ಅದು **ಪ್ರಯೋಜನ**; ವ್ಯಾಪ್ತಿಯನ್ನು ಗ್ರಹಿಸುವದಕ್ಕೆ ಆಧಾರವಾಗಿರುವುದೆ **ದೃಷ್ಟಾಂತ**; ಪ್ರಾಮಾಣಿಕವೆಂದು ಒಪ್ಪಿದ ವಿಚಾರವೆ **ಸಿದ್ಧಾಂತ** (ಪ್ರಾಮಾಣಿಕತ್ವೇನಾಭ್ಯುಪಗತೋ ಅರ್ಥಃ ಸಿದ್ಧಾಂತಃ); ತತ್ತ್ವನಿರ್ಣಯವೆ ಗುರಿಯಾಗಿರುವ ಗೋಷ್ಠಿಯೆ **ವಾದ** (ತತ್ತ್ವನಿರ್ಣಯ ಫಲಃ ಕಥಾ ವಿಶೇಷೋ ವಾದಃ); ಪ್ರಮಾಣಗಳಿಂದ ತಮ್ಮ ತಮ್ಮ ಪಕ್ಷವನ್ನು ಸಾಧಿಸಿ, ಗೆಲ್ಲಬೇಕೆಂಬ ಇಚ್ಛೆಯಿಂದ ಇಬ್ಬರಲ್ಲಿ ನಡೆಯುವ ವಾದವೆ **ಜಲ್ಪ** (ಉಭಯಸಾಧನ ವತೀ ವಿಜಿಗೀಷು ಕಥಾಜಲ್ಪಃ); ಕೇವಲ ಪರಪಕ್ಷವನ್ನು ಖಂಡಿಸಲು ವಾದಮಾಡು ವುದೆ **ವಿತಂಡಾ** (ಸ್ವಪಕ್ಷ ಸ್ಥಾಪನಾಹೀನಃ ಕಥಾ ವಿಶೇಷೋ ವಿತಂಡಾ); ಪರಾ ರ್ಥಾನುಮಾನವಾಕ್ಯದಲ್ಲಿಯ ಒಂದು ಭಾಗವೆ **ಅವಯವ.** ಪ್ರಮಾಣಗಳಿಗೆ ಸಹಕಾರಿಯಾಗಿ ಬರುವ ಜ್ಞಾನವಿಶೇಷವೆ **ತರ್ಕ**; ತತ್ತ್ವಾವಧಾರಣವೇ **ನಿರ್ಣಯ** (ಅಂದರೆ ಸಾಧಕ–ಬಾಧಕಗಳನ್ನು ವಿಮರ್ಶೆಮಾಡಿ ಸ್ವಸ್ವರೂಪವನ್ನು ನಿಷ್ಕರ್ಷಿಸು ವದು ನಿರ್ಣಯ); ಸಾಧಿಸಬೇಕಾದುದನ್ನು ಸಾಧಿಸದಿರುವ, ಆದರೆ ಹೇತುವಿನಂತೆ ತೋರುವ ಹೇತುವಿಗೆ **ಹೇತ್ವಾಭಾಸ** ಎಂದು ಹೆಸರು. (ಅಸಾಧಕೊ ಹೇತುತ್ವೇನಾ ಭಿಮಂತೋ ಹೇತ್ವಾಭಾಸಃ); ಶಬ್ದವೃತ್ತಿಗಳ ವ್ಯತ್ಯಾಸದಿಂದ ಮಾತನ್ನು ವಿರೋಧಿ ಸುವುದೇ **ಛಲ** (ಶಬ್ದವೃತ್ತಿವ್ಯತ್ಯಯೇನ ಪ್ರತಿಶೇಧಹೇತಶ್ಛಲಮ್); ವಾದದಲ್ಲಿ ತನ್ನ ನಿಲುವಿಗೆ ವಿರುದ್ಧವಾಗಿ ಉತ್ತರಕೊಡುವುದೆ **ಜಾತಿ**; ವಾದದಲ್ಲಿ ಪರಾ ಜಯಕ್ಕೆ ಕಾರಣವಾದವುಗಳೇ **ನಿಗ್ರಹಸ್ಥಾನ.**

ಈ ಪದಾರ್ಥಗಳ ಜ್ಞಾನವಲ್ಲದೆ ಪ್ರತ್ಯಕ್ಷಾದಿ ಪ್ರಮಾಣಗಳ ವಿಸ್ತಾರವಾದ ಅಧ್ಯಯನವು, ವಸ್ತುಗಳ ಸತ್ಯದರ್ಶನವನ್ನು ಮಾಡಿಸುತ್ತದೆ ಎಂಬುದು ನ್ಯಾಯ ದರ್ಶನದ ಅಭಿಮತ.

ವೈಶೇಷಿಕರು ಪರಮೇಶ್ವರನ ಸಾಕ್ಷಾತ್ಕಾರಕ್ಕೆ ಶ್ರವಣ–ಮನನ–ನಿಧಿಧ್ಯಾಸಗಳು ಅತ್ಯಾವಶ್ಯವೆನ್ನುತ್ತಾರೆ. ಆದಕ್ಕಾಗಿ ಆಗಮ, ಅನುಮಾನ ಮತ್ತು ನಿರಂತರ ಧ್ಯಾನ ಕ್ರಮಗಳ ವಿಧಾನದಿಂದ ಜ್ಞಾನವನ್ನು ಸಂಪಾದಿಸಿ ಉತ್ತಮ ಫಲವನ್ನು ಪಡೆಯಲು ಬೋಧಿಸುತ್ತಾರೆ.

ಆಗಮೇನಾನುಮಾನೇನ ಧ್ಯಾನಾಭ್ಯಾಸಬಲೇನ ಚ ।
ತ್ರಿಧಾ ಪ್ರಕಲ್ಪಯನ್ ಪ್ರಜ್ಞಾಂ ಲಭತೇ ಯೋಗಮುತ್ತಮಮ್ ॥

ಈ ಮೂರು ಉಪಾಯಗಳಲ್ಲಿ ಮನನವು ಅನುಮಾನಪ್ರಮಾಣವನ್ನು ಅವಲಂಬಿಸಿದೆ. ಅನುಮಾನವು ವ್ಯಾಪ್ತಿಜ್ಞಾನಕ್ಕೆ ಅಧೀನವಾಗಿದೆ. ವ್ಯಾಪ್ತಿಜ್ಞಾನದಿಂದ ಪದಾರ್ಥಗಳ

ವಿವೇಚನೆ ಉಂಟಾಗುತ್ತದೆ. ಇದನ್ನರಿತ ವೈಶೇಷಿಕವು ಪದಾರ್ಥಗಳ ಜ್ಞಾನವನ್ನು ಬಿತ್ತರಿಸಿ ತತ್ತ್ವಪ್ರತಿಪಾದನೆ ಮಾಡುತ್ತದೆ. ವೈಶೇಷಿಕರ ಸಪ್ತಪದಾರ್ಥಗಳ ಪರಿಚಯು ಇದು :

'ದೀಪಿಕಾ' ಗ್ರಂಥವು ದ್ರವ್ಯದ ಲಕ್ಷಣವನ್ನು – 'ದ್ರವ್ಯತ್ವ ಜಾತಿಮತ್ವಂ ಗುಣವತ್ವಂ ವಾ ದ್ರವ್ಯಸಾಮಾನ್ಯ ಲಕ್ಷಣಂ' ಎನ್ನುತ್ತದೆ; ವೈಶೇಷಿಕ ಸೂತ್ರವು ಕ್ರಿಯಾಗುಣವತ್ ಸಮವಾಯೀ ಕಾರಣಮಿತಿ' ಅಂದರೆ 'ಯಾವುದರಲ್ಲಿ ಗುಣ ಹಾಗೂ ಕ್ರಿಯೆ ಇರುವದೋ ಆದರೆ ಅದಕ್ಕಿಂತ ಭಿನ್ನವಾಗಿದೆಯೋ ಅದು **ದ್ರವ್ಯ**' ಎಂದು ಹೇಳಿ, **ನವದ್ರವ್ಯಗಳ** ವಿವರವನ್ನು ಕೊಡುತ್ತದೆ. ದ್ರವ್ಯಗಳಲ್ಲಿಯ ಪದಾರ್ಥವೆ **ಗುಣ**; (ಮಹರ್ಷಿ ಕಣಾದನ ಅಭಿಮತದಲ್ಲಿ ಗುಣಗಳ ಸಂಖ್ಯೆ ೧೭; ಆದರೆ ಭಾಷ್ಯಕಾರನು ಹೆಚ್ಚಿನ ೭ ಸೇರಿಸಿ ಒಟ್ಟು ಗುಣಗಳು ೨೪ ಎಂದು ನಿರ್ಧರಿಸಿದ್ದಾನೆ.) ಗುಣದಂತೆ **ಕರ್ಮ**ವೂ ದ್ರವ್ಯವನ್ನಾಶ್ರಯಿಸುತ್ತದೆ. ಆದರೆ ಅದು ದ್ರವ್ಯದ ಆಶ್ರಿತಧರ್ಮವಿಶೇಷವಾಗಿರುತ್ತದೆ. (ಚಲನಾತ್ಮಕಂ ಕರ್ಮ); ನಿತ್ಯವೂ, ಸ್ವಯಂ ಒಂದೆಯಾಗಿದ್ದುದೂ, ಅನೇಕ ವಸ್ತುಗಳಲ್ಲಿ ಸಮವಾಯ ಸಂಬಂಧವನ್ನು ಹೊಂದಿ ಅನುಗತವಾಗಿರುವುದು **ಸಾಮಾನ್ಯ**. ಅನ್ನಂಭಟ್ಟನು – 'ನಿತ್ಯಮೇಕಮನೇಕಾನುಗತಂ ಸಾಮಾನ್ಯಮ್ । ದ್ರವ್ಯಗುಣಕರ್ಮವೃತ್ತಿ' ಎಂದಿದ್ದಾನೆ. ಸಾಮಾನ್ಯದ ಕಲ್ಪನೆಗೆ ವಿರುದ್ಧವಾದುದು **ವಿಶೇಷ**ದ ಕಲ್ಪನೆಯು. (ಬೇರೆ ಬೇರೆ ವ್ಯಕ್ತಿಗಳು ಏಕಶ್ರೇಣಿ ಬದ್ಧರಾದರೆ ಅದಕ್ಕೆ ಸಾಮಾನ್ಯವು ಕಾರಣವಾಗುತ್ತದೆ. ಸಮಾನಗುಣಗಳನ್ನು ಹೊಂದದ ವ್ಯಕ್ತಿ ಇಲ್ಲವೆ ವಸ್ತುಗಳಲ್ಲಿ ಪರಸ್ಪರ ಭೇದವನ್ನು ನಿರ್ದೇಶಿಸುವ ಪದಾರ್ಥವೆ ವಿಶೇಷವೆನಿಸುತ್ತದೆ.) ಭಾವಪದಾರ್ಥಗಳಲ್ಲಿ **ಸಮವಾಯವು** ಕೊನೆಯದು; ಪರಸ್ಪರ ನಿತ್ಯಸಂಬಂಧವಾದ ವಸ್ತುಗಳ ಸಂಬಂಧವು ಸಮವಾಯವಾಗುತ್ತದೆ. ('ಸಮವಾಯಃ ನಿತ್ಯಸಂಬಂಧಃ ಅಯುತಸಿದ್ಧವೃತ್ತಿ' ಎಂಬುದು ಸಮವಾಯದ ವ್ಯಾಖ್ಯೆ.) **ಅಭಾವ**ವನ್ನು ನಿಷೇಧಾತ್ಮಕ ಪ್ರಮಾಣದಿಂದ ತಿಳಿಯಲಾಗುತ್ತದೆ. (ಅಭಾವಸ್ತು ನಿಷೇಧಪ್ರಮಾಣಗಮ್ಯಃ...... । ಸ ಚ ಸಮವಾಯತ್ವೇ ಸತ್ಯಸಮವಾಯಃ । ಸ. ಸಂಗ್ರಹ) ಈ ಅಭಾವ ಪದಾರ್ಥವು ಪ್ರಾಗಭಾವ, ಪ್ರಧ್ವಂಸಾಭಾವ, ಅತ್ಯಂತಾಭಾವ, ಅನ್ಯೋನ್ಯಾಭಾವವೆಂದು ನಾಲ್ಕು ಪ್ರಕಾರವಾಗಿದೆ.

ನ್ಯಾಯ–ವೈಶೇಷಿಕರಲ್ಲಿ ಈಶ್ವರ ಕಲ್ಪನೆ :

ನ್ಯಾಯ ದರ್ಶನದಲ್ಲಿ ಈಶ್ವರತತ್ತ್ವವು ಮಹತ್ವಪೂರ್ಣವಾಗಿದ್ದು, ಈ ತತ್ತ್ವದ ಆಧಾರದಿಂದ ಧರ್ಮ ಹಾಗೂ ಸಾಧನಾ ಮಾರ್ಗವು ರೂಪುಗೊಂಡಿದೆ. ವಿಶ್ವವನ್ನು

ಸೃಷ್ಟಿಸುವಲ್ಲಿ ಈಶ್ವರನಿಗೆ ನೈತಿಕ ಹಾಗೂ ಆಧ್ಯಾತ್ಮಿಕ ಉದ್ದೇಶವುಂಟೆಂದೂ ಅವನು ಜಗತ್ತಿಗೆ ನಿಮಿತ್ತಕಾರಣನೆಂದೂ, ತನ್ನ ಇಚ್ಛೆಯ ಮೇರೆಗೆ ಜಗತ್ತನ್ನು ರಕ್ಷಿಸುತ್ತಾನೆಂದೂ ನೈಯಾಯಿಕರು ನಂಬುತ್ತಾರೆ. ಜಗತ್ತಿನಲ್ಲಿ ಪಾಪದ ಹೆಚ್ಚಳವೂ ಪುಣ್ಯದ ಅಭಾವವೂ ಉಂಟಾದಾಗ ಆತನೇ ಸೃಷ್ಟಿಯನ್ನು ಸಂಹರಿಸುತ್ತಾನೆಂದೂ ಅವನೇ ಸುಖದುಃಖಗಳ ನಿಯಾಮಕನೂ, ಆದೇಶ ನಿಯಂತ್ರಕನೂ ಆಗಿದ್ದು, ನೈತಿಕ ಅಧ್ಯಕ್ಷನೂ ಶಾಸಕನೂ ಆಗಿರುತ್ತಾನೆಂದು ತಿಳಿಯುತ್ತಾರೆ.

ನೈಯಾಯಿಕರು ಕಾರ್ಯ-ಕಾರಣಸಂಬಂಧ, ಅದೃಷ್ಟ, ವೇದದ ಪ್ರಾಮಾಣ್ಯ ಮುಂತಾದವುಗಳ ಮುಖಾಂತರವಾಗಿ ಈಶ್ವರನ ಸತ್ಯತ್ವವನ್ನು ಸಿದ್ಧಮಾಡುತ್ತಾರೆ. ನ್ಯಾಯಭಾಷ್ಯವು (೨-೧-೬೮) ತಿಳಿಸುವಂತೆ – 'ಭೂತ-ವರ್ತಮಾನ-ಭವಿಷತ್, ಸ್ಥೂಲ-ಸೂಕ್ಷ್ಮ-ಇಂದ್ರಿಯಗೋಚರ ಹಾಗೂ ಅತೀಂದ್ರಿಯವಾದ ಸಮಸ್ತ ಪದಾರ್ಥಗಳ ಜ್ಞಾನವಿರುವ ವ್ಯಕ್ತಿಯೆ, ವೇದಗಳ ರಚನೆಗೆ ಸಮರ್ಥನಾಗುತ್ತಾನೆ – ಅವನೇ ಈಶ್ವರ'. 'ನ್ಯಾಯ ಕುಸುಮಾಂಜಲಿ'ಯು ಈಶ್ವರನ ಸಿದ್ಧಿಗಾಗಿ ೯ ಯುಕ್ತಿಗಳನ್ನು ಪ್ರದರ್ಶಿಸುತ್ತದೆ.

ಕಾರ್ಯಾಯೋಜನಧೃತ್ಯಾದೇಃ ಪದಾತ್ ಪ್ರತ್ಯಯತಃ ಶ್ರುತೇಃ ।
ವಾಕ್ಯಾತ್ ಸಂಖ್ಯಾವಿಶೇಷಾಚ್ಚ ಸಾಧ್ಯೋ ವಿಶ್ವವಿದವ್ಯಯಃ ॥

'ಜಗತ್ತಿನ ಸಮಸ್ತ ಪದಾರ್ಥಗಳು ಪರಮಾಣುಜನ್ಯ, ಸಾವಯವ ಹಾಗೂ ಅವಾಂತರ ಮಹತ್ವ ವಿಶಿಷ್ಟಗಳಿಂದ ಕೂಡಿರುವುದರಿಂದ, ಸೃಷ್ಟಿಯ ಸಮಯದಲ್ಲಿ ೨ ಪರಮಾಣುಗಳ ಸಂಯೋಗದಿಂದ ದ್ವಣುಕಾದಿಗಳ ಉತ್ಪತ್ತಿಯಾಗುವುದರಿಂದ, ಚೇತನ ಪುರುಷನು ಅರ್ಥಾತ್ ಈಶ್ವರನು ಸಂಸಾರವನ್ನು ಧರಿಸುವುದರಿಂದ, ಅನೇಕ ಕಲಾ-ಕೌಶಲ್ಯಗಳು ಈ ಜಗತ್ತಿನಲ್ಲಿರುವುದರಿಂದ, ಶ್ರುತಿಯು ಪರಮಪ್ರಮಾಣವಾಗಿದ್ದು, ಆ ಶ್ರುತಿಯ ಜ್ಞಾನವು ಈಶ್ವರನನ್ನು ಪರಿಚಯಮಾಡಿಕೊಡುವುದರಿಂದ, ಮಹಾಭಾರತ ಮುಂತಾದವುಗಳಿಗೆ ಗ್ರಂಥರಚಯಿತೃ ಇರುವಂತೆ, ವೇದಗಳಿಗೂ ಒಬ್ಬ ರಚಯಿತೃ ಇರಬೇಕಾದ್ದರಿಂದ, ದ್ವಣುಕದಲ್ಲಿ ಪರಿಮಾಣದ ಉತ್ಪತ್ತಿಯು ಪರಮಾಣುಗತವಾದ ಸಂಖ್ಯಾದ್ವಯದ ಮೂಲಕ ಆಗುವದರಿಂದ, ಧರ್ಮಾಧರ್ಮರೂಪವಾದ ಅದೃಷ್ಟದ ಫಲೋತ್ಪಾದನೆಗಾಗಿ ಈಶ್ವರನನ್ನು ಅಂಗೀಕರಿಸುವದು ನ್ಯಾಯಸಂಗತವಾಗಿದೆ'. ಇವು 'ನ್ಯಾಯಕುಸುಮಾಂಜಲಿ'ಯ ಯುಕ್ತಿಗಳು.

ವೈಶೇಷಿಕರಿಗೆ ಈಶ್ವರನ ಕಲ್ಪನೆ ಇತ್ತೆ ? ಎಂಬುದಕ್ಕೆ ವಿದ್ವಾಂಸರಲ್ಲಿ ಐಕಮತ್ಯವಿಲ್ಲ. ಏಕೆಂದರೆ, 'ವೈಶೇಷಿಕ ಸೂತ್ರ'ಗಳಲ್ಲಿ ೨ ಸೂತ್ರಗಳು ಈಶ್ವರನ ವಿಷಯವನ್ನು ಸೂಚಿಸುವಂತಿದ್ದರೂ, ಈಶ್ವರನ ಸ್ಪಷ್ಟ ನಿರ್ದೇಶಕ್ಕೆ ಅವು ಸಾಕ್ಷಿ

ಯಾಗುವಂತಿಲ್ಲ. 'ತದ್ವಚನಾದಾಮ್ನಾಯಸ್ಯ ಪ್ರಾಮಾಣ್ಯಂ' (ವೈ.ಸೂ. ೧-೧-೩) ಎಂಬ ಸೂತ್ರದಲ್ಲಿ 'ತತ್' ಶಬ್ದವು ಈಶ್ವರನನ್ನು ಸೂಚಿಸುತ್ತದೆ; ಜೊತೆಗೆ 'ಧರ್ಮ'ವನ್ನೂ ಪ್ರತಿಪಾದಿಸುತ್ತದೆ. 'ಅಸ್ಮದ್ವಿಶಿಷ್ಟಃ.........' (ವೈ.ಸೂ. ೨-೧-೧೩) ಎಂಬ ಸೂತ್ರದಲ್ಲಿ 'ಅಸ್ಮದ್ವಿಶಿಷ್ಟಃ' ಎಂಬ ಪದವು ಈಶ್ವರನಿಗೆ ಸಮಾನವಾಗಿ, ಯೋಗಿಗಳನ್ನೂ ಸೂಚಿಸುವಂತಿದೆ. ಆದರೆ ಪ್ರಶಸ್ತಪಾದ ಹಾಗೂ ಆತನ ನಂತರದ ಗ್ರಂಥಕಾರರು ಈಶ್ವರನ ಸಿದ್ಧಿಯನ್ನು ಮನಸಾ ಒಪ್ಪಿದ್ದಾರೆ.

ಮುಕ್ತಿಯ ಕಲ್ಪನೆ :

ಸಮಸ್ತ ಜೀವಿಗಳು ದುಃಖಮಯವಾದ ಈ ಸಂಸಾರದಿಂದ ನಿರಂತರವಾದ ಬಿಡುಗಡೆಯನ್ನು ಹೊಂದಬೇಕೆಂದು ಬಯಸುತ್ತವೆ. ನ್ಯಾಯ-ವೈಶೇಷಿಕದರ್ಶನಗಳ ಲಕ್ಷ್ಯವೂ ಅದೇ ಆಗಿದೆ.

ಗೌತಮ ಋಷಿಯು — 'ಪ್ರಮಾಣ ಪ್ರಮೇಯೇತ್ಯಾದಿ ತತ್ತ್ವಜ್ಞಾನಾತ್
ನಿಶ್ರೇಯಸ್ಸಾಧಿಗಮಃ ।' (ನ್ಯಾ.ಸೂ. ೧-೧-೧.)

ಪ್ರಮಾಣ ಪ್ರಮೇಯ ಮುಂತಾದ ಪದಾರ್ಥಗಳ ಜ್ಞಾನದಿಂದ ಮೋಕ್ಷವು ಲಭಿಸುತ್ತದೆ ಎನ್ನುತ್ತಾನೆ. ತತ್ತ್ವಜ್ಞಾನದ ನಂತರ ಮೋಕ್ಷ ಲಭಿಸುತ್ತದೆಯೆ ? ಎಂಬುದು ಪ್ರಶ್ನೆ. ಪ್ರಮಾಣ, ಪ್ರಮೇಯ ಮುಂತಾದ ತತ್ತ್ವಜ್ಞಾನದ ಮೂಲಕ ದುಃಖ, ಜನ್ಮ, ಪ್ರವೃತ್ತಿ, ದೋಷ, ಮಿಥ್ಯಾಜ್ಞಾನ ಮೊದಲಾದವುಗಳಲ್ಲಿ ಅವುಗಳ ಕಾರಣವು ನಿವೃತ್ತಿಯಾದ ಬಳಿಕ, ಅದರ ಹಿಂದಿರುವ ಕಾರ್ಯವೂ ನಾಶವಾಗಿ, ತದನಂತರ ಮೋಕ್ಷವು ಲಭಿಸುತ್ತದೆ ಎಂಬುದು ನೈಯಾಯಿಕರ ಅಭಿಮತ.

'ದುಃಖ-ಜನ್ಮ-ಪ್ರವೃತ್ತಿ-ದೋಷ-ಮಿಥ್ಯಾ
ಜ್ಞಾನಾನಾಂ ಉತ್ತರೋತ್ತರ ಪಾಯೇ
ತದನಂತರಾಪಾಯಾದ್ ಅಪವರ್ಗಃ ॥ (ನ್ಯಾಯ ಸೂತ್ರ ೧-೧-೨).

ಮಾನವನಲ್ಲಿ ವಚನ-ಮನಸ್ಸು-ಶರೀರದ ಪ್ರವೃತ್ತಿಯಿಂದ (ನ್ಯಾ.ಸೂ. ೧-೧-೭) ಪಾಪಿಕಾ ಹಾಗೂ ಪುಣ್ಯಾ ಎಂಬ ದ್ವಿವಿಧ ಕರ್ಮಗಳು ಸಂಭವಿಸುತ್ತವೆ. ಪುಣ್ಯಪ್ರವೃತ್ತಿಯು ಧರ್ಮವನ್ನೂ ಪಾಪಪ್ರವೃತ್ತಿಯು ಅಧರ್ಮವನ್ನೂ ಉತ್ಪನ್ನ ಮಾಡುವುದರಿಂದ ಧರ್ಮಾಧರ್ಮಗಳು ಸುಖದುಃಖಪೂರ್ಣವಾದ ಪುನರ್ಜನ್ಮಕ್ಕೆ ಕಾರಣೀಭೂತವಾಗುತ್ತವೆ. ಸೂತ್ರಕಾರನು ದುಃಖದ ಆತ್ಯಂತಿಕ ಬಿಡುಗಡೆಯನ್ನು ಅಪವರ್ಗ ಎನ್ನುತ್ತಾನೆ ('ತದತ್ಯಂತ ವಿಮೋಕ್ಷೋಽಪವರ್ಗಃ' ೧-೧-೨೨).

ಹುಟ್ಟಿದವನಿಗೆ ಸಾವು ಅನಿವಾರ್ಯ, ಆದರೆ ಮುಂದಿನ ಜನ್ಮ ಉಂಟಾಗಬಾರದು. ಆಗ ದುಃಖ ಆತ್ಯಂತಿಕವೆನಿಸುತ್ತದೆ; ಆತ್ಮನು ತನ್ನ ವಿಶುದ್ಧಸ್ವರೂಪದಲ್ಲಿ ಪ್ರತಿಷ್ಠಿತನಾಗುತ್ತಾನೆ ಎಂದು ನ್ಯಾಯದರ್ಶನವು ಸಾರುತ್ತದೆ.

ಮುಕ್ತಾತ್ಮನು ಪ್ರಾಣಕ್ಕೆ ಸಂಬಂಧಿಸಿದ ಹಸಿವು-ನೀರಡಿಕೆಗಳನ್ನೂ, ಚಿತ್ತಕ್ಕೆ ಅಂಟಿದ ಲೋಭ-ಮೋಹಗಳನ್ನೂ, ಶರೀರಕ್ಕೆ ಕ್ಲೇಶರೂಪಿಯಾದ ಛಳಿ-ಬಿಸಿಲುಗಳನ್ನೂ ನೀಗಿ ಸಂಸಾರಿಕ ಬಂಧನದಿಂದ ವಿಮುಕ್ತನಾಗುತ್ತಾನೆ. ನ್ಯಾಯ ದರ್ಶನದ ಪ್ರಕಾರ ಮುಕ್ತಾತ್ಮನಲ್ಲಿ ಸುಖವೂ ಇರುವದಿಲ್ಲ; ಆನಂದ ಪ್ರಾಪ್ತಿಯೂ ಇರುವದಿಲ್ಲ.

ತತ್ತ್ವಜ್ಞಾನದಿಂದ ಉಂಟಾಗಬಹುದಾದ ೨ ಪ್ರಕಾರದ ನಿಶ್ರೇಯಸ್ಸುಗಳನ್ನು ಉದ್ಯೋತಕರನು ಸ್ವೀಕರಿಸಿದ್ದಾನೆ : ೧) ಅಪರ ನಿಃಶ್ರೇಯಸ ೨) ಪರ ನಿಃಶ್ರೇಯಸ. ಜೀವನ್ಮುಕ್ತಿಗೆ ಅಪರ ನಿಃಶ್ರೇಯಸವೆಂದೂ, ವಿದೇಹ ಮುಕ್ತಿಗೆ ಪರನಿಃಶ್ರೇಯಸವೆಂದೂ ಕರೆಯಬಹುದು. ವಾಚಸ್ಪತಿಯ 'ತಾತ್ಪರ್ಯಟೀಕಾ' ಗ್ರಂಥವು (ಪು. ೮೦-೮೧) ಈ ಮುಕ್ತಿಗಳ ಅಂತರವನ್ನು ಚರ್ಚಿಸುತ್ತದೆ. ಆತ್ಮನ ವಿಷಯದಲ್ಲಿ ಶ್ರವಣ-ಮನನ-ಧ್ಯಾನ ಹಾಗೂ ಸಾಕ್ಷಾತ್ಕಾರಗಳೆಂಬ ನಾಲ್ಕು ಪ್ರಪತ್ತಿಗಳಿದ್ದು, ತತ್ತ್ವಗಳ ಬೋಧೆಯಲ್ಲಿ ಆನ್ವೀಕ್ಷಕಿಯು ಸಹಾಯವಾಗುತ್ತದೆ. ಮನನದಿಂದ ವಿಪರ್ಯಯ ಜ್ಞಾನವು ನಾಶವಾಗುತ್ತದೆ; ವಾಸನೆಯೂ ಕ್ಷಯಿಸುತ್ತದೆ; ಧ್ಯಾನದಿಂದ ಆತ್ಮಸಾಕ್ಷಾತ್ಕಾರಕ್ಕೆ ಮಾರ್ಗವಾಗುತ್ತದೆ; ನಂತರ ಅಪರೋಕ್ಷಾನುಭೂತಿಯುಂಟಾಗಿ ಸಾಕ್ಷಾತ್ಕಾರ ಸಿದ್ಧಿಸುತ್ತದೆ; ಆಗ ಮನುಷ್ಯನು ಜೀವನ್ಮುಕ್ತನೆನಿಸುತ್ತಾನೆ; ಜೀವನ್ಮುಕ್ತನಲ್ಲಿ ಶರೀರವಿರುವವರೆಗೆ ಪ್ರಾರಬ್ಧಕರ್ಮಗಳು ಪ್ರಭಾವ ಬೀರುತ್ತವೆ; ಅವುಗಳ ಉಪಯೋಗದಿಂದ ಶರೀರವು ಕ್ಷಯಿಸಲು ನಿಃಶ್ರೇಯಸ ಉಂಟಾಗುತ್ತದೆ – ಎಂಬುದು ವಾಚಸ್ಪತಿಯ ಅಭಿಪ್ರಾಯ.

> 'ಪರ ನಿಃಶ್ರೇಯಸಂ ನ ತಾವದ್ ಭವತಿ, ಯಾವತ್ ಉಪಭೋಗಾದುಪಾತ್ತ ಕರ್ಮಾಶ್ರಯಪ್ರಚಯೋ ನ ಕ್ಷೀಯಂತೇ । ತಸ್ಮಾತ್ ತತ್ತ್ವಸಾಕ್ಷಾತ್ಕಾರಾಧಾನ ಪ್ರಯತ್ನಾತ್ ಪರಃ ತದುಪಭೋಗ ಪ್ರಯತ್ನಶ್ಚಾಸ್ಥೇಯಃ । ತಥಾ ಚ ನ ತುಲ್ಯಕಾಲ ಉತ್ಪಾದಃ ಪರಾಪರಯೋರ್ನಿಃಶ್ರೇಯಸಯೋಃ ।
> (ತಾತ್ಪರ್ಯಟೀಕಾ, ಪು. ೮೧)

ನ್ಯಾಯವಾರ್ತಿಕವು ಹೇಳುವುದು ಹೀಗೆ :

> 'ನಿಃಶ್ರೇಯಸಸ್ಯ ಪರಾಪರಭೇದಾತ್ ।
> ಯತ್ ತಾವದಪರಂ ನಿಃಶ್ರೇಯಸಂ ತತ್ ।

ತತ್ತ್ವಜ್ಞಾನಾಂತರಮೇವ ಭವತಿ । ಪರಂ ಚ ನಿಃಶ್ರೇಯಸಂ ತತ್ತ್ವಜ್ಞಾನಾತ್ ಕ್ರಮೇಣ ಭವತಿ । (೧-೧-೧).

ವೈಶೇಷಿಕರ ಮೋಕ್ಷದ ಕಲ್ಪನೆ, ಸಾಧನಾಮಾರ್ಗ, ಹಾಗೂ ಮೋಕ್ಷದ ಪರಿಭಾಷೆ – ಇತ್ಯಾದಿಗಳು ನೈಯಾಯಿಕರಂತೆಯೇ ಇವೆ. ವೈಶೇಷಿಕಸೂತ್ರಗಳು (೫-೨-೧೮) ತಿಳಿಸುವಂತೆ ವ್ಯಕ್ತಿಯಲ್ಲಿ ಅದೃಷ್ಟದ ಅಭಾವವಾಗಲು ಕರ್ಮಚಕ್ರದ ಅಂತ್ಯವಾಗುತ್ತದೆ; ಆಗ ಆತ್ಮನಿಗೂ ಶರೀರಕ್ಕೂ ಇರುವ ಸಂಬಂಧ ತಪ್ಪಿ, ಜನನ-ಮರಣದ ಪರಂಪರೆಯೂ ನಿಂತು, ಸಮಗ್ರದುಃಖಗಳ ನಾಶವಾಗುತ್ತದೆ; ಅದಕ್ಕೇ ಮೋಕ್ಷವೆಂದು ಹೆಸರು.

ಕಣಾದ ಮಹರ್ಷಿಯು – 'ಅಥಾ ತೋ ಧರ್ಮಂ ವ್ಯಾಖ್ಯಾಸ್ಯಾಮಃ ।' (ವೈ. ಸೂ. ೧-೧-೧) ಎಂದು ತನ್ನ ಸೂತ್ರಗ್ರಂಥವನ್ನು ಪ್ರಾರಂಭಿಸುತ್ತಾನೆ. ಆದ್ದರಿಂದ ಧರ್ಮದ ವ್ಯಾಖ್ಯಾನವನ್ನು ಮಾಡುವುದೇ ಅವನ ಮುಖ್ಯ ಲಕ್ಷ್ಯವಾಗಿ ತೋರಬಹುದು. ಆತನ ೨ನೆಯ ಸೂತ್ರ 'ಯತೋಽಭ್ಯುದಯ ನಿಃಶ್ರೇಯಸ ಸಿದ್ಧಿಃ ಸ ಧರ್ಮಃ ।' (ವೈ.ಸೂ. ೧-೧-೨) ಎಂಬುದಕ್ಕೆ 'ಕಿರಣಾವಳೀ' ಹಾಗೂ 'ಉಪಸ್ಕಾರ' ವ್ಯಾಖ್ಯಾನದ ಮೇರೆಗೆ ದ್ರವ್ಯಗುಣಕರ್ಮ ಮುಂತಾದ ತತ್ತ್ವಜ್ಞಾನ ಹಾಗೂ ಮೋಕ್ಷದ ಉಪಲಬ್ಧಿಗೆ ಅರ್ಥಾತ್ ತತ್ತ್ವಜ್ಞಾನಪೂರ್ವಕ ಮೋಕ್ಷವಾಗುವುದಕ್ಕೆ ಧರ್ಮ ಎನ್ನುತ್ತಾರೆ. ಸಾಧಕನ ಮೋಕ್ಷಸಾಧಕವಾದ, ಅತೀಂದ್ರಿಯ ಹಾಗೂ ಶುದ್ಧಸಂಕಲ್ಪದಿಂದ ಉತ್ಪನ್ನವಾಗುವ ನಿಯತವಾದ ಕರ್ಮಸಾಧನೆಗಳಿಂದ ತೋರುವ ಪುರುಷನ ಗುಣವೆ ಧರ್ಮವೆಂದು ಪ್ರಶಸ್ತಪಾದನು ಅಭಿಪ್ರಾಯಪಡುತ್ತಾನೆ. ನಂತರ ಶ್ರವಣ-ಮನನ-ನಿಧಿಧ್ಯಾಸ ಹಾಗೂ ಸಾಕ್ಷಾತ್ಕಾರಗಳ ಮುಖಾಂತರ ತತ್ತ್ವಜ್ಞಾನವಾಗುತ್ತದೆ. ಈ ಜ್ಞಾನದಿಂದ ಆತ್ಮಸಾಕ್ಷಾತ್ಕಾರವು ಉಂಟಾಗಿ ಜೀವನು ಮುಕ್ತನಾಗುತ್ತಾನೆ. ಶರೀರವಿರುವವರೆಗೆ ಜೀವಿಗೆ ಕರ್ತೃತ್ವ-ಭೋಕ್ತೃತ್ವಾದಿ ಗುಣಗಳಿದ್ದು, ದೇಹನಾಶವಾದ ಬಳಿಕ ಅವುಗಳ ಪ್ರಭಾವ ನಿಂತುಹೋಗುತ್ತದೆ. ಆಗ ಆತ್ಮನು ತನ್ನ ಶುದ್ಧ ಸ್ವರೂಪದಲ್ಲಿ ಉಳಿಯುತ್ತಾನೆ. ಆದ್ದರಿಂದ ತತ್ತ್ವಜ್ಞಾನವೇ ಮೋಕ್ಷಕ್ಕೆ ಸಾಧನ ವೆಂಬುದು ನಿತ್ಯಸತ್ಯ.

ಮೂಲತಃ ವೈಶೇಷಿಕ ದರ್ಶನವು ಜ್ಞಾನಮಾರ್ಗವನ್ನು ಅಂಗೀಕರಿಸಿದೆ. ತತ್ತ್ವಜ್ಞಾನದ ಉತ್ಪತ್ತಿಗೆ ನಿಷ್ಕಾಮಕರ್ಮವು ಸಹಾಯವಾಗುತ್ತದೆ ಎಂಬುದನ್ನು ವೈಶೇಷಿಕರೂ ಒಪ್ಪಿಕೊಳ್ಳುತ್ತಾರೆ. ವೈಶೇಷಿಕ ಸೂತ್ರಗಳ ಪ್ರಕಾರ (ವೈ.ಸೂ. ೧-೧-೪) ನಿವೃತ್ತಿರೂಪವಾದ, ಧರ್ಮದಿಂದ ಉದಯವಾಗುವ ದ್ರವ್ಯ ಮೊದಲಾದ ಆರು ಭಾವಪದಾರ್ಥಗಳ ಸಾಧರ್ಮ್ಯ ಮತ್ತು ವೈಧರ್ಮ್ಯಗಳಿಂದ ತತ್ತ್ವಜ್ಞಾನ

ಉಂಟಾಗಿ, ಅದು ಮೋಕ್ಷಕ್ಕೆ ಸಾಧನವಾಗುತ್ತದೆ. ಜೊತೆಗೆ ಅಷ್ಟಾಂಗಯೋಗಾದಿ ಸಾಧನಗಳೂ ಸಹಾಯಕವಾಗುತ್ತವೆ ಎಂಬುದು 'ನ್ಯಾಯಸಾರ'ದ (ಪು. ೪೦-೪೧) ಅಭಿಮತವಾಗಿದೆ. ಮೋಕ್ಷದ ಕಲ್ಪನೆಯ ಬಗೆಗೆ ನ್ಯಾಯ ಹಾಗೂ ವೈಶೇಷಿಕರಲ್ಲಿ ಒಮ್ಮತವಿದೆ. 'ಸರ್ವಸಿದ್ಧಾಂತ ಸಂಗ್ರಹ'ಕ್ಕೆ ಅನುಗುಣವಾಗಿ ಈ ಗ್ರಂಥದ ಕಾಲಕ್ಕೆ ಆನಂದಸ್ವರೂಪಾತ್ಮಕ ಮುಕ್ತಿಯನ್ನು ಅಂಗೀಕರಿಸುವ ನೈಯಾಯಿಕರೂ ಇದ್ದಂತೆ ಸೂಚನೆ ದೊರಕುತ್ತದೆ. 'ನಿತ್ಯಾನಂದಾನುಭೂತಿಃ ಸ್ಯಾನ್ಮೋಕ್ಷೇ ತು ವಿಷಯಾ ಧೃತೇ ।' ಆದರೆ ವೈಶೇಷಿಕರು ದುಃಖಾಂತ್ಯಂತ ನಿವೃತ್ತಿಯನ್ನು (೬-೪೧) ಹಾಗೂ ಆತ್ಮವಿಶೇಷಗುಣೋಚ್ಛೇದ ರೂಪವೇ ಮುಕ್ತಿ ಎಂಬುದನ್ನು ಅವಶ್ಯ ಅಂಗೀಕರಿಸುತ್ತಾರೆ. ದಗ್ಧೇಂಧನ ಅನಲವದುಪಶಮೋ ಮೋಕ್ಷಃ । – ಎಂಬುದು ಅವರ ಅಭಿಪ್ರಾಯ. ಇದು ನ್ಯಾಯ–ವೈಶೇಷಿಕರ ಸಮಗ್ರ ಆಧ್ಯಾತ್ಮತತ್ತ್ವದ ಪ್ರತಿಪಾದನೆ.

● ●

ರಾಜವರ್ಗದವರ ಸ್ವಹಸ್ತಾಕ್ಷರದ ಹಸ್ತಪ್ರತಿಗಳು

● ಬಿ. ಆರ್. ಹಿರೇಮಠ

ಶಿಲೆ ಹಾಗೂ ಲೋಹಗಳ ಮೇಲೆ ಅಕ್ಷರಗಳನ್ನು ಬರೆದವರು ಶಾಸನ ಲಿಪಿಕಾರರು. ಕವಿಕೃತಿಗಳನ್ನು ತಾಳೆಗರಿ ಹಾಗೂ ಕಾಗದಗಳಲ್ಲಿ ಪ್ರತಿ ಮಾಡಿದವರು ಹಸ್ತಪ್ರತಿಲಿಪಿಕಾರರು. ಹೀಗೆ ಶಾಸನಲಿಪಿಕಾರರು, ಹಸ್ತಪ್ರತಿಲಿಪಿಕಾರರು ಬೇರೆ ಬೇರೆ ಆಗಿರುತ್ತಾರೆ. ಕವಿಕೃತಿಗಳನ್ನು ಹೆಚ್ಚಾಗಿ ಪ್ರಜಾವರ್ಗದವರೇ ಪ್ರತಿ ಮಾಡಿದಂದು ಕಂಡುಬರುತ್ತದೆ. ಆದರೆ ರಾಜವರ್ಗದವರು ಪ್ರತಿ ಮಾಡಿದಂದು ತೀರ ವಿರಳ. ಹೀಗಾಗಿ ರಾಜವರ್ಗದವರು ಪ್ರತಿಮಾಡಿದ ಕೃತಿಗಳು ಮಹತ್ವದವುಗಳೆನಿಸುತ್ತವೆ. ಮುದ್ದಣನನ್ನು ಬಿಟ್ಟರೆ ಪ್ರಾಚೀನ ಕವಿಗಳ ಯಾವ ಸ್ವಹಸ್ತಾಕ್ಷರಗಳೂ ನಮಗೆ ದೊರೆಯುವುದಿಲ್ಲ. ಈ ಕವಿಕೃತಿಗಳನ್ನು ಪ್ರತಿಮಾಡಿದ ಹಸ್ತಪ್ರತಿ ಲಿಪಿಕಾರರ ಸ್ವಹಸ್ತಾಕ್ಷರಗಳನ್ನಾದರೂ ಗುರುತಿಸಿ ಸಂಗ್ರಹಿಸುವ, ಪ್ರಕಟಿಸುವ ಕಾರ್ಯ ನಮ್ಮಲ್ಲಿ ಇನ್ನೂ ನಡೆದಿಲ್ಲ. ಇಂದು ತೀರ ಅಗತ್ಯವಾಗಿ ಆಗಬೇಕಾದ ಕಾರ್ಯವಿದು. ಪ್ರಾಚೀನ ಕವಿಗಳ ಸ್ವಹಸ್ತಾಕ್ಷರಗಳನ್ನು ನೋಡದ ನಾವು, ಆ ಕವಿಗಳನ್ನು ಬದುಕಿಸಿಕೊಟ್ಟ ಹಸ್ತಪ್ರತಿ ಲಿಪಿಕಾರರ ಸ್ವಹಸ್ತಾಕ್ಷರಗಳನ್ನಾದರೂ ರಕ್ಷಿಸುವ ಕೆಲಸ ಮಾಡಬೇಕಾಗಿದೆ.

ಇಲ್ಲಿ ರಾಜವರ್ಗದವರು ಪ್ರತಿ ಮಾಡಿದ ಹಸ್ತಪ್ರತಿಗಳನ್ನು ಈಗ ಪರಿಶೀಲಿಸಬಹುದು :

ಸೋದೆಯ ಸೋಮಲಿಂಗ ರಾಜನ (ಶಕ ೧೬೯೨) ಸ್ವಹಸ್ತಾಕ್ಷರ :

"ಸೋದಾಪುರದ ಮಳೆಯ ಗುರು ನಂದೀಶ್ವರನ ಕರಜಾತರಾದ ಸೋಮಲಿಂಗ ರಾಜ ಬರೆದ ಎಲ್ಲ ಪುರಾತನರ ಬೆಡಗಿನ ವಚನ".

(ಕವಿವಿ, ಕನ್ನಡ ಅಧ್ಯಯನಪೀಠ, ಹಸ್ತಪ್ರತಿ ಭಾಂಡಾರ ತಾ.ಪ್ರ. ೩೧೪೭)

ಸಿರಸಂಗಿಯ ಜಾಯಪ್ಪ ದೇಸಾಯಿಯ (ಶಕ ೧೬೯೩) ಸ್ವಹಸ್ತಾಕ್ಷರ :

"ಸ್ವಸ್ತಿ ಶ್ರೀಜಯಾಭ್ಯುದಯ ಶಾಲಿವಾಹನ ಶಕ ೧೬೯೩ ಪ್ರವರ್ತಮಾನೆ ಖರನಾಮ ಸಂವತ್ಸರದ ಶ್ರಾವಣ ಶುದ್ಧ ತ್ರಯೋದಶಿ ಗುರುವಾರದಲ್ಲು.........

ಶ್ರೀಮತ್ಸಕಲಗುಣ ಕೋವಿದ ಶಿಖಾಮಣಿ ಮಯೂರಪುರದ ಜಾಯೇಂದ್ರ (ಬರೆದ ಜೈಮಿನಿ ಭಾರತ).
(ಲಕ್ಷ್ಮೀಶನ ಜೈಮಿನಿ ಭಾರತ, ಪುಟ ४೭೧)

ಕಳಲೆ ಕಾಂತರಾಜಯ್ಯನ (ಶಕ ೧೭೧೫) ಸ್ವಹಸ್ತಾಕ್ಷರ :

"ಶಾಲಿವಾಹನ ಶಕಾಬ್ದ ೧೭೧೫ ವರುಷ ಸಲ್ಲುವ ವರ್ತಮಾನವಾದ ಪ್ರಮಾದಿಚನಾಮ ಸಂವತ್ಸರದ ಕಾರ್ತಿಕ ಶುದ್ಧ ೧೫ ಯಿಂದುವಾರ.........ಆಂಗೀರಸ ಬಾರ್ಹಸ್ಪತ್ಯ ಭಾರದ್ವಾಜಗೋತ್ರಯಾರ್ಷೇಯ ಪ್ರವರಾನ್ವಿತ ಆಶ್ವಲಾಯನ ಸೂತ್ರ ಋಕ್ಶಾಖಾಧ್ಯಾಯಿಗಳಾದ ಚಂದ್ರವಂಶೋದ್ಭವರಾದ ಕಳಲೆ ಪುರವರಾಧಿಪರಾದ ರಾಜೈಯ್ಯರಸಿನವರ ಪ್ರಪೌತ್ರರಾದ ಕೆಂಜ ರಾಜೈಯರಸಿನವರ ಪೌತ್ರರಾದ ಲಕ್ಷ್ಮೀಕಾಂತೈಯ್ಯರಸಿನವರ ಪುತ್ರರಾದ ಕಾಂತರಾಜೈಯ್ಯ ಅರಸಿನವರು ಸ್ವಹಸ್ತಾಕ್ಷರದಿಂದ ಬರೆದು ಪೂರ್ಣವಾದ ಸಾರಸಂಗ್ರಹ".
(ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ IV–೧೭೫೨)

"ಸ್ವಸ್ತಿ ಶ್ರೀವಿಜಯಾಭ್ಯುದಯ ಶಾಲಿವಾಹನಶಕವರ್ಷಂಗಳಂ ೧೭೧೯ ಸಂದ ವರ್ತಮಾನವಾದ ಪೈಂಗಳನಾಮ ಸಂವತ್ಸರದ ಪುಷ್ಯ ಶುದ್ಧ ಸಪ್ತಮಿಯು ರವಿವಾರ ಸುಭ ನಕ್ಷತ್ರ, ಶುಭಯೋಗ ಶುಭಕರಣದಲ್ಲಿ ಅಭಿಜಿನ್ಮುಹೂರ್ತದಲ್ಲಿ ಕುಮಾರ ರಾಮನ ಸಾಂಗತ್ಯ......ಪೂರ್ಣವಾಯ್ತು. ಆಂಗೀರಸ ಬಾರ್ಹಸ್ಪತ್ಯ ಮಾನತ್ರಿಯಾರಿಷ ಭಾರದ್ವಾಜಗೋತ್ರ ಆಶ್ವಲಾಯನ ಸೂತ್ರ ಋಕ್‌ಶಾಖಾಧ್ಯಾಯಿಗಳಾದ ಕಳಲೆ ರಾಜ(ಪ)ಯ್ಯ ಅರಸಿನವರ ಪ್ರಪೌತ್ರರಾದ ಲಕ್ಷ್ಮೀಕಾಂತಯ್ಯ ಅರಸಿನವರ ಪುತ್ರರಾದ ಕಾಂತಯ್ಯ ಅರಸಿನವರ ಸ್ವಹಸ್ತಾಕ್ಷರ".
(ಕನ್ನಡ ಗ್ರಂಥಸಂಪಾದನೆ, ಪುಟ ೫೨)

ಕಳಲೆ ಕೆಂಪರಾಜಯ್ಯನ (ಶಕ ೧೭೭೩) ಸ್ವಹಸ್ತಾಕ್ಷರ :

"ಶಾಲಿವಾಹನ ಶಕಾಬ್ದ ೧೭೭೩ನೆಯ ವರುಷ ಸಲುವ ವರ್ತಮಾನವಾದ ವಿರೋಧಿಕೃತು ಸಂವತ್ಸರದ ಕಾರ್ತಿಕ ಶುದ್ಧ ೧೨ ಯು ಚಂದ್ರವಾರ ೩೧ ॥ ಪುತ್ರಾಭಾದ್ರಪದ ನಕ್ಷತ್ರ ೨೪ ॥...... ಭಾರದ್ವಾಜಗೋತ್ರ ಆಶ್ವಲಾಯನ ಸೂತ್ರ ಋಕ್ಶಾಖಾಧ್ಯಾಯಿಗಳಾದ ಚಂದ್ರವಂಶೋದ್ಭವರಾದ ವೇಣುಪುರಾಧೀಸರಾದ ರಾಜೈಯನವರ ಪ್ರಪೌತ್ರರಾದ ಕೆಂಪರಾಜೈಯನವರ ಸ್ವಹಸ್ತಾಕ್ಷರದ ಲಿಖಿತದ ಪುಸ್ತಕ" – (ಪಾರಮಾರ್ಥ ಪ್ರಕಾಶಿಕೆ).
(ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ II–೮೬೬)

ಮೈಸೂರ ನಾರಣರಾಜಯ್ಯ ಅರಸು (ಶಕ ೧೭೫೯) ಅವರ ಸ್ವಹಸ್ತಾಕ್ಷರ :

"ಸ್ವಸ್ತಿ ಶ್ರೀವಿಜಯಾಭ್ಯುದಯ ಶಾಲಿವಾಹನಶಕವರ್ಷಂಗಳು ೧೭೫೯ ನೇ ಸರ್ವಜಿನ್ನಾಮ ಸಂವತ್ಸರ ಪುಷ್ಯ ಶುದ್ಧ ೧೦ ರಲ್ಲು ಮಹಾರಾಜ ಶ್ರೀಕೃಷ್ಣರಾಜಯ್ಯ ರಶಿನವರ ಪುತ್ರರಾದ ನಾರಣರಾಜಯ್ಯ ಅರಶಿನವರ ಸ್ವಹಸ್ತಾಕ್ಷರ".
(ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ IV–೧೫೬೩)

ವಿಶ್ವನಾಥನ ಸ್ವಹಸ್ತಾಕ್ಷರ :

"ಯಿಂತೀ ಶಾರದಾಗದ್ಯವನು ಸಿದ್ಧಾರ್ಥಿ ಸಂ। ಶ್ರಾವಣ ಶು. ೧ ಬುಲು ವಾರಣಾಸ ನಂಜೇ ಅರಸರ ಮಗ ವಿಶ್ವನಾಥ ಬರದನು".
(ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ VIII–೩೭೯)

ಹೀಗೆ ಸೋದೆಯ ಅರಸು ಸೋಮಲಿಂಗರಾಜ; ಕಳಲೆ ಅರಸು ಕಾಂತ ರಾಜಯ್ಯ, ಕೆಂಪರಾಜಯ್ಯ; ಸಿರಸಂಗಿಯ ಜಾಯಪ್ಪ ದೇಸಾಯಿ, ಮೈಸೂರು ಅರಸು ಕೃಷ್ಣರಾಜಯ್ಯನವರ ಮಗ ನಾರಣ ರಾಜಯ್ಯ ಹಾಗೂ ವಾರಣಾಸದ ನಂಜೇ ಅರಸರ ಮಗ ವಿಶ್ವನಾಥರ ಸ್ವಹಸ್ತಾಕ್ಷರಗಳು ನಮಗೆ ಗೊತ್ತಾಗುತ್ತವೆ. ರಾಜವರ್ಗದವರು ಪ್ರತಿಮಾಡಿದ ಮೇಲಿನ ಹಸ್ತಪ್ರತಿಗಳು ನಾಶವಾಗದಂತೆ ಸಂರಕ್ಷಿಸುವ ವ್ಯವಸ್ಥೆ ಮಾಡುವುದು ತೀರ ಅಗತ್ಯವಿದೆ. ಈ ಹಸ್ತಪ್ರತಿಗಳಿಂದ ಅರಸು ಮನೆತನ ಹಾಗೂ ಅರಸನ ಹೆಸರು, ಮಿತಿ, ವಂಶಾವಳಿ, ಗುರುಪರಂಪರೆ, ಗೋತ್ರ ಮೊದಲಾದ ಸಂಗತಿಗಳು ಸ್ಪಷ್ಟವಾಗಿ ಗೊತ್ತಾಗುತ್ತವೆ. ಹೀಗೆ ರಾಜವರ್ಗದವರ ಸ್ವಹಸ್ತಾಕ್ಷರದ ಹಸ್ತಪ್ರತಿಗಳು ಚಾರಿತ್ರಿಕ ಮಹತ್ವವನ್ನು ಹೊಂದಿರುತ್ತವೆ. ಆದುದರಿಂದ ನಾಡಿನ ಚರಿತ್ರೆಯ ರಚನೆಯಲ್ಲಿ ಇತಿಹಾಸಕಾರರು ಇವುಗಳನ್ನೂ ಆಕರಸಾಮಗ್ರಿಯಾಗಿ ಉಪಯೋಗಿಸುವರೆಂದು ಭಾವಿಸಿದ್ದೇನೆ.

● ●

ರಾಜತಾಂತ್ರಿಕ ಕೈಪಿಡಿಯಾಗಿ ಪಂಪಭಾರತ

● ಶಾಂತಿನಾಥ ದಿಬ್ಬದ

ಪ್ರಾಚೀನ ಕರ್ನಾಟಕದ ಅರಸುಮನೆತನಗಳಿಗೂ ಕನ್ನಡಸಾಹಿತ್ಯಕ್ಕೂ ಇರುವ ನಂಟು ತುಂಬ ಗಾಢವಾದುದು. ಅಂತೆಯೇ 'ಕರ್ನಾಟಕದ ಅರಸುಮನೆತನಗಳ ಇತಿಹಾಸವೆಂದರೆ ಸ್ಥೂಲವಾಗಿ ಕನ್ನಡ ಸಾಹಿತ್ಯದ ಇತಿಹಾಸ' ಎಂಬ ವಿದ್ವಾಂಸರ ಮಾತು ಸತ್ಯ. ಸಾಹಿತ್ಯಕ್ಕೆ ರಾಜಕೀಯವು ಆಶ್ರಯವಾಗಿದ್ದುದೂ ರಾಜಕೀಯಕ್ಕೆ ಸಾಹಿತ್ಯವು ಮುಖವಾಣಿಯಾಗಿದ್ದುದೂ ಈ ಸ್ನೇಹಸಂಬಂಧದ ರಹಸ್ಯ. ರಾಜಾಶ್ರಯದ ಈ ಪ್ರಕ್ರಿಯೆಯಿಂದಾಗಿಯೇ ಚಾಲುಕ್ಯ ಅರಿಕೇಸರಿ ಮತ್ತು ಮಹಾಕವಿ ಪಂಪ ಇವರಿಬ್ಬರೂ ಸ್ನೇಹಿತರಾದುದು.

ಸಾಮ್ರಾಜ್ಯಶಾಹಿ ಧೋರಣೆಯ ಆಶ್ರಯದಲ್ಲಿ ಪಂಪ ಬದುಕಿದ್ದನೆಂಬುದು ನಿರ್ವಿವಾದವಾದರೂ ಆತ ಅದನ್ನು ತತ್ವಶಃ ಒಪ್ಪಿದ್ದನೆಂದು ಹೇಳುವುದು ಸೂಕ್ತವಾಗಲಾರದು. 'ವಿಬುಧಾಶ್ರಯ'ನೆನ್ನಿಸಿದ ಅರಿಕೇಸರಿ ತನ್ನ ಸದ್ಗುಣ ಸುಶೀಲಗಳಿಂದ ಪಂಪನ ಮನಸ್ಸನ್ನು ಗೆದ್ದಿದ್ದಾನೆ.[1] ಈ ದೊರೆಯ ಸಂಪರ್ಕದಿಂದಾಗಿ ಅಂದಿನ ರಾಜಕೀಯ ರಂಗದ ನಿಕಟಸಂಪರ್ಕ ಪಡೆದ ಪಂಪ, ತನಗೆ ಆಕರವಾದ ಮಹಾಭಾರತಕೃತಿಯಲ್ಲಿ ಬಂದಿರುವ ಹಲವಾರು ರಾಜನೈತಿಕ ವಿಚಾರಗಳೊಂದಿಗೆ, ತಾನು ಕಣ್ಣಾರೆ ಕಂಡ, ಅನುಭವಿಸಿದ, ಆಚರಿಸಿದ ಹಲವಾರು ಸಮಕಾಲೀನ ರಾಜನೈತಿಕ ವಿಚಾರಗಳನ್ನೂ ತನ್ನ ಕೃತಿಯಲ್ಲಿ ಸೇರಿಸಿದ್ದಾನೆ. ಇದರಿಂದಾಗಿ ರಾಜರ ಇಡೀ ವ್ಯಕ್ತಿತ್ವವನ್ನು ಪಂಪ ತನ್ನ ಕೃತಿಯಲ್ಲಿ ವಿಮರ್ಶಾತ್ಮಕವಾಗಿ ನಿರೂಪಿಸಿದಂತಾಗಿದೆ.

'ರಾಜಾ ಕಾಲಸ್ಯ ಕಾರಣಂ', 'ಯಥಾ ರಾಜಾ ತಥಾ ಪ್ರಜಾ' ಎಂಬೆಲ್ಲ ಮಾತುಗಳ ಮೂಲಕ ಪ್ರಾಚೀನ ಭಾರತದಲ್ಲಿ ರಾಜರು ಹೊಂದಿದ ಸಾಮಾಜಿಕ ಮಹತ್ವವನ್ನು ನಾವು ಅರ್ಥೈಸಿಕೊಳ್ಳಬಹುದು. ಹೀಗೆ ಶೌರ್ಯ–ಶೀಲಾದಿಗುಣಗಳಲ್ಲಿ ಪ್ರಪ್ರಥಮ ಆದರ್ಶನೆನ್ನಿಸಿಕೊಂಡ ರಾಜ ಆ ದೆಸೆಯಲ್ಲಿ ತನ್ನವೇ ಆದ ಕೆಲವು ತಾತ್ವಿಕ ಹಾಗೂ ಸಾತ್ವಿಕವಾದ ನೀತಿ–ನಿಲುವುಗಳನ್ನು ಹೊಂದಿರುವುದು ಅವಶ್ಯಕವಾಗಿರುತ್ತಿದ್ದಿತು. ವೈಯಕ್ತಿಕವಾಗಿ ತಾನು ಭದ್ರವಾದ ನೈತಿಕ ನೆಲೆಗಟ್ಟನ್ನು ಪಡೆದ ರಾಜ, ರಾಜ್ಯದ ರಾಜಕೀಯ, ಆರ್ಥಿಕ, ಧಾರ್ಮಿಕ, ಸಾಮಾಜಿಕ ವ್ಯವಹಾರಗಳ ಸೂತ್ರ ಹಿಡಿಯು

ಬೇಕಾಗುತ್ತಿದ್ದಿತು. ಇದನ್ನರಿತ ಅಂದಂದಿನ ಕವಿಗಳು ಸ್ವಾಭಾವಿಕವಾಗಿ ತಮ್ಮ ಕೃತಿಗಳಲ್ಲಿ ಅನೇಕ ರಾಜನೈತಿಕ ವಿಷಯಗಳಿಗೆ ಎಡೆ ಕೊಟ್ಟರು. ಮಹಾಭಾರತ ಮತ್ತು ಅದನ್ನನುಸರಿಸಿದ ಪಂಪಭಾರತಗಳೂ ಈ ಮಾತಿಗೆ ಹೊರತಾಗಿಲ್ಲ. ಈ ದೃಷ್ಟಿಯಿಂದ ಪಂಪಭಾರತದಲ್ಲಿ ಅಲ್ಲಲ್ಲಿ ಉಕ್ತವಾಗಿರುವ ರಾಜನೈತಿಕ ಅಂಶಗಳನ್ನು ಪಟ್ಟಿಮಾಡಿ ವಿಶ್ಲೇಷಿಸುವುದು ಪ್ರಸ್ತುತ ಪ್ರಬಂಧದ ಉದ್ದೇಶವಾಗಿದೆ.

ವಿಷಯನಿರೂಪಣೆಯ ಅನುಕೂಲದ ದೃಷ್ಟಿಯಿಂದ ಪಂಪಭಾರತದಲ್ಲಿಯ ರಾಜನೈತಿಕ ವಿಷಯಗಳನ್ನು ೧. ರಾಜರ ಗುಣಾದರ್ಶಗಳು ೨. ರಾಜರ ಲೋಪದೋಷಗಳು ೩. ಸಾಮಾನ್ಯ ರಾಜನೈತಿಕ ವಿಚಾರಗಳು ಎಂಬ ಮೂರು ಭಾಗಗಳಲ್ಲಿ ವಿಂಗಡಿಸಿ ನೋಡಬಹುದು.

೧. ರಾಜರ ಗುಣಾದರ್ಶಗಳು : ರಾಜರ ಪ್ರವೃತ್ತಿಯ ಬಗೆಗಿನ ಪಂಪನ ವಿಚಾರಗಳು ವಾಸ್ತವಿಕವೂ ವಿಮರ್ಶಾತ್ಮಕವೂ ಆಗಿವೆ.

"ಸೆಣಸುಳ್ಳುದ್ವೃತ್ತರಂ ತಳ್ತಿರಿಯಂದೆ ಚತುರಂಬೋಧಿ ಪರ್ಯಂತಮುಂ ಧಾ
ರಿಣಿಯಂ ತಾಂ ಪೋಗಿ ಬಾಯ್ಕೇಳಿಸದೆ ಮುನಿಜನಕ್ಕಿಷ್ಟವಿಘ್ನಂಗಳಂ ದಾ
ರುಣ ದೈತ್ಯರ್ ಮಾಡೆ ನೀಡಿಲ್ಲದೆ ಸಲೆ ಚಲದಾಟಂದುಕೊಂದಿಕ್ಕದೋರ್ವಂ
ಗುಣಮುಂಟೆಂದುಂ ಉಂಡು ಪಟ್ಟಿರ್ಪನನಣಮೆ
ನಿರುದ್ಯೋಗಿಯಂ ಭೂಪನೆಂಬರ್"[೨]

ಸಾಮಾನ್ಯವಾಗಿ ಕ್ಷಾತ್ರಕುಲಜರಾಗಿರುತ್ತಿದ್ದ ದೊರೆಗಳು ಮಲೆತ ಶತ್ರುಗಳನ್ನು ತರಿದು ರಾಜ್ಯವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುವ ಮಹತ್ವಾಕಾಂಕ್ಷೆ, ರಾಕ್ಷಸರಿಂದ ಪೀಡೆಗೊಳಗಾದ ಯಜ್ಞನಿರತ ಋಷಿಗಳಿಗೆ ಸಹಾಯ ಮಾಡುವ ಧರ್ಮಮಾರ್ಗಗಳಿಂದ ಕೂಡಿದವರಾಗಿರುತ್ತಿದ್ದರು. ಇಂಥವರು ಮಾತ್ರ ರಾಜರೇ ಹೊರತು ಅಧಿಕಾರವಿದೆಯೆಂದು – ಸಂಪತ್ತಿದೆಯೆಂದು ಉಂಡು ಮಲಗುವ ನಿರುದ್ಯೋಗಿಗಳು ರಾಜರಲ್ಲ ಎಂಬ ಪಂಪನ ಮಾತು ರಾಜನ ಅಪೇಕ್ಷಿತ ಗುಣಾದರ್ಶವನ್ನು ತಿಳಿಸುವುದರ ಜೊತೆಗೆ ರಾಜರಾದವರು ತುಳಿಯುವ ತಪ್ಪು ಮಾರ್ಗವನ್ನು ಮೊನಚಾದ ರೀತಿಯಲ್ಲಿ ಪ್ರಶ್ನಿಸುತ್ತದೆ. ರಾಜರನ್ನು ಪರಿಚಯಿಸಿಕೊಡುವ ಇಂಥದೇ ಇನ್ನೊಂದು ಪದ್ಯ ಇನ್ನೂ ಪರಿಣಾಮಕಾರಿಯಾಗಿದೆ :

"ಒತ್ತಿ ತರುಂಬಿನಿಂದ ರಿಪುಭೂಜಸಮಾಜದ ಬೇರ್ಗಳಂ ನಭ
ಕ್ಕೆತ್ತದೆ ಬಂದು ತನ್ನ ಮೊರೆವೊಕ್ಕೊಡೆ ಕಾಯದೆ ಚಾಗದೊಳ್ಪಿನ

ಚ್ಚೊತ್ತದೆ ಮಾಣ್ದು ಬಾಳ್ವ ಪುಳುವಾನಸನೆಂಬನಜಾಂಡಮೆಂಬುದೊಂ
ದತ್ತಿಯ ಪಣ್ಣೊಳಿರ್ಪ ಪುಳುವಲ್ಲದೆ ಮಾನಸನೇ ಮರಾಂತಕಾ"೩

ಇಲ್ಲಿಯೂ ಕವಿಯು ರಾಜರಿಗಿರಬೇಕಾದ ಸಹಜಧರ್ಮಗಳಾದ ಶೌರ್ಯ-ಶರಣಾಗತ ರಕ್ಷಣೆ-ಕ್ಷಮೆ-ತ್ಯಾಗ ಮೊದಲಾದವುಗಳ ಮೇಲೆ ಬೆಳಕು ಚೆಲ್ಲಿದ್ದಾನೆ. ಪಂಪ ಸಾಮ್ರಾಜ್ಯಶಾಹಿ ವ್ಯವಸ್ಥೆಯ ದೋಷಗಳನ್ನು ಪ್ರಶ್ನಿಸಿದ್ದನೆಂಬುದಕ್ಕೆ ಇಂಥ ಮಾತು ಗಳು ಸಾಕ್ಷಿ. ಮೇಲಿನ ಈ ಮಾತನ್ನೇ ಪರಿಷ್ಕರಿಸಿ 'ಈಯಲ್ ಇರಿಯಲ್ ಶರಣ್ಬುಗೆ ಕಾಯಲ್ ಕ್ಷತ್ರಿಯರೆ ಬಲ್ಲರ್' ಎಂದಿದ್ದಾನೆ ರನ್ನ. ಇಂಥ ಮಾತುಗಳಲ್ಲಿ ರಾಜರ ಶೌರ್ಯ-ಚಾರಿತ್ರ್ಯಗಳೆರಡರ ಪರಿಚಯವಾಗುತ್ತದೆ.

ರಾಜರಾದವರು ಬಾಲ್ಯದಲ್ಲಿ ಮಾಡಬೇಕಾಗಿದ್ದ ವಿದ್ಯಾಭ್ಯಾಸದ ದೀರ್ಘ ವಿವರಣೆ ಪಂಪನಲ್ಲಿದೆ. ವ್ಯಾಪಕವಾಗಿದ್ದ ಈ ಅಭ್ಯಾಸಕ್ರಮ ಕೇವಲ ಪಂಪನ ಕಾಲದ್ದಾಗಿರದೆ ಮಹಾಭಾರತದ ಕಾಲದ್ದೂ ಎನ್ನಬೇಕಾಗುತ್ತದೆ. "ಪಂಚಾಂಗ ವ್ಯಾಕರಣ ವೃತ್ತಿಭೇದ ಮಪ್ಪ ಛಂದೋವೃತ್ತಿಯೊಳಂ ಶಬ್ದಾಲಂಕಾರನಿಷ್ಠಿತಮಪ್ಪಲಂಕಾರದೊಳಂ ವ್ಯಾಸ ವಾಲ್ಮೀಕಿ ಕಶ್ಯಪ ಪ್ರಭೃತಿ ವಿರಚಿತಂಗಳಪ್ಪ ಮಹಾಕಾವ್ಯಂಗಳೊಳಂ...... ಪದಿನೆಂಟು ಧರ್ಮಶಾಸ್ತ್ರಂಗಳೊಳಂ ನಾಲ್ಕು ವೇದಂಗಳೊಳಮಾರಂಗದೊಳಮಯ್ದು ತೆರದ ಮಂತ್ರಂಗಳೊಳಂ ದರ್ಶನದೊಳಂ ಪ್ರತ್ಯಕ್ಷಾನುಮಾನ ಪ್ರಮಾಣಂಗಳೊಳಂ...... ಚಾಪಚಕ್ರ ಪರಶು ಕೃಪಾಣ ಶಕ್ತಿ ತೋಮರ ಮುಸಲ ಮುಸುಂಡಿ ಭಿಂಡಿವಾಳ ಮುದ್ಗರ ಗದಾದಿ ವಿವಿಧಾಯುಧಂಗಳೊಳಮತಿ ಪ್ರವೀಣನುಮಾರೂಢಸರ್ವಜ್ಞ ಮಹೇಂದ್ರ ಜಾಣನುಮಾಗಿ"೪. ಬೆರಗುಗೊಳಿಸುವ ಈ ಪಟ್ಟಿಯಲ್ಲಿಯ ಎಲ್ಲ ವಿದ್ಯೆಗಳೂ "ಬರೆಯದೆ ಬಂದ ಸುದ್ದಗೆಯ ಸೂತ್ರಮನೊಂದೆ ಮುಹೂರ್ತಮಾತ್ರದಿಂ ಬರಿಸಿದುದಂತು ಸೂತ್ರಿಸಿದ ಸೂತ್ರದ ವೃತ್ತಿ ನಿಜಾತ್ಮವೃತ್ತಿಪೋಲ್" ಎನ್ನಿಸುವಷ್ಟು ಸಹಜವಾಗಿ ರಾಜರಿಗೆ ಕರಗತವಾಗುತ್ತಿದ್ದವೆಂಬುದನ್ನು ಕೇಳಿದಾಗ, ನಮಗೆ ಇನ್ನೂ ಹೆಚ್ಚಿನ ಬೆರಗಾಗುತ್ತದೆ. ಜೊತೆಗೆ ರಾಜರ ಅಪಾರ ಪಾಂಡಿತ್ಯದ ಅರಿವೂ ಮೂಡುತ್ತದೆ.

ರಾಜನೊಬ್ಬ ಹೊಂದಿರಬೇಕಾದ ಲಾಂಛನಾದಿ ಲಕ್ಷಣಗಳೂ ಅಂದು ಹೇರಳ ವಾಗಿದ್ದವು : "ಮುಂದೆ ಪರಿವ ಧವಳಚ್ಛತ್ರಚಾಮರಂಗಳುಂ ಮಿಳಿರ್ವ ಪಾಳಿಕೇತ ನಂಗಳುಂ ಪೊಳೆವ ಪಂಚಮಹಾಶಬ್ದಗಳುಂ ತನಗೆ ರಾಜರಾಜ ಶಬ್ದಮನನ್ವರ್ಥಂ ಮಾಡೆ"೫ ಎಂಬಲ್ಲಿಯೂ "ಧವಳಚ್ಛತ್ರ ಚಾಮರ ಸಿಂಹಾಸನ ಪಟ್ಟವರ್ಧನ ಕಂಲ ಧನಾದಿ ರಾಜ್ಯಚಿಹ್ನಂಗಳಂ" ಎಂಬಲ್ಲಿಯೂ ರಾಜಚಿಹ್ನೆಗಳ ಸೂಚನೆಯಿದೆ.

ರಾಜನ ಯುದ್ಧದ ಪ್ರಯಾಣದ ವಿವರಗಳನ್ನು ನೀಡುತ್ತದೆ: "ಸಡ ಹುಡನಪ್ಪ ಕಳ್ತಿ ಕೊಡೆ ಸಂತಸದಿಂ ಪೆರಗೇರಿ ಬರ್ಪ ಕನ್ನಡಿವಿಡಿದಾಕೆ ಚಿನ್ನದ ಸವಂಗಮಪೂರ್ವದ ಮೊಚ್ಚೆಯುಂ ಪವಣ್ಬಡೆದ ಸುವರ್ಣ ಪಾರಿವದ ಕುಪ್ಪಸ ಮೊಪ್ಪೆ ಬೆಡಂಗನಾಳ್ದು ಕಣ್ಗೆಡರದೆ ಪೆಂಡವಾಸದ ವಿಳಾಸದ ಸೂಳೆಯರೊಪ್ಪಿ ತೋರಿದರ್".[೬] ಕೊಡೆ, ಕನ್ನಡಿ ಹಿಡಿದ ಸ್ತ್ರೀಯರು, ಪೆಂಡವಾಸದ ಸೂಳೆಯರು ಇವರೆಲ್ಲರ ಜೊತೆಗೆ ಕತ್ತೆಗಳೂ ಇರುತ್ತಿದ್ದವೆಂಬ ಅಂಶ ವಿಸ್ಮಯಕಾರಿಯಾಗಿದೆ.

ಚಾರಿತ್ರ್ಯದಲ್ಲಿ ರಾಜ ಇಡೀ ಪ್ರಜಾಕೋಟಿಗೆ ಆದರ್ಶನಾಗಿರಬೇಕಾಗಿದ್ದ ಕಾಲವದು. ಶುಚಿ-ಶೀಲಗಳು ರಾಜರ ಆವಶ್ಯಕ ಗುಣಗಳು. "ಪಾರದರದೊಳ್ ಸತ್ತುಂಗಳಲ್ವನ್ನರಾರ್" ಹಾಗೂ "ಶುಂಚಿಯಿಲ್ಲದವನ ಗಂಡುಂ ತೊಂಡುಂ" ಎಂಬ ಮಾತುಗಳು ಇದಕ್ಕೆ ನಿದರ್ಶನಗಳು. ಕರ್ಣಾರ್ಜುನರ ಸಂವಾದ ಪ್ರಸಂಗದಲ್ಲಿ ಅತಿಯಾಗಿ ಮಾತನಾಡಿದ ಕರ್ಣನನ್ನು ಕುರಿತು ಅರ್ಜುನ ಕೊಟ್ಟ "ಈ ನೆರೆದ ಗುರು ಜನಂಗಳ ಮಾನಿನಿಯರ ಮುಂದೆ ಕರ್ಣ ಪೊಲ್ಲದು ನುಡಿದೈ" ಎಂಬ ಉತ್ತರದಲ್ಲಿ ಸಾತ್ವಿಕ ವ್ಯಕ್ತಿಯ ವರ್ತನೆಯ ಇತಿಮಿತಿಗಳೇನೆಂಬುದರ ಸ್ಪಷ್ಟ ನಿರ್ದೇಶನವಿದೆ. ಅಂತೂ ರಾಜನಾದವ 'ಭಯಮರಿಯದ ಕಲಿ - ತ್ಯಾಗಿ' ಎನ್ನಿಸಬೇಕೇ ವಿನಃ 'ಹೇಡಿಯೂ ಲೋಭಿಯೂ ಆಗಿರಕೂಡದು' ಎಂಬುದು ಅಂದಿನ ರಾಜಕೀಯ ಪರಿಸರದ ಮನೆಮಾತಾಗಿತ್ತು.

ಶೌರ್ಯಕ್ಕೆ ಸಂಬಂಧಿಸಿದ ಪಂಪನ ಇನ್ನೂ ಕೆಲವು ವಿಚಾರಗಳು ಅಂದಿನ ಕ್ಷಾತ್ರ ಜೀವನದ ನೇರ ಪರಿಚಯವನ್ನು ಒದಗಿಸುತ್ತವೆ. 'ಮಲೆಪರ್ ಮಂಡಳಿಕರ್ ಕರುಂಬದದಟರ್ ವೀರರ್ಕಳುಂ ತಮ್ಮ ಬಾಳ್ದಲೆಯುಂ ಬೇಡಿದ ವಸ್ತುವಾಹನಮುಂ ಮುಂದಿಟ್ಟು ಮೂವಿಟ್ಟಿಯೊಕ್ಕಲವೋಲಿಂ ಬೆಸಕೆಯ್ಯೆ"[೭] ಎಂಬುದು ಪಾಂಡವರ ಶೌರ್ಯದ ವರ್ಣನಾ ಪ್ರಸಂಗದಲ್ಲಿ ಬಂದಿರುವ ಮಾತು. ಇಲ್ಲಿಯ 'ಬಾಳ್ದಲೆ', 'ಮೂವಿಟ್ಟಿ' ಎಂಬ ಪದಗಳು ಅಂದಿನ ರಾಜಕೀಯ-ಸಾಂಸ್ಕೃತಿಕ ರೂಢಿಗಳನ್ನು ಪ್ರತಿನಿಧಿಸುತ್ತವೆಯೆಂಬುದನ್ನು ನಾವು ಪರಿಭಾವಿಸಬೇಕು.

ಯುದ್ಧಗಳು ಅಂದಿನ ರಾಜಕೀಯ ಬದುಕಿನ ಸಹಜ ಘಟನೆಗಳಾಗಿರುತ್ತಿದ್ದವು. ಯುದ್ಧನಿರತರಾಗಿರುವ ವೀರಯೋಧರ ಮಾನಸಿಕ ದೃಢತೆ ಅಗಾಧವಾದದ್ದು. ಯುದ್ಧಪೂರ್ವದ ಸನ್ನಾಹದ ಸಡಗರವಂತೂ ಪಂಪಭಾರತದಲ್ಲಿ ತುಂಬ ಜೀವಂತವಾಗಿ ಮೂಡಿ ಬಂದಿದೆ. ತಮ್ಮ ರಥ, ಆನೆ, ಕುದುರೆ, ಆಯುಧಗಳ ಪೂಜೆ ಮಾಡಿ ಹುಮ್ಮಸ್ಸಿನಿಂದ ಕೂಡಿದ ಯೋಧರು ವೀರಮರಣ-ವೀರಸ್ವರ್ಗದ ಹಂಬಲದಲ್ಲಿ ಮುಳುಗುತ್ತಾರೆ. ವೀರಯೋಧರ ಸ್ತ್ರೀಯರು ತಮ್ಮ ಪುರುಷರಲ್ಲಿ ಹೇಗೆ ಸ್ಫೂರ್ತಿ

ತುಂಬುತ್ತಿದ್ದರು ಹಾಗೂ ಶೌರ್ಯ–ತ್ಯಾಗಗಳಿಗಾಗಿ ತಾವೂ ಹೇಗೆ ಸಿದ್ಧರಿರುತ್ತಿದ್ದರು ಎಂಬ ವಿವರಗಳು ಪಂಪಭಾರತದಲ್ಲಿ ದಟ್ಟವಾಗಿ ಬಂದಿವೆ.

"ಸುರಲೋಕಂ ದೊರೆಕೊಳ್ವುದೊಂದು ಪರಮಶ್ರೀಲಕ್ಷ್ಮಿಯುಂ ಬರ್ಪುದಾ
ದರದಿಂ ದೇವನಿಕಾಯದೊಳ್ ನೆರೆವುದೊಂದುತ್ಸಾಹವುಂ ತನ್ನ ಮೆ
ಯ್ಸಿರಿ ಭಾಗ್ಯಂ ನೆರವುಪ್ಪುದೊಂದೆ ರಣದೊಳ್ ಗೆಲ್ದಾಜಿಯುಂ ತಳ್ತು ಸಂ
ಗರದೊಳ್ ಜೋಳದ ಪಾಳಿಯುಂ ನೆರಪಿದುಂ ಗಂಡಂ ಪೆರಂ ಗಂಡನೇ"[೮]

"ಗೆಲ್ದವನಂ ಶ್ರೀವಧು ಪತ್ತುಗುಂ... ... ..." ಇಂಥ ಮಾತುಗಳಿಂದ, ವೀರೋಚಿತ ಮರಣವೂ ಕೂಡ ಬದುಕಿನಷ್ಟೇ ಮೌಲಿಕವೆಂಬ ತಿಳುವಳಿಕೆ ಆ ಕಾಲದಲ್ಲಿದ್ದುದು ತಿಳಿಯುತ್ತದೆ. ಇಂಥ ಇನ್ನೂ ಕೆಲವು ಮಾತುಗಳು ಪಂಪಯುಗ ಹಾಗೂ ತತ್ಪೂರ್ವ ಯುಗಗಳು ಕ್ಷಾತ್ರಯುಗಗಳಾಗಿದ್ದುವೆಂಬುದನ್ನು ಪ್ರಮಾಣೀಕರಿಸುತ್ತವೆ. ವೀರ ಮರಣದಿಂದ ವೀರಸ್ವರ್ಗಪ್ರಾಪ್ತವಾಗುವುದೆಂದೂ, ದೇವತೆಗಳ ಸಹಜೀವನ ಸಾಧ್ಯ ವಾಗುವುದೆಂದೂ ಅಂದಿನ ಪ್ರತಿಯೊಬ್ಬ ವೀರ ನಂಬಿರುತ್ತಿದ್ದ. ಮೇಲಿನ ಈ ಎರಡೂ ಹೇಳಿಕೆಗಳಲ್ಲಿ

"ಜಿತೇನ ಲಭತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾ
ಕ್ಷಣವಿಧ್ವಂಸಿನಿ ಕಾಯೇ ಕಾಚಿಂತಾ ಮರಣೇ ರಣೇ"

ಎಂಬ ಮಾತಿನ ಛಾಯೆಯಿದೆ.

೨. ರಾಜರ ಲೋಪದೋಷಗಳು : ಚಿಕಿತ್ಸಕ ಮನೋಭಾವದವನಾದ ಪಂಪ ಸರ್ವಾಧಿಕಾರದ ನೆರಳಿನಲ್ಲಿ ಬದುಕಿ ಅದರ ಗುಣದೋಷಗಳನ್ನು ಅರ್ಥ ಮಾಡಿಕೊಂಡಿದ್ದ. ಅಂತೆಯೇ ಗುಣಗಳನ್ನು ಹೊಗಳಿದ ಆತ ಆ ವ್ಯವಸ್ಥೆಯ ದೋಷಗಳನ್ನು ತೆಗಳಿಯೂ ಇದ್ದಾನೆ. ರಾಜರ ಚಂಚಲಸ್ವಭಾವವನ್ನರಿತ ಪಂಪ "ನಿಜದೊಳೆ ಭೂಪರೆಂಬರವಿವೇಕಿಗಳಪ್ಪರ್"[೯] ಎಂದು ಹೇಳುವ ಧೈರ್ಯಶಾಲಿಯಾಗಿದ್ದ. ತಮ್ಮ ಕೈಯಲ್ಲಿ ಅಧಿಕಾರವಿದೆಯೆಂಬ ಮತ್ತಿನಲ್ಲಿ ಮಾಡಬಾರದುದನ್ನು ಮಾಡಿದ ರಾಜರ ಉದಾಹರಣೆಗಳನ್ನೂ ಪಂಪ ತಿಳಿದಂತಿದೆ. ಬಹುಶಃ ಅಂಥದೇ ಒಂದು ಉದಾಹರಣೆಯನ್ನು ಪಂಪ ಶಲ್ಯನ ಬಾಯಿಂದ ನುಡಿಸಿದ್ದಾನೆ.

"ಕಲಿಯುನೆ ಪಂದೆ ಮಾಳ್ಪ ಕಡುಮಂದೆಯುನೊಳ್ಗಲಿ ಮಾಳ್ಪ ತಕ್ಕನಂ
ಪೊಲೆಯುನೆ ಮಾಳ್ಪ ಮುಂ ಪೊಲೆಯುನಂ ನೆರೆ ತಕ್ಕನೆ ಮಾಳ್ಪ ತಮ್ಮೊಳ
ಗ್ಗಲಿಸಿ ಪೊದಳ್ದು ಪರ್ವಿದವಿವೇಕತೆಯಿಂ ನೃಪಚಿತ್ತವೃತ್ತಿ ಸಂ
ಚಲಮುದರಿಂದಮೋಲಗಿಸಿ ಬಾಳ್ವುದೆ ಕಷ್ಟಮಿಳಾಧಿನಾಥರಂ"[೧೦]

ಎಂದೂ ಕೇಳಿದರೆ, ಇಡೀ ರಾಜಸಂಕುಳವೆಲ್ಲ ಕಿಡಿಯಾಗಬಹುದಾದ ಇನ್ನೊಂದು ಮಾತನ್ನೂ ಪಂಪ ಈ ಪ್ರಸಂಗದಲ್ಲಿ ಸೇರಿಸಿದ್ದಾನೆ :

"ಅನುಪಮವಿಕ್ರಮಕ್ರಮಮುಂದಾರಗುಣಂ ಋತವಾಕ್ಯಮೆಂಬ ಪೆಂ
ಪೆನಲಿವು ಮೂರೆನಾಲ್ಕೆ ಗುಣ ಮತ್ತಮದಾನ್ವಿತ ರಾಜ ಬೀಜ ಸಂ
ಜನಿತ ಗಣಂ ಮದಂ ಮದಮನಾಳ್ದವಿವೇಕತೆಯಿಂದಮಲ್ತೆ ತೊ
ತ್ತಿನ ಮೊಲೆವಾಲನುಂಡ ಗುಣಮಿಂತಿವನಾರ್ ಕಿಡಿಪರ್ ನರೇಂದ್ರರೊಳ್"೧೧

ಇಲ್ಲಿಯಂತೂ ಪಂಪ ರಾಜಕುಲದ ರಹಸ್ಯಕ್ಕೇ ಕೈಹಾಕಿಬಿಡುತ್ತಾನೆ; ಅವರು ತೊತ್ತಿನ ಮೊಲೆವಾಲನುಂಡು ಬೆಳೆದವರಂತೆ ! ಇಂಥ ಎಲ್ಲ ಮಾತುಗಳನ್ನೂ ಕ್ರೋಢೀಕರಿಸಿಕೊಂಡು ವಿಶ್ಲೇಷಿಸಿದಾಗ ಅಂದಿನ ಕೆಲವು ರಾಜರಲ್ಲಿದ್ದ ಲೋಪ ದೋಷಾದಿಗಳ ನಿಚ್ಚಳ ಕಲ್ಪನೆ ಹಾಗೂ ಪಂಪನ ನಿರ್ಭಿಡೆಯ ಸ್ವಭಾವದ ಪರಿಚಯ ನಮಗಾಗುತ್ತದೆ.

೩. ಸಾಮಾನ್ಯ ರಾಜನೈತಿಕ ವಿಚಾರಗಳು : ಪಂಪಭಾರತದಲ್ಲಿ ನೀತಿಶಾಸ್ತ್ರ-ಅರ್ಥಶಾಸ್ತ್ರಗಳಿಗೆ ಸಂಬಂಧಿಸಿದ ಅನೇಕ ವಿಚಾರಗಳು ಬಂದಿದ್ದು ಅವುಗಳಲ್ಲಿಯ ಹೆಚ್ಚಿನವುಗಳೆಲ್ಲ ಪುರಾತನೋಕ್ತವಾದವು. ಅವುಗಳನ್ನು ಪಂಪ ತನ್ನ ಸಂದರ್ಭಗಳಿಗೆ ಅನ್ವಯಿಸಿಕೊಂಡಿದ್ದಾನೆ. ಇವೆಲ್ಲ ಹೆಚ್ಚಾಗಿ ಸಾರ್ವತ್ರಿಕವೂ-ಸಾರ್ವಕಾಲೀನವೂ ಆಗಿರುವವೆಂಬುದನ್ನು ಗಮನಿಸಬೇಕು. ಇವು ರಾಜರಿಗೆ ಆವಶ್ಯಕವಾದ ಮಾರ್ಗ ದರ್ಶಕ ಸೂತ್ರಗಳಾಗಿದ್ದವೆನ್ನಬಹುದು. ರಾಜರು ತಮ್ಮ ಜಟಿಲ ಹಾಗೂ ಜವಾಬ್ದಾರಿ ಯುತವಾದ ಜೀವನದುದ್ದಕ್ಕೂ ಪ್ರಸಂಗಾನುಸಾರವಾಗಿ ಪಾಲಿಸಬೇಕಾದ ಕರ್ತವ್ಯ ಹಾಗೂ ನೀತಿಗಳ ಸೂಚನೆ ಈ ಮಾತುಗಳಲ್ಲಿವೆ.

ರಾಜರಾದವರು ಗುರು-ಹಿರಿಯರಿಗೆ ಸೂಕ್ತ ಗೌರವ ನೀಡಬೇಕಾಗಿದ್ದುದು ಅವಶ್ಯವಾಗಿತ್ತು. ಅವರು ತಾವು ಮಾಡಿದ ಪ್ರತಿಜ್ಞೆಯನ್ನು ಪೂರೈಸುವುದರ ಜೊತೆಗೆ ಗುರು-ಹಿರಿಯರು ನೀಡಿದ ಆಜ್ಞೆಗಳನ್ನೂ ಕೂಡ ಅಷ್ಟೇ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರೆಂಬುದಕ್ಕೆ "ಮಹಾಪುರುಷರಾಜ್ಞಾಲಂಘನಗೆಯ್ವರೇ",೧೨ ಹಾಗೂ "ಮಹಾಪ್ರತಿಜ್ಞೆ ಮೀರಲಾಗದು"೧೩ ಎಂಬ ಮೊದಲಾದ ಹೇಳಿಕೆಗಳೇ ಸಾಕ್ಷಿ.

ಎಷ್ಟೇ ಬಲಿಷ್ಠನಾಗಿದ್ದರೂ ರಾಜ ತಾನೊಬ್ಬನೇ ಕಾರ್ಯಪ್ರವೃತ್ತನಾಗದೆ ಮಹತ್ವದ ಪ್ರಸಂಗಗಳಲ್ಲಿ ತನ್ನವರೊಂದಿಗೆ ಅಂದರೆ ಮಂತ್ರಿ, ಸೇನಾಪತಿ, ರಾಜ ಗುರು, ಕೋಶಾಧಿಕಾರಿ ಮುಂತಾದವರ ಜೊತೆಗೆ ಚರ್ಚೆ ಮಾಡುತ್ತಿದ್ದುದರ ಬಗ್ಗೆ ತಿಳಿದುಬರುತ್ತದೆ. ಅದನ್ನೇ ಅಂದು 'ಮಂತಣ' 'ಮಂತ್ರಾಲೋಚನೆ' ಎಂದು ಕರೆಯಲಾಗುತ್ತಿತ್ತು. ಅಂಥ ಚರ್ಚೆ ನಡೆಯುವ ರಹಸ್ಯತಾಣವನ್ನು 'ಮಂತ್ರಶಾಲೆ' ಎಂದು ಕರೆಯುತ್ತಿದ್ದರು. ದುರ್ಯೋಧನ ತನ್ನವರೊಂದಿಗೆ ನಡೆಸಿದ ಮಂತ್ರಾಲೋ

ಚನೆಯು ಒಂದು ಪ್ರಸಂಗವನ್ನಿಲ್ಲಿ ನೋಡಬಹುದು: "ಆಗಿ ದುಶ್ಶಾಸನ ಕರ್ಣ ಶಕುನಿ ಸೈಂಧವರೆಂಬ ದುಷ್ಟಚತುಷ್ಟಯುದೊಳ್ ಮಂತಣವಿಂದು್".೧೪

ರಾಜನ ಸಂದೇಹಗಳಿಗೆ ಬಲ್ಲವರು ದಾರಿತೋರುವುದು ಸಮಾಧಾನ ಹೇಳು ವುದು ಸಾಮಾನ್ಯ ಪದ್ಧತಿ. ದುರ್ಯೋಧನನಿಗೆ ಶಕುನಿ ತೋರಿದ ದಾರಿ:

"ಕರೆದೊಡೆ ಜೂದಿಂಗಂ ಧುರ
ಭರಕಾಖೇಟಕ್ಕೆ ಭೂಭುಜಂಗಾಗದು ಮೆ
ಯ್ಗುರೆದಿರಲೆಂಬ ಪುರಾತನ
ಗುರುವಚನಂ ತನಗೆ ನಿಟ್ಟೆ ಪಟ್ಟುದರಿಂದಂ"೧೫

ಎಂಬುದೊಂದು ನಿದರ್ಶನ. ರಾಜನಾದವನು ಯುದ್ಧ-ಜೂಜಂಗಳಿಗಾಗಿ ಬಂದ ಇನ್ನೊಬ್ಬರ ಆಹ್ವಾನವನ್ನು ಎಂದೂ ತಿರಸ್ಕರಿಸಲಾರ ಎಂಬ ಪುರಾತನ ನೀತಿಯ ಹಿನ್ನೆಲೆಯಲ್ಲಿ ದುರ್ಯೋಧನ ಧರ್ಮರಾಜನನ್ನು ಜೂಜಿಗೆ ಆಹ್ವಾನಿಸುವಂತೆ ಶಕುನಿ ಇಲ್ಲಿ ಪ್ರೇರೇಪಿಸಿದ್ದಾನೆ. ಭೀಕರ ಕ್ಷಾಮ, ಪದೇ ಪದೇ ಜರುಗುತ್ತಿದ್ದ ಯುದ್ಧ, ಯಾವಾಗಲೂ ಇರುತ್ತಿದ್ದ ಅಂತಃಕಲಹ ಈ ಮುಂತಾದ ಪ್ರಸಂಗಗಳಲ್ಲಿಯಂತೂ ಇಂಥ ಮಂತ್ರಾಲೋಚನೆ ರಾಜನಿಗೆ ಅನಿವಾರ್ಯವಾಗುತ್ತಿದ್ದಿತು.

ರಾಜ ದುಡುಕುಸ್ವಭಾವದವನಿರಕೂಡದು. ಪ್ರತಿಯೊಂದೂ ನಿರ್ಣಯ ತೆಗೆದು ಕೊಳ್ಳುವಾಗ ಆತ ಒಂದು ನಯದಿಂದ ವರ್ತಿಸಬೇಕಾಗುತ್ತಿತ್ತು, ಎಂಬುದು ಕೆಳಗಿನ ಪದ್ಯದಲ್ಲಿ ನಿರೂಪಿತವಾಗಿದೆ:

"ಬೆಸಮಾರ್ ಕೊಂಡವೊಲಕ್ಕುಮೊಂದೆ ನಯಮುಂ ಕೇಳ್ ನಿನ್ನ ಮುಂದೀಗಳಾ
ನುಸಿರ್ದಪ್ಪೆಂ ಸಲೆ ಮೆಲ್ಪು ಬಲ್ಪುನಳಿಗುಂ ಕೈವಾರಮುಂ ಕೂಡೆ ಕೂ
ರಿಸುಗುಂ ನಿಕ್ಕುವಮಪ್ಪ ಕಾರಣದಿನಿಂತೀ ಸಾಮಮಂ ಮುಂ ಪ್ರಯೋ
ಗಿಸದೇ ಕೆಟ್ಟಪುದೆಂದು ದಂಡಮನೆ ಮುಂ ಮಂತಿಕ್ಕುಮಂ ಮಂತ್ರಿಯೇ"೧೬

ಎಂಬ ಮಾತಿನಲ್ಲಿ ಮಂತ್ರಿಯೊಬ್ಬ ಪ್ರಸಂಗೋಚಿತವಾಗಿ ವರ್ತಿಸಬೇಕಾದ ಸಾಮ ದಾನ ಭೇದದಂಡಾದಿ ನೀತಿಗಳ ಕ್ರಮಬದ್ಧ ಜ್ಞಾನ ಹಾಗೂ ನೈಪುಣ್ಯದ ಬಗ್ಗೆ ತಿಳಿಸಲಾಗಿದೆ.

ಇಂಥ ಚರ್ಚಾಪ್ರಸಂಗಗಳಲ್ಲಿ ಹಿರಿಯರ ಹಿತೋಪದೇಶಗಳೂ ಬರುತ್ತವೆ. 'ನುಡಿದೊಡಮಾನೆಯು ಕೋಡು ಬಾಗದು', 'ಮಹಾಪ್ರತಿಜ್ಞೆಯುಮನಾರ್ಗಂ ಬಾರಿಸ ಲ್ಬಾರದು', 'ಕೆಯ್ಗಳಿದ ಮನವಾಳ್ತೆಗೆ ಬುದ್ಧಿವೇಳಲೆಡೆಯಿಲ್ಲ', 'ಉಪ್ಪಿಕ್ಕಿದೊಡೆ ತುಪ್ಪಕ್ಕೆ ಮೆಳ್ಪಡಿತು', 'ಕೊಂದರೆ ಕೊಲೆ ಸಾವರ್', 'ಜಗದ್ವ್ಯಾಪಾರವೀಶ್ವರೇಚ್ಛೆ', 'ನಷ್ಟಂ ನಷ್ಟಂ ಮೃತಂ ಮೃತಂ' ಎಂಬೆಲ್ಲವೂ ಆ ಮಾಲಿಕೆಯ ಮಾತುಗಳು.

ಚಾತುರ್ವರ್ಣಗಳ ಬಗ್ಗೆ ಪ್ರಜ್ಞೆಹೊಂದಿದ ಅಂದಿನ ದೊರೆಗಳು 'ಪಾರ್ವನೊಳ್ ಕಲಹವಾಗದು' ಎಂಬ ಧೋರಣೆಯನ್ನು ಹೊಂದಿದ್ದರು. ಯುದ್ಧಕಲೆಯಲ್ಲಿ ಪರಿಣತರಾದ ದೊರೆಗಳು ಶತ್ರುತಳ ಮನೋವಿಜ್ಞಾನವನ್ನೂ ಅಭ್ಯಸಿಸಬಲ್ಲವರಾಗಿರುತ್ತಿದ್ದರು. ಅಂತೆಯೇ 'ಅತ್ಯಾದರಸ್ಸಂಭ್ರಮಾವಂತಪ್ಪಾದಯಂತಿ' ಹಾಗೂ 'ಶೂರಂ ಭೇದೇನ ಯೋಜಯೇತ್' ಎಂಬ ನಿಲುವು ಅವರದಾಗಿತ್ತು. ಯಾರು ತಮಗೆ ಅತಿಯಾದ ವಿನಯವನ್ನು ತೋರುತ್ತಾರೋ ಅವರಿಂದಲೇ ತಮಗೆ ಹಾನಿ. ಶೂರರನ್ನು ಭೇದದಿಂದಲಾದರೂ ಸೋಲಿಸಬೇಕು ಎಂಬುದು ಈ ಮಾತುಗಳ ಅರ್ಥ.

ರಾಜನೈತಿಕ ಪ್ರಬುದ್ಧತೆಯ ಇನ್ನೊಂದು ಚಿತ್ರ ಪಂಪಭಾರತದಲ್ಲಿ ತುಂಬ ವಾಸ್ತವವಾಗಿ ಮೂಡಿಬಂದಿದೆ :

"ಸಂಗತ ನೀತಿಶಾಸ್ತ್ರವಿದರಪ್ಪರವಂದಿರ ತಮ್ಮ ತಮ್ಮ ಕ
ಜ್ಜಂಗಳ ಮೆಯ್ಗಳೊಳ್ ಪುಸಿದದು ಕಡುನನ್ನಿಯೆ ಮಾಡಿ ತೋರ್ಪರು
ತ್ತುಂಗ ಸುಸೂಕ್ಷ್ಮಪಾರ್ಶ್ವಕೃಶ ಕೋಮಳ ನಿಮ್ನಘನೋನ್ನತ ಪ್ರದೇ
ಶಂಗಳನಾ ಸಮಾನ ತಳದಲ್ಲಿಯೆ ಚಿತ್ರಕನೆಯ್ದೆ ತೋರ್ಪವೋಲ್"೧೭

ಎಂಬುದು ಆ ಪದ್ಯ. ಚಿತ್ರಕಾರನೊಬ್ಬ ತಾನು ಚಿತ್ರ ಬರೆಯುವ ಪಟದ ಸಮಪ್ರದೇಶದಲ್ಲಿಯೇ ಎತ್ತರ ತಗ್ಗು ದಪ್ಪ ಕೋಮಲ ಸೂಕ್ಷ್ಮ ಇವೆಲ್ಲವುಗಳನ್ನೂ ಹೇಗೆ ಮನಮುಟ್ಟುವಂತೆ ಚಿತ್ರಿಸಿ ತನ್ನ ಕೈಚಳಕವನ್ನು ತೋರಿಸುವನೋ ಹಾಗೆ ಚೆನ್ನಾಗಿ ನೀತಿಶಾಸ್ತ್ರ ಬಲ್ಲವರು ತಮ್ಮ ಪ್ರಸಂಗಾನುಸಾರವಾಗಿ ಸುಳ್ಳನ್ನೂ ಸತ್ಯವನ್ನಾಗಿಸಿ ತೋರಿಸುತ್ತಾರೆ ಎಂಬುದು ಈ ಪದ್ಯದ ಅರ್ಥ. ಕೃಷ್ಣನ ಬೆಂಬಲದಲ್ಲಿ ಪಾಂಡವರು ಮುಂದುವರೆಯುತ್ತಿರುವ ರೀತಿಯನ್ನು ಕುರಿತು ದುರ್ಯೋಧನ ಚಿಂತಿಸುತ್ತಿರುವಾಗ ಗುರು ಶಾರದ್ವತರು ದುರ್ಯೋಧನನಿಗೆ ನೀಡಿದ ತಿಳುವಳಿಕೆ ಇದಾಗಿದೆ. ದುರ್ಯೋಧನನ ಹತಭಾಗ್ಯವನ್ನು ಗುರುತಿಸಿದ ಶಾರದ್ವತರು, ಅವನ ದೈವ ವಿಮುಖವಾಗಿರುವ ಕಾರಣದಿಂದ ಮೌಲ್ಯ, ಭೃತ್ಯ, ಸುಹೃತ್, ಶ್ರೇಣಿ, ಮಿತ್ರ, ಅಟವಿಕ ಮೊದಲಾದ ರಾಜತಂತ್ರಗಳೂ ಕೂಡ ವಿಫಲವಾಗಿವೆ; ಬುದ್ಧಿವಂತರ ಅಸಾಮಾನ್ಯ ಉಪಾಯಗಳೂ ಕೂಡ ಒಮ್ಮೊಮ್ಮೆ ಅಪಾಯವಾಗುತ್ತವೆಯೆಂದು ತಿಳಿಸಿ; ಯುದ್ಧ ಅಥವಾ ಸಂಧಾನ ಇವೆರಡು ನಿನ್ನ ಮುಂದಿರುವ ಕಜ್ಜಗಳು, ಇವುಗಳಲ್ಲಿ ಬೇಕಾದ ಒಂದನ್ನು ಆರಿಸಿಕೋ ಎನ್ನುತ್ತಾರೆ. ತರುವಾಯ ದುರ್ಯೋಧನನಿಗೆ ಕಾದಿರುವ ವಿಪತ್ತನ್ನರಿತ ಭೀಷ್ಮರು ಕೊನೆಯದಾಗಿ ಆತ ಮಾಡಬೇಕಾದ ಕಾರ್ಯದ ಬಗ್ಗೆ ಹೇಳಿರುವಲ್ಲಿ ಹಿರಿಯರ ಬುದ್ಧಿಮಾದ ಹಾಗೂ ರಾಜನೈತಿಕ ಸೂತ್ರಗಳು ಅಡಕವಾಗಿವೆ.

"ಪರಿಕಿಪುದೊಂದರಿಂದೆರಡನೋತೊಳಕೊಳ್ವುದು ಮೂರರಿಂದೆ ನಾ
ಲ್ಕರಿದಯ್ದರಿಂದೆ ನೆರೆ ಕಲ್ವುದು ನಿರ್ಣಯಮಾಗಿರಾರರೊಳ್

ಪರಿಣತಮಪ್ಪುದೇಳರೊಳವೊಂದದೆ ನಿಲ್ವುದಂ ದುರ್ವಿಮಂತ್ರಮಂ
ಪರೆಪ ಟವಮಾಳವಮಂ ಪಿರಿದನೋದಿದೊಡಪ್ಪ ಪದಾರ್ಥವಾವುದೋ"೧೯

"ಒಂದಾದ ಬುದ್ಧಿಯಿಂದ ಎರಡಾದ ಕಾರ್ಯಾಕಾರ್ಯಗಳನ್ನು ಅಥವಾ ಪುಣ್ಯ-ಪಾಪಗಳನ್ನು ಪರೀಕ್ಷಿಸಬೇಕು. ಶತ್ರುಮಿತ್ರಬಾಂಧವರೆಂಬ ಮೂವರನ್ನು ಒಲಿಸಿ ಕಪ್ಪವಾದ ಸಾಮ ದಾನ ಭೇದ ದಂಡಗಳೆಂಬ ಉಪಾಯಚತುಷ್ಟಯಂಗಳನ್ನು ಒಳಪಡಿಸಿಕೊಳ್ಳಬೇಕು. ಅಯ್ದು ಜ್ಞಾನೇಂದ್ರಿಯಂಗಳಿಂದ ಪೂರ್ಣವಾಗಿ ವಿವೇಕವನ್ನು ಕಲಿತುಕೊಳ್ಳಬೇಕು. ರಾಜಯೋಗ್ಯವಾದ ಸಂಧಿ, ವಿಗ್ರಹ, ಯಾನ, ಆಸನ, ಸಂಶಯಂ, ದ್ವೈಧೀಭಾವ ಎಂಬ ಆರು ಗುಣಗಳಲ್ಲಿ ಪಂಡಿತನಾಗಿರಬೇಕು. ದ್ಯೂತ ಸ್ತ್ರೀ ಪಾನಾದಿ ಸಪ್ತವ್ಯಸನಗಳಲ್ಲಿ ಸೇರಿಕೊಳ್ಳದಿರಬೇಕು. ದುಷ್ಟಮಂತ್ರಾಲೋಚನೆಯಿಂದ ಕೂಡಿದ ಮೋಸದ ಮಾತುಗಳನ್ನು ವಿಶೇಷವಾಗಿ ಕೇಳುವುದರಿಂದ ಆಗುವ ಪ್ರಯೋಜನವೇನು ?"೨೦ ಎಂಬುದು ಈ ಪದ್ಯದ ಅರ್ಥ.

ಮಗ ದುರ್ಯೋಧನನಿಗೆ ಧೃತರಾಷ್ಟ್ರ ಹೇಳಿದ "ಪಗೆಯುಂ ನಣ್ಪುಂ ಕೈಕೊಂಡ ಕಜ್ಜದಿನಲ್ತೆ ಪುಟ್ಟುಗುಂ ಮರಸುಗಳೊಂದೀ ಸಂದರ್ಥಶಾಸ್ತ್ರದೊಳೇಕೆ ಪೇಳ್ ಮಗನೆ ನೆಗಳ್ವೆ ಕಾರ್ಯಂ ಮಿತ್ರಾದಿ ಕಾರಕಂ"೨೧ ಎಂಬ ಮಾತಂತೂ ಸಾರ್ವತ್ರಿಕವಾದದ್ದು. ವೈರ-ಸ್ನೇಹಗಳು ನಾವು ಕೈಕೊಳ್ಳುವ ಕಾರ್ಯಗಳಿಂದ ಹುಟ್ಟುತ್ತವೆ. ಕಾರ್ಯವೇ ವೈರ ಸ್ನೇಹಗಳಿಗೆ ಕಾರಣ ಎಂಬ ನೀತಿ ಇಲ್ಲಿಯದು.

ವೈರಿ ತುಂಬ ಕಣ್ಣಾಗಿಸಿಕೊಂಡು ಬದುಕುವ ರಾಜ ತನ್ನ ಸುತ್ತಲಿನವರ ಬಗ್ಗೆ ಎಷ್ಟು ಜಾಗರೂಕನಾಗಿರಬೇಕೆಂಬುದನ್ನು "ಸ್ವಾಮ್ಯಾರ್ಥಂ ಸ್ವಾಮ್ಯಂ ವಿಕ್ರಾಂತಂ ಮರ್ಮಜ್ಞಂ ವ್ಯವಸಾಯಿನಂ ಅರ್ಧರಾಜ್ಯಹರಂ ಭೃತ್ಯಂ ಯೋ ನ ಹನ್ಯಾತ್ಸ ಹನ್ಯತೇ"೨೨ ಎಂಬ ಅರ್ಥಶಾಸ್ತ್ರದ ಮಾತು ತಿಳಿಸಿಕೊಡುತ್ತದೆ. ಭಾಗಕ್ಕೆ ಆಶೆ ಪಡುವವನೂ ಅದನ್ನು ಪಡೆಯುವ ಶಕ್ತಿಯುಳ್ಳವನೂ ರಹಸ್ಯವನ್ನು ತಿಳಿದವನೂ ಕಾರ್ಯಶೀಲನಾದವನೂ ಪ್ರಸಂಗನೋಡಿ ಅರ್ಧರಾಜ್ಯವನ್ನು ಅಪಹರಿಸಬಲ್ಲವನೂ ಆದ ಆಳನ್ನು ಯಾವನು ಕೊಲ್ಲುವುದಿಲ್ಲವೋ ಅವನು ತಾನೇ ಸಾಯಬೇಕಾಗುತ್ತದೆಯೆಂಬ ಇಲ್ಲಿಯ ಭಾವ ತುಂಬ ಕುತೂಹಲಕಾರಿಯಾದದ್ದು.

ಹೀಗೆ ಬಿಡಿಬಿಡಿಯಾಗಿ ಪಂಪಭಾರತದ ತುಂಬ ಉಕ್ತವಾಗಿರುವ ಈ ಎಲ್ಲ ವಿವರಗಳ ಸಮುದಾಯರೂಪನಾದ ಒಬ್ಬ ದೊರೆಯನ್ನು ಕಣ್ಮುಂದೆ ಮೂಡಿಸಿಕೊಂಡರೆ ನಿಜವಾಗಿಯೂ ಆಶ್ಚರ್ಯವಾಗುತ್ತದೆ. 'ಅಬ್ಧಿಗಡಿಮಿತಿಯುಂಟು ಬುದ್ಧಿಗಡಿಮಿತಿಯಿಲ್ಲ' ಎಂಬ ಮಾತಿನಂತೆ ಒಬ್ಬ ರಾಜ ಹೊಂದಿರಬೇಕಾದ ಜ್ಞಾನ-ಲಕ್ಷಣ-ತಂತ್ರ-ಪರಸೆಗಳು ನಿಜಕ್ಕೂ ಅಗಾಧ; ಅಂತೆಯೇ ಪಂಪನಂಥ ವ್ಯಕ್ತಿಯೂ ಕೂಡ

"ಮಹಿಪಾಳರೊಳಾದ ಕಾರ್ಯಗತಿಗಳ್ ಬಗೆಯಲ್ಕೆ ಬಹುಪ್ರಕಾರಮೋ"೨೩ ಎಂದು ಉದ್ಗಾರವೆತ್ತಿದ್ದಾನೆ.

ಒಟ್ಟಾರೆ ತನ್ನಲ್ಲಿ ಹುದುಗಿರುವ ಹಲವಾರು ರಾಜನೈತಿಕ ವಿವರಗಳಿಂದಾಗಿ ಪಂಪಭಾರತವು ಒಂದು ರಾಜತಾಂತ್ರಿಕ ಕೈಪಿಡಿ ಎಂದು ಕರೆಯಿಸಿಕೊಳ್ಳುವ ಯೋಗ್ಯತೆಯನ್ನು ಪಡೆದ ಕೃತಿಯಾಗಿದೆ. ಪ್ರಸ್ತುತ ಕೃತಿ ಹುಟ್ಟಿಬಂದ ಪರಿಸರ ಹಾಗೂ ಕವಿಪಂಪನ ಒಲವು ನಿಲುವುಗಳೂ ಇದಕ್ಕೆ ಕಾರಣವೆಂಬುದು ಇಲ್ಲಿ ನಾವು ಗಮನಿಸಬೇಕಾದ ಸಂಗತಿ.

ಅಡಿಟಿಪ್ಪಣಿಗಳು :

೧] ಪಂಪಭಾರತ ಆ ೧ — ಪದ್ಯ ೭
೨] " — ೪ — ೧೧
೩] " — ೫ — ೭೫
೪] " — ೨ — ೩೪ ಗದ್ಯ
೫] " — ೧೦ — ೨೭ ಗದ್ಯ
೬] " — ೯ — ೧೦೩
೭] " — ೯ — ೧೦
೮] " — ೧೧ — ೪೩
೯] " — ೧೨ — ೪೦
೧೦] " — ೧೨ — ೯೨
೧೧] " — ೧೨ — ೯೩
೧೨] " — ೭ — ೯
೧೩] " — ೭ — ೧೬ ಗದ್ಯ
೧೪] " — ೬ — ೬೭ ಗದ್ಯ
೧೫] " — ೬ — ೭೧
೧೬] " — ೯ — ೧೯
೧೭] " — ೧೩ — ೨೧
೧೮] " — ೧೩ — ೨೧ ಗದ್ಯ
೧೯] " — ೧೩ — ೬೬
೨೦] ಪಂಪಭಾರತದ ಗದ್ಯಾನುವಾದ—ಪು—೭೧೫— ಎನ್. ಅನಂತರಂಗಾಚಾರ್.
೨೧] ಪಂಪಭಾರತ — ೧೩ — ೧೦
೨೨] " — ೨ — ೯೦ ಶ್ಲೋಕ
೨೩] " — ೯ — ೬

● ●

ದುರ್ಗಸಿಂಹನ ಗುಲಬರ್ಗಾ ಜಿಲ್ಲೆಯ ನಿಪ್ಪಾಣಿ ಶಾಸನ

● ಹನುಮಾಕ್ಷಿ ಗೋಗಿ

ವಿಶ್ವಸಾಹಿತ್ಯೇತಿಹಾಸದ ಪ್ರಾಚೀನ ಕೃತಿಗಳಲ್ಲೊಂದಾದ ಪಂಚತಂತ್ರದ ಕಥೆಗಳನ್ನು ಕನ್ನಡಕ್ಕೆ ತಂದ ದುರ್ಗಸಿಂಹ ಪಂಪಯುಗದ ಒಬ್ಬ ಪ್ರಮುಖ ಕವಿ. ಆ ಕಾಲದ ಜಾಯಮಾನಕ್ಕೆ ತಕ್ಕಂತೆ ಗದ್ಯಪ್ರಧಾನವಾದ ಚಂಪೂಶೈಲಿಯಲ್ಲಿ ವಸುಭಾಗ ಭಟ್ಟನ ಪಂಚತಂತ್ರವನ್ನು ಕನ್ನಡದಲ್ಲಿ "ಕರ್ಣಾಟಕ ಪಂಚತಂತ್ರ"ವೆಂಬ ಹೆಸರಿನಲ್ಲಿ ಕೃತಿಗಿಳಿಸಿದವನು.

ಕನ್ನಡದ ಉಳಿದ ಕವಿಗಳಂತಲ್ಲದೆ ದುರ್ಗಸಿಂಹ ತನ್ನ ವೈಯಕ್ತಿಕ ವಿಷಯಗಳ ಬಗ್ಗೆ ಸುದೀರ್ಘವಾಗಿ ಕಾವ್ಯದ ಪೀಠಿಕಾ ಪ್ರಕರಣದಲ್ಲಿ ಮತ್ತು ಮುಕ್ತಾಯಹಂತದಲ್ಲಿ ಹೇಳಿಕೊಂಡಿದ್ದಾನೆ. ಅವುಗಳ ಆಧಾರದ ಮೇಲೆ ಹಾಗೂ ದುರ್ಗಸಿಂಹನ ಪದ್ಯಗಳು ಸೂಕ್ತಿಸುಧಾರ್ಣವದಲ್ಲಿ ಸಿಕ್ಕುವುದರಿಂದಲೂ 'ಅಭಿನವಪಂಪ' ನಾಗಚಂದ್ರನನ್ನು ಸ್ತುತಿಸುವುದರಿಂದಲೂ ಈತನು ೧೧೩೯ ರಿಂದ ೧೧೪೯ರ ವರೆಗೆ ಆಳಿದ ಚಾಲುಕ್ಯ ಜಗದೇಕಮಲ್ಲನಲ್ಲಿ ಸಂಧಿವಿಗ್ರಹಿಯಾಗಿರಬೇಕೆಂದೂ ಕಾಲವು ಕ್ರಿ. ಶ. ೧೧೪೫ ಇರಬೇಕೆಂದು ಶ್ರೀ ಆರ್. ನರಸಿಂಹಾಚಾರ್ಯರು ಸೂಚಿಸಿದ್ದರು. ನಂತರ ಎ. ವೆಂಕಟಸುಬ್ಬಯ್ಯನವರ ಆಕ್ಷೇಪವನ್ನು ಪರಾಮರ್ಶಿಸಿದ ಮೇಲೆ ಸು. ೧೦೨೫ ಎಂದೂ ಗ್ರಹಿಸಿದ್ದರು.[೧] ಮುಂದೆ ಶ್ರೀ ರಾಜಪುರೋಹಿತರು ದುರ್ಗಸಿಂಹನು ಒಂದನೆಯ ಜಗದೇಕಮಲ್ಲ ಜಯಸಿಂಹನ ಆಳ್ವಿಕೆಯಲ್ಲಿ (ಕ್ರಿ. ಶ. ೧೦೩೭ ರಿಂದ ೧೦೪೨) ರಚಿಸಿರಬೇಕೆಂದು ಸೂಚಿಸಿದರು.[೨] ಪಂಚತಂತ್ರದ ಆರಾಪ್ರತಿಯು ದೊರೆತ ನತಂರ ಅದರಲ್ಲಿದ್ದ

ಅತಿಸಂಪನ್ನತೆವೆತ್ತ ಸದ್ಗೃಹನಿವಾಸಸ್ಥಾನಮಾದ ಪ್ರಜಾ
ಪತಿ ಸಂವತ್ಸರ ಚೈತ್ರಮಾಸ ಸಿತಪಕ್ಷ ದ್ವಾದಶೀ ತಾರಕಾ
ಪತಿವಾರಂಬರೆ ಪಂಚತಂತ್ರಮೆಸೆದತ್ತೀ ಧಾತ್ರಿಯೊಳ್ ದುರ್ಗನಿ
ರ್ಗತಮುದ್ಯತ್ಕವಿಶೇಖರ ಪ್ರಮದಲೀಲಾ ಪುಷ್ಪಿತಾಮ್ರದ್ರುಮಂ ॥[೩]

---

೧. ಕರ್ಣಾಟಕ ಕವಿಚರಿತೆ, ಸಂಪುಟ ೧ ಪುಟ ೮೨.

೨. ವಾಗ್ಭೂಷಣ ಪತ್ರಿಕೆ. ೧೦—೧೧ ನೆಯ ಸಂಚಿಕೆ, ಪುಟ ೧೭.

೩. ಕರ್ಣಾಟಕ ಪಂಚತಂತ್ರಂ, ಪದ್ಯ ೪೫೬.

ಎಂಬ ಪದ್ಯದಲ್ಲಿ ಹೇಳಿರುವ ಶಾಲಿವಾಹನ ಶಕವರ್ಷ ೯೫೩ ನೆಯ ಪ್ರಜಾಪತಿ ಸಂವತ್ಸರ ಚೈತ್ರಶುಕ್ಲ ೧೨ ಸೋಮವಾರವು ಕ್ರಿ. ಶ. ೧೦೩೧ ನೆಯ ಮಾರ್ಚ್ ೮ ನೆಯ ತಾರೀಖು ಆಗುತ್ತದೆ ಎಂದು ಗೋವಿಂದ ಪೈ ಅವರು ನಿರ್ಣಯಿಸಿದ್ದಾರೆ.[೪] ಇದೇ ದುರ್ಗಸಿಂಹನ ಸರಿಯಾದ ಕಾಲವಿದ್ದಿರಬೇಕೆಂದು ಎಸ್. ಅನಂತರಂಗಾಚಾರ್[೫] ಹಾಗೂ ರಂ. ಶ್ರೀ ಮುಗಳಿಯವರು[೬] ಒಪ್ಪಿದ್ದಾರೆ. ಇವರೆಲ್ಲರ ಅಭಿಪ್ರಾಯಗಳನ್ನು ಪುಷ್ಟೀಕರಿಸುವ, ದುರ್ಗಸಿಂಹನನ್ನು ಉಲ್ಲೇಖಿಸಿ ಆತನ ಪಂಚತಂತ್ರ ಕಾವ್ಯದ ಪದ್ಯವೊಂದನ್ನು ಉದ್ಧರಿಸುವ ಕ್ರಿ. ಶ. ೧೦೩೭ ರ ಶಾಸನವೊಂದನ್ನು ಪ್ರಕಟಿಸುವುದು ಈ ಲೇಖನದ ಉದೇಶ.

ದೊರೆತ ಸ್ಥಳ :

ಗುಲ್ಬರ್ಗ ನಗರದಿಂದ ಪೂರ್ವಕ್ಕೆ ೨೦ ಕಿ. ಮಿ. ಅಂತರದಲ್ಲಿ ಸದ್ಯ ಚಿತಾಪುರ ತಾಲೂಕಿನಲ್ಲಿರುವ ಒಂದು ಚಿಕ್ಕ ಹಳ್ಳಿ 'ನಿಪ್ಪಾಣಿ'. ಈ ಊರಲ್ಲಿ ಈಶ್ವರ ದೇವಸ್ಥಾನವೆಂದು ಕರೆಯಿಸಿಕೊಳ್ಳುವ, ಅತ್ಯಂತ ಶಿಥಿಲಾವಸ್ಥೆಯಲ್ಲಿರುವ, ಆದರೆ ಗರ್ಭಗೃಹದಲ್ಲಿ ತೀರ ಈಚಿನ ಲಿಂಗವೊಂದನ್ನು ಹೊಂದಿರುವ ದೇಗುಲದ ಮುಂಭಾಗದಲ್ಲಿ ಗೋಡೆಗೆ ಒರಗಿಸಿ ನಿಲ್ಲಿಸಿರುವ ಕಲ್ಲಿನಲ್ಲಿ ಈ ಶಾಸನವಿದೆ. [ನೋಡಿ : ಚಿತ್ರಗಳು ೧ ರಿಂದ ೪] ಸರಸ್ವತಿ ವಿಗ್ರಹ ಎಲ್ಲಿಯಾದರೂ ದೊರೆಯಬಹುದೆಂದು ಊರೆಲ್ಲ ಜಾಲಾಡಿದಾಗ ದೊರೆತದ್ದು 'ಚೌಡಮ್ಮಾಯಿ' ಎಂದು ಕರೆಸಿಕೊಳ್ಳುವ ಸ್ತ್ರೀ ವಿಗ್ರಹ ಮಾತ್ರ [ನೋಡಿ : ಚಿತ್ರ ೫]. ಇನ್ನುಳಿದಂತೆ ಪ್ರಾಚೀನ ವಿಗ್ರಹಗಳಾಗಲಿ, ದೇವಾಲಯಗಳಾಗಲಿ ಈ ಊರಿನಲ್ಲಿ ದೊರೆಯುಲಿಲ್ಲ.

ಶಾಸನ ಸ್ವರೂಪ :

೫' ಉದ್ದ ಮತ್ತು ೩' ಅಗಲದ ಕರಿಕಲ್ಲಿನಲ್ಲಿ ಈ ಶಾಸನವನ್ನು ಕೆತ್ತಲಾಗಿದೆ. ಆಳವಾದ ಮತ್ತು ಸುಂದರವಾದ ಅಕ್ಷರಗಳಿದ್ದರೂ ಕಾಲನ ಪ್ರಕೋಪದಿಂದ ಮಳೆ-ಗಾಳಿ-ಬಿಸಿಲುಗಳಿಗೆ ಪಕ್ಕಾಗಿ ಕಚ್ಚುಬಿದ್ದು, ಮೇಲ್ಭಾಗದ ಅಕ್ಷರಗಳು ಅಲ್ಲಲ್ಲಿ ಅಳಿಸಿಹೋಗಿವೆ, ಅಸ್ಪಷ್ಟವಾಗಿವೆ. ಕಲ್ಲಿನಲ್ಲಿ ಬಿರುಕು ಕಾಣಿಸಿಕೊಂಡಿವೆ. ಮೇಲ್ಭಾಗದಲ್ಲಿ ಪೂಜಾರಿ, ಶಿವಲಿಂಗ, ಬಸವಣ್ಣನ ಚಿತ್ರಗಳು ಅವುಗಳ ಕೆಳಭಾಗದಲ್ಲಿ ಚಂದ್ರ, ಖಡ್ಗ,

---

೪. 'ನಾಗಚಂದ್ರನ ಕಾಲನಿರ್ಣಯ' — 'ಅಭಿನವ ಪಂಪ' ಗ್ರಂಥ, ಧಾರವಾಡ, ೧೯೩೪, ಪುಟ ೩೭—೩೮.

೫. ಕರ್ಣಾಟಕ ಪಂಚತಂತ್ರಂ, ಮುನ್ನುಡಿ ಪುಟ ೨೬.

೬. ಕನ್ನಡ ಸಾಹಿತ್ಯ ಚರಿತ್ರೆ, ಪುಟ ೭೧.

ಕರು, ಆಕಳು ಹಾಗೂ ಸೂರ್ಯನ ಚಿತ್ರಗಳಿವೆ. ೩೪ ಸಾಲುಗಳ ಈ ಶಾಸನದಲ್ಲಿ ಶಕಟರೇಫ ಮತ್ತು ರಳಗಳನ್ನು ಬಳಸಲಾಗಿದೆ. ಅರ್ಕಾವಳಿ ಬಂದಲ್ಲೆಲ್ಲ ದ್ವಿತ್ವಗಳನ್ನು ಕಾಣಬಹುದು.

ಶಾಸನದ ಮಿತಿ :

ಶಾಸನದಲ್ಲಿ 'ಸಕವರ್ಷ ೯೫೯ ನೆಯ ಬಹುಧಾನ್ಯ ಸಂವತ್ಸರ ವೈಶಾಖ ಬಹುಳ ಪಂಚಮಿ ಬೃಹಸ್ಪತಿವಾರದನ್ದು ಸೋಮಗ್ರಹಣ' ಎಂದು ಹೆಸರಿಸಲಾಗಿದೆ. ಈ ವಿವರಗಳು ಕ್ರಿಶ್ಚಿಯನ್ ಕ್ಯಾಲೆಂಡರಿನ ಪ್ರಕಾರ ಕ್ರಿ. ಶ. ೧೦೩೭ ಮೇ ೭ಕ್ಕೆ ಸರಿ ಹೊಂದುತ್ತವೆ. ಆದರೆ ದಿನ ಗುರುವಾರವಾಗಿರದೆ ಶನಿವಾರವಾಗಿದೆ.

ರಾಜವಂಶ :

ಶಾಸನವು ಕಲ್ಯಾಣ ಚಾಲುಕ್ಯ ಚಕ್ರವರ್ತಿಗಳ ಬಿರುದಾವಳಿಗಳೊಂದಿಗೆ ಆರಂಭಗೊಂಡು ಜಗದೇಕಮಲ್ಲದೇವ ಮತ್ತು ಆತನ ಅರಸಿ ಸಹಜವೆಡಂಗಿ ಸೋಮಲದೇವಿಯರ ಆಳ್ವಿಕೆಯನ್ನು ಹೆಸರಿಸುತ್ತದೆ. ಈಗಾಗಲೇ ಇತಿಹಾಸತಜ್ಞರು ಸೂಚಿಸಿರುವಂತೆ ಜಗದೇಕಮಲ್ಲ ಜಯಸಿಂಹನ ಶಾಸನಗಳು ೧೦೧೫ ರಿಂದ ೧೦೪೨ರ ವರೆಗೆ ದೊರೆಯುತ್ತವೆ.[೭]

ಕಲ್ಯಾಣ ಚಾಲುಕ್ಯ ಚಕ್ರವರ್ತಿಗಳ ಪಿರಿಯರಸಿಯರನೇಕರಿಗೆ ಸಂಬೋಧಿಸಲಾದ ವಿಶೇಷಣಗಳನ್ನೆಲ್ಲ ಸೋಮಲದೇವಿಗೂ ಬಳಸಲಾಗಿದೆ. ಶಾಸನದ ಬಹುಭಾಗದ ಅಕ್ಷರಗಳು ಸವೆದು ಹೋಗಿರುವುದರಿಂದ ಅವಳ ಬಗ್ಗೆ ಹೆಚ್ಚಿಗೆ ತಿಳಿದುಕೊಳ್ಳಲು ಅಸಾಧ್ಯ. ಉನ್ನತ ವ್ಯಕ್ತಿತ್ವ, ಧರ್ಮಭೀರುತ್ವ ಉಳ್ಳವಳಾಗಿದ್ದಳು ಎಂದಷ್ಟೇ ಈ ಶಾಸನಾಧಾರದ ಮೇಲೆ ಹೇಳಬಹುದು.

ದುರ್ಗಸಿಂಹ ತನ್ನ ಆಶ್ರಯದಾತನಾದ ಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲ ಜಯಸಿಂಹನಲ್ಲಿ ಸಂಧಿವಿಗ್ರಹಿಯೂ ದಂಡನಾಯಕನೂ ಆಗಿದ್ದನೆಂದು ಪಂಚತಂತ್ರ ಕಾವ್ಯದಲ್ಲಿಯೇ ಉಲ್ಲೇಖವಿದೆ. ಆದರೆ ಆಹವಸಿಂಹನಾದ ದುರ್ಗಸಿಂಹ ಸೋಮಲದೇವಿಯ ಮನೆವೆರ್ಗಡೆಯೂ ಆಗಿದ್ದುದನ್ನು ನಿಪ್ಪಾಣಿ ಶಾಸನ ಮಾತ್ರ ಉಲ್ಲೇಖಿಸುತ್ತದೆ.

---

೭. The Early History of the Deccan (Ed) G. Yazdani Pages 326 & 329.

ಶಾಸನದ ಉದ್ದೇಶ :

ಸೋಮಗ್ರಹಣ ನಿಮಿತ್ತವಾಗಿ ಸಹಜವೆಡಂಗಿಯುೂ ಬುಧಜನಚಿಂತಾಮಣಿಯುೂ ಆದ ಸೋಮಲದೇವಿ ಮುಪ್ಪಾಣಿಯಲ್ಲಿ ಸರಸ್ವತಿಪ್ರತಿಷ್ಠೆಯನ್ನು ಮಾಡಿ ದೇವಿಯ ನೈವೇದ್ಯ, ಮೈಮಣ್ಣ ಭೋಗ (?), ವಿದ್ಯಾರ್ಥಿಗಳ ಅಶನಾಚ್ಛಾದನ ಇತ್ಯಾದಿಗಳಿಗೆ ಮುನ್ನೂರು ಮತ್ತರ ಭೂಮಿಯನ್ನು ದತ್ತಿಯಾಗಿ ಬಿಟ್ಟುದನ್ನು, ಬಹುಶಃ ದೇವಸ್ಥಾನ ಕಟ್ಟಿರಬಹುದಾದ ಸುಮೋಜನಿಗೆ ಇಪ್ಪತ್ತೂರು ಮತ್ತರ ಭೂಮಿಯನ್ನು ದಾನವಾಗಿ ಕೊಟ್ಟುದನ್ನು ತಿಳಿಸುತ್ತದೆ. ನಂತರ ಗಂಡ್ಡಮನ್ನೆಯರು ೫೦ ಗದ್ಯಾಣ ಪೊನ್ನ ಪಣ ದಾನಮಾಡಿದುದನ್ನು ತಿಳಿಸುತ್ತದೆ.

ದುರ್ಗಸಿಂಹನು 'ಪರಮಾತ್ಮಂ ಪರಮೇಶ್ವರಂ ಮುರಹರಂ ದೈವಂ'[೮], 'ಆರಾಧಿತ ಭರ್ಗ'[೯]ನೆಂದು ಹೇಳಿಕೊಂಡಿದ್ದರೂ ತನ್ನ ಊರು 'ಸಯ್ಯಡಿ' ಅಗ್ರಹಾರ ದಲ್ಲಿ 'ಪೊರೆದಾಳ್ದನ ಸಕಲ ಚಕ್ರವರ್ತಿಯ ಬೆಸದಿಂ'ದ ಹರಿಹರ ಭವನಗಳನ್ನು ಕಟ್ಟಿಸಿದ[೧೦] ಕುರಿತು ಕಾವ್ಯದಲ್ಲಿ ಹೇಳಿಕೊಂಡ ಹಾಗೆಯೇ ಜಗದೇಕಮಲ್ಲ ಜಯಸಿಂಹನ ರಾಣಿ ಸೋಮಲದೇವಿಯ ಮನೆವೆರ್ಗಡೆಯಾದ ದುರ್ಗಸಿಂಹ ನಿಪ್ಪಾಣಿಯಲ್ಲಿ ಆಕೆ ಪ್ರತಿಷ್ಠೆ ಮಾಡಿಸಿದ ಸರಸ್ವತಿ ದೇವಾಲಯಕ್ಕೆ ಮಂಟಪ ಮಾಡಿಸಿದುದನ್ನು ಈ ಶಾಸನ ತಿಳಿಸುತ್ತದೆ.

ಪಂಚತಂತ್ರ ಕಾವ್ಯದಲ್ಲಿ

ಮಾನಿತ ಪುಂಡರೀಕರುಚಿರಂ ವಿಲಸದ್ವರಗಂಡಮಂಡಳಂ
ಶ್ರೀನಿಲಯಂ ಮಹಾಶ್ರುತಿಯುತಂ ದ್ವಿಜಸಂಕುಲಭಾಸಿತಾನನಂ
ಕಾನನದಂತಸೇವ್ಯಗುಣ ಸಂಗತಮಾಗಿರದೆಂದು ದುರ್ಗಸಿಂ
ಹಾನನ ಪದ್ಮದೊಳ್ ನೆಲಸಿ ನಿಲ್ಗೆ ಸರಸ್ವತಿ ಬಂದು ರಾಗದಿಂ ॥೧೧

ಎಂದು ಆಶಿಸಿದ, ಆಹ್ವಾನಿಸಿದ ಕವಿ, ಆ ದೇವಿ ಶಾಶ್ವತವಾಗಿ ನೆಲೆ ನಿಲ್ಲಲು ದೇವಾ ಲಯವನ್ನ ಕಟ್ಟಿಸಿದ ಅಪೂರ್ವ ಉದಾಹರಣೆಯಿದಾಗಿದೆ.

---

೮. ಕರ್ಣಾಟಕ ಪಂಚತಂತ್ರ, ಪದ್ಯ ೫೯.
೯. ಅದೇ, ಪದ್ಯ ೫೭ ಮತ್ತು ನಿಪ್ಪಾಣಿ ಶಾಸನ.
೧೦. ಅದೇ, ಪದ್ಯ ೫೨.
೧೧. ಅದೇ, ಪದ್ಯ ೪.

ಶಾಸನದಲ್ಲಿಯ ಸಾಹಿತ್ಯಾಂಶ :

ಕರ್ಣಾಟಕ ಪಂಚತಂತ್ರ ಕಾವ್ಯದ ಕರ್ತೃ ದುರ್ಗಸಿಂಹನನ್ನು ಉಲ್ಲೇಖಿಸುವ ಪ್ರಪ್ರಥಮ ಶಾಸನವಿದು. ಸ್ಪಷ್ಟವಾಗಿ ಕಾಣಿಸುವ ಶಾಸನದ ಕೊನೆಯ ಭಾಗದಲ್ಲಿ ಎರಡು ಕಂದ, ಒಂದು ಉತ್ಪಲಮಾಲೆ ಹಾಗೂ ಒಂದು ಮತ್ತೇಭವಿಕ್ರೀಡಿತ ವೃತ್ತಗಳಿವೆ. ಅಳಿಸಿ ಹೋಗಿರುವ ಭಾಗಗಳಲ್ಲಿಯೂ ಪದ್ಯಗಳಿರುವ ಸಾಧ್ಯತೆಗಳಿವೆ. ಶಾಸನದಲ್ಲಿ ಕಂಡುಬರುವ ಮೂರು ಪದ್ಯಗಳು ಕಾವ್ಯದಲ್ಲಿ ಉಲ್ಲೇಖಗೊಂಡಿರದೇ ಇರುವುದರಿಂದ ಇವು ನಂತರ ರಚಿತವಾದವುಗಳೆಂದು ಊಹಿಸಬಹುದಾಗಿದೆ. ಆದರೆ ಮತ್ತೇಭವಿಕ್ರೀಡಿತ ಛಂದೋವೃತ್ತದಲ್ಲಿರುವ ಪದ್ಯ ಪಂಚತಂತ್ರ ಕಾವ್ಯದಲ್ಲಿಯೂ ಇದೆ.೧೨ ಶಾಸನದಲ್ಲಿ 'ಚಂಡ' ಎನ್ನುವ ಶಬ್ದ ಕೈಬಿಟ್ಟು ಹೋಗಿದೆ. ಬಹುಶಃ ಲಿಪಿಕಾರನ ಮರೆವಿನಿಂದಾದ ದೋಷ ಇದಾಗಿರಬಹುದು. ಲಭ್ಯ ಕರ್ಣಾಟಕ ಪಂಚತಂತ್ರದ ಪ್ರತಿಗಳನ್ನು ಹೋಲಿಸಿ ನೋಡಿದಾಗ ಎರಡು ಕಡೆ ಮಾತ್ರ ಪಾಠಾಂತರವಿದೆ.

ಹೀಗೆ ಕರ್ನಾಟಕ ಪಂಚತಂತ್ರದ ಕರ್ತೃ ದುರ್ಗಸಿಂಹ ಮತ್ತು ಆತನನ್ನು ಹೊಗಳುವ, ಕಾವ್ಯದಲ್ಲಿ ಬಳಸಲಾದ ಪದ್ಯ ಇವೆರಡನ್ನೂ ಉಲ್ಲೇಖಿಸುವ ಅಪರೂಪದ ಶಾಸನ ಈ ನಿಪ್ಪಾಣಿಶಾಸನ. ಈ ಶಾಸನದ ಪೂರ್ಣ ಪಾಠ ಹೀಗಿದೆ :

೧. ಸ್ವಸ್ತಿ ಸಮಸ್ತ ಭುವನಾಶ್ರಯಂ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರಂ ಪರಮ ಭಟ್ಟಾರಕಂ

೨. ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾಭರಣಂ ಶ್ರೀಮಜ್ಜಗದೇಕ ಮಲ್ಲದೇವರ ವಿಜಯರಾಜ್ಯಮುತ್ತರೋ

೩. ತ್ತರಾಭಿವೃದ್ಧಿ ಪ್ರವರ್ದ್ಧಮಾನಮಾಚಂದ್ರಾರ್ಕ್ಕತಾರಂ ಸಲುತ್ತಮಿರೆ ॥... ... ... ಕ

೪. ಲ್ಯಾಣಾಭ್ಯುದಯಂ ಸಹಸ್ರಫಳಭೋಗಭಾಗಿನಿ ದ್ವಿತೀಯ ಲಕುಮಿಂಗೆ ಸಮಾನೆ ವಿಶಿಷ್ಟ ... ಜಾ ... ಘ ...

೫. ನ ಕಲ್ಪಲತೆ ಸಹಜವೆಡಂಗಿ ಶ್ರೀಮತ್ಸೋಮಲದೇವಿಯರ್ ॥ ಆ [ಶ್ವಸ ... ... ಷ್ಟಮ] ದುಷ್ಟ ನಿಗ್ರ

---

೧೨. ಕರ್ಣಾಟಕ ಪಂಚತಂತ್ರ, ಪದ್ಯ ೫೭.

೬. ಹ ಶಿಷ್ಟಪ್ರತಿಪಾಳನದಿಂ [ದಾ] ಳ್ದು ಸುಖಸಂಕಥಾ ವಿನೋದದಿಂ ರಾಜ್ಯಂ ಗೈಯುತ್ತಮಿರ್ದರ್ ॥ ಸಕವರ್ಷ ೯೫೫ನೆಯ ಬ

೭. ಹುಧಾನ್ಯ ಸಂವತ್ಸರ ವೈಶಾಖ ಬಹುಳ ಪಂಚಮಿ ಬೃಹಸ್ಪತಿವಾರದನ್ದು ... ... ನಿಮಿಂತ್ತಮಾಗಿ ಹಸ ... ... ಚಿಂತಾಮ

೮. ಣಿ ದಾನಗುಣ ವಿಶುದ್ಧ ಕೀರ್ತ್ತಿಗಾಶ್ರಯದಾನಿ । ತನ್ನೆನಿಸಕಳ ಭೂಪಳಯ ... ... ಸಿಂಹೋಪಕ್ರಮ

೯. ಯ ಸೂತ್ರಮಾ ಪ ... ರ್ದ್ದಯುಂತೆ ಸೋಮಲದೇವಿ ಸರಸ್ವತಿ ಪ್ರತಿಷ್ಠೆಯಂ ... ... ದ್ಯ ಧರ್ಮ್ಮ ನೆಱೆ ಮಾಡಿದಳ್ ... ...

೧೦. ... ... ದಿಂ ಸಂಪಾಣಿಯೊಳ್ ॥ ಇನ್ನು ಸಹಜವೆಡಂಗಿದೇವಿಯರ್ ಸರಸ್ವತಿ ಪ್ರತಿಷ್ಠೆಯಂ ಮಾಡಿ ಸುಪಾಣಿಯೊ

೧೧. ಳ್ ರಾಜರನೇಕ ಗುಡ್ಡೆ ಮಾನ್ಯಂ ಮಾಡಿ ಮೂನೂಱ್ವ ಮಂತ್ತರ್ಕೆಯ್ಯುಮಂ ನೇಮದ್ಯ ತೋಂಟ ಮ್ಮೈಮಣ್ಣು ಭೋಗ ಮಂ

೧೨. ರೋ ದತಿಯಾಗಿಟ್ಟು ಸರಸ್ವತಿದೇವಿಗೆ ಧಾರಾಪೂರ್ವ್ವಕಂ ಬಿಟ್ಟಂಥಾ ... ... ಪ್ಪ ... ...

೧೩. ಪಡಿಪ ನಿವೇದ್ಯಕೆ ಮಂತ್ತರೆಪ್ಪತ್ತಾಱಂ ಆಕರಮೆನಿಸುವ ವಿದ್ಯಾ [ತ್ಥಿ] ಸ ... ... ಪ್ಪ ... [ರಿಗ್ಗೆ] ಮುಸನಾಚ್ಛಾದನ

೧೪. ಕೆ ಮತ್ತರಿಪ್ಪತ್ತೂಱುಂ ತೋಂಟ ಮತ್ತರೆರಡು ಅಪ್ಪಭೋಗದಾಯ ಸ್ಥಾನ ... ... [ಮಾಡಿ]ದೈ ... ...

೧೫. ... ರಣೆ ... ಸುಪೋಜಗೆ ಮಂತ್ತರಿಪ್ಪತ್ತನಾಲ್ಕು ಸಂಪಾಣಿಗೆ ... ಗುಡ್ಡಂ ಮಾನ್ಯಂ ... ... ಅಂತೆರಡು

೧೬. ... ... ಕ್ಕೆ ಆಯ್ವತ್ತು ಗದ್ಯಾಣ ಪೊನ್ನ ಪಣಂ ದಾನ ಮಾಡಿ ... ... ಯುಂ ಕೊಟ್ಟರ್ ಈ ಮೆಯ್ಯಿ

೧೭. ... ... ಪ್ರತಿಪಾಳಿಸಿದವರ್ಗ್ಗೆ ಪ್ರಯಾಗೆ ವಾರಣಾಸಿ ಕುರುಕ್ಷೇತ್ರ

೧೮. ಗಳೊಳಂ ಚತುರ್ವ್ವೇದ ಪಾರಗರಪ್ಪ [ಸ] ಬ್ರಾಹ್ಮಣರ್ಗ್ಗೆ ಕೊಟ್ಟ ... ... ಳ್ದಿ ಸಾಸಿರ ಕ

೧೯. ಎಲೆಯಂ ದಾನಂ ಕೊಟ್ಟ ಫಲವಾಕ್ಕುಮಿದಾಯ ... ... ತೀರ್ತ್ಥಂಗಳೊಳ್ ಸಾಸಿರ ಕ

೨೦. ಎಲೆಯುಮಂ ಸಾಸಿರ್ವ್ವರ್ ಬ್ರಾಹ್ಮಣರುಮಂನಳಿದ ಮಹಾಪಾತಕ ... ... ದೋಷವಕ್ಕುಂ । ಶ್ಲೋಕ ।

೨೧. ಸ್ವದತ್ತಾಂ ಪರದತ್ತಾಂ ವಾಯೋಹರೇತು ವಸುಂಧರಾಂ ಷಷ್ಟಿರ್ವ್ವರ್ಷ ಸಹಸ್ರಾಣಿ ವಿಷ್ಟಾಯಾಂ ಜಾಯ

೨೨. ತೇ ಕ್ರಿಮಿಃ । ಅಕರಂ । ... ... ಮಿಂಳಾನಮಂ ಗಜ ವಾಜಿ ದಾನಮಂ ಸೋಳಿನ ಮಂಕ ... ... ದಾನಮುಂ ಬಾಮಂ

೨೩. ... ... ದಾನಮಂನಾಹಾರದಾನಮಂಗ್ರಷಜಂ ದಾನಮಂ .... ತದಾನಮಂ ಭೂ .... ದೇವಸಮೂಹಕೆ

೨೪. ಕಿನಾರ್ತ್ಥಿ ಸಂದೋಹಕೆ ... ... ಠಾಮುಮಂ .... ದಿಥ .... ಜ್ವಿದಾ ಸೋಮಲದೇವಿ

೨೫. .... ದಾನಿ । ... ಕರಪಂ ಸೋಮಲದೇವಿಯನಖಿಳ ಮಹೀಮಹಿತೆಯನೆ ... ... ಕಲ್ಪಲತೆಯಂ

೨೬. .... ಬಂಧಚಿಂತಾಮಣಿಯಂ ನಿಜವಂಶಶಿಖಾಮಣಿಯಂ ಧರ್ಮ್ಮಮೂರ್ತಿಯಂ ಪೊಗಳದರಾರ್ ॥

೨೭. ಎನಿಸಿದ ಸೋಮಲದೇವಿಯ ಮಂನೆವೆರ್ಗ್ಗಡೆ ದುರ್ಗಸಿಂಹನಾಹವಸಿಂಹ ವಿನಯ ನಿಧಾನಂ

೨೮. ಬುಧಜನವಿನಂತಂ ಗುಣನಿಧಿ ತದೀಯಂ ನಿಯಮಂಕ್ರಮದಿಂ । ವೃತ್ತ । ಪಣ್ಡಿತ ಬೃಂದ ಕಲ್ಪ

೨೯. ತರುಂ ಗೌತಮಂಗೋತ್ರ ಸರೋಜ ... ... ಪ್ರಚಣ್ಡ ಮಾರ್ತ್ತಣ್ಡನಂದಾರ ಚಾರುಚರಿತ ಗುಣರತ್ನ ವಿಭೂ

೩೦. ಷಣ ಮಹೀಮಣ್ಡಳ ಮಣ್ಡನಂ ಕವಿಜನಾಶ್ರಯನಿಷ್ಟಿಯೆನ್ದುಂ ಸರಸ್ವತಿ ಮಣ್ಟಪ

೩೧. ವಂ ಜಗ ಪೊಗೞೆ ಮಾಡಿಸಿದಂ ಮಂದದಿಂ ಸುಪಾಣಿಯೊಳ್ ॥ ವಿನಯಾಂಭೋ ನಿಧಿ ಶಿಷ್ಟಕಲ್ಪ

೩೨. ಮಹಿಜಂ ಸತ್ಯವ್ರತಂ ವಿಪ್ರವಂಶನಭೋವಂಣ್ಡಳ [ಚಂಡ*] ಭಾನಂ ವಿಳಸದ್ವಾಕ್ಛ್ರೀ

೩೩. ಮನೋರಾಮನೆಂದ ನಿಶಂ ಧಾರಿಣಿ ಬಣ್ಣಿಕಂ ನಿಜಯಶೋವಲ್ಲೀ ವಿತಾಂಭೋ

೩೪. ಧ ಮಾರ್ಗ್ಗನನಾರಾಧಿತ ಭರ್ಗ್ಗನಂ ಭೃತ ವಿಪಶ್ಚಿದ್ವರ್ಗ್ಗನಂ ದಂಗ್ಗನಂ ॥

● ●

ವಿಜಾಪುರ ಜಿಲ್ಲೆಯ ಮಕ್ಕಳ ಕತೆ ಮತ್ತು ಕಾದಂಬರಿ

● ಗುಂಡಣ್ಣ ಕಲಬುರ್ಗಿ

ಪ್ರಸ್ತಾವನೆ :

ಮುದ್ರಣ ಕಲೆ ಹುಟ್ಟುವ ಮುನ್ನವೇ ಮಕ್ಕಳ ಸಾಹಿತ್ಯ ಯುರೋಪದಲ್ಲಿ ಅಸ್ತಿತ್ವದಲ್ಲಿತ್ತು; ಆಗ ಭಾಷೆ ಇನ್ನೂ ಸಾರ್ವತ್ರಿಕ ಮಾಧ್ಯಮವಾಗಿ ಅಲ್ಲಿ ಕೆಲಸ ಮಾಡುತ್ತಿರಲಿಲ್ಲ. ಮಕ್ಕಳಿಗಾಗಿ ರಚಿಸಿದ ಕತೆ–ಕವಿತೆಗಳು ಇತ್ಯಾದಿ ಸಾಹಿತ್ಯ ಕಂಠಸ್ಥ ರೂಪವಾಗಿ ಹರಿದು ಬರುತ್ತಿತ್ತು. ಅಚ್ಚು ಮಾಡುವ ಕಲೆ ಆರಂಭವಾದ ಮೇಲೆ ಮಕ್ಕಳಿಗೆ ಅಗತ್ಯ ಮತ್ತು ಮಿಸಲಾದ ಗ್ರಂಥಗಳನ್ನು ಬರೆದು ಪ್ರಸಿದ್ಧಿಸುವ ಪರಿಪಾಠ ಪ್ರಚಾರದಲ್ಲಿ ಬಂತು.

೧೮ ಮತ್ತು ೧೯ನೆಯ ಶತಕಗಳಲ್ಲಿ ಆಂಗ್ಲರಲ್ಲಿ ಮಕ್ಕಳ ಸಾಹಿತ್ಯ ರಚನೆ ನಿರಂತರ ಚಟುವಟಿಕೆಯಿಂದ ಜರುಗಿತು. ಅಮೇರಿಕೆಯಲ್ಲಿ ೧೯ನೆಯ ಶತಕದಲ್ಲಿ ಮಕ್ಕಳ ಸಾಹಿತ್ಯ ರಚನೆ ವಿಪುಲವಾಗಿ ನಡೆಯಿತು. ಇದೇರೀತಿ ಇತರ ಪಾಶ್ಚಾತ್ಯ ರಾಷ್ಟ್ರಗಳಲ್ಲಿಯೂ ಬೆಳವಣಿಗೆ ಹೊಂದಿದ ಜಪಾನ, ರಶಿಯಾ, ಅಮೇರಿಕೆಗಳಲ್ಲಿಯೂ ಮಕ್ಕಳ ಸಾಹಿತ್ಯಕ್ಕೆ ವಿಶೇಷ ಗಮನ ಕೊಡಲಾಯಿತು. ಅದರಂತೆ ಪ್ರತ್ಯೇಕ ಪತ್ರಿಕೆಗಳನ್ನೂ ಪ್ರಕಟಿಸಹತ್ತಿದರು.

ಹೀಗೆ ಸಾಹಿತ್ಯದಲ್ಲಿ ಮಕ್ಕಳಲೋಕಕ್ಕೆ ಒಂದು ಗಟ್ಟಿಯಾದ 'ನೆಲೆ'ಯನ್ನು ಹುಡುಕಿಕೊಡುವ ಪಾಶ್ಚಾತ್ಯರ ಪ್ರಯತ್ನ ಮೆಚ್ಚುವಂಥದಾಗಿದೆ.

೧೮೦೭ರಲ್ಲಿ ಇಂಗ್ಲಂಡದಲ್ಲಿ ರಾಸ್ಕೋರವರ "Butter fly's Ball" (ಪಾತರಗಿತ್ತಿಯ ಚೆಂಡು) ಮತ್ತು ಶ್ರೀಮತಿ ಡಾರ್ಸೆಟ್‌ರವರ "Peacock at Home" (ಮನೆಯಲ್ಲಿ ನವಿಲು) ಎಂಬ ಪುಸ್ತಕಗಳ ೪೦ ಸಾವಿರ ಪ್ರತಿಗಳು ಮಾರಾಟವಾದವು ಎಂದರೆ ಪಾಶ್ಚಾತ್ಯರ ಬಗ್ಗೆ, ಅವರ ಪ್ರಗತಿಯ ಗುರಿಯ ಕುರಿತು ಯಾರಿಗೆ ತಾನೆ ಅದ್ಭುತವೆನಿಸುವುದಿಲ್ಲ ?

ಕಥೆ :

ಅನೇಕ ಶತಮಾನಗಳಿಂದಲೇ ನಮ್ಮ ದೇಶದಲ್ಲಿ ಕತೆಗಳ ಪರಂಪರೆ ಹರಿದು ಬಂದಿದೆ. ವೇದ-ಉಪನಿಷತ್ತುಗಳ ಕಾಲದ ಸಂಸ್ಕೃತ ಸಾಹಿತ್ಯದಲ್ಲಿ ಪಕ್ಷಿ-ಪಶು-ಪ್ರಾಣಿಗಳ ವಸ್ತು, ವಿಷಯದಲ್ಲಿ ಅನೇಕ ಕತೆಗಳು ಉದ್ಭವಿಸಿದವು. ನಮ್ಮಲ್ಲಿ ಅತ್ಯಂತ ಪ್ರಾಚೀನವಾದ ಕತೆಗಳಿಗೇ ಮೀಸಲಾದ ಗ್ರಂಥ ಗುಣಾಢ್ಯನ 'ಬೃಹತ್ಕಥೆ'. ಈ (ಕ್ರಿ.ಶ. ಸು ೧೦೦) ಅವಧಿಯ ನಂತರ ಜಗತ್‌ಪ್ರಸಿದ್ಧವಾಗಿರುವ 'ಪಂಚತಂತ್ರ' ಮೊದಲಾದ ಕಥಾಮಾಲೆಗಳು ಪ್ರಚಾರ-ಪ್ರಸಾರದೊಂದಿಗೆ ಜನಪ್ರಿಯವಾದವು. 'ಬುದ್ಧಜಾತಕ'ದಲ್ಲಿ ನಾವು ಅತ್ಯಂತ ಸ್ವಾರಸ್ಯ-ಕುತೂಹಲಕರ ಕತೆಗಳನ್ನು ಕಾಣುತ್ತೇವೆ. ಸನಾತನ ಕಾಲದಲ್ಲಿ ಅರಸರ ಮಕ್ಕಳಿಗಾಗಿ ರಮಣೀಯವಾದ ಕತೆಗಳನ್ನು ರಂಜನೀಯವಾಗಿ ಹೇಳಿಸುವ ಪಳೆಯುಳಿಕೆ ಇದ್ದಂತೆ ಕಂಡುಬರುತ್ತದೆ. ಈ ಮೂಲಭೂತ ಉದ್ದೇಶದಿಂದಲೇ 'ಪಂಚತಂತ್ರ' ಇತರ ಕೃತಿಗಳು ಸೃಷ್ಟಿಗೊಂಡಿರಬೇಕು. ಜನಸಾಮಾನ್ಯರಲ್ಲಿಯೂ ಮಕ್ಕಳಿಗೆ ಕತೆಗಳನ್ನು ಹೇಳಿ ತಣಿಸುವ ರೂಢಿಗತ ಪದ್ಧತಿಯನ್ನು ನಾವು ಗಮನಿಸಬೇಕು. ಇಂದು ಕೂಡಾ ಈ ಪರಂಪರೆ ಹಳ್ಳಿಯಲ್ಲಿ ಇದೆ.

ಕನ್ನಡ ಭಾಷೆಯಲ್ಲಿ ಮಕ್ಕಳ ಸಾಹಿತ್ಯದ ಮೂಲಕಾಂಡವನ್ನು ಜಾನಪದದ ಜೀವಾಳದಲ್ಲಿ ಕಾಣುತ್ತೇವೆ. ಜಾನಪದದಲ್ಲಿಯ ರಾಜಕುಮಾರ, ರಾಜಕುಮಾರಿಯರ ಕತೆಗಳು ಅದ್ಭುತ ಕತೆಗಳು, ಕಾಗಕ್ಕ-ಗುಬ್ಬಕ್ಕನ ಕತೆಗಳು ಇತ್ಯಾದಿ- ತಲೆತಲಾಂತರದಿಂದ, ಬಾಯಿಂದ ಬಾಯಿಗೆ 'ಜೀವ' ಪಡೆದುಕೊಳ್ಳುತ್ತ ಬಂದವುಗಳು.

ನವೋದಯ ಸಾಹಿತ್ಯದ ಪ್ರಾತಃಕಾಲದಲ್ಲಿ ಎಂ. ಎಸ್. ಪುಟ್ಟಣ್ಣ, ಎಸ್. ಟಿ. ನರಸಿಂಹಚಾರ್ಯ, ಶಿವರುದ್ರಪ್ಪ, ಸೋಮಪ್ಪ ಕುಲಕರ್ಣಿ, ಎಂ. ಎಸ್. ಕಾಮತ್, ಪಂಜೆ ಮಂಗೇಶರಾಯರು, ದೇವುಡು ನರಸಿಂಹಶಾಸ್ತ್ರಿಗಳು, ಜಿ. ಪಿ. ರಾಜರತ್ನಂ, ಮೇವುಂಡಿ ಮಲ್ಲಾರಿ, ಬೇಟಗೇರಿ ಕೃಷ್ಣಶರ್ಮ, ಬಿ. ಶ್ರೀ. ಪಾಂಡುರಂಗರಾವ್, ಸಾಲಿ ರಾಮಚಂದ್ರರಾಯರು, ಡಿ. ವಿ. ಜಿ., ಕುಂಬಾರ ವೆಂಕಣ್ಣ, ಎಂ. ಎಸ್. ರಾಮರಾವ್, ಕುವೆಂಪು, ಬೇಂದ್ರೆ – ಇವರೆಲ್ಲರೂ ಮಕ್ಕಳ ಕತೆಗಳನ್ನು ರಚಿಸಿದ್ದಾರೆ.

ಪ್ರಸ್ತುತ ಈ ಲೇಖನದ ಉದ್ದೇಶ ವಿಜಾಪುರ ಜಿಲ್ಲೆಗೆ ಸೀಮಿತವಾಗಿರುವುದರಿಂದ ಇವರೆಲ್ಲರ ಕಥಾಸಂಕಲನ – ಅವುಗಳ ಕುರಿತು ಅವಲೋಕನದ ದೃಷ್ಟಿಗೆ ನಾನು ಹೋಗುವುದಿಲ್ಲ :

ಈಗ ವಾಸ್ತವವಾಗಿ ವಿಜಾಪುರ ಜಿಲ್ಲೆಯ ಮಕ್ಕಳಿಗೆ ಸಂಬಂಧಿಸಿದಂತೆ ಕತೆಗಳ ಕುರಿತು ಕೆಲವು ಸ್ಪಷ್ಟ ನಿಲುವುಗಳನ್ನು ತಾಳುವುದಕ್ಕಿಂತ ಮುನ್ನ, ಮಕ್ಕಳ ಸಾಹಿತ್ಯ ಅಂದರೇನು ? ಅನ್ನುವದನ್ನು ಅರ್ಥೈಸಿಕೊಳ್ಳುವದು ಔಚಿತ್ಯ.

○ ಮಕ್ಕಳ ಸಾಹಿತ್ಯ ಎಂದರೆ ಮಕ್ಕಳು ಬರೆದ ಸಾಹಿತ್ಯವಲ್ಲ; ಮಕ್ಕಳಿಗಾಗಿ ದೊಡ್ಡವರು ಬರೆದ ಸಾಹಿತ್ಯ.

○ 'ನಾಲ್ಕು ವರ್ಷ ತುಂಬಿದ, ೧೪ ವರ್ಷದೊಳಗಿನ ಮಕ್ಕಳಿಗೆ ಬೋಧಪ್ರದವಾಗುವಂತೆ ಹಾಗೂ ಅವರ ಮನಸ್ಸಿಗೆ ಉಲ್ಲಾಸವಾಗುವಂತೆ, ಸುಲಭವಾದ ಶೈಲಿಯಲ್ಲಿ ಬರೆಯಲ್ಪಟ್ಟ ಸಾಹಿತ್ಯವನ್ನು ಮಕ್ಕಳ ಸಾಹಿತ್ಯ'ವೆಂದು ಪ್ರೊ. ಗ. ಸ. ಹಾಲಪ್ಪನವರು ಹೇಳುತ್ತಾರೆ.

○ 'ಸರಳ ಭಾಷೆ, ಶೈಲಿ, ಚಿತ್ರ ಇವೆಲ್ಲವುಗಳಿಗಿಂತಲೂ ಮುಖ್ಯವಾಗಿ ಸ್ಪಷ್ಟತೆ, ನೀತಿಬೋಧೆ ಮಾಡುತ್ತ ಪ್ರಪಂಚ ಪರಿಚಯವನ್ನು ಮಕ್ಕಳ ಮನಸ್ಸಿನಲ್ಲಿ ರಂಜನೀಯವಾಗಿ, ಅದ್ಭುತವಾಗಿ ಮೂಡಿಸುವುದೇ ಬಾಲ ಸಾಹಿತ್ಯ' — ಹರ್ಡೇಕರ ಮಂಜಪ್ಪ.

○ 'ಮಕ್ಕಳ ಮನಸ್ಸನ್ನು ಅರಳಿಸಿ, ಭಾವನೆಗಳನ್ನು ಪ್ರಚೋದಿಸಿ, ಆನಂದದಲ್ಲಿ ಮೀಯಿಸಿ ಅವರ ವ್ಯಕ್ತಿತ್ವವನ್ನು ರೂಪಿಸುವ ಸಾಹಿತ್ಯವೇ ಮಕ್ಕಳ ಸಾಹಿತ್ಯ' — ಇದು ಇನ್ನು ಕೆಲವರ ಅಭಿಪ್ರಾಯ.

ಆಧುನಿಕ ಕಾಲದಲ್ಲಿ ಮೊಟ್ಟಮೊದಲು ಮಕ್ಕಳ ಸಾಹಿತ್ಯ ರಚನೆಗೆ ಕೈ ಹಾಕಿದವರಲ್ಲಿ ಪಂಜೆ ಮಂಗೇಶರಾಯರು, ಹೊನ್ನಾಪುರಮಠ ಗದಿಗೆಯ್ಯನವರು ಮತ್ತು ಹರ್ಡೇಕರ ಮಂಜಪ್ಪನವರು ಪ್ರಮುಖರು. ಇಲ್ಲಿ ಮಂಜಪ್ಪನವರು ವಿಜಾಪುರದವರೇ ಆಗಿದ್ದುದು ನಮ್ಮ-ನಿಮ್ಮೆಲ್ಲರ ಭಾಗ್ಯ. ೧೯೦೩ರಲ್ಲಿ ಮಂಜಪ್ಪನವರು ಸಾಹಿತ್ಯ ರಚನೆಯನ್ನು ಆರಂಭಿಸಿದರು. ಮಂಜಪ್ಪನವರ ಮಕ್ಕಳ ಸಾಹಿತ್ಯ ಇಲ್ಲಿ ಮುಖ್ಯವಾಗಿ ಅನುಕರಣೀಯವಾದದ್ದೆಂದು ಹೇಳಬೇಕಾಗಿದೆ. ಇವರನ್ನು 'ಮಕ್ಕಳ ಸಾಹಿತ್ಯ ಮಾಲೆಯ ಮೊದಲಿಗ' ಎಂದು ಕನ್ನಡಿಗರು ಗೌರವಿಸುವದರಲ್ಲಿ ಸಂದೇಹವಿಲ್ಲ. ಇವರ 'ಕಚದೇವನ ಕತೆ', 'ಪ್ರಭುದೇವರ ಕತೆ' ಮಕ್ಕಳ ಮನಸ್ಸಿನ ಮೇಲೆ ಗಾಢವಾದ ಪ್ರಭಾವ ಬೀರುವ ಕಥಾಗ್ರಂಥಗಳು. ಇನ್ನೊಬ್ಬ ಜಾನಪದ ಆಚಾರ್ಯಪುರುಷರಾದ ಡಾ. ಸಿಂಪಿ ಲಿಂಗಣ್ಣನವರೂ ಉತ್ತಮ ಮಕ್ಕಳ ಕತೆಗಳನ್ನು ಬರೆದುದನ್ನು ಇಲ್ಲಿ ಸ್ಮರಿಸಲೇಬೇಕು.

ಹೀಗೆ ಹರ್ಡೇಕರ ಮಂಜಪ್ಪನವರು ಮತ್ತು ಸಿಂಪಿ ಲಿಂಗಣ್ಣನವರನ್ನು ಮೊದಲಗೊಂಡು, ವಿಜಾಪುರ ಜಿಲ್ಲೆಯಲ್ಲಿ ಮಕ್ಕಳ ಸಾಹಿತ್ಯ ಹುಟ್ಟಿಕೊಂಡದ್ದನ್ನು ಗುರುತಿಸಬಹುದು. ಆದರೆ ಇವರ ಪ್ರಭಾವ, ಆದರ್ಶದಿಂದ ಮಕ್ಕಳ ಸಾಹಿತ್ಯ ಪ್ರೇರಣೆ ಪಡೆದುಕೊಂಡು ಹುಲುಸಾಗಿ ಇನ್ನೊಂದು ರೀತಿಯಲ್ಲಿ ಬೆಳೆಯಬಹುದಿತ್ತು; ಆದರೆ ಹಾಗೆ ಆಗಲಿಲ್ಲ. ಮಂಜಪ್ಪನವರ ನಂತರ ವಿಜಾಪುರ ಜಿಲ್ಲೆಯಲ್ಲಿ ಮಕ್ಕಳ ಸಾಹಿತ್ಯ ಅರ್ಧಶತಮಾನಕ್ಕಿಂತಲೂ ಹೆಚ್ಚು ವಿಳಂಬವಾಗಿ ಆರಂಭವಾಯಿತು. ವಿಭಿನ್ನ ಮೂಲಗಳಿಂದ ಪ್ರೇರಿತರಾಗಿ, ಅತ್ಯಂತ ಕಾಳಜಿಯ ಚಟುವಟಿಕೆಯಿಂದ, ಅನೇಕರು ಈ ಸಾಹಿತ್ಯದಲ್ಲಿ ಪ್ರಾಮಾಣಿಕವಾಗಿ ಕೃಷಿ ಮಾಡತೊಡಗಿದರು. ಉತ್ಸಾಹದ ಸಮೂಹವೇ ಬೆಳೆಯಿತು. ಮುಂದೆ ಮಕ್ಕಳ ಸಾಹಿತ್ಯಕ್ಕೆ ವಿಜಾಪುರ ಜಿಲ್ಲೆಯ ವಿಶೇಷ ಕೊಡುಗೆಯಾಗಿ ಸಾರ್ವಜನಿಕರನ್ನು ಗಮನ ಸೆಳೆಯಿತು – ಎಂದು ಹೇಳುವಲ್ಲಿ ಹೆಮ್ಮೆ ಎನಿಸುತ್ತದೆ.

ಆದರೆ ಪ್ರೌಢಸಾಹಿತ್ಯ ಸಾಮಾಜಿಕ ಸ್ಥಿತ್ಯಂತರಗಳ ಸವಾಲುಗಳನ್ನು ಎದುರಿಸಿ, ಹೊಸಹೊಸ ಭಾವನೆ–ವಿಚಾರಗಳನ್ನು ಒಡ್ಡಿಕೊಳ್ಳುತ್ತ, ವಿವಿಧ ರೂಪ (Forms) ಗಳನ್ನು ತೆರೆದುಕೊಳ್ಳುತ್ತ ಹೇಗೆ ಚಲಿಸುತ್ತಿತ್ತೋ ಆ ರೀತಿ ದಿಕ್ಕಿನಲ್ಲಿ ಮಕ್ಕಳ ಸಾಹಿತ್ಯ ಬೆಳವಣಿಗೆಯಾಗಲಿಲ್ಲ. ಇದಕ್ಕೆ ನಾವು ನೀಡುವ ಮಕ್ಕಳ ಬಗ್ಗೆ ಅನಾದರವಷ್ಟೇ. ಅದೇರೀತಿಯಾಗಿ ನಮ್ಮ ಮಕ್ಕಳ ಸಾಹಿತಿಗಳು ಕೇವಲ ಒಂದಿಬ್ಬರ ಸಾಹಿತ್ಯ ದೃಷ್ಟಿಗಳಿಗೆ ಬಲಿಯಾಗಿ, ಪ್ರಭಾವಿತರಾಗಿ, ಅದೇ ನಿಟ್ಟಿನಲ್ಲಿ ಬರೆಯುತ್ತ ಹೋಗಿದ್ದು – ಹೋಗುತ್ತಿರುವುದು ನಿಚ್ಚಳವಾಗಿ ಕಂಡುಬರುತ್ತದೆ. ಇದು ಸಾಹಿತ್ಯದ ಜೀವಂತ ಲಕ್ಷಣಕ್ಕೆ ಬಹಳಷ್ಟು ಅಪಾಯಕಾರಿ. ಇದು ಬರೀ ಕೃತಕತೆಯ ನಡಿಗೆ ಎನಿಸಿಬಿಡುತ್ತದೆ. ಇದಕ್ಕೆ ಸಾಕ್ಷಿ ವಿಜಾಪುರ ಜಿಲ್ಲೆಯ ಕವಿಗಳು ಕೇವಲ ಕಾವ್ಯಮಾಧ್ಯಮಕ್ಕೆ ಗಂಟುಬಿದ್ದಿದ್ದು. ಒಂದಿಬ್ಬರು ಇದಕ್ಕೆ ಅಪವಾದ ಮಾತ್ರ. ಈ ಮನೋಭಾವನೆಯಿಂದಲೇ ನಮ್ಮಲ್ಲಿ ಕತೆಗಳು–ಕತೆಗಾರರು ಹೆಚ್ಚು ಹುಟ್ಟಲಿಲ್ಲ.

ವಿಜಾಪುರ ಜಿಲ್ಲೆಯ ಮಕ್ಕಳ ಸಾಹಿತ್ಯದ ಬಗ್ಗೆ ಕುತೂಹಲದಿಂದ ಸಮೀಕ್ಷೆ ಮಾಡಿ ನೋಡಿದಾಗ, ಕತೆಗಾರರ ಪಟ್ಟಿ ತೀರ ಬೆರಳೆಣಿಕೆಯಷ್ಟು. ಕತೆಯಿಂದ ಮಕ್ಕಳನ್ನು ರಂಜಿಸುವಷ್ಟು ಕಾವ್ಯಮಾಧ್ಯಮದಿಂದ ಸಾಧ್ಯವಿಲ್ಲ – ಎಂಬ ಅಂಶವನ್ನು ಈ ಸಾಹಿತಿಗಳು ಬಹುಬೇಗ ಏಕೆ ತಿಳಿದುಕೊಳ್ಳಲಿಲ್ಲ ಎಂಬ ಪ್ರಶ್ನೆ ಏಳುತ್ತದೆ.

ಈ ದಿಸೆಯಲ್ಲಿ ಹೆಚ್ಚು ಕಾಳಜಿಯಿಂದ ಹೆಚ್ಚು ಕೆಲಸ ಮಾಡುತ್ತ ಬಂದವರು 'ಸಿಸು' ಸಂಗಮೇಶ ಅವರು. ಸುಮಾರು ನಾಲ್ಕು ದಶಕಗಳಿಂದ ಅನವರತ ಕೆಲಸ ಮಾಡುತ್ತ ಬಂದಿದ್ದಾರೆ. ರಚನೆ, ಪ್ರಕಾಶನ, ಮುದ್ರಣ, ಪತ್ರಿಕೆ – ಹೀಗೆ ವಿವಿಧ

ಆಯಾಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ವಿಶೇಷವಾಗಿ ಕಥಾಸಾಹಿತ್ಯಕ್ಕೆ ಇವರ ಕೊಡುಗೆ ಅಮೂಲ್ಯವಾದದ್ದು : ೧. ನರಿಯ ಫಜೀತಿ ೨. ಮಂಕ ಮರಿ ೩. ಯಾರು ಜಾಣರು ? ೪. ಮೊಲದ ಮೂಗು ಮೊಂಡಾಯಿತು ೫. ನನ್ನ ಗೆಳೆಯ ೬. ಎಸ್ಕಿಮೋ ಇಗ್ಲಿಯುಂಕ್ ೭. ಜಪಾನದ ಟಾರೋ ೮. ಆಶೆ ಭುರುಕಿ ಆಶಾ ೯. ದಾರಿಯ ಬುತ್ತಿ ೧೦. ಕನಸಿನ ಲೋಕ ೧೧. ದೇಶ ವಿದೇಶಗಳ ಜಾನಪದ ಕತೆಗಳು – ಇತ್ಯಾದಿ.

'ನರಿಯ ಫಜೀತಿ'ಯಿಂದಲೇ 'ಸಿಸು' ಅವರು ಪ್ರಸಿದ್ಧಿಯನ್ನು ಪಡೆದರು. ಈ ಕೃತಿಯಲ್ಲಿ ಅಲ್ಲಲ್ಲಿ ಪದ್ಯಗಳು ಇರುವುದರಿಂದ ಇನ್ನಷ್ಟು ಮಾರ್ಮಿಕವೆನಿಸುತ್ತವೆ ಕತೆಗಳು. ರಾಷ್ಟ್ರಪ್ರಶಸ್ತಿಯನ್ನು ದಕ್ಕಿಸಿಕೊಂಡ 'ನನ್ನ ಮನೆ' 'ಸಿಸು' ಅವರ ಒಂದು ಮೇರುಕೃತಿ. ಇದು ಗಿಳಿ, ಕೋಗಿಲೆ, ಕಾಗೆ, ಹದ್ದುಗಳ ಜೀವನವನ್ನು ಪರಿಚಯಿಸುತ್ತದೆ. ಶಾಸ್ತ್ರೀಯ ಸೂಕ್ಷ್ಮ ವಿಶ್ಲೇಷಣೆ, ಅಪರಿಮಿತ ವಸ್ತುವಿನ ಸಂಗ್ರಹ ಶಕ್ತಿ, ಪಕ್ಷಿಲೋಕದ ಅಗಾಧ ತಿಳುವಳಿಕೆ, ಕತೆಗೆ ಅಗತ್ಯವೆನ್ನಿಸುವ ಸುಂದರ ಚಿತ್ರಗಳು – ಇವೆಲ್ಲ ಪೂರ್ಣ ಅಂಶಗಳು, 'ಸಿಸು' ಅವರ ಉತ್ತಮ ಕಥಾಕೃತಿಯೆನ್ನುವುದಕ್ಕೆ ದಾಖಲೆ ನೀಡುತ್ತವೆ. ಮನುಷ್ಯ ಮತ್ತು ಪಕ್ಷಿಗಳ ಸಂಬಂಧಗಳನ್ನು ಈ ಕೃತಿ ಓದುಗರ ಹೃದಯದಲ್ಲಿ ತೆರೆದಿಡುತ್ತದೆ. 'ಮೊಲದ ಮೂಗು ಮೊಂಡಾಯಿತು' ಕಾವ್ಯಾನಂದ ಪ್ರಶಸ್ತಿಯನ್ನು ಪಡೆದ ಕೃತಿ. ಕಪ್ಪೆ, ಮೊಲ, ಗುಂಡುಕಲ್ಲು, ಎಕ್ಕೆ ಗಿಡ, ಗಾಳಿ, ಕೊಕ್ಕರೆ, ಬಿದಿರು. ಹಾವು, ಕಾಡುಹಂದಿ, ಸಿಂಹ – ಈ ಸಂಬಂಧದ ಸರಕಿನ ಕೊಂಡಿಯ ಕಾರಣಗಳು – ಇಲ್ಲಿ ರಂಜನೀಯವಾಗಿ ಬಿಚ್ಚಿಕೊಳ್ಳುತ್ತವೆ.

'ಸಿಸು' ಅವರ ಒಟ್ಟು ಕತೆಗಳನ್ನು ಸೂಕ್ಷ್ಮವಾಗಿ ಅಧ್ಯಯನಿಸಿದಾಗ ಕೆಲವು ದೌರ್ಬಲ್ಯಗಳೂ ಕಂಡುಬರುತ್ತವೆ : ೧. ಕೇವಲ ಪಕ್ಷಿ–ಪ್ರಾಣಿಗಳ ಕುರಿತೇ ಅವರು ಬರೆದದ್ದು ೨. ಬರವಣಿಗೆಯಲ್ಲಿ ಏಕತಾನತೆ ಇರುವುದು ೩. ವಸ್ತುವಿನ ಆಯ್ಕೆಯಲ್ಲಿ ವ್ಯಾಪ್ತ ಪ್ರತೀಕ್ಷೆಯ ಕೊರತೆ ಕಂಡುಬರುತ್ತದೆ ೪. ಭಾಷೆ–ತಂತ್ರಗಳಲ್ಲಿ ಪ್ರಯೋಗಶೀಲತೆ ಇಲ್ಲದಿರುವುದು. ಇವೆಲ್ಲ ದೌರ್ಬಲ್ಯಗಳಿದ್ದರೂ 'ಸಿಸು' ಅವರು ಕತೆಗಳ ಕೇಂದ್ರ ಆಶ್ರಯಗಳಲ್ಲಿ ದೊಡ್ಡ ವ್ಯಕ್ತಿಯಾಗಿ ನಿಲ್ಲುತ್ತಾರೆ. 'ನನ್ನ ಗೆಳೆಯ ಎಸ್ಕಿಮೊ ಇಗ್ಲಿಯುಕ್'ಗೆ ಅಕಾಡೆಮಿ ಪ್ರಶಸ್ತಿ, 'ನನ್ನ ಗೆಳೆಯ ಜಪಾನದ ಟಾರೊ'ಗೆ ರಾಷ್ಟ್ರಪ್ರಶಸ್ತಿ ಇವೇ ಆ ಸುಪ್ತ – ಪ್ರಕಟಗೊಂಡ 'ಶಕ್ತಿ'ಗೆ ಸಾಕ್ಷಿಯೊದಗಿಸುತ್ತವೆ.

'ಸಿಸು' ಅವರ ನಂತರ ಮಕ್ಕಳ ಕತೆಗಳಲ್ಲಿ ಎದ್ದುಕಾಣುವ ಇನ್ನೊಂದು ಹೆಸರು, ಪ್ರೊ| ಜಯವಂತ ಕಾಡದೇವರರದು : ೧. 'ಹರ್ಕ್ಯುಲಸ್‌ನ ಸಾಹಸಗಳು' ೨. 'ಗಾಳಿ ಮತ್ತು ಕೋಳಿ' ಇವರ ಪ್ರಮುಖ ಕೃತಿಗಳು. ಅನೇಕ ಬಿಡಿ ಬಿಡಿ ಕತೆಗಳೂ ಶ್ರೇಷ್ಠ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. 'ಕಾಗೆ ಮತ್ತು ಪಾರಿವಾಳ', 'ದೂರದಿಂದ

ಹಾರಿ ಬಂದ ಹಕ್ಕಿ', 'ಮಾತಾಡುವ ಗಿಳಿ' – ಶ್ರೇಷ್ಠ ಮಕ್ಕಳ ಕಥಾಶ್ರೇಣಿಯಲ್ಲಿ ಇವು ಸೇರುತ್ತವೆ. ಅವರ ಎಲ್ಲ ಕತೆಗಳಲ್ಲಿ ವಿಭಿನ್ನತೆ, ಕುತೂಹಲ, ಆಕರ್ಷಕಶೈಲಿ, ವಿಧಾನ – ಕತೆಗಳ ಗರ್ಭದಿಂದಲೇ ಹುಟ್ಟಿಕೊಳ್ಳುವ ನೀತಿ; ನಮ್ಮನ್ನು ನೆಚ್ಚಿಕೆಗೆ ಪಾತ್ರವಾಗಿಸುತ್ತದೆ. ಇವರ ಕೆಲವು ಕತೆಗಳಲ್ಲಿ ಅಂತ್ಯವನ್ನು ನಿರ್ಣಯಿಸಿ ಬಿಡುವುದೇ ದೌರ್ಬಲ್ಯವೆನ್ನಿಸುತ್ತದೆ.

ಡಾ| ಎಸ್. ಎಸ್. ಕೋತಿನರು ಇವರ ಕೃತಿಯ ಕುರಿತು ಹೀಗೆ ಹೇಳುತ್ತಾರೆ: "'ಹರ್ಕ್ಯುಲಸ್‌ನ ಸಾಹಸಗಳು' ಜಯವಂತರ ಸಾಧನೆಗಳಲ್ಲಿ ಒಂದು ಮೈಲುಗಲ್ಲು. ಸ್ಫುಟವಾದ ಭಾಷೆ, ಸುಂದರ ಚಿತ್ರಗಳು ಮತ್ತು ಸೊಗಸಾದ ಮುದ್ರಣ ಪುಸ್ತಕಕ್ಕೆ ಮೆರುಗು ತಂದು ಕೊಡಬಲ್ಲವು."

ದು. ನಿಂ. ಬೆಳಗಲಿಯವರು ಪ್ರೌಢ ಕಥಾಪ್ರಪಂಚದಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದುಕೊಂಡಂತೆ ಮಕ್ಕಳ ಕತೆಗಳನ್ನೂ ರಚಿಸಿದ್ದಾರೆ. ಅವರ 'ಬದುಕುವ ಬಯಕೆ' ಒಂದು ಉತ್ತಮಕೃತಿ. ಇದು ರಾಷ್ಟ್ರೀಯ ಪ್ರಶಸ್ತಿಯನ್ನು ಗಳಿಸಿದೆ. 'ಈಸೋಪನ ಕತೆಗಳು' ಇವರ ಮಕ್ಕಳ ಅನುವಾದ ಕೃತಿ. ಆದರೆ ಇವರು ಮಕ್ಕಳ ಸಾಹಿತ್ಯದಲ್ಲಿ ಹೆಚ್ಚು ಕೃಷಿ ಮಾಡಲಿಲ್ಲ.

ಬಾ. ವಿಂ. ಕುಮಠೆಯವರ 'ಮಂಗಳ ಲೋಕದ ಅಂಗಳಕೆ' ವೈಜ್ಞಾನಿಕ ದೃಷ್ಟಿಯನ್ನಿಟ್ಟುಕೊಂಡು ಬರೆದಂಥ ಕಥಾಸಂಗ್ರಹ. ಮಕ್ಕಳಿಗೆ ತೀವ್ರವಾಗಿ ರಂಜನೀಯವಾಗತಕ್ಕಂತಹ ವೈಜ್ಞಾನಿಕ ಅದ್ಭುತ ಕತೆಗಳನ್ನು ಇಲ್ಲಿ ಕಾಣುತ್ತೇವೆ. ಆದರೆ ಇಲ್ಲಿಯ ಕತೆಗಳು ವೈಜ್ಞಾನಿಕ ಆಶಯಗಳನ್ನು ಸಮರ್ಪಕವಾಗಿ ಅಭಿವ್ಯಕ್ತಗೊಳಿಸುವಲ್ಲಿ ಯಶಸ್ಸನ್ನು ಸಾಧಿಸಿಲ್ಲ. ಕೇವಲ ಒಂದು ಹೊಸ ಮಾದರಿಯಾಗಿ ನಿಲ್ಲುತ್ತವೆ.

ಸಂಕಲನದ ರೂಪದಲ್ಲಿ ತರದೇ ಇತ್ತೀಚಿಗೆ ಅನೇಕರು ಕತೆಗಳನ್ನು ಬರೆಯುತ್ತಿದ್ದಾರೆ. ಅವರಲ್ಲಿ ಪ್ರಮುಖರಾದವರು ಈಶ್ವರಚಂದ್ರ ಚಿಂತಾಮಣಿ, ಜಿ. ಎಸ್. ವಡಗಾಂವಿ, ಮಲ್ಲಿಕಾರ್ಜುನ ಹುಲಗಬಾಳಿ, ಸಂಗಮೇಶ ಗುಜಗೊಂಡ, ಬಿ. ಆರ್. ಪೋಲೀಸ್ ಪಾಟೀಲ, ಮ. ನಿ. ತೋಳನೂರ, ಶಂ. ಗು. ಬಿರಾದಾರ, ಬಿ. ಆರ್. ನಾಡಗೌಡ, ಜಂಬುನಾಥ ಕಂಚ್ಯಾಣಿ ಮುಂತಾದವರು.

ಶ್ರೀ ಕಾಡಣ್ಣ ಹೊಸಟ್ಟಿಯವರು 'ರೈತನ ವಚನಗಳು' ಎಂಬ ಮಕ್ಕಳ ಕಥಾಸಂಗ್ರಹವನ್ನು ಪ್ರಕಟಿಸಿದ್ದಾರೆ—ಇತ್ತೀಚಿಗೆ. ಇದರಲ್ಲಿ ಹತ್ತು ಕಥೆಗಳಿವೆ. ಭಾಷೆ, ತಂತ್ರ, ಆಶಯಗಳ ದೃಷ್ಟಿಯಿಂದ ಹೊಸದೇನನ್ನೂ ಇಲ್ಲಿ ಪರೀಕ್ಷಿಸುವಂತಿಲ್ಲ. ಕೇವಲ ಮೊದಲ ಪ್ರಯತ್ನವೆಂದು ಇದನ್ನು ಪರಿಗಣಿಸಬಹುದು.

ಕಾದಂಬರಿ :

ಕನ್ನಡದಲ್ಲಿ ಕತೆಗಳಿಗಿಂತಲೂ ಮಕ್ಕಳ ಕಾದಂಬರಿಗಳ ಕೊರತೆ ತುಂಬಾ ಎದ್ದು ಕಾಣುತ್ತದೆ. ಈ ಸುಂದರ ಮಾಧ್ಯಮದ ಬಗ್ಗೆ ನಮ್ಮ ಲೇಖಕರು ಗಂಭೀರವಾಗಿ ಪರಿಗಣಿಸಿದಂತೆ ತೋರುವುದಿಲ್ಲ. 'ಸಿಸು' ಅವರು ಹೇಳುವಂತೆ : 'ಮಕ್ಕಳ ಸಾಹಿತ್ಯ ರಚನೆಯಲ್ಲಿ ತೊಡಗುವ ಮೊದಲು ಮಗುವಿನ ವಯೋಮಾನ ಜೊತೆ ಜೊತೆಗೆ ಮನೋವೈಜ್ಞಾನಿಕ ವಿಕಾಸ, ಪರಿಸರ-ಅನುಭವಗೊಳಿಸಿದ ಶಬ್ದಸಂಪತ್ತು ಇತ್ಯಾದಿ ಬೌದ್ಧಿಕ ಏರುಪೇರುಗಳನ್ನು ಅರಿತುಕೊಳ್ಳುವುದು ಅವಶ್ಯ'. ಆದರೆ ನಾವು ಮಕ್ಕಳ ಬೌದ್ಧಿಕ ಏರುಪೇರುಗಳನ್ನು ಅಧ್ಯಾಹಾರ ಮಾಡಿಕೊಳ್ಳದೇ ಮನಸ್ಸಿಗೆ ಬಂದಂತೆ ಏಕಮುಖಿಯಾಗಿ ಸಾಹಿತ್ಯ ರಚನೆ ಮಾಡುತ್ತಿದ್ದೇವೆ ಅನ್ನಿಸುವುದಿಲ್ಲವೆ ?

ಆದರೂ ಇತ್ತೀಚೆಗೆ ಕೆಲವು ಕಾದಂಬರಿಗಳು ಅಚ್ಚಾಗುತ್ತಿವೆ. ಸಮತೀಂದ್ರ ನಾಡಿಗರ 'ಸಾಹಸ' ಮಕ್ಕಳ ವಯೋಮಾನಕ್ಕನುಗುಣವಾಗಿ ರಚಿಸಿದ ಕಾದಂಬರಿ. ಶೀರ್ಷಿಕೆಯೇ ಸೂಚಿಸುವಂತೆ ಮಕ್ಕಳಲ್ಲಿ ಸಾಹಸ, ಕುತೂಹಲಕರ ಸನ್ನಿವೇಶಗಳನ್ನು ಕೆರಳಿಸುವಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಎಚ್. ಎಸ್. ವೆಂಕಟೇಶಮೂರ್ತಿ ಯವರ 'ಅಗ್ನಿಮುಖಿ' ಇದು ಕೂಡಾ ಸಾಹಸಪ್ರಧಾನವಾದ ಕೃತಿ. 'ಅಗ್ನಿ ಮುಖಿ'ಯ ಒಡಲಿನಲ್ಲಿ ಕಲ್ಪನೆಯ ಜತೆಗೆ ವೈಜ್ಞಾನಿಕ ವಿವರಗಳನ್ನು ಬಿಚ್ಚುವುದರಿಂದ ಇದು ಮಕ್ಕಳಲ್ಲಿ ಆಸಕ್ತಿ ಹುಟ್ಟಿಸುತ್ತದೆ. ರಾಜಶೇಖರ ಭೂಸನೂರಮಠರ 'ನೇತ್ರಬಂಧ' ವಿಜ್ಞಾನದ ವಿವಿಧ ಮುಖಗಳ ಪರಿಚಯವನ್ನು ದಾಖಲಿಸುತ್ತದೆ. ವೈಜ್ಞಾನಿಕ ಅಂಶಗಳನ್ನು ಮಕ್ಕಳಿಗೆ ಸರಳ-ಸುಲಭವಾಗಿ ನಿಭಾಯಿಸಿ ಹೇಳುವ ಸಾಮರ್ಥ್ಯ ಭೂಸನೂರಮಠರಿಗೆ ಕರಗತವಾಗಿದೆಯೆಂದು ಈ ಕೃತಿ ಅಧ್ಯಯನಿಸು ವಾಗ ವಿದಿತವಾಗುತ್ತದೆ. ವಿಶ್ಲೇಷಣೆಯಲ್ಲಿ ತೊಡಗುವ ಭಾಷೆಯು ಹೃದ್ಯವೆನ್ನಿ ಸುತ್ತದೆ.

ಶ್ರೀಮತಿ ಗೀತಾ ಕುಲಕರ್ಣಿಯವರ 'ನೇಜಿ ಗುಬ್ಬಚ್ಚಿ' ಬಾಲರ ಮುಗ್ಧ ಮನಸ್ಸಿನ ವಿವಿಧ ಸ್ತರಗಳನ್ನು ಅಭಿವ್ಯಕ್ತಿಸುವ ಕಾದಂಬರಿ. ಬಿ. ಎಲ್. ವೇಣು ಅವರ 'ಗುಹೆ ಸೇರಿದವರು' ರಸಿಕೆ ಪುತ್ತಿಗೆ ಅವರ 'ಕೆಂಪು ಕಾರು' ಮಕ್ಕಳ ಕಾದಂಬ ರಿಯ ಕೊರತೆಯನ್ನು ತುಂಬಿಕೊಡಲು ಪ್ರಯತ್ನಿಸಿದಂಥ ರಚನೆಗಳು.

ಬಿಜಾಪುರ ಜಿಲ್ಲೆಯ ಕಾದಂಬರಿ ಕ್ಷೇತ್ರಕ್ಕೆ ಬಂದು ತಲುಪಿದಾಗ ತೀರ ನಿರಾಸೆ ಯಾಗುತ್ತದೆ. ಕೇವಲ ಒಂದೆರಡನ್ನು ಬಿಟ್ಟರೆ ಕಾದಂಬರಿ ರಚನೆಗಳೇ ಇಲ್ಲಿಲ್ಲ. 'ಸಿಸು' ಸಂಗಮೇಶ ಅವರ 'ಕಳ್ಳ ಸಿಕ್ಕ', 'ನನ್ನ ಮನೆ' ಪ್ರಮುಖವಾದವುಗಳು.

ಬಾ. ವಿ. ಕುಮಠೆಯವರ 'ನೊರೆಯಲ್ಲಿ ಬೆಂಕಿ' ಚೀನಾ/ಭಾರತ ಯುದ್ಧದ ಸನ್ನಿವೇಶದ ಚಿತ್ರಣವನ್ನು ಹೃದಯಂಗಮವಾಗಿ ಮಕ್ಕಳಿಗೆ ವಿಶ್ಲೇಷಿಸುತ್ತದೆ.

'ಕಳ್ಳ ಸಿಕ್ಕ' ಕಾದಂಬರಿಯಲ್ಲಿ ವಿವಿಧ ಪ್ರಾಣಿ-ಪಕ್ಷಿಗಳು, ಕತೆಯ ಕೇಂದ್ರ ಸಮಸ್ಯೆ ಹಸಿವು, ಒಕ್ಕಟ್ಟು, ಪ್ರಯತ್ನ-ಕರ್ತೃತ್ವಶಕ್ತಿ, ಕತೆಯ ಆಶಯಧೋರಣೆ; ಸುಂದರವಾಗಿ ಬಿಚ್ಚಿಕೊಳ್ಳುವ ಕತೆಯ ಬೀಜ-ನಿರೂಪಣೆ; ಚುರುಕು ಸಂಭಾಷಣೆ ಆತ್ಮೀಯವೆನಿಸಿ ಗಮನಸೆಳೆಯುತ್ತವೆ. ಅದೇ ರೀತಿಯಾಗಿ ನರಿಯ ವಂಚನೆ-ಮೋಸದ ಚಟುವಟಿಕೆಯ ಇನ್ನೊಂದು ಮಗ್ಗಲು ಆಕರ್ಷಕವೆನ್ನಿಸುತ್ತದೆ. ಆರಂಭ-ಮಧ್ಯ-ಅಂತ್ಯ ಒಟ್ಟು ಕತೆಯ ಸಾಂದ್ರತೆ ಯಶಸ್ವಿ ಚಿತ್ರಣ.

ಗಮನಿಸುವ ಕೆಲವು ಅಂಶಗಳು :

- ಮಕ್ಕಳಿಗೆ ರಂಜಿಸುವ ಧಾಟಿಯಲ್ಲಿ ನೀತಿಬೋಧೆ ಮಾಡುವ ಹಾಗೂ ಜಗತ್ತಿನ ಸ್ಥೂಲ ಪರಿಚಯ ಮಾಡಿಕೊಡುವ ದೃಷ್ಟಿಯಲ್ಲಿ ಕಥಾ ಲೇಖಕರು ಚಿಂತಿಸಬೇಕು.
- ಮಕ್ಕಳಿಗೆ ಬಹುಬೇಗ ಅರ್ಥವಾಗುವಂತೆ ಮತ್ತು ಪರಿಣಾಮಕಾರಿಯಾಗುವಂತೆ ಸಾಹಿತ್ಯ ರಚನೆಯಾಗಬೇಕು.
- ಮಕ್ಕಳಿಗೆ ಕಥಾ ವಿಷಯಗಳನ್ನು ಹೇಳುವ ವಿಧಾನ ಇಲ್ಲಿ ಮುಖ್ಯವಾದುದು.
- ಸಂಭಾಷಣೆಯಮೂಲಕ ಹೇಳಿದರೆ ಇನ್ನೂ ಚೆನ್ನಾಗಿ ಹಿಡಿಸುತ್ತದೆ. ಹಾಸ್ಯ ಆಗಾಗ ಬಂದರೆ ಒಳ್ಳೆಯದು, ಸೂಕ್ತ.
- ಹೆಚ್ಚು ಪ್ರೌಢ ಭಾಷೆಯನ್ನು ಬಳಸದೇ ಹೆಚ್ಚಾಗಿ ಮನೆಮಾತುಗಳನ್ನೇ ಉಪಯೋಗಿಸಿ ಮಕ್ಕಳ ಕತೆಗಳನ್ನು ರಚಿಸಬೇಕು.
- ಮಕ್ಕಳಲ್ಲಿ ಧೈರ್ಯ, ಸಾಹಸ ಮುಂತಾದ ಗುಣಗಳು ವಿಕಾಸವಾಗುವಂತೆ ಪುಸ್ತಕಗಳು ರಚನೆಯಾಗಬೇಕು.
- ಅದ್ಭುತ ರಸವಿರುವಂತಹ ಕಥೆಗಳು ಮಕ್ಕಳಿಗೆ ಹೆಚ್ಚು ಹಿಡಿಸುತ್ತವೆ :

  ★ ಸ್ವಾತಂತ್ರ್ಯ ಹೋರಾಟದ ಕಲ್ಪನೆ ★ ಮಹಾತ್ಮಾ ಗಾಂಧಿಯವರ ಪ್ರಯೋಗಗಳು ★ ಬಸವಣ್ಣನವರ ಪವಾಡಗಳು ★ ನಮ್ಮ ದೇಶದ ಸಾಂಸ್ಕೃತಿಕ ಸನ್ನಿವೇಶಗಳು – ಇತ್ಯಾದಿ ಅಂಶಗಳ ಕುರಿತು ಮಕ್ಕಳ ಸಾಹಿತ್ಯ ಚಿಂತಿಸಬೇಕು.

- ಕನ್ನಡದಲ್ಲಿ ಬಾಲ ಸಾಹಿತ್ಯದ ಕತೆ/ಕಾದಂಬರಿಗಳು ಇತರ ದೇಶ ಭಾಷೆಗಳಲ್ಲಿರುವ ಕತೆ/ಕಾದಂಬರಿಗಳಿಗಿಂತ ಭಿನ್ನವಾದುವೇನಲ್ಲ.

- ಕನ್ನಡ ನಾಡಿನಲ್ಲಿ ಕಾಗೆ, ಹದ್ದು, ಗಿಳಿ, ಗುಬ್ಬಕ್ಕನ ಕತೆಗಳು ಎಲ್ಲರಿಗೂ ಗೊತ್ತಿವೆ – ಸದ್ಯ ಇವುಗಳ ದೃಷ್ಟಿ–ನೋಟ–ಭಿನ್ನ ವಸ್ತುವಿನಲ್ಲಿ ಪರಿವರ್ತನೆಯಾಗಬೇಕು. ನಿಂತ ನೀರಲ್ಲಿಯೇ ನಮ್ಮ ಚಟುವಟಿಕೆ ಸಾಗಬಾರದು. ಮಕ್ಕಳ ಮನಸ್ಸು ಈಗ ಮೊದಲಿನಂತಿಲ್ಲ. ಇದನ್ನು ನಾವು ಯಾಕೆ ಅರ್ಥ ಮಾಡಿಕೊಳ್ಳುತ್ತಿಲ್ಲ ಎಂಬ ಮುಖ್ಯ ಪ್ರಶ್ನೆ.

- ವಿಷಯ–ಭಾಷೆ, ಶೈಲಿ–ವಸ್ತು ಮುಂತಾದವುಗಳ ದೃಷ್ಟಿಯಿಂದಲೂ ಹೆಮ್ಮೆ ಪಟ್ಟುಕೊಳ್ಳುವಂತಿಲ್ಲ ನಾವು.

- ಮುಗ್ಧ ಮುಖದ ಮಕ್ಕಳ ಮನಸ್ಸಿನ ಹಿಂದೆ ಅಸಾಧಾರಣ ಕುತೂಹಲ, ಉತ್ಸಾಹ–ಶಕ್ತಿಗಳು ಅಡಗಿವೆ ಎಂಬುದನ್ನು ನಾವು ಅರಿತಿಲ್ಲ. ಮತ್ತು ಅವುಗಳ ಮನಸ್ಸು ಒತ್ತುಕಾಗದ (Blotting Paper) ದಂತೆ, ಕೊಟ್ಟಿದ್ದನ್ನೆಲ್ಲ ಹೀರಿಕೊಳ್ಳುತ್ತದೆ ಎಂಬುದನ್ನು ತಿಳಿದಿಲ್ಲ. ಅವರು ಸೂಕ್ಷ್ಮಗ್ರಾಹಿಗಳು, ಜಾಗೃತರು ಎಂಬುದನ್ನು ಮರೆತಿದ್ದೇವೆ. ಇಂಥ ಮಕ್ಕಳಿಗೆ ಸಾಹಿತ್ಯ ರಚನೆ ಮಾಡುವಾಗ ಭಾಷೆಯಿಂದ ಹಿಡಿದು ವಸ್ತು, ವಿಚಾರಗಳವರೆಗೆ ಎಚ್ಚರದಿಂದ ಇರುವುದು ಒಳ್ಳೆಯದು.

- ನಾವು ನಮ್ಮ ಮಕ್ಕಳನ್ನು ಹೊರಗಡೆ ಸಿಂಗರಿಸುತ್ತೇವೆ ಆದರೆ ಅವರ ಒಳಗನ್ನು ಮರೆಯುತ್ತೇವೆ.

- ಮಕ್ಕಳ ರಂಜನೆಗೆ ಚಿಂತನೆಗೆ ಹಾಗೂ ಮಾನಸಿಕ–ಬೆಳವಣಿಗೆಗೆ ಒಳ್ಳೆಯ ಸಾಹಿತ್ಯ ಅವಶ್ಯವೆಂಬುದನ್ನು ತಿಳಿದಿದ್ದೇವೆ. ಆದರೆ ಮಕ್ಕಳಿಗೆ ಇಂಥ ಸಾಹಿತ್ಯ ಕೃತಿಗಳನ್ನು ಒದಗಿಸುವಲ್ಲಿ ನಾವು ಎಷ್ಟರಮಟ್ಟಿಗೆ ಸಫಲರಾಗಿದ್ದೇವೆ ? ಎಂಬುದನ್ನು ವಿಚಾರಿಸಿದಾಗ ನಮಗೆ ತೃಪ್ತಿಕರ ಉತ್ತರ ಸಿಕ್ಕಲಾರದು.

- ಸಂಖ್ಯಾಮಾನದಿಂದ ಮಕ್ಕಳ ಕತೆ/ಕಾವ್ಯಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಅವುಗಳ ಗುಣಮಟ್ಟದಲ್ಲಿ ಹೇಳಿಕೊಳ್ಳುವಂತಹ ಪ್ರಗತಿ ಕಂಡುಬರುವುದಿಲ್ಲ. ಮಕ್ಕಳ ಹಲವಾರು ಕಥಾ ಸಂಕಲನಗಳನ್ನು ಪರಿಶೀಲಿಸಿದಾಗ – ಒಂದೇ ಜಾಡಿನಲ್ಲಿ ಸಾಗಿದಂತೆ ಕಂಡುಬರುತ್ತದೆ. ಒಂದು ಮತ್ತೊಂದರ ಪ್ರತಿಕೃತಿಯೇನೋ ಎನ್ನುವಷ್ಟರಮಟ್ಟಿಗೆ ಸಾಮ್ಯತೆಯನ್ನು ಪಡೆದಿರುತ್ತದೆ. ಇದು ಸಾಹಿತ್ಯದ ಬೆಳವಣಿಗೆಗೆ ಹಿತಕರವಾದುದಲ್ಲ.

○ ಮನಸ್ಸು ಅರಳಬೇಕು, ಬುದ್ಧಿ ಪ್ರಖರವಾಗಬೇಕು, ಗುರಿ ನೇರವಾಗಿರಬೇಕು, ದೇಹಶಕ್ತಿ ತುಂಬಿರಬೇಕು, ಜೀವನದಲ್ಲಿ ಒಳ್ಳೆಯ ಸಾಹಸಗೈಯ್ಯುವ, ವಾಸ್ತವವನ್ನು ಎದುರಿಸುವ ಕಲಿಗಳಾಗಬೇಕು.

ಈ ಎಲ್ಲ ಗುರಿ–ಉದ್ದೇಶಗಳಿಂದ ಮಕ್ಕಳ ಸಾಹಿತ್ಯ ರಚನೆಯಾಗಬೇಕು.*

ಗ್ರಂಥಋಣ

೧. ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ ಮಂಜಪ್ಪ ಸಂ : ಗ. ಸ. ಹಾಲಪ್ಪ ಹರ್ಡೇಕರ ಮಂಜಪ್ಪ ಸ್ಮಾರಕ ಗ್ರಂಥಮಾಲೆ, ಧಾರವಾಡ ೧೯೬೬

೨. ಮಕ್ಕಳ ಸಾಹಿತ್ಯ : ೧೯೮೮ ಕ. ಸಾ. ಅ. ಬೆಂಗಳೂರು

೩. ಮಕ್ಕಳ ಸಾಹಿತ್ಯ : ೧೯೮೫ " "

೪. ಮಕ್ಕಳ ಸಾಹಿತ್ಯ : ೧೯೮೯ " "

೫. ಮನೆಯ ದೀಪ (ಮಕ್ಕಳ ಕಥಾ ಸಂಗ್ರಹ) ಪ್ರಕಾಶನ, ಮಕ್ಕಳ ಮನೆ, ಧಾರವಾಡ ೧೯೮೬

೬. ಮಕ್ಕಳ ಸಾಹಿತ್ಯ ಚಿಂತನ (ಉಪನ್ಯಾಸ ಸಂಪುಟ) ಪ್ರಕಾಶನ, ಮಕ್ಕಳ ಮನೆ, ಧಾರವಾಡ ೧೯೮೯

೭. ಮಕ್ಕಳ ಆಟ (ಮಕ್ಕಳ ನಾಟಕ ಸಂಗ್ರಹ) ಪ್ರಕಾಶನ, ಮಕ್ಕಳ ಮನೆ, ಧಾರವಾಡ ೧೯೮೯

೮. 'ಅರ್ಪಣ' ವಿಜಾಪುರ ಜಿಲ್ಲಾ ಮಕ್ಕಳ ಸಾಹಿತ್ಯ ಸಂಗಮ

೯. 'ಹರ್ಕ್ಯೂಲಸ್‌ನ ಸಾಹಸಗಳು' ಜಯವಂತ ಕಾಡದೇವರ

೧೦. ಈ ಲೇಖನಕ್ಕೆ ಸಂಬಂಧಿಸಿದ ಕತೆ/ಕಾದಂಬರಿಗಳನ್ನು ಉಪಯೋಗಿಸಿಕೊಂಡಿದೆ.

● ●

* ೨೪-೨೫ ನವ್ಹೆಂಬರ ೧೯೯೦ ರಂದು ವಿಜಾಪುರ ಜಿಲ್ಲಾ ಪ್ರಥಮ ಮಕ್ಕಳ ಸಾಹಿತ್ಯ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧ.

ಜಾನಪದಹಾಡು ಮತ್ತು ಲಾವಣಿಗಳಲ್ಲಿ ಮುಂಡರಗಿ ಭೀಮರಾಯ

● ಬಿ. ವಿ. ಶಿರೂರ

"ಮುಂಡರಗಿ ಭೀಮರಾಯನ ದವಲತ್ತೆಂಬುದು ಎಷ್ಟಾ?
ಕೊಪ್ಪಳದ ಕಿಲ್ಲೇದ ಮ್ಯಾಲೆ ಬಾದ್ದೂರ ಲಡಾಯಿ ಕೊಟ್ಟಾ
ಸುತ್ತ ರಾಜ್ಯೇದಾಗೆಲ್ಲ ಜಾಹಿರಾತು ಕರನಾಟಾ...... ॥೧

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ತನ್ನನ್ನು ತಾನು ಸಮರ್ಪಿಸಿಕೊಂಡ ಮುಂಡರಗಿ ಭೀಮರಾಯನನ್ನು ಜಾನಪದ ಕವಿಯೊಬ್ಬ ಹೊಗಳಿರುವ ಪರಿ ಇದು. ಕಿತ್ತೂರು ಎಂದಾಕ್ಷಣ ಚೆನ್ನಮ್ಮನ ಹೆಸರು, ನರಗುಂದ ಎಂದಾಕ್ಷಣ ಬಾಬಾಸಾಹೇಬನ ಹೆಸರು ನೆನಪಿಗೆ ಬರುವಂತೆ ಮುಂಡರಗಿ ಎಂದಾಕ್ಷಣ ಮನಃಪಟಲದ ಮುಂದೆ ಮೂಡಿನಿಲ್ಲುವ ಹೆಸರು ಭೀಮರಾಯನದು. ಆದರೆ ಆತನನ್ನು ಜಾನಪದ ಕವಿಗಳು ಕಿತ್ತೂರ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ನರಗುಂದದ ಬಾಬಾಸಾಹೇಬ ಮೊದಲಾದವರಂತೆ ವಿಶೇಷವಾಗಿ ಹಾಡಿ ಹೊಗಳದೆ ಇರುವುದು ಆಶ್ಚರ್ಯವನ್ನುಂಟು ಮಾಡುತ್ತಿದೆ. ಸದ್ಯ ಈತನನ್ನು ಕುರಿತ ಒಂದೇ ಒಂದು ಲಾವಣಿ ದೊರೆಯುತ್ತಿದ್ದು,೨ ಅಲ್ಲಲ್ಲಿ

---

೧. 'ಪತಿವರತದೇವಿ ಹೋಗಿ ನೋಡ್ಯಾಳ ವೈಕುಂಠಾ' — ಜಾನಪದ ನರಗುಂದ — ಸಂ. ಎ. ಎಸ್. ಹೂಗಾರ, ಪು. ೨೫.

೨. ಈ ಲಾವಣಿಯನ್ನು ಮೊದಲು ಪ್ರಕಟಿಸಿದವರು ವಿದ್ಯಾರತ್ನ ಆರ್. ಎಸ್. ಪಂಚಮುಖಿ ಅವರು (ಕರ್ನಾಟಕ ಜಾನಪದ ಗೀತೆಗಳು. ಕರ್ನಾಟಕ ರಿಸರ್ಚ ಇನ್ಸ್ಟಿಟ್ಯೂಟ, ಧಾರವಾಡ, ೧೯೫೪). ಇದನ್ನೇ ಶ್ರೀ ತೀ. ತಾ. ಶರ್ಮಾ ಅವರು ೧೯೫೭ ರಲ್ಲಿ ಕರ್ನಾಟಕ ಸ್ವಾತಂತ್ರ್ಯ ಸಂಗ್ರಾಮ' ಎಂಬ ಕೃತಿಯಲ್ಲಿ ಇನ್ನೂ ಹೆಚ್ಚು ದೋಷಗಳಿಂದ ಮುದ್ರಿಸಿದ್ದಾರೆ. ಇದರ ಪಲ್ಲ 'ಧೀರ ಕುಂಪಣಿ ಸರದಾರ ಟೈಲರ್ ಸಾಹೇಬಗ್ಯಾರ ಸರಿಯೊ ಧರೆಯೊಳಗ' ಎಂಬುದು ಪ್ರಾರಂಭದಲ್ಲಿರದೆ ಒಂದು ಪದ್ಯದ ನಂತರ ಬಂದಿದೆ. ಆದರೆ ಡಾ. ಎಂ. ಎಂ. ಕಲಬುರ್ಗಿ ಅವರ ಬಳಿ ಇರುವ ಒಂದು ಕಾಗದ ಪ್ರತಿಯಲ್ಲಿ ಈ ಪಲ್ಲ ಪಾರಂಭದಲ್ಲಿದ್ದು, ಅಲ್ಲಿಯೆ ಕೆಲವು ಪದ್ಯಗಳು ಪಂಚಮುಖಿಯುವರ ಪ್ರತಿಯಿಂದ ಹಿಂದುಮುಂದಾಗಿವೆ. ಅಲ್ಲದೆ ಪಂಚಮುಖಿ ಅವರ ಪ್ರತಿಯ ೨೫ನೆಯ ಪದ್ಯಕ್ಕೆ ಬದಲು ಅಲ್ಲಿ ಮೂರು ಹೆಚ್ಚಿನ ಪದ್ಯಗಳೂ ಇವೆ. ಕಥಾ ನಿರೂಪಣೆಯ ದೃಷ್ಟಿಯಿಂದ ಡಾ. ಕಲಬುರ್ಗಿ ಅವರ ಬಳಿ ಇರುವ ಪ್ರತಿ ಹೆಚ್ಚು ಸಮಂಜಸವೆನ್ನಿಸುತ್ತದೆ.

ಸಾಂದರ್ಭಿಕವಾಗಿ ಬೇರೆ ಬೇರೆ ಹಾಡುಗಳಲ್ಲಿ ಈತನ ಎರಡುಮೂರು ಉಲ್ಲೇಖ ಮಾತ್ರ ದೊರೆಯುತ್ತಿವೆ. ಆದರೆ ಇವೆಲ್ಲ ಸಾಮಾನ್ಯವಾಗಿ ಈತನ ಉತ್ತರಾರ್ಧ ಜೀವನವನ್ನು ಅಂದರೆ ಆತನ ಹೋರಾಟದ ಜೀವನವನ್ನು ಮಾತ್ರ ನಿರೂಪಿಸುತ್ತವೆ. ಇವುಗಳಿಂದ, ಧಾರವಾಡದ ಕಲೆಕ್ಟರ್ ಆಫೀಸಿನಲ್ಲಿ ದೊರೆಯುವ ಕಡತಗಳಿಂದ ಸಿದ್ಧ ಪಡಿಸಲಾದ ಕೆಲವು ಲೇಖನಗಳಿಂದ ಮತ್ತು ಈತನ ವಂಶಸ್ಥರು ಹೇಳುವ ಆಧಾರ ಗಳಿಂದ ಈತನ ಬದುಕಿನ ಬಗೆಯನ್ನು ತಿಳಿಯಲು ಸಾಧ್ಯವಾಗಿದೆ. ಅದು ಈ ರೀತಿ ಇದೆ :

'ಭೀಮರಾಯನ ಮನೆತನವು ಮೊದಲಿನಿಂದಲೂ ಶೂರಸಾಹಸಿಗಳ ಮನೆತನ ವೆಂದು ಪ್ರಸಿದ್ಧವಿತ್ತು. ಭೀಮರಾಯನ ಅಜ್ಜ 'ಮೊಂಡಗೈ' ಭೀಮರಾಯನ ಶೌರ್ಯಸಾಹಸಗಳು ಇವತ್ತಿಗೂ ಕನ್ನಡ ನಾಡಿನಲ್ಲಿ ಪವಾಡವಾಗಿವೆ'.೩ ಆವನ ಮೊಮ್ಮಗನಾದ ಈತನೂ ಶೌರ್ಯಸಾಹಸಗಳಿಗೆ ಹೆಸರಾಗಿದ್ದನು. ಈತನ ತಂದೆ ರಂಗರಾಯನು ಪೇಶ್ವೆ ಆಡಳಿತದಲ್ಲಿ ನ್ಯಾಯಾಧೀಶನಾಗಿದ್ದನು. ತಂದೆಯ ಅಕಾಲ ಮೃತ್ಯುವಿನಿಂದ ಅನಾಥನಾದ ಭೀಮರಾಯನನ್ನು, ರಂಗರಾಯನ ಆಪ್ತಸ್ನೇಹಿತ ನಾದ ಬ್ರಿಟಿಷ ಅಧಿಕಾರಿಯೊಬ್ಬ ಮದ್ರಾಸಿಗೆ ಕರೆದೊಯ್ದು ಆತನಿಗೆ ಇಂಗ್ಲಿಷ ಮತ್ತು ಯುದ್ಧಕಲೆಗಳ ಚೆನ್ನಾದ ಅಭ್ಯಾಸ ಮಾಡಿಸಿದನು. ತರುಣವಯಸ್ಸಿನಲ್ಲಿಯೆ ಬ್ರಿಟಿಷ್ ಸರಕಾರದ ಸೇವೆಗೆ ನಿಂತು ಬಳ್ಳಾರಿ, ಹರಪನಹಳ್ಳಿ, ಹೂವಿನಹಡಗಲಿಗಳಲ್ಲಿ ತಹಸೀಲ್ದಾರನಾಗಿ ಸೇವೆ ಸಲ್ಲಿಸಿದನು. ಜನಪ್ರಿಯ ಅಧಿಕಾರಿಯಾಗಿ ಹಲವು ಜನೋಪಯೋಗಿ ಕಾರ್ಯ ಕೈಕೊಂಡನು. ಜನರ ಅಪಾರ ಪ್ರೇಮ-ವಿಶ್ವಾಸ ಸಂಪಾದಿಸಿದನು. ವಿಶೇಷವಾಗಿ ಕೊಪ್ಪಳ ವಿಭಾಗದಲ್ಲಿ ಈತನ ಪ್ರಭಾವ ಹೆಚ್ಚಿತು. ಇದು ಮತ್ತು ಭೀಮರಾಯನ ಸ್ವತಂತ್ರ ಮನೋಭಾವ ಬ್ರಿಟಿಷ ಅಧಿಕಾರಿಗಳಿಗೆ ನುಂಗಲಾರದ ತುತ್ತಾಯಿತು. ೧೮೪೮-೫೦ ರ ಸುಮಾರಿಗೆ ಬಳ್ಳಾರಿ ಜಿಲ್ಲೆಯಲ್ಲಿ ಭೀಕರ ಬರಗಾಲ ಉಂಟಾಯಿತು. ಭೂಕಂದಾಯವನ್ನು ವಸೂಲ ಮಾಡಲು ಬ್ರಿಟಿಷ ಅಧಿಕಾರಿಗಳು ಭೀಮರಾಯನನ್ನು ಒತ್ತಾಯಿಸಹತ್ತಿದರು. ಅಲ್ಲಿಯ ಜನರ ದುಸ್ಥಿತಿಯನ್ನು ಕಣ್ಣಾರೆಕಂಡು ನೊಂದ ಭೀಮರಾಯ ಆ ಪ್ರದೇಶದ ಕಂದಾಯ ವಸೂಲಾತಿಯ ತಡೆಗೆ ಮೇಲಾಧಿಕಾರಿಗಳಲ್ಲಿ ಮನವಿ ಮಾಡಿಕೊಂಡನು. ಇದರಿಂದ ಬಿಟಿಷ ಅಧಿಕಾರಿಗಳಿಗೆ ಈತನ ಮೇಲೆ ಸಂಶಯ ಉಂಟಾಗಿ, ಈತನ ಮೇಲೆ ನಿಗಾ ಇಡತೊಡಗಿದರು.

ಇದೇ ವೇಳೆಗೆ 'ಭೀಮರಾಯನು ಡಂಬಳದ ಸುತ್ತಲಿನ ಪ್ರದೇಶದಲ್ಲಿ ಶಸ್ತ್ರಾಸ್ತ್ರ ಗಳನ್ನೂ ಜನರನ್ನೂ ಸಂಗ್ರಹಿಸುತ್ತಿರುವನೆಂದು ಮಿಶನರಿಗಳೂ ಗುಪ್ತಚಾರರೂ

೩. 'ಸ್ವಾತಂತ್ರ್ಯ ಯುದ್ಧ — ೧೮೫೭' ಮುಖ್ಯ ಸಂ. ರಂಗನಾಥ ದಿವಾಕರ, ಪು. ೨೧೪.

ಸರಕಾರಕ್ಕೆ ಸುದ್ದಿಯನ್ನು ಮುಟ್ಟಿಸುತ್ತಲೆ ಇದ್ದರು. ಆದರೂ ಸರಕಾರಕ್ಕೆ ಭೀಮರಾಯನ ವಿರುದ್ಧ ನಿಶ್ಚಿತ ಪುರಾವೆಗಳೇನೂ ದೊರೆತಿರಲಿಲ್ಲ. ಭೀಮರಾಯನನ್ನು ಧಾರವಾಡ ಕಲೆಕ್ಟರರು ಎರಡು-ಮೂರು ಸಲ ಜವಾಬಿಗೆ ಕರೆಕಳುಹಿಸಿದ್ದರೂ ಅವನಿಂದ ಜಾಮೀನು ಕೇಳುವುದಕ್ಕಾಗಲಿ ಅಥವಾ ಅವನನ್ನು ಸ್ಥಾನಬದ್ಧತೆಯಲ್ಲಿಡುವದಕ್ಕಾಗಲಿ ಸರಕಾರಕ್ಕೆ ಧೈರ್ಯ ಸಾಲಲಿಲ್ಲ. ಇದರಿಂದ ಜನರಮೇಲೆ ಏನು ಪರಿಣಾಮವಾಗುವದೊ ಎಂದು ಸರಕಾರವು ಭಯಪಟ್ಟಿತ್ತು. ಕೊನೆಯ ಸಲ ಭೀಮರಾಯನು ಕಲೆಕ್ಟರನನ್ನು ಭೆಟ್ಟಿಯಾಗಿ ಬಂದು, 'ಇನ್ನೊಮ್ಮೆ ಅವರು ನನ್ನನ್ನು ಕರೆಯಿಸಲಿ; ಅವರಿಗೆ ಯೋಗ್ಯ ಉತ್ತರ ಕೊಡುತ್ತೇನೆ' ಎಂದು ಸಿಟ್ಟಿನ ಉದ್ಗಾರ ತೆಗೆದನಂತೆ ! ಭೀಮರಾಯನ ಈ ಬಂಡಾಯದ ವಿಚಾರಗಳ ಸಲುವಾಗಿ ಭೀಮರಾಯನ ಮಿತ್ರರಿಗೂ ಸರಕಾರವು ಸಾಕಷ್ಟು ಉಪಟಳ ಕೊಡಹತ್ತಿತು;[೪] ಕೊನೆಗೆ ಇಲ್ಲಸಲ್ಲದ ಕೆಲವೊಂದು ಆರೋಪ ಹೊರಿಸಿ, ಒಂದು ಪ್ರಸಂಗದಲ್ಲಿ ಇವನಿಗೆ ಶಿಕ್ಷೆಯಾಗುವ ಸನ್ನಿವೇಶ ತಂದರು. ಕೊನೆಗೆ ೧೮೫೪ ರ ಸುಮಾರಿಗೆ ಇವನನ್ನು ಹುದ್ದೆಯಿಂದ ತೆಗೆದುಹಾಕಿದರು. ಇದರಿಂದ ಭೀಮರಾಯ ಪರಿಬಿಚ್ಚಿದ ಹಾವಿನಂತಾದನು. ತನ್ನ ಸ್ವಗ್ರಾಮ ಬೆಣ್ಣೆಹಳ್ಳಿಯಲ್ಲಿ ನಿಂತು ಬ್ರಿಟಿಷರ ವಿರುದ್ಧ ಬಂಡೇಳುವ ಹೊಂಚು ಹಾಕಹತ್ತಿದನು. ಡಂಬಳ ಸುತ್ತಮುತ್ತಲ ಪ್ರದೇಶದಿಂದ ವಿಪುಲ ಶಸ್ತ್ರಾಸ್ತ್ರ ಸಂಗ್ರಹಿಸಿಯುದ್ಧ ಸನ್ನದ್ಧನಾದನು.

ಈ ಸಮಯಕ್ಕೆ ಬ್ರಿಟಿಷರು ನಿರಾಯುಧ ಕಾಯ್ದೆ ಮೂಲಕ ಹಮ್ಮಿಗಿ ದೇಸಾಯಿಗೆ ಅಸ್ತ್ರಗಳನ್ನು ತಂದೊಪ್ಪಿಸುವ ಆಜ್ಞೆ ಮಾಡಿದರು. ಇಲ್ಲಿಂದ ಪ್ರಸ್ತುತ ಲಾವಣಿ ಪ್ರಾರಂಭವಾಗುತ್ತಿದ್ದು ಈ ಪ್ರಸಂಗವನ್ನು ಅದು ಈ ರೀತಿ ನಿರೂಪಿಸಿದೆ :

> ದೇಶದೊಳು ಎಲ್ಲ ಕುಂಪಿಣಿ ಹುಕುಂ ಮಾಡಿದರು
> ದೊಡ್ಡ ದೊಡ್ಡ ಕಿಲ್ಲೆಗಳ ಕೆಡಿಸಿದರು,
> ಮೀರಿದ ದೊರೆಗಳ ಸೆರೆ ಹಾಕಿದರು......
> ಮದ್ದು ಗುಂಡು ಸೋರುಪ್ಪು ಗಂಧಕ
> ಇದ್ದರಡಗಿಸಿಕೊಂಬುವರು ಭಾರಿ ಶಿಕ್ಷೆಗೆ ಒಳಗಾಗುವರು
> ಕುಂಪಿಣಿಯವರು ಸಾರಿ ಹೇಳಿದರು
> ನಿಮ್ಮಲ್ಲಿದ್ದರೆ ಕೊಡಿರೆಂದು......

ಧರ್ಮದಿಂದ ರಾಜ್ಯವನ್ನಾಳುತ್ತಿದ್ದ ಹಮ್ಮಿಗಿ ದೇಸಾಯಿ ಸರಕಾರದ ಈ ಆಜ್ಞೆಯಿಂದ ಖಿಲಗೊಂಡು ಭೀಮರಾಯನನ್ನು ಮೊರೆಹೊಕ್ಕನು. ಇಬ್ಬರೂ ಸೇರಿ ಬ್ರಿಟಿಷರ

---

೪. 'ಸ್ವಾತಂತ್ರ್ಯ ಯುದ್ಧ -- ೧೮೫೭' ಮುಖ್ಯ ಸಂ. ರಂಗನಾಥ ದಿವಾಕರ, ಪು. ೨೧೫.

ವಿರುದ್ಧ ಬಂಡೇಳುವ ಸನ್ನಾಹಕ್ಕೆ ತೊಡಗಿದರು. ಹಮ್ಮಿಗಿ ದೇಸಾಯಿ ಬಳಿ ಬಹಳಷ್ಟು ಆಯುಧವಿದ್ದದ್ದನ್ನು ಹುಲುಬಿಸಿ ಶ್ಯಾನುಭೋಗ ಧಾರವಾಡಕ್ಕೆ ಪತ್ರ ಬರೆದನು. ಅದನ್ನು ನೋಡಿ ಠಾಣಾ ಪೋಲಿಸ ನಗುತ್ತ ಎಲ್ಲಿ ಹಮ್ಮಿಗಿ, ಎಲ್ಲಿ ದೇಸಾಯಿ, ಎಲ್ಲಿ ಮದ್ದು-ಗುಂಡು' ಎಂದು ಹಮ್ಮಿಗೆಗೆ ಬಂದನು. ಶ್ಯಾನುಭೋಗನನ್ನು ಕರೆಸಿ ಮದ್ದು-ಗುಂಡು ತೋರಿಸು ಎನ್ನಲು, ದೇಸಾಯಿ 'ಇವರು ನನ್ನನ್ನು ಕೊಲ್ಲಲು ಬಂದರು' ಎಂದು, 'ಬಣ್ಣಗುಂದಿ, ಮಾರಿ ಸಣ್ಣ ಮಾಡಿಕೊಂಡು ಅಳುತ' ಬೆಣ್ಣೆಹಳ್ಳಿಗೆ ಓಡಿದನು. 'ಕಣ್ಣ ತುಂಬ ನೀರ ತಂದು' ಅಲ್ಲಿದ್ದ ಭೀಮರಾಯನಿಗೆ 'ಶಿವ ಶಿವ ! ಸಾಯುವ ಕಾಲ ಬಂತು' ಎಂದು ತನ್ನ ಅಳಲನ್ನು ತೋಡಿಕೊಂಡನು. ಇಲ್ಲಿಂದ ಭೀಮರಾಯನ ಚಟುವಟಿಕೆ ಪ್ರಾರಂಭವಾಗುವುದನ್ನು ಲಾವಣಿ ಸೂಚಿಸುತ್ತದೆ. ಅವನು ಅಂಜಿ ಬಂದ ದೇಸಾಯಿಗೆ —

"ಬಿಡು ಬಿಡು ದೇಸಾಯಿ, ಹಿಡಿ ಹಿಡಿ ಕತ್ತಿ
ನಡಿ ನಡಿ ಕುದುರೆಯನು ಏರು"

ಎಂದು ಹುರಿದುಂಬಿಸಿ, ಬಂಟರನ್ನು ಕರೆಸಿ ಹಮ್ಮಿಗೆಗೆ ಬಂದನು. ಶ್ಯಾನುಭೋಗನ ಕಿವಿ-ಮೂಗ ಕೊಯ್ಸಿದನು. ಬಂದ ಸವಾರನನ್ನು ಕಡಿದು ಒಡಿದು ಧುಮ್ಮ ದುಡುಕು ಮಾಡಿದನು. ಹೀಗೆ ಒಂದು ನಾಡಿನ ದೇಸಾಯಿಯಂಥವನಿಗೂ ಧೈರ್ಯ ತುಂಬಬಲ್ಲ, ಅವನಿಗೆ ಬಂದ ಸಂಕಷ್ಟವನ್ನು ಮೈಮೇಲೆ ಹಾಕಿಕೊಂಡು ಎದುರಿಸ ಬಲ್ಲ ಸಮರ್ಥನಾಗಿದ್ದನು ಭೀಮರಾಯ ಎಂಬುದು ಇದರಿಂದ ವ್ಯಕ್ತವಾಗುತ್ತವೆ. ಮುಂದುವರಿದು ಅವನು ಡಂಬಳ, ಹಾರುವಗೇರಿ, ಕೌಲೂರಗಳನ್ನು ಲೂಟ ಮಾಡಿದನು. ಇದರಿಂದ

"ಕೊರತಿ ಇಲ್ಲದ ಹಣ ಭರತಿ ಚಕ್ಕಡಿ
ತಿರಗದೆಳೆದವು ಎತ್ತುಗಳು."

ಹೀಗೆ 'ಚೋರನಾಗಿ' ತಾ ದಾರಿ ಹಿಡಿದು ಭೀಮರಾಯ ಕುಮ್ಮಟ (ಬಹಾದ್ದೂರ ಬಂಡಿ-?) ದಲ್ಲಿ ಏರಿ ಕುಳಿತನು. ಇದರಿಂದ ಪ್ರಜೆಗಳು 'ಗಜಬಿಜ ಆದಿತು, ನಿಜ ಏದು, ಭೀಮರಾಯ ತಜವೀಜು ಮಾಡಿದನೆಂದು' ಭಯಗೊಂಡರು.

ಭೀಮರಾಯ ಇಷ್ಟರಿಂದಲೂ ತೃಪ್ತನಾಗದೆ ಸೊರಟೂರ ದೇಸಾಯಿ ಮೂಲಕ ಆ ಪ್ರಾಂತದ ಇತರ ಸಂಸ್ಥಾನಿಕರ ಸಂಪರ್ಕ ಬೆಳೆಸಿದನು. ಸ್ವಲ್ಪ ಕಾಲದಲ್ಲಿ ಡಂಬಳ ದೇಶಮುಖರು, ಗೋವನಕೊಪ್ಪದ ದೇಸಾಯರು ಇವನನ್ನು ಕೂಡಿದರು. ನರಗುಂದದ ಬಾಬಾಸಾಹೇಬ, ಮುಂಡರಗಿ ಭೀಮರಾಯನನ್ನು ಕೂಡಿಕೊಂಡು ಒಳಸಂಚು ಮಾಡಿ, ಬ್ರಿಟಿಷರ ವಿರುದ್ಧ ಬಂಡನ್ನೆಬ್ಬಿಸಲು ನಿಶ್ಚಯ ಮಾಡಿದುದನ್ನು

ಬಾಬಾಸಾಹೇಬನಿಗೆ ಸಂಬಂಧಿಸಿದ ಹಾಡುಗಳು ಹೇಳುತ್ತಿವೆ.೫ ಇದೇ ವೇಳೆಗೆ ತೊರಗಲ್ಲು, ಮುಧೋಳ, ಶಿರಹಟ್ಟಿ, ಸವಣೂರು, ರಾಮದುರ್ಗ, ಐನಾಪುರ, ಆನೆಗುಂದಿ, ಸಾಂಗಲಿ, ಗೋಕಾಕ, ಸೊರಟೂರ, ಹಿರಸಂಗಿ, ಬೆಳಗಾಂವಿ, ವಿಜಾಪುರ, ಜಮಖಂಡಿ ಮುಂತಾದ ಸಂಸ್ಥಾನಿಕರು ಪ್ರತ್ಯೇಕ ಪ್ರತ್ಯೇಕವಾಗಿ ಬಂಡೇಳಲು ಸನ್ನದ್ಧರಾದ ಬಗ್ಗೆಯೂ ತಿಳಿದುಬರುತ್ತಿದೆ.

ಕೊನೆಗೆ ಕ್ರಿ. ಶ. ೨೪–೫–೧೮೫೮ ರಂದು ಭೀಮರಾಯ ಕೊಪ್ಪಳ ಕೋಟೆಯನ್ನು ವಶಪಡಿಸಿಕೊಳ್ಳುವ ನಿರ್ಧಾರ ಮಾಡಿ, ಡಂಬಳ, ಹೊಸಪೇಟೆ, ಕಮಲಾಪುರದಲ್ಲಿ ಶಸ್ತ್ರಸಜ್ಜಿತ ಜನರನ್ನು ಸೇರಿಸಿದನು. ಮರುದಿನ ಸರ್ವಸಿದ್ಧತೆಗಳನ್ನು ಮಾಡಿಕೊಂಡು ಕವಲೂರ ಹಳ್ಳದ ಹತ್ತಿರ ಬೀಡುಬಿಟ್ಟನು. ಅಲ್ಲಿಯ ನಿವಾಸಿಗಳು ಈತನನ್ನು ಅತ್ಯಂತ ಆದರದಿಂದ ಸ್ವಾಗತಿಸಿದರು. ಕೌಲೂರುಗೌಡರ ಸಹಕಾರದಿಂದ ಸುತ್ತಮುತ್ತಲ ಗ್ರಾಮಗಳ ಓಲೆಕಾರರು ಭೀಮರಾಯನ ಈ ಸಂಘಟನೆಯಲ್ಲಿ ಸೇರಿದರು.

ಇದೇ ವೇಳೆಗೆ ಕೊಪ್ಪಳದ ಅಮಲ್ದಾರನು 'ಹೆಂಡರ ಸೆರೆಯನು ಕಂಡು ಬದುಕುವನು ಭಂಡ' ಎಂದು ಭೀಮರಾಯನ ಹೆಂಡಿರು–ಮಕ್ಕಳನ್ನು ಸೆರೆಹಿಡಿದು ಕೋಟೆಯಲ್ಲಿ ಬಂಧಿಸಿಟ್ಟನು. ಇದರ ಕಾಲವನ್ನು ಲಾವಣಿಕಾರ 'ಕಾಳಯುಕ್ತ ಸಂವತ್ಸರ ಅಧಿಕ ಬಹುಳ' ಎಂದಿದ್ದಾನೆ. ಇದರಿಂದ ಉರಿಯುತ್ತಿದ್ದ ಅಗ್ನಿಗೆ ತುಪ್ಪವನ್ನೆರಚಿದಂತಾಯಿತು. ಅಗ್ನಿಕುಂಡದಂತಾದ ಭೀಮರಾಯನು ರಾತ್ರಿಯಲ್ಲಿಯೆ ಗುಮ್ಮಟ ಬಿಟ್ಟು ಹೊರಟು ಬೆಳಗಿನ ಜಾವ ಕೊಪ್ಪಳಕ್ಕೆ ಬಂದು ಅಲ್ಲಿ ತನ್ನ ಸ್ನೇಹಿತನಾದ ಮೋದಿನ್‌ನಾಯಕನನ್ನು ಕಂಡನು. ಅಷ್ಟರಲ್ಲಿ ಮೋದಿನ್‌ನಾಯಕನು ಮಂಗದು ನಾಯಕ ಮತ್ತು ರಾಜಾನಾಯಕರೊಂದಿಗೆ ೨೦೦ ಜನ ಸಶಸ್ತ್ರ ಸೈನಿಕರನ್ನು ಸಜ್ಜು

---

೫. i) ಮುಂಡರಗಿ ಭೀಮರಾಯನಿಗೆ sss । ಸುರಪುರ ಊರ ನಾಯಕನಿಗೆ । ಪತ್ರ ಬರೆದ ತಾನು ಅವರಿಗೆ । ಸಹಾಯಕ್ಕೆ ಬರಬೇಕ್ರಿ ನೀವು ನನಗ ॥ ಜಾನಪದ ನರಗುಂದ, ಪು. ೭೪,

ii) ಮುಂಡರಗಿ ಸುರಪುರ ನಾಯಕರಾ । ಇಬ್ಬರು ಬಂದಾರೊ ಸಹಾಯಕ್ಕಾ
ಇಬ್ಬರು ನಿಂತಾರೊ ಯುದ್ಧಕ । ಭೀಮರಾಯ ಮಡಿದಾನೊ ಆ ಕ್ಷಣಕ ॥ ಅದೇ ಪು. ೭೬. ಸುರಪುರದ ವೆಂಕಟಪ್ಪನಾಯಕನ ಕೂಡ ಭೀಮರಾಯನ ಪತ್ರವ್ಯವಹಾರವಿತ್ತೆಂದೂ ಜುಲೈದಲ್ಲಿ ಬಂಡಾಯ ಮಾಡುವ ವಿಚಾರವಿತ್ತೆಂದೂ ಗೊತ್ತಾಗಿದೆ. The Story of My Life. Meadows Taylor - P. 412, Ref. ಸ್ವಾತಂತ್ರ್ಯ ಯುದ್ಧ, ಪು. ೨೧೬.

iii) ಮುಂಡರಗಿ ಭೀಮಣ್ಣ ಬಂಡಾಯ ಎಬ್ಬಿಸಿದ । ದಂಡ ಕೂಡ್ಯಾನೊ ನರಗುಂದ । ಬಾಬಣ್ಣ ಕೆಂಡ ಕಾರ್‍ಯಾನೊ ಕುಂಪಣಿಗೊ ॥ ಜಾನಪದ ನರಗುಂದ, ಪು. ೮೦,

ಗೊಳಿಸಿದ್ದನು. ಬಹದ್ದೂರ ಬಂಡೆ, ರಾಮಕುಂಟಾಗಳ ಜನರಲ್ಲದೆ, ಶಿವಪುರದ ಕೆಂಚಪ್ಪ, ಮುದ್ದ ವೆಂಕಣ್ಣ ಮುಂತಾದ ಕ್ರಾಂತಿಕಾರರೂ ತಮ್ಮ ತಮ್ಮ ಸೈನ್ಯದೊಂದಿಗೆ ಭೀಮರಾಯನನ್ನು ಸೇರಿದರು. ತತ್ಪರಿಣಾಮವಾಗಿ ಸ್ವಲ್ಪೇ ದಿನದಲ್ಲಿ ಕೊಪ್ಪಳ ಅಗಸಿಯನ್ನು ಒಡೆದು ಭೀಮರಾಯ ತನ್ನ ಹೆಂಡಿರು ಮಕ್ಕಳನ್ನು ಸೇರಿಕೊಂಡನು. ಕೊಪ್ಪಳ ಕೋಟೆ ಭೀಮರಾಯನ ವಶವಾಯಿತು. ಒಳಗೆ ಸಿಕ್ಕಿದ ಜನರಿಗೆಲ್ಲ 'ಜುಲಮಿ ಸಂಬಳ ಗೊತ್ತು ಮಾಡಿದ' ಎಂದು ಲಾವಣಿಕಾರ ಹೇಳಿದ್ದಾನೆ.

ಈ ರೀತಿ ಕೊಪ್ಪಳದ ಕೋಟೆ ಕೈಬಿಟ್ಟದ್ದನ್ನು ಕೇಳಿ ಬ್ರಿಟಿಷರ ಬಗೆ ಕದಡಿತು. ಇದನ್ನು ಹೀಗೆಯೇ ಮುಂದುವರಿಯಗೊಟ್ಟರೆ ಉಳಿಗಾಲವಿಲ್ಲವೆಂದು ತಿಳಿದ ಬ್ರಿಟಿಷ ಸರಕಾರ ಧಾರವಾಡ, ಬಳ್ಳಾರಿ, ರಾಯಚೂರಗಳಿಂದ ಸೈನ್ಯವನ್ನು ಕರೆಸಿತು. ೩೧ ಮೇ, ೧೮೫೮ ರಂದು ಮೇಜರ್ ಹುಘೇಜನು ಬಳ್ಳಾರಿಯಿಂದ ಅಶ್ವದಳ ಸಮೇತ ಕೊಪ್ಪಳಕ್ಕೆ ಬಂದು ಕೋಟೆಯನ್ನು ಮುತ್ತಿದನು. ಅಷ್ಟರೊಳಗೆ ಹರಿಹರ, ಲಿಂಗಸುಗೂರು, ಹೈದರಾಬಾದಿನಿಂದ ಇನ್ನಷ್ಟು ಪಡೆ ಬಂದು ಸೇರಿಕೊಂಡಿತು. ಇದನ್ನು ಲಾವಣಿಕಾರ

ಲಿಂಗಸೂರ ಛಾವಣಿ ಇತ್ತೊ ಸಾವಿರಾ
ತುರ್ತಿನ ಮಂದಿ ತಂಥಾ ಸರದಾರ
ಕೊಪ್ಪಳ ಸುತ್ತ ಕುದುರೆಯ ವ್ಯಾಪಾರ
ನಾಲ್ಕು ಕಡೆ ತೋಪು ತಯಾರ
ಹೊಡಿ ಹೊಡೆದನು ನೆಲೆಯಿಲ್ಲದ ಗುಂಡ
ಕಿಲ್ಲೆ ಮಾಡಿದನು ಚೂರಚೂರ......

ಎಂದು ಬಣ್ಣಿಸಿದ್ದಾನೆ. ಮೇಜರ್ ಹುಘೇಜನು ಭೀಮರಾಯನಿಗೆ ಮೂರು ಗಂಟೆಯಲ್ಲಿ ಶರಣು ಬರಬೇಕೆಂದು ಆದೇಶ ಕಳಿಸಿದನು. ಅದಕ್ಕೆ ಸ್ವಾಭಿಮಾನಿಯಾದ ಭೀಮರಾಯನು ಸೊಪ್ಪು ಹಾಕಲಿಲ್ಲ. ೧-೬-೧೮೫೮ ರಂದು ಉಭಯ ಸೈನ್ಯಗಳ ನಡುವೆ ಭೀಕರ ಹೋರಾಟ ಆರಂಭವಾಯಿತು. *ಭೀಮರಾಯ, ಹಮ್ಮಿಗಿ ದೇಸಾಯಿ ಗಚ್ಚಿನ ಕೋಟೆ ಹತ್ತಿ ಗುಂಡಿನ ಪ್ರತಿ ಉತ್ತರ ಕೊಡಲು ಹೋಗುತ್ತಿದ್ದಂತೆ 'ಕ್ಷಣ ಕ್ಷಣಕೆ ಹಾರಲಿಲ್ಲ ಒಂದೂ ಗುಂಡು' ಎಂದಿದ್ದಾನೆ ಲಾವಣಿಕಾರ. ಬಹುಶಃ ಸಂಚಿನ ಮೂಲಕ ಬ್ರಿಟಿಷರು ಇವರ ಪ್ರಯತ್ನವನ್ನು ಹುಸಿಗೊಳಿಸಿರಬೇಕು ಕಿತ್ತೂರಿನಲ್ಲಿಯಂತೆ. ಆಗ ಭೀಮರಾಯ ಮತ್ತು ದೇಸಾಯಿ ಕೊಪ್ಪಳ ಸಮೀಪದ ಮಾದ್ನೂರಿಗೆ ಹೋಗಿ ಅಲ್ಲಿಂದ ಸೈನ್ಯ ಸಾಮಗ್ರಿಯನ್ನೆಲ್ಲ ತಂದು —

"... ... ಕುಂಡಿ ಚಣ್ಣ
ಜೋಡ್ಗುಂಡಿನ ಕರಹಲ್ ಪಿಡಿದು
ಗುರ್ಜು ಅಗಸಿಲಿರುವ ತೋಪು ಜಡಿದು
ಹೊರಗಿನ ಮಂದಿ ಮ್ಯಾಲ್ ಹಲ್ಕಡಿದು
ಹಸಿದ ಸಿಂಹನಾಂಗ ಕೂಗ ಹೊಡೆ'ದರು.

ಇದರಿಂದ ಕೊಪ್ಪಳ ಮಂದಿಯೆಲ್ಲ ಭಯ ಹಿಡಿದು 'ಎತ್ತಲ ಪೀಡ ಬಂದ್ಹೋತ್ರಿ ಕೊಂಡಿತು' ಎಂದು ಉದ್ಗಾರ ತೆಗೆದರು. ಇದನ್ನು ಕೇಳಿ ಸರದಾರ 'ಕರಕರ ಹಲ್ಲ ತಿಂದು, ಬರ್ಭಾರ ಅಲ್ಲೇ ಬಿಟ್ಟು' ಅವರನ್ನು ಬೆನ್ನು ಹತ್ತಿದನು. ಸೈನ್ಯದ ಕಾಲ ತುಳಿತದಿಂದ ಧೂಳು ಮುಸುಕಿತು. 'ಎತ್ತಿ ಕಡಿವಂತ ಭಂಟರು ಗಾಲೊಳಗ ಬಿದ್ದ ನೋಡಿ ಹೊರಳಿದರು'. ಅರಳು ಹುರಿದಂತೆ, ಗುಂಡಿನ ಶಬ್ದ ಕೇಳಿದವು. ತಡೆಯುದೆ ಶಿರಗಳು ಹಾರಿದವು. ಕೆಂಪು ನೆತ್ತರ ಕಾಲುವೆ ರೂಪದಲ್ಲಿ ಹರಿಯಿತು. ಕರ್ಣ–ಅರ್ಜುನರು, ಇಂದ್ರಜಿತು–ರಾಮಚಂದ್ರರು ಹೋರಾಡಿದಂತೆ ಕಾಳಗವಾಯಿತು. ಆಗ ಭೀಮರಾಯ 'ಇಂದಿನ ಒಂದಿನ ಒಂದುಳಿದರೆ ನಮ್ಮದು ಮಂದಿ ಬಂದೀತು, ನಮಗಿಲ್ಲ ಚಿಂತೆ' ಎಂದು ದೇಸಾಯಿಗೆ ಹೇಳುತ್ತಿದ್ದಂತೆ ಹಾರಿಬಂದ ಸಾವಿರಾರು* ವೈರಿ ಗುಂಡುಗಳಿಂದ ಇಬ್ಬರೂ ಕೊಪ್ಪಳ ಕೋಟೆಯ ಬಾಗಿಲ ಮಧ್ಯದಲ್ಲಿಯೆ ಮಡಿದರು. ಇದನ್ನು ಕಂಡು ದಿಕ್ಕುಗೆಟ್ಟ ಬಂಟರು ಕತ್ತಿ ತುಬಾಕಿಗಳ ಬಿಟ್ಟು, ದೊಡ್ಡ ಓಣಿ ಹಿಡಿದು ಓಡಿದರು. ಅವರನ್ನೂ ಬ್ರಿಟಿಷರು ಹುಡುಕಿ, ಗುಂಡಿಲೆ ಹೊಡೆದು ಕೊಂದರು. ಹೀಗೆ ತುಬಾಕಿಯಿಂದ ಸುಡಲ್ಪಟ್ಟ ಜನ – ಏಳುನೂರಾ ಐವತ್ತು. ಸುಮಾರು ಒಂದುನೂರಾಐವತ್ತೂ ಜನ ಕೈಸೆರೆಯಾದರು.

ಟೇಲರ್ ಸಾಹೇಬನ ಅಜ್ಞೆಯಮೇರೆಗೆ ಭೀಮರಾಯ ಮತ್ತು ದೇಸಾಯಿ ಅವರ ದೇಹಗಳನ್ನು ಗವಿಮಠದ ಬಯಲಿನ ವರೆಗೆ ಕಾಲು ಹಿಡಿದು ಎಳೆದು ತಂದರು. ಅದನ್ನು ನೋಡಿ ಸುತ್ತಮುತ್ತಲ ಜನ ಮರುಗುತ್ತ ಅತ್ತಿತು. ಭೀಮರಾಯನ ಹೆಂಡಂದಿರು 'ಅಯ್ಯಯ್ಯೋ' ಎಂದು ಹಣೆಯ ಬಡಕೊಂಡು, ಭೋರೆಂದು ಅಳುತ್ತ ಕರಿಮಣಿ ಹರಿದುಕೊಂಡರು.

ಟೇಲರ್ ಸಾಹೇಬ ಈ ಪಿತೂರಿಗೆ ಸಹಕರಿಸಿದ ಮೋದಿನ್ ನಾಯಕನಿಗೆ ಬೇಡಿ ಹಾಕಿಸಿದ. ಅವನ ಆಸ್ತಿಪಾಸ್ತಿಗಳನ್ನೆಲ್ಲ ಜಪ್ತ ಮಾಡಿಸಿದ. ಇದ್ದ ಮದ್ದು ಗುಂಡುಗಳನ್ನು ನೀರೊಳಗೆ ಹಾಕಿಸಿದ. ದೊಡ್ಡ ದೊಡ್ಡ ತೋಪುಗಳನ್ನು ಒಡೆಸಿದ, ಜಗಳದ ಹರಿಯ ಕೆಡವಿ ಲೈನ್ ಮಾಡಿಸಿದ.

— ಈ ಭಾಗದ ವಿಷಯವನ್ನು ಇತಿಹಾಸಕಾರರು ಈ ವರೆಗೆ ಗುರುತಿಸಿಲ್ಲ.

ಭೀಮರಾಯನ ಅಜ್ಜಿ, ರಂಗರಾಯನ ತಾಯಿ ಈ ಸುದ್ದಿ ಕೇಳಿ 'ಹಾ ! ಹಾ! ಕಂದಾ' ಎಂದು ಹೊರಳಿದಳು. ಚಕ್ರವ್ಯೂಹದ ಕೋಟೆಯಲ್ಲಿ ಅಭಿಮನ್ಯು ಕೌರವರಿಗೆ ಯುದ್ಧವಾದಂತೆ ಕೊಪ್ಪಳದಲ್ಲಿ ಜಗಳವಾಯಿತು – ಎನ್ನುವುದರೊಂದಿಗೆ ಈ ಲಾವಣಿ ಮುಕ್ತಾಯವಾಗುತ್ತದೆ.

ಭೀಮರಾಯನ ಸಮಗ್ರ ಜೀವನವನ್ನು ತಿಳಿಯಲು ಈ ಲಾವಣಿ ಸಹಾಯಕವಾಗದೆ ಇದ್ದರೂ ಅವನ ಹೋರಾಟದ ಬದುಕಿನ ಮೇಲೆ ವಿಶೇಷ ಬೆಳಕನ್ನು ಚೆಲ್ಲುತ್ತದೆ. ಇಲ್ಲಿ ಕಂಡು ಬರುವ ಚಾರಿತ್ರಿಕ ಅಂಶಗಳನ್ನು ಒಟ್ಟಾರೆ ಈ ರೀತಿ ಸಂಗ್ರಹಿಸಬಹುದು : ೧. ನಿಶಸ್ತ್ರೀಕರಣ ಕಾಯ್ದೆಯ ಮೇರೆಗೆ ಬ್ರಿಟಿಷರು ಅಸ್ತ್ರಗಳನ್ನು ಒಪ್ಪಿಸುವಂತೆ ಹಮ್ಮಿಗಿ ದೇಸಾಯಿಗೆ ಆಜ್ಞೆ ಮಾಡಿದರು. ಅವನು ಹೋಗಿ ಭೀಮರಾಯನನ್ನು ಮೊರೆ ಹೋಗಲು ಇಬ್ಬರೂ ಬಂದು, ಅವನನ್ನು ಹುಲುಬಿಸಿಕೊಟ್ಟ ಶಾನುಭೋಗನನ್ನೂ, ಜಪ್ತ ಮಾಡಲು ಬಂದ ಪೋಲಿಸನನ್ನೂ ಶಿಕ್ಷಿಸಿದರು. ೨. ಕೊಪ್ಪಳದ ಸುತ್ತಮುತ್ತ ಲೂಟಿ ಪ್ರಾರಂಭಿಸಿದುದು. ೩. ಹೆಂಡಿರನ್ನು ಸೆರೆ ಇಟ್ಟರೆ ತಾನೇ ಬಂದು ಶರಣಾಗುವನೆಂದು ಕೊಪ್ಪಳದ ಕೋಟೆಯಲ್ಲಿ ಭೀಮರಾಯನ ಇಬ್ಬರು ಹೆಂಡಿರನ್ನೂ ಸೆರೆಯಿಡಲು, ಅಲ್ಲಿಯ ಮೋದೀನ್ ಸಾಹೇಬನ ಸಹಾಯದಿಂದ ಅವರನ್ನು ಬಿಡುಗಡೆ ಮಾಡಿ, ಕೊಪ್ಪಳ ಕೋಟೆ ವಶಮಾಡಿಕೊಂಡುದು. ೪. ಇದರಿಂದ ಖಿಲಗೊಂಡ ಬ್ರಿಟಿಷರು ಲಿಂಗಸುಗೂರು ಮೊದಲಾದ ಭಾಗಗಳ ಸೈನ್ಯದೊಂದಿಗೆ ಕೊಪ್ಪಳದ ಕೋಟೆಯಲ್ಲಿ ಹೋರಾಟ ಪ್ರಾರಂಭಿಸಿದುದು. ೫. ಮೋಸದಿಂದ ಭೀಮರಾಯನ ಹೋರಾಟವನ್ನು ನಿಷ್ಫಲಗೊಳಿಸಿದುದು. ಅವನು ಅಂಜದೆ ಮಾದ್ನೂರು ಬಳಿಯ ಸೈನ್ಯತಂದು ಹೋರಾಡಿ ಕೊಪ್ಪಳ ಕೋಟೆಯಲ್ಲಿ ಸತ್ತುದು. ೬. ಅವರ ಹೆಣಗಳನ್ನು ಗವಿಮಠದ ವರೆಗೆ ಎಳೆದು ತರಿಸಿದುದು. ಭೀಮರಾಯನ ಹೆಂಡಂದಿರು, ಅಜ್ಜಿ ಭೋರೆಂದು ಅತ್ತುದು, ಜನ ದುಃಖಿಸಿದುದು ಇವೇ ಮೊದಲಾದ ಹಲವಾರು ಚಿತ್ರಗಳು ಇಲ್ಲಿ ವಿವರವಾಗಿ ಚಿತ್ರಿತವಾಗಿವೆ.

ಶ್ರೀ ಬೆಟಗೇರಿ ಕೃಷ್ಣಶರ್ಮ ಅವರು ಹೇಳುವಂತೆ ೧೮೫೭ ರಂದಿನ ಸ್ವಾತಂತ್ರ್ಯ ಯುದ್ಧದ ವೀರ ವಿಭೂತಿಗಳಲ್ಲಿ ಮುಂಡರಗಿಯ ಭೀಮರಾಯನ ವ್ಯಕ್ತಿತ್ವ ಅದೊಂದು ವಿಶಿಷ್ಟ ರೀತಿಯದು. ಆ ಯುದ್ಧದಲ್ಲಿ ತೊಡಗಿದ ಪ್ರಮುಖ ವ್ಯಕ್ತಿಗಳಲ್ಲಿ ಬಹು ಜನರು ಒಂದೊಂದು ವೈಯಕ್ತಿಕ ಆಮಿಷಗಳ ಬೆನ್ನು ಹತ್ತಿ ಹೊರಟವರಂತೆ ಕಾಣುವರು. ತಮಗಿದ್ದ ಸಂಸ್ಥಾನ, ಜಹಗೀರುಗಳು ಹೊರಟು ಹೋಗುವವೆಂಬ ರೊಚ್ಚಿನಿಂದ ಅಂಧರಾಗಿ ಬ್ರಿಟಿಷ ಸರಕಾರದೊಂದಿಗೆ ರಣಕಹಳೆಯನ್ನು ಊದಿದವರು ಅನೇಕ ಜನರು, ತಮ್ಮ ಧರ್ಮದ ಮೇಲೆ ಆಪತ್ತು ಬಂದಿದೆಯೆಂದು ಕಣಕ್ಕಿಳಿದ ಧರ್ಮನಿಷ್ಠರು ಹಲವಾರು ಜನರು; ಆದರೆ ಮುಂಡರಗಿ ಭೀಮರಾಯನ ಚರಿತ್ರೆಯನ್ನು

ನೋಡಿದರೆ ಅವನು ಸಂಸ್ಥಾನಿಕನೂ ಅಲ್ಲ ಕೇವಲ ಧರ್ಮಾಂಧಕನಾಗಿ ಹೊರಟವನೂ ಅಲ್ಲ. ತನ್ನ ಮೇಲೆ – ತನ್ನ ಪ್ರದೇಶದ ಮೇಲೆ – ಪರಕೀಯರ ಅಧಿಕಾರ ಬೇಡವೆಂದು ಹೋರಾಟಕ್ಕೆ ನಿಂತ ಸ್ವಾತಂತ್ರ್ಯ ಭಕ್ತನವ. ಹೀಗಿದ್ದೂ ಲಾವಣಿಕಾರ ಅಲ್ಲಲ್ಲಿ ಭೀಮರಾಯನನ್ನು ಕುರಿತು 'ಹೊಸ ಕೀಟಕ ಭೀಮರಾಯ' (ಪ. ೧೨) 'ಪುಂಡ ಭೀಮರಾಯ' (ಪ. ೧೬) 'ಚೋರನಾಗಿ ತಾ ದಾರಿ ಹಿಡಿದು' (ಪ. ೧೦) ಎಂದಿದ್ದಾನೆ. ಇವನ ಬಂಡೇಳುವಿಕೆಯಿಂದ, ಕೊಪ್ಪಳ ಮಂದಿ ಎಲ್ಲ ಭಯಯಿಂಡಿದ ಎತ್ತಲ ಪೀಡೊಂದೊತ್ತಿ ಕೊಂಡಿತೆಂದು, ಮೌನ ಹಿಡಿಯಿತಂ' (ಪ. ೧೬) ಎಂದಿದ್ದಾನೆ. ಇವನ್ನೆಲ್ಲ ನೋಡಿದರೆ ಈ ಲಾವಣಿಕಾರ ಬ್ರಿಟಿಷ್ ಪರ ಇದ್ದಂತೆ ತೋರುತ್ತಿದೆ. ಈ ಲಾವಣಿಯಲ್ಲಿ ಮೇಲಿಂದ ಮೇಲೆ ಬರುವ 'ಧೀರ ಕಂಪಣಿ ಸರದಾರ ಟೈಲರ್ ಸಾಹೇಬಗ್ಯಾರ ಸರಿಯೊ ಧರೆಯೊಳಗ' ಎಂಬ ಪಲ್ಲವಂತೂ ಈ ಮಾತಿಗೆ ಇನ್ನೂ ಪುಷ್ಟಿಯನ್ನೀಯುತ್ತದೆ. 'ಕುಪಣಿದೊರೆಗಳಿಗೆ ಈಡ ಇಲ್ಲ' (ಪ. ೨೪) ಎಂಬ ಮಾತೂ ಇಲ್ಲಿದೆ. ಹೀಗಾಗಿ ಈ ಲಾವಣಿಕಾರ ಭೀಮರಾಯನ ಶೌರ್ಯ–ಸಾಹಸವನ್ನು ಅನಿವಾರ್ಯ ಎನ್ನುವಲ್ಲಿ ಮಾತ್ರ ಮನಬಿಚ್ಚಿ ವರ್ಣಿಸಿದ್ದಾನೆಯೆ ಹೊರತು – ಉಳಿದೆಡೆ ಅವನ ಶೌರ್ಯ–ಸಾಹಸಗಳ ವಿವರಣೆ ನಮಗೆ ದೊರೆಯುವುದಿಲ್ಲ. ಏನೇ ಇದ್ದರೂ ಭೀಮರಾಯನ ಚರಿತ್ರೆಯ ಕಳಚಿ ಹೋಗಿರಬಹುದಾದ ಕೆಲವಾದರೂ ಕೊಂಡಿಗಳನ್ನು ಈ ಲಾವಣಿಯ ಸಹಾಯದಿಂದ ಬೆಸೆಯಬಹುದಾಗಿದೆ.*

● ●

---

* ದಿನಾಂಕ ೮-೪-೧೯೯೦ ರಂದು ಬೆಂಗಳೂರಿನ ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ ವತಿಯಿಂದ ಧಾರವಾಡದಲ್ಲಿ ಜರುಗಿದ 'ಸ್ವಾತಂತ್ರ್ಯ ಸಂಗ್ರಾಮದ ಧ್ವನಿಗಳು' ವಿಚಾರ ಸಂಕಿರಣದಲ್ಲಿ ಓದಿದ ಪ್ರಬಂಧ.

ಧಾರವಾಡ ಜಿಲ್ಲೆಯ ಸಣ್ಣಕಥಾಸಾಹಿತ್ಯ : ಒಂದು ಸಮೀಕ್ಷೆ

● ಬಾಳಣ್ಣ ಶೀಗೀಹಳ್ಳಿ

ಕನ್ನಡದಲ್ಲಿ ಕಾದಂಬರಿಯ ನಂತರ ಸಣ್ಣಕತೆಯೇ ಅತ್ಯಂತ ಜನಪ್ರಿಯ ಹಾಗೂ ಸಮೃದ್ಧ ಸಾಹಿತ್ಯಪ್ರಕಾರವಾಗಿದೆ. ಹೊಸಗನ್ನಡದಲ್ಲಿ ಪ್ರಕಟವಾದ ಸಣ್ಣಕಥಾ ಸಂಕಲನಗಳ ಸಂಖ್ಯೆ ಕೂಡಾ ಅಪರಿಮಿತವಾಗಿ ಬೆಳೆದಿದೆ. ಇದೇ ರೀತಿ ಕನ್ನಡ ಸಾಹಿತ್ಯದ ಪ್ರಮುಖ ಚಳುವಳಿಗಳಾದ ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ ದಂಥಾ ಮನೋಧರ್ಮಕ್ಕೆ ಸ್ಪಂದಿಸಿದ ಈ ಜಿಲ್ಲೆಯ ಸಣ್ಣಕಥಾ ಲೇಖಕರ ಸಂಖ್ಯೆಯೂ ಗಣನೀಯವಾದುದು. ಈ ಮಾತನ್ನು ಯಾಕೆ ಹೇಳುತ್ತಿದ್ದೇನೆಂದರೆ : ಕೆಲವು ಉತ್ತಮ ವಾದ ಕಥಾಸಂಕಲನಗಳನ್ನು ಸಹ ಈ ಪರಿಮಿತ ಪ್ರಬಂಧದಲ್ಲಿ ಸಮೀಕ್ಷಿಸಲು ಸಾಧ್ಯ ವಾಗಿಲ್ಲವೆಂಬ ಕೊರಗು ನನ್ನನ್ನು ಉದ್ದಕ್ಕೂ ಕಾಡಿದೆ.

ಈ ಜಿಲ್ಲೆಯೊಂದರಲ್ಲಿಯೇ ಸುಮಾರು ಇಪ್ಪತ್ತಕ್ಕೂ ಹೆಚ್ಚು ಲೇಖಕರೂ (ಇನ್ನೂ ಹೆಚ್ಚಿರಬಹುದು.) ಇದರ ಅರ್ಧದಷ್ಟಾದರೂ ಲೇಖಕಿಯರೂ ಸತ್ವ ಹಾಗೂ ಸಂಖ್ಯೆ ಈ ಎರಡು ದೃಷ್ಟಿಯಿಂದಲೂ ಹೆಮ್ಮೆಯ ಕೊಡುಗೆ ಕೊಟ್ಟಿದ್ದಾರೆ. ಅಂದಂದಿನ ಸಾಂದರ್ಭಿಕ ಆಶೋತ್ತರಗಳ, ಪ್ರಭಾವ–ಪರಿಣಾಮಗಳ ವಿಶಿಷ್ಟ ಸಾರ ವನ್ನು ಹೀರಿ ಅದನ್ನು ಈ ಸಾಹಿತ್ಯಪ್ರಕಾರಕ್ಕೆ ಅವರು ದಂಡಿಸಿಕೊಂಡ ರೀತಿ ಅದ್ಭುತವಾಗಿದೆ.

ಈ ಶತಮಾನದ ಆರಂಭಕ್ಕೆ 'ಸುವಾಸಿನಿ' ಎಂಬ ಪತ್ರಿಕೆಯಲ್ಲಿ ಪ್ರಕಟವಾದ ದಿವಂಗತ ಪಂಜೇ ಮಂಗೇಶರಾಯರ 'ನನ್ನ ಚಿಕ್ಕತಾಯಿ' ಎಂಬ ಕತೆಯೇ ಹೊಸ ಗನ್ನಡದ ಮೊದಲ ಕತೆಯಾಗಿದೆ. ಆದರೆ ಇವರ ಕತೆಗಳಲ್ಲಿ ಆಧುನಿಕ ಸಣ್ಣಕತೆಯ ಸ್ಪಷ್ಟರೂಪ ಮೂಡಿರಲಿಲ್ಲವಾದ್ದರಿಂದ ೧೯೨೦ ರಲ್ಲಿ ಪ್ರಕಟವಾದ ಮಾಸ್ತಿಯವರ 'ಕೆಲವು ಸಣ್ಣಕತೆಗಳು' ಎಂಬ ಕೃತಿಯೇ ಕನ್ನಡದ ಮೊದಲ ಸಣ್ಣ ಕಥಾಸಂಗ್ರಹ ವೆನಿಸಿತು. ಆದರೆ ಇವರ ಪ್ರಭಾವ ಹಳೆಯ ಮೈಸೂರಿನತ್ತ ಆಯಿತೇ ವಿನಃ ವಿಭಿನ್ನ ಸಂಸ್ಕೃತಿ–ಪರಿಸರಗಳಿಂದೊಡಗೂಡಿದ ಉತ್ತರ ಕರ್ನಾಟಕ ಇದರಿಂದ ಹೊರಗೇ ಉಳಿಯಿತು.

ಇಂಥ ಸಂದರ್ಭದಲ್ಲಿ ೧೯೩೨ರ ಸುಮಾರಿಗೆ ಸಾಹಿತ್ಯ ದಿಗ್ಗಜರಲ್ಲಿ ಒಬ್ಬರಾದ ಶ್ರೀ ಬೆಟಗೇರಿ ಕೃಷ್ಣಶರ್ಮರು 'ಬಡತನದ ಬಾಳು' ಎಂಬ ತಮ್ಮ ಕಥಾಸಂಕಲನದೊಂದಿಗೆ ಉತ್ತರ ಕರ್ನಾಟಕದಲ್ಲಿ ಈ ಸಾಹಿತ್ಯಪ್ರಕಾರಕ್ಕೆ ಶ್ರೀಕಾರ ಹಾಕಿದರು. ಇವರೇ ಮುಂದೆ 'ಸಂಸಾರಚಿತ್ರ', 'ನಮ್ಮ ಬದುಕು', 'ಮಾತನಾಡುವ ಕಲ್ಲು', 'ಜನಪದ ಜೀವನ', 'ಕಳ್ಳರಗುರು ಮತ್ತು ಇತರ ಕತೆಗಳು' ಎಂಬ ಈ ಆರು ಕಥಾಸಂಕಲನಗಳಲ್ಲಿ ನಾಲ್ವತ್ಮೂರು ಕತೆಗಳನ್ನು ರಚಿಸಿ ಈ ಕಡೆಗೆ ಒಂದು ಸ್ಪಷ್ಟ ಮಾರ್ಗವನ್ನು ನಿರ್ಮಿಸಿದರು. ಬಹುಶಃ ಪ್ರಗತಿಶೀಲ ಚಳುವಳಿ ಇನ್ನೂ ಕಣ್ಣು ಬಿಡುವುದಕ್ಕೆ ಮೊದಲೇ 'ಮಾಲ್ಕೀಪಕ್ಕು', 'ಜಾಡರ ಜಾಣಪ್ಪ' ಗಳಂತಹ ಕತೆಗಳನ್ನು ಬರೆದು ಪ್ರಕಟಿಸಿದ್ದು ಒಂದು ಗಮನಾರ್ಹವಾದ ಅಂಶ.

ಇವರ ಕತೆಗಳಲ್ಲೆಲ್ಲ ಉತ್ತರ ಕರ್ನಾಟಕದ ಶ್ರೀಮಂತ ಸಂಸ್ಕೃತಿ-ಸಂಪ್ರದಾಯ-ನಂಬಿಕೆಗಳು, ಅವುಗಳ ಆಚರಣೆಗಳು ಅತ್ಯಂತ ವಾಸ್ತವಚಿತ್ರಗಳಾಗಿ ಸಾಲುಗಟ್ಟಿ ನಿಲ್ಲುತ್ತವೆ. ಗ್ರಾಮಜೀವನದ ಬಗೆಗಿನ ಇವರ ಅನುಭವ, ಆ ಅನುಭವವನ್ನು ಅವರು ಕತೆಗಳಲ್ಲಿ ಹೊಸೆಯುವ ರೀತಿ ಅನನ್ಯವಾದುದು. "ಗ್ರಾಮೀಣ ಬದುಕಿನ ಸಮಸ್ಯೆಗಳ ಸಾಮಾಜಿಕ ಸ್ವರೂಪವನ್ನು ಗುರುತಿಸಿದ ಕನ್ನಡ ಕತೆಗಾರರಲ್ಲಿ ಇವರೇ ಮೊದಲಿಗರು." ಎಂಬ ಡಾ. ಗಿರಡ್ಡಿಯವರ ಮಾತು ನೂರಕ್ಕೆ ನೂರು ಸತ್ಯವೆನಿಸುತ್ತದೆ. (ಕನ್ನಡ ಕಥಾ ಸಂಕಲನ-ಪ್ರಸ್ತಾವನೆ, ಪುಟ-೧೦) ಇದರಿಂದ ನವೋದಯ ಕಾಲದ ಕನ್ನಡ ಕಥಾ ಸಾಹಿತ್ಯಕ್ಕೆ ಒಂದು ಗಟ್ಟಿಯಾದ ನೆಲೆಗಟ್ಟನ್ನು ರೂಢಿಸುವದಕ್ಕೆ ಇವರೇ ಕಾರಣರಾದರೆನ್ನಬಹುದು.

ಈ ಹಂತದಲ್ಲಿ ಇದೇ ತಲೆಮಾರಿನ ಇನ್ನಿಬ್ಬರು ಕತೆಗಾರರನ್ನು ನೋಡುವುದು ಹೆಚ್ಚು ಸೂಕ್ತವೆನಿಸುತ್ತದೆ. ಒಬ್ಬರು 'ಗಂಗೆಯಗುತ್ತಿಗೆ' ಹಾಗೂ 'ಛಪ್ಪರಬಂದ' ಕತೆಗಳನ್ನು ಬರೆದ ಟೇಂಗ್ಸೆ ಗೋವಿಂದರಾಯರು. ಇನ್ನೊಬ್ಬರು 'ನಿರಾಭರಣ ಸುಂದರಿ' ಸಂಕಲನದ ವರಕವಿ ಬೇಂದ್ರೆಯವರು. ಟೇಂಗ್ಸೆಯವರ 'ಛಪ್ಪರಬಂದ' ದಲಿತ ಕಾಡುಜನಾಂಗವೊಂದರ ಶೋಷಿತ ಬದುಕನ್ನು ಜೀವಂತವಾಗಿ ಚಿತ್ರಿಸುವ ಕತೆ. ಈ ಕತೆಯ ಕಾಳವ್ವ-ದುರಗಪ್ಪರನ್ನು ಮೇಲುವರ್ಗದ ಸಮಾಜ ಮತ್ತು ಕಾನೂನು ಒಟ್ಟೊಟ್ಟಿಗೇ ಕುಕ್ಕುವ ರೀತಿಯನ್ನು ಇಲ್ಲಿ ಕುತೂಹಲಕಾರಿಯಾಗಿ ಚಿತ್ರಿಸಲಾಗಿದೆ. ವರ್ಗಭೇದ, ವರ್ಣಭೇದ, ದಲಿತ ಬಂಡಾಯಗಳಂತಹ ಇವತ್ತಿನ ಯಾವ ಸೈದ್ಧಾಂತಿಕ ಪ್ರಜ್ಞೆಯಿಲ್ಲದೆ ಬಹಳ ಹಿಂದೆಯೇ ಬರೆದ ಈ ಕತೆ ವರ್ಗಭೇದ ನೀತಿಯನ್ನು ತುಂಬ ಯಶಸ್ವಿಯಾಗಿ ನಿರ್ವಹಿಸುತ್ತದೆ.

ಸಣ್ಣಕಥಾ ಸಾಹಿತ್ಯಕ್ಕೆ ಬೇಂದ್ರೆಯವರ ಕಾಣಿಕೆ ತೀರ ಅತ್ಯಲ್ಪವಾದುದರಿಂದ ಇವರ ಕಾವ್ಯದಲ್ಲಿ ಅಡಗಿದ ವಸ್ತುವೈವಿಧ್ಯತೆಯನ್ನು ಇಲ್ಲಿ ನಿರೀಕ್ಷಿಸುವದು ಸಮಂಜಸ

ವೆನಿಸಲಾರದು. ಆದರೆ ಅವರ ಕಾವ್ಯಮಾರ್ಗದಲ್ಲಿ ಹೆಜ್ಜೆ ಹೆಜ್ಜೆಗೂ ಎದುರಾಗುವ ಪ್ರಯೋಗಶೀಲ ಮನಸ್ಸಿನ ಬೇಂದ್ರೆಯವರನ್ನು ಹುಡುಕಹೊರಟವರಿಗೆ ಇಲ್ಲಿ ನಿರಾಸೆಯಾಗುತ್ತದೆ. ವಿಷಾದ, ಕರುಣ, ದುರಂತಛಾಯೆಗಳೇ ಇವರ ಬಹುತೇಕ ಕತೆಗಳ ಸ್ಥಾಯಿಯಾಗುವುದರಿಂದ ವಸ್ತುನಿಷ್ಠತೆಗಿಂತ ಭಾವನಾಪರವಶತೆಯೇ ಇಲ್ಲಿ ಪ್ರಧಾನವಾಗಿಬಿಡುತ್ತದೆ. ನಿದರ್ಶನಕ್ಕೆ ಘಾಲಾ ಫೂ – 'ಏಕಾಕಿನಿ', 'ಮಗುವಿನ ಕರೆ' ಕತೆಗಳನ್ನು ನೋಡಬಹುದು. "ಈ ಸಂಕಲನದ ಕತೆಗಳು ಗದ್ಯದಲ್ಲಿ ಬರೆದ ಭಾವಗೀತೆಗಳಾಗಿವೆ" ಎಂಬ ಡಾ. ಕುರ್ತಕೋಟಿಯವರ ಮಾತು ನನ್ನ ಅಭಿಪ್ರಾಯವನ್ನು ಬೆಂಬಲಿಸುತ್ತದೆ (ಯುಗಧರ್ಮ ಹಾಗೂ ಸಾಹಿತ್ಯದರ್ಶನ – ಪುಟ ೨೧೬).

ಹೀಗೆ ರೂಪುಗೊಳ್ಳುತ್ತ ಬಂದ ಈ ಸಾಹಿತ್ಯವಾಹಿನಿಯು ಸೆಳವು ಹೆಚ್ಚಿಸಲು ಕಾರಣರಾದವರೆಂದರೆ : ಡಾ. ವರದರಾಜ ಹುಯಿಲಗೋಳ (ಫಲಸಂಚಯ, 'ಚಂದ್ರತಾರೆ', 'ಬಾಗಿಲು ತೆರೆದಿತ್ತು', 'ದಯಾಸಾಗರ', 'ದೀಪವೊಂದು', 'ನಿನಗೊಂದು ಮಾತು'), ಶ್ರೀ ಮಾಧವ ನಾ. ಮುಹಿಷಿ ('ಹೊತ್ತುಗೊತ್ತಿಲ್ಲದ ಕತೆಗಳು', 'ವಿಷಗಳಿಗೆ ಮತ್ತು ಇತರ ಕತೆಗಳು'), ಶ್ರೀ ಪಾಟೀಲ ಪುಟ್ಟಪ್ಪ ('ಶಿಲಾಬಾಲಿಕೆ'), ಗೋ. ಮೆ. ಚುಳಕಿ ('ಬದಲಾವಣೆ'), ಡಾ. ರಾ. ಯ. ಧಾರವಾಡಕರ ('ತೆರೆಯ ಹಿಂದೆ', 'ಅಮೇರಿಕನ್ ನಿಗ್ರೋ ಕತೆಗಳು'), ಶ್ರೀ ಎಸ್. ಬಿ. ನರಗುಂದಕರ ('ಅಸಂಗತರು'), ಡಾ. ಎಸ್. ಪಿ. ಪಾಟೀಲ ('ಅತಿಥಿ ಅವಳೆ ಮತ್ತು ಇತರ ಕತೆಗಳು', 'ಧರ್ಮಾಮೃತದ ಕತೆಗಳು', 'ಹೆಣ್ಣು'), ಶ್ರೀ ಭೋಜರಾಜ ಪಾಟೀಲ ('ಋಣತೀರಿತು').

ಇವರಲ್ಲಿ ನವೋದಯ, ಪ್ರಗತಿಶೀಲ, ನವ್ಯ ಹೀಗೆ ಮೂರೂ ಘಟ್ಟಗಳಿಗೆ ಸಂಬಂಧಿಸಿದ ಸಾಮಗ್ರಿಯನ್ನು ಬಳಸಿಕೊಳ್ಳುವ ಸದವಕಾಶವನ್ನು ಹೊಂದಿದ್ದರೂ ಪ್ರಗತಿಶೀಲ, ನವ್ಯ, ಆವಿಷ್ಕಾರಗಳಿಗೆ ಬೆನ್ನು ತಿರುಗಿಸಿ ಬರೀ ನವೋದಯದ ಧಾಟಿಯಲ್ಲಿ ಬರೆದದ್ದನ್ನು ನೋಡಿದರೆ ಸೋಜಿಗವೆನಿಸುತ್ತದೆ. ಇವರ ಕೈಯಲ್ಲಿ ಉತ್ತಮ ವಸ್ತುವಿದ್ದೂ ಅದು ಅವರ ಅನುಭವದ ಭಾಗವಾಗಿ ಬರುವದಿಲ್ಲವಾದ್ದರಿಂದ ಗೆಲ್ಲಬೇಕಾದಲ್ಲಿಯೇ ಸೋಲುತ್ತಾರೆ. ಜನಸಾಮಾನ್ಯರಿಗೆ ಚೇತೋಹಾರಿ ಎನಿಸಬಲ್ಲ ಸರಳ ನಿರೂಪಣೆಯ ರಮ್ಯಕತೆಗಳನ್ನು ಹೆಣೆಯುವದರಲ್ಲೇ ಇವರಿಗೆ ಆಸಕ್ತಿ ಹೆಚ್ಚು. ಕೆಲವರು ಆಯಾಸವನ್ನು ಮಾಡಿಕೊಳ್ಳುವದಿಲ್ಲ. ಭೋಜರಾಜ ಪಾಟೀಲರಂಥವರು ಸಣ್ಣಕತೆಯ ಬರವಣಿಗೆಯನ್ನು ಅತ್ಯಂತ ಹಗುರವಾಗಿ ತಕ್ಕೊಂಡಿದ್ದಾರೆ. ಮರಾಠಿ ಸಾಹಿತ್ಯದಿಂದ ಆಯ್ದು ಕಥಾಸಂಕಲನಗಳನ್ನು ಅನುವಾದಿಸುವ ಡಾ. ಎಸ್. ಪಿ. ಪಾಟೀಲರು ಈ ವಿಷಯದಲ್ಲಿ ಇನ್ನೂ ಹೆಚ್ಚಿನ ಆಸ್ಥೆ, ಪರಿಶ್ರಮ, ನಿಷ್ಠೆಗಳನ್ನು ಬೆಳೆಸಿಕೊಳ್ಳುವ ಜರೂರಿ ಇದೆ. ಈ ಹಿಂದೆ ಹೆಸರಿಸಿದ ಮೂರು ಕಥಾಸಂಕಲನಗಳು

ಅವರ ಸ್ವತಂತ್ರ ಸಂಕಲನಗಳಲ್ಲವಾದ್ದರಿಂದ ಅವುಗಳನ್ನು ಇಲ್ಲಿ ಗಂಭೀರವಾಗಿ ಪರಿಗಣಿಸಲು ಮನಸ್ಸಾಗುವುದಿಲ್ಲ.

ಇಂಥ ಸನ್ನಿವೇಶದಲ್ಲಿ ವಿಶೇಷ ಗಮನ ಸೆಳೆಯಬಲ್ಲ ಮೂವರು ಕತೆಗಾರರೆಂದರೆ ಡಾ. ವರದರಾಜ ಹುಯಿಲಗೋಳ, ಡಾ. ರಾ. ಯ. ಧಾರವಾಡಕರ ಹಾಗೂ ಶ್ರೀ ಎಸ್. ಬಿ. ನರಗುಂದಕರ. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿಮಾಡಿದ ಹುಯಿಲಗೋಳರು ಸಣ್ಣಕಥಾ ಕ್ಷೇತ್ರದಲ್ಲೂ ತಮ್ಮನ್ನು ಸ್ಥಾಪಿಸಿಕೊಂಡಿದ್ದಾರೆ. ಇದು ಇವರ ಕ್ಷೇತ್ರವೂ ಹೌದು. ಬಡತನ, ಶೋಷಣೆ, ಪುರುಷರ ದೌರ್ಜನ್ಯ, ಜೀವದಯೆ ಹೀಗೆ ಸಾಮಾಜಿಕ ಅದರಲ್ಲೂ ವಿಶೇಷವಾಗಿ ಕೌಟುಂಬಿಕ ಸಮಸ್ಯೆಗಳನ್ನು ನಿಚ್ಚಳವಾಗಿ ಮುಂದಿಡುವ ಕಲೆ ಇವರಿಗೆ ಸಿದ್ಧಿಸಿದೆ. ಆದರೆ ದೂರದಲ್ಲೆಲ್ಲೋ, ವಸ್ತುವಿನಲ್ಲಿ ಆಳವಾಗಿ ಮುಳುಗದ ಒಂದು ವಿಧವಾದ ಮಡಿವಂತಿಕೆ ಇವರನ್ನು ಅಡ್ಡಗಟ್ಟುವುದ ರಿಂದ ಸಮಸ್ಯೆಗಳನ್ನು ಸಾಕ್ಷಾತ್ಕರಿಸಿಕೊಂಡೂ ಅವುಗಳನ್ನು ಪುನರ್ಮೌಲ್ಯೀಕರಣ ಮಾಡುವ ಸಂದರ್ಭದಲ್ಲಿ ವಿಮುಖರಾಗುತ್ತಾರೆ. ಇವರ ಇಂಥ ದೃಷ್ಟಿಗೆ ಫಲ ಸಂಚಯದ 'ಗೋಪಿ' ಕತೆಯನ್ನು ಉದಾಹರಿಸಬಹುದು.

ಧಾರವಾಡಕರರು 'ಅಮೇರಿಕನ್ ನಿಗ್ರೋ ಕಥೆಗಳು' ಎಂಬ ತಮ್ಮ ಸಂಕಲನಕ್ಕೆ ಬರೆದ ಪೀಠಿಕೆಯಲ್ಲಿ ಬಹಳ ಮಹತ್ವದ ಮಾತೊಂದನ್ನು ಹೇಳುತ್ತಾರೆ. ಅದೆಂದರೆ : "ಹಸಿದವನ ಕೂಗಿಗೂ ಉಂಡವ ಹಸಿದವರ ಬಗ್ಗೆ ಹಾಕುವ ಕೂಗಿಗೂ ಅಂತರವಿರು ತ್ತದೆ". ಈ ಮಾತನ್ನು ದಲಿತ, ಬಂಡಾಯದ ಮುಖವಾಡಗಳನ್ನು ಹಾಕಿಕೊಂಡು ಘೋಷಣೆಕೂಗುವವರು ಅರ್ಥೈಸಿಕೊಳ್ಳಬೇಕಾಗಿದೆ. ಬಿಳಿಯರು ಕರಿಯರನ್ನು ನಡೆಸಿಕೊಳ್ಳುವ ರೀತಿಗೂ ನಮ್ಮಲ್ಲಿ ಸವರ್ಣೀಯರು ದಲಿತರ ಮೇಲೆ ನಡೆಸುವ ದೌರ್ಜನ್ಯಕ್ಕೂ ತೀರ ಹತ್ತಿರದ ಸಂಬಂಧವಿರುವುದರಿಂದ 'ಅಮೇರಿಕನ್ ನಿಗ್ರೋ ಕತೆಗಳು' ಇನ್ನೊಂದು ಬದಿಯಲ್ಲಿ ಭಾರತೀಯ ದಲಿತರ ಕತೆಗಳಂತೆ ಅನಿಸುತ್ತವೆ. ಈ ಸಂಕಲನದ 'ಬೀಜದ ಹೋರಿ' ತುಂಬಾ ಯಶಸ್ವಿ ಕತೆ. ಇವರ 'ತೆರೆಯ ಹಿಂದೆ' ಕಥಾಸಂಕಲನಕ್ಕೆ ಬಾಗಲಕೋಟೆಯ ಬ್ರಾಹ್ಮಣ ಸಮಾಜದ ಶಿಷ್ಟಾಚಾರಗಳು, ಕದಾ ಚಾರಗಳು ವಸ್ತುವಾಗುತ್ತವೆ. ಇವರು ಏನೇ ಬರೆದರೂ ಅಲ್ಲಿ ವಿದ್ವತ್ತು–ವಿನೋದ– ವಿಡಂಬನೆಗಳ ಕಾರಂಜಿ ಪುಟಿಯುತ್ತಿರುತ್ತವೆ. ಸಂಸ್ಕೃತ, ಮರಾಠಿ, ಇಂಗ್ಲೀಷ, ಕನ್ನಡ ಮತ್ತಿತರ ಭಾಷೆಗಳ ದ್ರವ್ಯವನ್ನು ಅವಶ್ಯಕತೆಗೆ ತಕ್ಕಂತೆ, ತಕ್ಕಷ್ಟು ಬಳಸಬಲ್ಲ ಇವರು, ನಿರೂಪಣೆಯ ವಿಧಾನದಿಂದಲೇ ಎಲ್ಲದರಲ್ಲಿಯೂ ಗೆದ್ದುಬಿಡುತ್ತಾರೆ.

ಶ್ರೀ ಎಸ್. ಬಿ. ನರಗುಂದಕರ ಅವರು 'ವಿಲಿಯಂ ಸಾರಾಯನ್'ನ ಬರಹಗಳ ಮೇಲೆ ಆಧಾರಿತವಾದ 'ಅಸಂಬದ್ಧರು' ಸಂಕಲನವನ್ನು ಹೊರತಂದಿದ್ದು ಆಸಕ್ತಿ ಮೂಡಿಸುತ್ತಾರೆ. ವಸ್ತುವಿನ ದೃಷ್ಟಿಯಿಂದಲೂ ವಿಶಿಷ್ಟವೆನ್ನಿಸುವ ಇಲ್ಲಿಯ ಐದು

ಕತೆಗಳು ಸ್ವಭಾವದದೃಷ್ಟಿಯಿಂದ ಕನ್ನಡದ ಅಸಂಗತ ನಾಟಕಗಳಿಗೆ ಹೋಲುತ್ತವೆ. ಈ ದೃಷ್ಟಿಯಿಂದ 'ಅಸಂಬದ್ಧರು' ತುಂಬಾ ಔಚಿತ್ಯಪೂರ್ಣವಾದ ಹೆಸರು. ವಿನೋದ-ವಿಡಂಬನೆಗಳಲ್ಲಿ ಬಿಚ್ಚಿಕೊಳ್ಳುತ್ತ ಹೋಗುವುದರಿಂದ ಯಶಸ್ವಿ ಎನಿಸುತ್ತವೆ.

ನವೋದಯದ ಗುಂಗಿನಿಂದ ಸ್ವಲ್ಪಮಟ್ಟಿಗಾದರೂ ಬಿಡಿಸಿಕೊಂಡ ಈ ಮೂವರು ಲೇಖಕರು ವಿಶೇಷವೆನ್ನಿಸುತ್ತಾರೆ.

ಹೀಗೆ ರೂಪುಗೊಳ್ಳುತ್ತ ಬಂದು ೧೯೪೩ರಲ್ಲಿ ಪ್ರಗತಿಶೀಲ ಚಳುವಳಿಯು ಲಕ್ಷಣಗಳನ್ನು ಮೈಗೂಡಿಸಿಕೊಂಡು ಮತ್ತೊಂದು ಹೊಸ ಹೆಜ್ಜೆಯನ್ನು ಮೂಡಿಸಿತು. (ಇದರ ಬೇರುಗಳು ಇನ್ನೂ ಹಿಂದೆ ಇರುವುದನ್ನು ಗುರುತಿಸಿದ್ದಾರೆ. ಭಾರತೀಪ್ರಿಯರ ದಿ. ಎಸ್. ವೆಂಕಟರಾವರ 'ಮೋಚಿ', ಆನಂದಕಂದರ ಮಾಲ್ಕೀಹಕ್ಕು) ಇಲ್ಲಿಂದ ಮುಂದೆ ಬಹಳಷ್ಟು ತರುಣ ಬರಹಗಾರರು ಅನುಭವವನ್ನು ಕಡೆಗಣಿಸಿ ದೃಷ್ಟಿಕೋನ, ಮನೋಧರ್ಮಗಳನ್ನೇ ಪ್ರಧಾನವಾಗಿಟ್ಟುಕೊಂಡು ಬರೆಯಲು ಶುರು ಮಾಡಿದರು. "ನಮ್ಮ ಸಂಸ್ಕೃತಿಯ ಹಿಂದಿನ ಮೋಸ, ಶೋಷಣೆಗಳನ್ನು ಬಯಲಿಗೆಳೆಯಬೇಕೆಂದು ಪ್ರತಿಪಾದಿಸಿದರು. ಒಂದೇ ಮಾತಿನಲ್ಲಿ ಹೇಳುವದಾದರೆ ಲೇಖಕ ಸಾಮಾಜಿಕ ಕ್ರಾಂತಿಯ ಹರಿಕಾರನಾಗಬೇಕೆಂದು ಪ್ರಗತಿಶೀಲರು ಸಾರಿ ಹೇಳಿದರು" (ಡಾ. ಗಿರಡ್ಡಿ ಗೋವಿಂದರಾಜ ಕನ್ನಡ ಕಥಾಸಂಕಲನ, ಪ್ರಸ್ತಾವನೆ – ಪುಟ ೧೫) ಈ ಚಳುವಳಿಗೆ ಒಂದು ತೀವ್ರತೆ ಬಂದದ್ದೇ ಈ ಸಣ್ಣಕಥಾ ಸಾಹಿತ್ಯದಿಂದ. ಈ ಚಳುವಳಿಯ ನೇತೃತ್ವವಹಿಸಿದವರು ಅ. ನ. ಕೃ. ಆದರೂ ಆ ಧೋರಣೆಯನ್ನು ಪರಿಣಾಮಕಾರಿಯಾಗಿ ಬರವಣಿಗೆಯಲ್ಲಿ ಅಳವಡಿಸಿಕೊಂಡವರು ಬಸವರಾಜ ಕಟ್ಟೀಮನಿಯವರೆಂಬುದು ಹೆಮ್ಮೆಯ ವಿಷಯ. ಅವರ 'ಕಾರವಾನ್' ಹಾಗೂ 'ಜೀವನಕಲೆ'ಗಳಂತಹ ಸಂಗ್ರಹಗಳಲ್ಲಿ ವ್ಯಕ್ತವಾದ ಸಾಮಾಜಿಕ ಕಳಕಳಿ ಮತ್ತು ಅನ್ಯಾಯ, ಶೋಷಣೆ, ಭ್ರಷ್ಟತೆಗಳ ಬಗೆಗಿನ ಆಕ್ರೋಶ ಅವರ ಜವಣೆಯ ಬದುಕಿನ ಪ್ರತಿಬಿಂಬಗಳಂತಿವೆ. ಅವರ ಬರವಣಿಗೆಯ ಹಿಂದೆ ಯಾವಾಗಲೂ ಸುಪ್ತವಾಗಿ ನಿಗಿನಿಗಿಸುತ್ತಿರುವ ಇಂಥ ತಳಮಳವನ್ನು ಗುರುತಿಸಬಹುದಾಗಿದೆ. ಸಮಸ್ಯೆಗಳನ್ನು ಮುಂದಿಡುವ ಇವರ ಕಳಕಳಿಯನ್ನು ಮೆಚ್ಚಬಹುದಾದರೂ ಅಂಥ ಸಮಸ್ಯೆಗಳ ಬೇರು ಕತ್ತರಿಸುವ ಉಪಾಯಗಳನ್ನು ಇವರು ಸೂಚಿಸುವುದಿಲ್ಲ. 'ಗಿರಿಜಾ ಕಂಡ ಸಿನಿಮಾ', 'ಜೀವನ ಕಲೆ'ಯಂಥಾ ಕತೆಗಳು ನಿದರ್ಶನವಾಗಬಲ್ಲವು. ಮುಂದೆ ಅನೇಕರು ಈ ಧೋರಣೆಗೆ ಬದ್ಧರಾಗಿ ಬರೆದರಾದರೂ ಕಟ್ಟೀಮನಿಯವರ ಸ್ಫುಟತೆ ಅಲ್ಲಿ ಕಾಣುವದಿಲ್ಲ.

ಹೀಗೆ ಹರಹನ್ನು ಹೆಚ್ಚಿಸಿಕೊಳ್ಳುತ್ತ ಸ್ವಲ್ಪಮಟ್ಟಿಗೆ ಪಾತ್ರವನ್ನು ಬದಲಿಸುತ್ತ ಮುನ್ನಡೆದ ಈ 'ವಾಹಿನಿ' ತನ್ನ ಆಳವನ್ನು ಹೆಚ್ಚಿಸಿಕೊಂಡದ್ದು ಐವತ್ತರ ದಶಕದಲ್ಲಿ.

ಸ್ವಾತಂತ್ರ್ಯಾನಂತರದ ಭಾರತದಲ್ಲಿ ಕಾಣಿಸಿಕೊಂಡ ಹತಾಶೆ, ಮೌಲ್ಯಗಳ ಕುಸಿತ ದಿಂದಾಗಿ ಹೊಸ ಆಶೋತ್ತರಗಳು ಮೂಡಿ 'ನವ್ಯ'ವೆಂಬ ಮತ್ತೊಂದು ಹೊಸಹೆಜ್ಜೆ ಮೊದಲು ಕಾವ್ಯದಲ್ಲಿ, ನಂತರ ಸಣ್ಣಕತೆಯಲ್ಲಿ ಕಾಣಿಸಿಕೊಂಡಿತು. ಬಿ. ಸಿ. ರಾಮ ಚಂದ್ರಶರ್ಮರು (ಸೆರಗಿನ ಕೆಂಡ) ಈ ಪ್ರಯೋಗದ ಮೊದಲಿಗರಾದರು. ನಿರ್ದಿಷ್ಟ ವಾಗಿ ಹೇಳಬೇಕೆಂದರೆ : ಅರವತ್ತರ ದಶಕ ಕನ್ನಡದ ನವ್ಯಕತೆಯ ವೈಭವದಕಾಲ. ಇಲ್ಲಿಂದ ಮುಂದೆ ಶೈಲಿ, ವಸ್ತು, ತಂತ್ರ, ಭಾಷೆಯ ದೃಷ್ಟಿಯಿಂದಲೂ ವಿನೂತನ ವಾದ ಪ್ರಯೋಗ ಆರಂಭವಾಯಿತು.

ಉತ್ತರ ಕರ್ನಾಟಕದಲ್ಲಿ ಶಾಂತಿನಾಥ ದೇಸಾಯಿಯರಿಗೆ ಈ ಪ್ರಯೋಗ ಪೂರ್ಣ ಪ್ರಮಾಣದಲ್ಲಿ ಸಿದ್ಧಿಸಿತು. 'ಮಂಜುಗಡ್ಡೆ', 'ಕ್ಷಿತಿಜ', 'ದಂಡೆ', 'ರಾಕ್ಷಸ'ಗಳೆಂಬ ಸಂಗ್ರಹಗಳೇ ಇದಕ್ಕೆ ಸಾಕ್ಷಿ. 'ಕ್ಷಿತಿಜ' ಎಂಬ ಕತೆ ಕನ್ನಡದ ಶ್ರೇಷ್ಠ ಕತೆಗಳಲ್ಲಿ ಒಂದೆಂದು ಪರಿಗಣಿತವಾಗಿದೆ. ಕತೆಗಳಲ್ಲಿನ ಯಾವುದೇ ಪಾತ್ರಗಳ ಅನುಭವಗಳಿಗೂ ಇವರು ನಿರಾಯಾಸವಾಗಿ ಮೈಮನಸ್ಸುಗಳನ್ನು ಮೂಡಿಸಬಲ್ಲರು. ಹೆಣ್ಣು-ಗಂಡಿನ ಸಂಬಂಧ, ಅವರ ಮಾನಸಿಕ ತೊಳಲಾಟ, ಒಳಗೆ ಚಿಗುರಿದ ಆಸೆಗಳು ಹೊರಗೆ ಮೈ ಚಾಚದಿರುವ ಆಂತರಿಕ ಆತಂಕ ಇವೆಲ್ಲ ಅವರ ಕತೆಗಳಲ್ಲಿ ಅಣುರಣಿತವಾಗುವ ಸಂಗತಿಗಳು. "ಶ್ರೀ ಸಿದ್ಧಲಿಂಗ ಪಟ್ಟಣಶೆಟ್ಟಿಯವರು ಗುರುತಿಸಿದ ಹಾಗೆ ಶಾಂತಿ ನಾಥರು ಪಂಡಿತಿಕೆಯ ಬಲಿಗೆ ಬೀಳದೆಯೇ ಅನೇಕ ಅನುಭವಗಳಿಗೆ ಮುಕ್ತವಾಗಿ ಮೈಮನಸ್ಸು ತೆರೆದವರು".

ಹೀಗೆಯೇ ಆಯ್ದುಕೊಂಡ ವಸ್ತುವನ್ನು ಅತ್ಯಂತ ಎಚ್ಚರಿಕೆಯಿಂದ ನಿರ್ವಹಿಸ ಬಲ್ಲವರೆಂದರೆ, ಗಿರಡ್ಡಿ ಗೋವಿಂದರಾಜ ಮತ್ತು ಸಿದ್ಧಲಿಂಗ ಪಟ್ಟಣಶೆಟ್ಟಿಯವರು. ಇವರಿಬ್ಬರ ಕತೆಗಳಲ್ಲಿ ಅಡಕವಾಗಿರುವ ವಸ್ತುವಿನಲ್ಲಿ ಭಿನ್ನತೆಯಿದ್ದರೂ ವಿಮರ್ಶನ ದೃಷ್ಟಿಯುಳ್ಳ ಇವರುಗಳು ಆ ವಸ್ತುವಿನ ಕಸುವನ್ನು ಹುಸಿಹೋಗದಂತೆ ಬಳಸಿ ಕೊಳ್ಳುತ್ತಾರೆ. ಸೀಮಿತ ಉದ್ದೇಶದ ಕತೆಗಳಿಗೆ ಲವಲವಿಕೆ ತುಂಬುತ್ತ, ಒಂದು ಸಾಮಾಜಿಕ ವಿಸ್ತೃತ ನೆಲೆಗಟ್ಟನ್ನು ರೂಪಿಸುತ್ತಾರೆ. ಉದಾಹರಣೆಗೆ ಗಿರಡ್ಡಿಯವರ 'ಹುಲಿ' ಮತ್ತು 'ಮಣ್ಣು' ಕತೆಗಳನ್ನೂ, ಪಟ್ಟಣಶೆಟ್ಟಿಯವರ 'ಮಾವ' ಕತೆ ಯನ್ನು ಗಮನಿಸಬಹುದು. ಈ ಕತೆಗಳಲ್ಲಿ ಬರುವ ವಿರೋಧಾತ್ಮಕ ಸಂಘರ್ಷ ಗಳು ಭಾರತೀಯ ಜನಾಂಗದಲ್ಲಿ ಸಾರ್ವತ್ರಿಕ ಹಾಗೂ ಮಾನವ ಸಹಜ.

ಹೊಸತಲೆಮಾರಿನ ಈ ಮೂವರು ಲೇಖಕರಲ್ಲಿ ಕಾಣುವ ಕೊರತೆಯೆಂದರೆ ಇವರು ಇನ್ನೂ ಹೆಚ್ಚು ಕತೆಗಳನ್ನು ಬರೆಯದಿರುವುದು.

ಹೀಗೆ ಪುರುಷರಂತೆ ಮಹಿಳೆಯರೂ ಸಣ್ಣಕತೆಗಳ ರಚನೆಯಲ್ಲಿ ಹಿಂದೆ ಬಿದ್ದಿಲ್ಲ. ಶಾಮಲಾ ಬೆಳಗಾಂವಕರ ('ಹೂಬಿಸಿಲು', 'ಹೊಂಬಿಸಿಲು'), ಶಾಂತಾದೇವಿ ಮಾಳವಾಡ ('ಮೊಗ್ಗೆಯ ಮಾಲೆ', 'ಕುಂಕುಮ ಬಲ'), ಗೀತಾ ಕುಲಕರ್ಣಿ ('ಪ್ರಶ್ನೆಗೆ ಉತ್ತರ', 'ಮೌನ ಸಂಧಾನ', 'ತೇಲಿಹೋದ ಮೋಡ', 'ಸುವರ್ಣೆಯ ಗ್ರೀನರೂಂ', 'ಚಿಪ್ಪಿನೊಳಗಿದ್ದ ಮುತ್ತು', 'ಪಾತಾಳ' – ಇವು ದೊಡ್ಡವರ ಕತೆಗಳು. 'ಹಾರುವ ಕಂಬಳಿ', 'ಅರವತ್ನಾಲ್ಕು ವಿದ್ಯೆ'; 'ತುಳು ಜಾನಪದ ಕತೆಗಳು', 'ಇನ್ನಷ್ಟು ತುಳು ಜಾನಪದ ಕತೆಗಳು' ಇವು ಮಕ್ಕಳ ಕತೆಗಳು). ಶಾಂತಾದೇವಿ ಕಣವಿ ('ಸಂಜೆ ಮಲ್ಲಿಗೆ', 'ಬಯಲು-ಆಲಯ', 'ಮರುವಿಚಾರ', 'ಜಾತ್ರೆಮುಗಿದಿತ್ತು') ಇವರೆಲ್ಲ ನವೋದಯದ ದಾಟಿಯಲ್ಲೇ ಬರೆದರು. ಇವರ್ಯಾರೂ ಸ್ಥಾಪಿತ ಮೌಲ್ಯಗಳನ್ನು ಮುಖಾಮುಖಿಯಾಗಿ ಪ್ರಶ್ನಿಸುವುದಿಲ್ಲ. ವೈವಾಹಿಕ ಜೀವನದ ಸಮಸ್ಯೆಗಳು, ಮಾತೃವಾತ್ಸಲ್ಯ, ಸೋದರ ಪ್ರೇಮ, ಅಂತರ್ಜಾತಿವಿವಾಹಗಳಂಥಾ ಸಾಂಸಾರಿಕ ಚಿತ್ರಗಳಿಗೇ ಇವರ ಕತೆಗಳು ಒತ್ತುಕೊಡುತ್ತವೆ. ಇವರಲ್ಲಿ ಶಾಮಲಾ ಬೆಳಗಾಂವಕರ ಮತ್ತು ಗೀತಾ ಕುಲಕರ್ಣಿಯವರು ಹೆಚ್ಚು ಪ್ರಗತಿಪರರೆನಿಸುತ್ತಾರೆ. ಉತ್ತರ ಕರ್ನಾಟಕದ ಲೇಖಕಿಯರಲ್ಲೇ ಮೊದಲಿಗರೆನಿಸಿದ ಅಲ್ಪಾಯಿ ಶಾಮಲಾ ಅವರು ಸಣ್ಣಕಥಾ ಪ್ರಪಂಚಕ್ಕೆ ಕೊಟ್ಟ ಕೊಡುಗೆಯ ಪ್ರಮಾಣ ಕಡಿಮೆಯಾದರೂ ಉಲ್ಲೇಖನೀಯವಾಗಿದೆ. 'ಹೂಬಿಸಿಲು' 'ಹೊಂಬಿಸಿಲು' ಸಂಕಲನಗಳು ಹೆಸರಿನಷ್ಟೇ ಸೊಗಸಾಗಿವೆ. ಇಲ್ಲಿಯ ವಸ್ತುವೈವಿಧ್ಯ, ಅನುಭವದ ಸಾಂದ್ರತೆ, ನಿರ್ಭಿಡೆಯ ಪಾತ್ರ ಚಿತ್ರಣ ನಿರ್ಲಕ್ಷಿತ ವಸ್ತುವನ್ನೂ ಗಟ್ಟಿಯಾದ ಕತೆಯನ್ನಾಗಿಸುವ ಕಥನಕೌಶಲ ದಂಗು ಬಡಿಸುತ್ತವೆ. ಅವರು ಈಗ ಇದ್ದಿದ್ದರೆ ಉತ್ತರಕರ್ನಾಟಕದ ಲೇಖಕಿಯರಲ್ಲೇ ಅತ್ಯಂತ ಹಿರಿಯಸ್ಥಾನದಲ್ಲಿರುತ್ತಿದ್ದರೇನೋ !

ಶ್ರೀಮಂತಿ ಗೀತಾ ಅವರಿಗೆ ಕತೆ ಬಹಳ ಪ್ರಿಯವಾದ ಪ್ರಕಾರ. ವಸ್ತುವಿನ ಆಯ್ಕೆ ಕೂಡಾ ಇವರಿಗೆ ಉಸಿರಾಡಿದಷ್ಟು ಹಗುರ. ದೊಡ್ಡವರ ಕತೆಗಳಿಗಿಂತ 'ಹಾರುವ ಕಂಬಳಿಯಂಥಾ' ಜಾನಪದ ಜಗತ್ತಿನ ಮಕ್ಕಳ ಕತೆಗಳು ನಿಜಕ್ಕೂ ಅಪೇಕ್ಷಣೀಯ. ಮಕ್ಕಳ ಮನೋಧರ್ಮವನ್ನು ಅನುಲಕ್ಷಿಸಿ ಚುಟುಕಾದ ಭಾಷೆಯಲ್ಲಿ ರೋಚಕವಾಗಿ ಬರೆದ ಇವರ ಕತೆಗಳು ಮಕ್ಕಳ ದೃಷ್ಟಿಯಿಂದ ಪ್ರಯೋಜನಕಾರಿ.

ಈ ಮುಂಚಿನ ಜಿಡ್ಡುಗಟ್ಟಿದಂತಾಗಿದ್ದ ಸಾಂಪ್ರದಾಯಿಕ ಶೈಲಿಯನ್ನು ಧಿಕ್ಕರಿಸಿ ಬರೆದ ಈ ಜಿಲ್ಲೆಯ ಮೂವರು ಲೇಖಕಿಯರೆಂದರೆ ವೀಣಾ ಶಾಂತೇಶ್ವರ, ಮಾಲತಿ ಪಟ್ಟಣಶೆಟ್ಟಿ ಹಾಗೂ ಹೇಮಾ ಪಟ್ಟಣಶೆಟ್ಟಿಯವರು. 'ಮುಳ್ಳುಗಳು' ಕಥಾಸಂಕಲನದೊಂದಿಗೆ ಈ ಕ್ಷೇತ್ರವನ್ನು ನಿರ್ಭೀತಿಯಿಂದ ಪ್ರವೇಶಿಸಿದ ವೀಣಾ ಅವರು ಬರವಣಿಗೆಗೆ ತೊಡಗಿದ್ದು ಇನ್ನೂ ಶಾಲಾಬಾಲಕಿಯಾಗಿದ್ದಾಗಲೇ, ಒಂದೂವರೆ

ದಶಕಗಳಷ್ಟು ಕಾಲ ಬರೆದ ಒಂದು ಹಂತದವರೆಗಿನ (ಮೊದಲ ಘಟ್ಟದ) ಇವರ ಕಥಾನಾಯಕಿಯರು ಅವರೇ ಒಂದೆಡೆ ಹೇಳಿದ ಹಾಗೆ ಬಂಡಾಯಗಾರ್ತಿಯರು. ಗಂಡಸರನ್ನು ಪ್ರೀತಿಸಿದರೂ ಆತನ ಅನ್ಯಾಯಗಳಿಗೆ ಸಿಡಿದೇಳುವ ಎದೆಗಾರಿಕೆಯುಳ್ಳವರು, ಯಾವಕಾರಣಕ್ಕೂ ಸ್ತ್ರೀತ್ವದ ಅಪಮಾನವನ್ನು ಸಹಿಸದವರು. ದಾಂಪತ್ಯ ಪ್ರೇಮ, ಕಾಮ, ಸ್ನೇಹಗಳ ವಿಚಾರದಲ್ಲಿ ತಮಗೆ ಸರಿಕಂಡ ದಾರಿಯನ್ನು ನಿರ್ಭಯವಾಗಿ ಅನುಸರಿಸಬಲ್ಲವರು. ಉದಾಹರಣೆಗೆ 'ಕವಲ' ಕತೆಯ ನಾಯಕಿ – ತಾನು ಮೆಚ್ಚಿದ ಗಂಡಸು ಒಳಗೊಳಗೇ ಸ್ವಾರ್ಥಿ ಹಿಪಾಕ್ರೀಟ್‌ನೆಂದು ಗೊತ್ತಾದಾಗ ತನ್ನ ಜೀವನದ ಉತ್ತರಾರ್ಧದಲ್ಲೂ ನಿರ್ದಯವಾಗಿ ಅವನನ್ನು ತೊರೆದು ದೂರವಾದವಳು. 'ಹೀಗೊಂದು ಕಥೆ'ಯ ನಾಯಕಿ ಇದೇ ದಾರಿಯಲ್ಲಿ ಸಾಗಿದವಳು. 'ಕೊನೆಯ ದಾರಿ' ಕತೆಯ ನಾಯಕಿ ಗಂಡ ಬೇಡ ಮಗು ಬೇಕು ಎನ್ನುವ ಮನೋಭಾವದವಳು. ಹೀಗೆ ಒಟ್ಟಾರೆ ಈ ವರೆಗಿನ ಕತೆಗಳಲ್ಲಿ ಕಂಡುಬರುವ ಒಂದು ಸಾಮಾನ್ಯ ಅಂಶವೆಂದರೆ ಪುರುಷರ ಘಾತಕ ಸ್ವಭಾವ ಬಯಲಾದಾಗ ಅವರನ್ನು ಎಗ್ಗಿಲ್ಲದೆ ನಿರಾಕರಿಸುವದು. ಆದರೆ ಅವರ ಬರವಣಿಗೆಗೆ ಈ ಸಿದ್ಧಮನಸ್ಸಿನ ನಿಲುವು ಒಂದು ಮಿತಿಯಾಗಿ ಪರಿಣಮಿಸುವ ಅಪಾಯವಿದೆ. ಬಹುಶಃ ೧೯೭೫ರಿಂದ ಈಚೆ ಬರೆದ ಎರಡನೇ ಘಟ್ಟದ ಕತೆಗಳು ಈ 'ಮಿತಿ'ಯನ್ನು ಮೀರಿ ಬೆಳೆಯುವದರಿಂದ ವೀಣಾ ಅವರಿಗೆ ವಾಸ್ತವವನ್ನು ಪೂರ್ವಗ್ರಹಿಕೆಯಿಲ್ಲದೆ ನಿಚ್ಚಳವಾಗಿ ನೋಡುವ ಪ್ರಬುದ್ಧತೆ ಪ್ರಾಪ್ತವಾಗಿದೆ ಎನಿಸುತ್ತದೆ. ಅವರ 'ತಿರುಗಿ ಹೋದಳು' ಕತೆ ಇದನ್ನು ಸಾಬೀತು ಪಡಿಸುತ್ತದೆ.

ವೀಣಾ ಅವರ ಹಾಗೆಯೇ ಮುಕ್ತವಾಗಿ ಬರವಣಿಗೆಯಲ್ಲಿ ತೊಡಗಿದ ಮತ್ತೊಬ್ಬ ಕತೆಗಾರ್ತಿ ಶ್ರೀಮತಿ ಹೇಮಾ ಅವರು. 'ಮುಸುಕಿದೀ ಮಬ್ಬಿನಲಿ' ಎಂಬ ಒಂದೇ ಕಥಾ ಸಂಕಲನದಿಂದ ಸಾಹಿತ್ಯಾಸಕ್ತರ ಸಾಕಷ್ಟು ಗಮನಸೆಳೆದ ಇವರ ಈ ಸಂಕಲನದ ಅಪ್ರಭಾಷೆಯೇ ಹಿಡಿದಿಡುವ ಗುಣದಿಂದ ಕೂಡಿದೆ. ಹದಿವಯದಲ್ಲೇ ಹದಿವಯದ ಹೆಣ್ಣುಗಳ ಕಾಮ-ಪ್ರೇಮಗಳ ಸರಹದ್ದಿನಲ್ಲಿ, ಮುಸುಕಿದ ಮಬ್ಬಿನ ಹಾದಕತೆಯಲ್ಲಿ ಪಡೆದ ಅನುಭವಗಳ ನಿಜರೂಪವನ್ನು ಈ ಕತೆಗಳಲ್ಲಿ ಅವರು ಮುಂದಿಡುತ್ತಾರೆ. ವಿದ್ಯಾರ್ಥಿನಿಯರ ವಸತಿಗೃಹದ ಮಾಯಾಬಜಾರವಂತೂ ಆ ಮುಸುಕಿದ ಮಬ್ಬಿನಲ್ಲೂ ನಿಚ್ಚಳವಾಗಿ ಕಾಣುತ್ತದೆ. ಇವರ ಮೇಲೆ ತ್ರಿವೇಣಿ ಹಾಗೂ ವೀಣಾ ಅವರ ಪ್ರಭಾವ ಇದೆ ಎಂಬ ಸಂಗತಿಯನ್ನು ಒಪ್ಪುವದು ಕಷ್ಟ.

'ಇಂದು-ನಿನ್ನಿನ ಕಥೆಗಳು' ಸಂಕಲನ ಮಾಲತಿ ಪಟ್ಟಣಶೆಟ್ಟಿಯವರು ಹೆಣ್ಣನ್ನು ಕೇಂದ್ರವಾಗಿಟ್ಟುಕೊಂಡು ಬರೆಯುವ ದೃಷ್ಟಿಯಿಂದ ಮುಂಚಿನ ಇಬ್ಬರು ಲೇಖಕಿಯರನ್ನು ಹೋಲುತ್ತಾರಾದರೂ ಇವರು ಹೆಣ್ಣನ್ನು ನೋಡುವ ದೃಷ್ಟಿ ಸಹಾನುಭೂತಿ

ಪರವಾದದ್ದು. ಸಂದರ್ಭದ ವಿರುದ್ಧ ತಿರುಗಿನಿಲ್ಲುವ ದಿಟ್ಟತನ, ಮನಸ್ಸು ಎರಡೂ ಇಲ್ಲಿಯ ಪಾತ್ರಗಳಿಗಿಲ್ಲ. ನೋವು ನುಂಗುವ, ಸಹನೆಯ ಪಾತಳಿಗುಂಟ ಸಾಗುವ ಇಲ್ಲಿಯ ಸ್ತ್ರೀಪುರುಷ ಪಾತ್ರಗಳು ಎಲ್. ಎಸ್. ಶೇಷಗಿರಿರಾಯರು ಗುರುತಿಸಿದ ಹಾಗೆ ಪರಸ್ಪರ ಪರಿಶುದ್ಧವಾದ ನಿರ್ವ್ಯಾಜ ಪ್ರೀತಿಯನ್ನು ಹಂಬಲಿಸಿ ಹಾತೊರೆಯುತ್ತವೆ. ಇವರ ಭಾಷೆಗೆ ಇನ್ನೂ ಹೆಚ್ಚಿನ ತೀಕ್ಷ್ಣತೆ ಬೇಕು ಅನಿಸುತ್ತದೆ.

ಈ ರೀತಿ ಧಾರವಾಡ ಜಿಲ್ಲೆಯೊಂದರಲ್ಲೇ ಕನ್ನಡ ಸಣ್ಣಕಥಾ ಪ್ರಪಂಚಕ್ಕೆ ಕಾಣಿಕೆ ಸಲ್ಲಿಸಲು ಸಮರ್ಥರಾದವರ ಸಂಖ್ಯೆ, ವೈವಿಧ್ಯತೆ ಇಷ್ಟಿರುವಾಗ ಇನ್ನೂ ವ್ಯಾಪಕವಾದ ನಿಟ್ಟಿನ ಈ ಸಾಹಿತ್ಯದ ನಾಡಿಯನ್ನು ಪರೀಕ್ಷಿಸುವುದು ತುಂಬಾ ದುಸ್ತರ ಕೆಲಸ ಎಂಬ ಭಾವನೆ ಬರದಿರದು.

● ●

ಬಸವಕಲ್ಯಾಣದಲ್ಲಿ ದೊರೆತ ಶೈವಶಿಲ್ಪಗಳು : ಒಂದು ಅಧ್ಯಯನ

● ರು. ಮ. ಷಡಕ್ಷರಯ್ಯ

ಬೀದರ ಜಿಲ್ಲೆಯ ಈಗಿನ ಬಸವಕಲ್ಯಾಣ ಮಧ್ಯಕಾಲೀನದಲ್ಲಿ ಕಲ್ಯಾಣಪುರ, ಕಲ್ಯಾಣ, ಬಸವ ಕಲ್ಯಾಣ ಎಂದು ಕರೆಸಿಕೊಂಡಿದೆ. ಪಶ್ಚಿಮ ಚಾಲುಕ್ಯರ ರಾಜಧಾನಿಯಾಗಿ ಸುಮಾರು ಒಂದೂವರೆ ಶತಮಾನ ಕಲ್ಯಾಣಪುರವೆಂಬ ಹೆಸರಿನಿಂದ ರಾಜಕೀಯವಾಗಿ ಹಾಗೂ ಸಾಂಸ್ಕೃತಿಕವಾಗಿ ವೈಭವದಿಂದ ಮೆರೆಯಿತು. ನಂತರ ಕೇವಲ ಕೆಲವು ದಶಕಗಳವರೆಗೆ ಕಳಚುರಿಯರಿಗೆ ಅದು ರಾಜಧಾನಿಯಾಗಿ ಮುಂದುವರಿಯಿತು. ಈ ಕಾಲದಲ್ಲಿ ಅದು ಶಿವಶರಣರ ಮಹತ್ವದ ಬೀಡಾಯಿತು. ಶಿವಶರಣರಿಂದ ಸಾಮಾಜಿಕ, ಧಾರ್ಮಿಕ ಕ್ರಾಂತಿ ಕಲ್ಯಾಣದಿಂದಲೇ ಉದಯವಾಯಿತು. ಅನಂತರ ನೆರೆಯ ದೇವಗಿರಿಯ ಯಾದವರ ಮತ್ತು ವಾರಂಗಲ್ಲಿನ ಕಾಕತೀಯರ ಆಳ್ವಿಕೆಯ ಕಾಲದಲ್ಲಿ ತನ್ನ ರಾಜಕೀಯ ಸ್ಥಾನಮಾನಗಳನ್ನು ಸಂಪೂರ್ಣವಾಗಿ ಕಳೆದುಕೊಂಡಿತು. ಮುಂದೆ ಬೆಳಕಿಗೆಬಂದ ಮುಸ್ಲಿಮರ ಆಳ್ವಿಕೆಯ ಕಾಲದಲ್ಲಿ ಅದು 'ಖಸಬಾ ಕಲ್ಯಾಣ'ವೆಂದು ಕರೆಯಿಸಿಕೊಂಡಿತು.

ಕಲ್ಯಾಣ ಚಾಲುಕ್ಯರು ಕಲ್ಯಾಣವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡ ನಂತರ ಪ್ರಥಮ ಕೆಲವು ದಶಕಗಳಲ್ಲಿ ಹೆಚ್ಚಾಗಿ ಅವರು ಯುದ್ಧಗಳನ್ನು ಮಾಡುವುದರಲ್ಲಿಯೇ ಕಾಲಹರಣ ಮಾಡಿದರು. ಸೋಲು-ಗೆಲುವು, ಸಾವು-ನೋವಿನ ವಾತಾವರಣ ಆಗಾಗ್ಗೆ ತಾಂಡವವಾಡುತ್ತಿರಲು ಸಾಕು. ಈ ಮನೆತನದ ೬ನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಅದು ಸುಮಾರು ಅರ್ಧಶತಮಾನ ವೈಭವದಿಂದ ಮೆರೆಯಿತು. ಈ ಮನೆತನದ ಹಲವಾರು ಅರಸರು ವಿವಿಧ ಧರ್ಮಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡಿದರು. ಶೈವ, ವೈಷ್ಣವ, ಜೈನ ಧರ್ಮಗಳ ಬೆಳವಣಿಗೆಗೆ ಅವರು ನೀಡಿದ ಪ್ರೋತ್ಸಾಹ ಅಪಾರ. ಈ ಎಲ್ಲ ಧರ್ಮಗಳ ದೇವಾಲಯ - ಶಿಲ್ಪಗಳು ಗಮನಾರ್ಹ ಸಂಖ್ಯೆಯಲ್ಲಿ ನಮಗೆ ಕಂಡುಬಂದಿವೆ. ಪ್ರತಿಯೊಂದು ಧರ್ಮದ ಶಿಲ್ಪಗಳು ವೈವಿಧ್ಯಮಯವಾಗಿವೆ, ಸ್ವಾರಸ್ಯಕರವಾಗಿವೆ. ಕಲ್ಯಾಣಕ್ಕೆ ಆ ಕಾಲದಲ್ಲಿ ದೇಶದ ವಿವಿಧೆಡೆಯಿಂದ ವಿವಿಧ ಕಾರ್ಯಕ್ಕೆ ಹಲವಾರು ಜನರು ಆಗಮಿಸಿದ್ದುಂಟು. ಅದು ಅವರಿಗೆ ಆಶ್ರಯವನ್ನೂ ನೀಡಿದೆ. ಹೀಗೆ ಬಂದು ಹೋಗುವ ಜನ

ಆ ಕಾಲದಲ್ಲಿ ಹೆಚ್ಚಾಗಿತ್ತು. ಇದರಿಂದ ರಾಜಧಾನಿಯಾದ ಕಲ್ಯಾಣಪುರವು ಸಾಕಷ್ಟು ಬೆಳೆಯಿತು. ಅವರು ನೆಲೆಸಿದ ಕುರುಹುಗಳು ಇಂದು ಕಣ್ಮರೆಯಾಗಿರಬಹುದು. ಆದರೆ ಅವರು ಬಳಸಿದ ಹಲವಾರು ವಸ್ತು-ಸಾಮಗ್ರಿಗಳು ಹಾಳಾದ ಅಲ್ಲಿಯ ಜನವಸತಿಯಲ್ಲಿವೆ.೧ ಬಸವಕಲ್ಯಾಣ ಸುತ್ತಲೂ ಸುಮಾರು ಮೂರು ಕಿ. ಮೀ. ಅಂತರದ ವರೆಗೆ ಈ ಕಲ್ಯಾಣಪುರ ವ್ಯಾಪಿಸಿರಬೇಕೆಂದು ಅಲ್ಲಿ ದೊರೆತ ಪುರಾತತ್ವ ಅವಶೇಷಗಳಿಂದ ಅಂದಾಜು ಮಾಡಲಾಗಿದೆ. ಈ ಅಂತರದಲ್ಲಿರುವ ನಾರಾಯಣಪುರ, ಪರ್ತಾಪುರ, ಶಿವಪುರ, ತ್ರಿಪುರಾಂತ ಮತ್ತು ಶಿವಪುರ ಹಳ್ಳಿಗಳು ಆ ಕಾಲದಲ್ಲಿ ಕಲ್ಯಾಣಪುರಕ್ಕೆ ಹೊಂದಿಕೊಂಡಿದ್ದವು. ಹೀಗಾಗಿ ಬಸವಕಲ್ಯಾಣ, ತ್ರಿಪುರಾಂತಕ ಮತ್ತು ಶಿವಪುರಗಳನ್ನು ಮಾತ್ರ ಈ ಅಧ್ಯಯನಕ್ಕಾಗಿ ಆಯ್ದುಕೊಳ್ಳಲಾಗಿದೆ.

ಇಲ್ಲಿಯವರೆಗೆ ದೊರೆತ (ಅಲ್ಲಿಯ ಮತ್ತು ಹೊರಗಿನ) ಶಿಲಾಶಾಸನಗಳಿಂದ ಕಲ್ಯಾಣ ಭಾಗದಲ್ಲಿ ಸುಮಾರು ಹನ್ನೆರಡು ಶೈವದೇವಾಲಯಗಳಿದ್ದವೆಂದು ತಿಳಿದು ಬಂದಿದೆ. ಈ ಯಾವ ದೇವಾಲಯಗಳು ಈಗ ಉಳಿದಿಲ್ಲ. ಅವು ಹಾಳಾಗಿ ನೆಲಸಮ ಗೊಂಡಿವೆ. ಕೇವಲ ಅಲ್ಪ-ಸ್ವಲ್ಪ ದೇವಾಲಯಗಳ ಭಾಗಗಳು ಶಿವಪುರದ ಶಿವ ಮಂದಿರ, ಕಲ್ಯಾಣದ ಸೋಮೇಶ್ವರ ದೇವಾಲಯ ಮತ್ತು ಕೋಟೆಯ ಒಳಗಿನ ಲಕ್ಷ್ಮೀದೇವಾಲಯಗಳಲ್ಲಿವೆ. ಇಂದಿನ ಹಲವಾರು ಗುಡಿ, ಗುಂಡಾರ, ಮಂದಿರ, ಕಟ್ಟೆಗಳ ಮೇಲೆ, ಬಾವಿ, ಕೋಟೆಗಳ ಗೋಡೆಗಳಲ್ಲಿ, ತಿಪ್ಪೆ ಗುಂಡಿಗಳಲ್ಲಿ, ದೇವಾಲ ಯಗಳ ಅವಶೇಷಗಳು, ಶಿಲ್ಪಗಳು ಚದುರಿಹೋಗಿವೆ. ಕೋಟೆಯ ಒಳಗಡೆ ಹಲವಾರು ಶಿಲ್ಪಗಳ ಸಂಗ್ರಹವಿದೆ. ಒಂದೆರಡು ಶಿವಶರಣರ ಶಿಲ್ಪಗಳೂ ಕಂಡು ಬಂದಿರುವುದು ಗಮನಾರ್ಹ. ಇವುಗಳನ್ನು ಹಾಗೂ ಇಲ್ಲಿಯ ಇನ್ನಿತರ ಶೈವ ಧರ್ಮದ ಉಪಾಸಕ, ಉಪಾಸಕಿ ಹಾಗೂ ಯತಿಗಳ ಶಿಲ್ಪಗಳನ್ನು ಅಧ್ಯಯನಕ್ಕೆ ಇಲ್ಲಿ ಕೂಡಿಸಿಕೊಂಡಿರುವುದಿಲ್ಲ. ಶಿವಶರಣರ ನೆಲೆಗಳ ಕೆಲವು ಗುಹೆಗಳಿಗೆ ಮಾತ್ರ ಹೆಸರುಗಳಿವೆ. ಗುಹೆ-ಮಂದಿರಗಳಾದ ಅಲ್ಲಿಯ ಕೆಲವು ಶಿವಶರಣರ ನೆಲೆಗಳು ಅಲ್ಲಿ ಖ್ಯಾತಿಯನ್ನು ಹೊಂದಿವೆ. ಅವುಗಳ ಸಂರಕ್ಷಣೆ ಮತ್ತು ಅಧ್ಯಯನದ ಕೆಲಸ ಸಮರ್ಪಕವಾಗಿ ನಡೆಯಬೇಕಾಗಿದೆ.

ಅಲ್ಲಲ್ಲಿ ಚದುರಿಹೋದ ದೇವಾಲಯದ ಅವಶೇಷಗಳು : ಕಂಬ, ಗೋಡೆ ಫಲಕ, ಬಾಗಿಲ್ವಾಡ, ಪಟ್ಟಿಕೆ, ಶಿಖರ ನಮೂನೆ, ಶಿಲ್ಪಗಳು ಮತ್ತು ಶಿಲಾಶಾಸನ ಗಳಾಗಿವೆ. ಕೆಲವೇ ಶಿಲ್ಪಗಳು ಅಲ್ಲಲ್ಲಿ ವರದಿಯಾಗಿವೆ.೨ ಅವುಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿದ್ದು ಕಾಣುವುದಿಲ್ಲ. ಲಭ್ಯವಾದ ಅಳಿದುಳಿದ ಶೈವಧರ್ಮದ ಒಟ್ಟು ಶಿಲ್ಪಗಳು ಇನ್ನೂರಾಗಿವೆ. ಇವುಗಳಲ್ಲಿ ಎಪ್ಪತ್ತುಮೂರು ಗಣೇಶನ ಶಿಲ್ಪಗಳಾಗಿದ್ದು, ಅವು ಕುಳಿತ ದ್ವಿಭುಜ ಮತ್ತು ಚತುರ್ಭುಜ, ನೃತ್ಯ ಗಣೇಶ ಮತ್ತು ಲಕ್ಷ್ಮೀ ಗಣೇಶ

ಗಳಾಗಿರುತ್ತವೆ. ಶಿವಲಿಂಗಗಳು ನಲವತ್ತೆರಡಿವೆ. ವಿವಿಧ ನಮೂನೆಯ ಲಿಂಗಪೀಠಗಳಿಗೆ ಹೆಚ್ಚಾಗಿ ಹಲವುಕಡೆ ಇತ್ತೀಚಿನ ಲಿಂಗಗಳನ್ನೂ ಕೂಡಿಸಲಾಗಿದೆ. ಬ್ರಹ್ಮಸೂತ್ರವುಳ್ಳ ಲಿಂಗಗಳು ಕಡಿಮೆ ಸಂಖ್ಯೆಯಲಿವೆ. ಆರು ಪದ್ಮಾಸನದ [ಕುಳಿತ] ಮತ್ತು ಒಂದು ಸಮಭಂಗದ [ನಿಂತ] ಶಿವನ ಶಿಲ್ಪಗಳಾಗಿವೆ. ಈ ಶಿಲ್ಪಗಳಲ್ಲಿ ತ್ರಿಪುರಾಂತಕ (೨), ಚತುರ್ಮುಖ ಲಿಂಗಗಳು (೨), ನಟರಾಜ (೭), ಗಜಮರ್ದನ (೧), ಉಮಾ–ಮಹೇಶ್ವರ (೧೪), ಕಾರ್ತಿಕೇಯ (೧), ನಂದಿ (೧೩), ಭೈರವ (೭), ಮಹಿಷಾಸುರ ಮರ್ದಿನಿ (೮), ಚಾಮುಂಡಿ (೫), ಸಪ್ತಮಾತೃಕೆ (೪), ಕಾಳಿಕಾ (೫) ಶಿಲ್ಪಗಳಾಗಿರುತ್ತವೆ. ಶೈವ ಉಪಾಸಕ, ಉಪಾಸಕಿ ಮತ್ತು ಯತಿಯರ ಎಂಟು ಶಿಲ್ಪಗಳನ್ನು ಅಧ್ಯಯನಕ್ಕೆ ಈ ಸಧ್ಯ ಆಯ್ದುಕೊಂಡಿಲ್ಲ.

ಈ ಶಿಲ್ಪಗಳು ತ್ರಿಕೋನ, ಮೊಟ್ಟೆ, ಅರ್ಧವೃತ್ತ ಆಯತಾಕಾರದಲ್ಲಿವೆ. ಹೂ–ಬಳ್ಳಿ ಅಲಂಕಾರ ಶಿಲ್ಪಗಳ ಮೇಲೆ ಸಾಧಾರಣವಾಗಿವೆ. ಅಲಂಕಾರವನ್ನು ಮೂಲವಿಗ್ರಹಗಳಿಗೆ ಹೆಚ್ಚು ಮಣಿ ಆಭರಣ ಮತ್ತು ಕೆಲವು ಶಿಲ್ಪಗಳಿಗೆ ಉತ್ತರ ಭಾರತದ ಶೈಲಿಯ ಪ್ರಭಾವ ವಿಶೇಷವಾಗಿದೆ. ಈ ಶಿಲ್ಪಗಳನ್ನು ಹೀಗೆ ವಿವರಿಸಬಹುದು :

ಗಣೇಶ :

ಕುಳಿತ ಮತ್ತು ನೃತ್ಯಭಂಗಿಯ ಗಣೇಶ ಶಿಲ್ಪಗಳಲ್ಲಿ ಕುಳಿತ ಚತುರ್ಭುಜ ಶಿಲ್ಪಗಳ ಸಂಖ್ಯೆ ಹೆಚ್ಚು. ಹೆಚ್ಚಾಗಿ ಬಸವಕಲ್ಯಾಣದ ಕೋಟೆ–ಮ್ಯೂಜಿಯಂ, ಶಿವ ಮಂದಿರ, ಪರುಷಕಟ್ಟೆ, ಬಸವೇಶ್ವರ ಶಿಶುವಿಹಾರ, ಗೋಸಾಲೆ, ಸದಾನಂದಮಠ, ಸದಾನಂದ ಮಠದ ಹತ್ತಿರದ ಬಾವಿ ಗೋಡೆಗಳಲ್ಲಿವೆ.

ಕುಳಿತ ಈ ಚತುರ್ಭುಜ ಗಣೇಶನ ಕೈಗಳಲ್ಲಿ ಸಾಮಾನ್ಯವಾಗಿ ದಂತ, ಪರಶು, ಕಮಲ ಮತ್ತು ಮೋದಕಗಳಿವೆ. ಜಟಾಮುಕುಟ, ಕೊರಳಹಾರ, ಹೊಟ್ಟೆಗೆ ನಾಗ ಬಂಧ, ಯಜ್ಞೋಪವೀತ, ಬಳೆ ಇತ್ಯಾದಿ ವಸ್ತ್ರಾಭರಣಗಳನ್ನು ಧರಿಸಲಾಗಿದೆ. ಮೂಷಕನನ್ನು ಕೆಳಗಡೆ ತೋರಿಸಲಾಗಿದೆ.

ದ್ವಿಭುಜ ಗಣೇಶ :

ಪೇಟೆ ರಸ್ತೆಪಕ್ಕದ ಹನುಮಾನ ಮಂದಿರದ ಒಳಗಿನ ಗೂಡಿನಲ್ಲಿ ಕುಳಿತ ದ್ವಿಭುಜ ಗಣೇಶನ ಶಿಲ್ಪವಿದೆ. ಕೈಯಲ್ಲಿ ದಂತ ಮತ್ತು ಫಲಗಳಿವೆ. ಉಳಿದ ವಸ್ತ್ರಾಭರಣಗಳು ಚತುರ್ಭುಜ ಗಣೇಶ ಶಿಲ್ಪದಂತಿವೆ. ಛಾಲ್ಕಿ ಭಾಗದಲ್ಲಿ ದ್ವಿಭುಜ ಗಣೇಶನ ಶಿಲ್ಪಗಳುಳ ಹೆಚ್ಚಿವೆ.

ನೃತ್ಯ ಗಣೇಶ :

ನೃತ್ಯ ಗಣೇಶನ ಎರಡು ಶಿಲ್ಪಗಳು ವಿಠೋಬ ಮಂದಿರ ಹತ್ತಿರದ ಗುಂಡಪ್ಪ ಮುಜುನಾಥರ ಮನೆ ಮುಂದೆ ಹಾಗೂ ದರ್ಗಾ ಹತ್ತಿರದ ಮಹದೇವ ಮಂದಿರ ದಲ್ಲಿವೆ. ಮೊದಲನೇ ಸ್ಥಳದ ಶಿಲ್ಪಕ್ಕೆ ಅಷ್ಟಭುಜಗಳಿದ್ದು, ಎರಡನೇ ಶಿಲ್ಪಕ್ಕೆ ಚತುರ್ಭುಜಗಳಿವೆ. ನೃತ್ಯಭಂಗಿ ಗಣೇಶನ ಶಿಲ್ಪದಲ್ಲಿ ಕಾಣುತ್ತದೆ. ಅವುಗಳ ಉಡುಗೆ–ತೊಡುಗೆಗಳ ಅಲಂಕಾರ ಚತುರ್ಭುಜ ಗಣೇಶನಿಗೆ ತೋರಿಸಿದ ರೀತಿ ಯಲ್ಲಿವೆ. ಕೈಯಲ್ಲಿ ಹಿಡಿದ ಉಪಕರಣಗಳು ಅಷ್ಟಭುಜಗಣೇಶನಿಗೆ ಹೆಚ್ಚಿವೆ.

ಬಸವಕಲ್ಯಾಣದ ಗಣೇಶವಾಡಿಯ ಪೂರ್ವಾಭಿಮುಖವಾಗಿ ಕೂಡಿಸಿದ ಗಣೇಶ ಶಿಲ್ಪ ಅತ್ಯಂತ ಬೃಹದಾಕಾರದ್ದಾಗಿದೆ. ಮೇಲ್ಭಾಗ ಅರ್ಧವೃತ್ತಾಕಾರದಲ್ಲಿದೆ. ಅಲಂಕಾರವನ್ನು ಹೆಚ್ಚಿಸಲಾಗಿದೆ. ದೊಡ್ಡ ಕಿವಿಗಳು, ಮಕರ ತೋರಣ, ಪ್ರತ್ಯೇಕ ಪೀಠದಲ್ಲಿ ಚತುರ್ಭುಜನಾದ ಈ ಗಣೇಶನ ಕೈಗಳಲ್ಲಿ ದಂತ, ಪರಶು, ಕಮಲ ಮತ್ತು ಮೋದಕಗಳಿವೆ. ಕಿರೀಟಮುಕುಟ, ವಸ್ತ್ರಾಭರಣಗಳನ್ನು ಹೆಚ್ಚು ಅಲಂಕರಿಸ ಲಾಗಿದೆ. ಶೈಲಿಯ ಆಧಾರಮೂಲಕ ಈ ಶಿಲ್ಪ ಸುಮಾರು ೧೬ ನೆಯ ಶತಮಾನ ದ್ದೆಂದು ಹೇಳಬಹುದು.

ಶಿವಪುರ ಶಿವಮಂದಿರದ ಕುಳಿತ ಚತುರ್ಭುಜ ಗಣೇಶನ ಶಿಲ್ಪದಲ್ಲಿ ಇಲಿಯು ಬಾಯಲ್ಲಿ ಒಂದು ವಸ್ತುವನ್ನು ಕಚ್ಚಿಕೊಂಡಿದೆ. ಮತ್ತು ಅದರ ಬದಿಗೆ ಅಂಜಲಿ ಮುದ್ರೆಯ ಭಕ್ತನ ಚಿತ್ರ ಮಹತ್ವದ್ದಾಗಿದೆ.

ದೇಹದ ಮೇಲೆ ತೊಡಿಸಿದ ಯಜ್ಞೋಪವೀತವನ್ನು ದಾರದ ಬದಲು ಹಾವಿ ನಿಂದ ತೋರಿಸಿದ ಗಣೇಶಶಿಲ್ಪ ಬಸವಕಲ್ಯಾಣದ ರಸ್ತೆಪಕ್ಕದ ಮಹದೇವಗುಡಿಯ ಲ್ಲಿದೆ. ಈ ರೀತಿಯ ಶಿಲ್ಪಗಳು ಬೀದರ ಜಿಲ್ಲೆಯ ವಿವಿಧ ಭಾಗದಲ್ಲಿಯೂ ಬೆಳಕಿಗೆ ಬಂದಿವೆ.

ಗ್ರಾಮದ ಉತ್ತರ ದಿಕ್ಕಿನಲ್ಲಿರುವ ಗಣೇಶವಾಡಿಯ ಗಣಪತಿಯು ಅತ್ಯಂತ ದೊಡ್ಡದಾಗಿದ್ದು, ಗೌಂಡಿಗಲ್ಲಿಯ ಚೌಶೆಟ್ರ ಮನೆ ಹತ್ತಿರದ ಗಣಪತಿ ಗುಡಿಯ ಶಿಲ್ಪ ಎತ್ತರದಲ್ಲಿ ಎರಡನೇ ಸ್ಥಾನ ಹೊಂದುತ್ತದೆ. ಉಳಿದಕಡೆಯ ಶಿಲ್ಪಗಳನ್ನು ಸಾಮಾನ್ಯ ಉಡುಗೆ, ತೊಡುಗೆಗಳಿಂದ ಅಲಂಕೃತಮಾಡಲಾಗಿದೆ.

ಲಕ್ಷ್ಮೀ–ಗಣೇಶ :

ಬಸವಕಲ್ಯಾಣದ ಬಸವೇಶ್ವರ ಶಿಶುವಿಹಾರ ಶಾಲೆಯ ಮುಂದೆ ಲಕ್ಷ್ಮೀ–ಗಣೇಶನ ಶಿಲ್ಪವಿದೆ. ಗಣೇಶನಿಗೆ ಚತುರ್ಭುಜಗಳಿವೆ. ಅವನ ತೊಡೆಯ ಮೇಲೆ ದ್ವಿಭುಜ

ಗೌರಿಯೂ ಕುಳಿತಿದ್ದಾಳೆ. ಈ ಮೇಲೆ ತಿಳಿಸಿದ ಆಭರಣ ಮತ್ತು ಉಪಕರಣಗಳನ್ನು ಗಣೇಶನಿಗೆ ತೋರಿಸಲಾಗಿದೆ.

ಲಕ್ಷ್ಮಿ-ಗಣೇಶ ಹಾಗೂ ಗಣೇಶವಾಡಿಯ ಗಣೇಶನ ಶಿಲ್ಪಗಳು ಮಾತ್ರ ಕ್ರಿ.ಶ. ಸುಮಾರು ೧೬ ನೇ ಶತಮಾನದ್ದಾಗಿವೆ. ದ್ವಿಭುಜ ಗಣೇಶ ಕ್ರಿ.ಶ. ಸುಮಾರು ೧೦ನೇ ಶತಮಾನದ್ದಾಗಿದ್ದು, ಉಳಿದವು ಕ್ರಿ.ಶ. ಸುಮಾರು ೧೧-೧೨ ನೇ ಶತಮಾನಕ್ಕೆ ಸೇರಿವೆ. ಗಣೇಶವಾಡಿಯ ಗಣೇಶನಿಗಿರುವ ಮಕರತೋರಣದ ಅಲಂಕಾರ, ನಾಗ ಸರ್ಪದ ಯಜ್ಞೋಪವೀತ, ವಸ್ತ್ರಾಭರಣಗಳ ವೈಶಿಷ್ಟ್ಯಗಳನ್ನು ಮುಖ್ಯವಾಗಿ ಗಮನಿಸಬಹುದಾಗಿದೆ (ಚಿತ್ರ ನಂ. ೧).

ಶಿವಲಿಂಗ :

ಸಾಮಾನ್ಯವಾಗಿ ಶಿವಲಿಂಗಗಳಿಗೆ ವಿವಿಧ ಭಾಗಗಳಿರುತ್ತವೆ. ಲಿಂಗಪೀಠ ಮತ್ತು ಲಿಂಗ (ಪೂಜಾ ಭಾಗ) ಭಾಗ ಮುಖ್ಯವಾಗಿವೆ. ಲಿಂಗ ಪೀಠಗಳು ಹೆಚ್ಚಾಗಿ ದುಂಡಾಗಿದ್ದು, ಅವುಗಳ ಮಧ್ಯದಲ್ಲಿ ರಂಧ್ರಗಳಿದ್ದು, ಅವುಗಳು ವಿವಿಧೆಡೆ ಚದುರಿ ಹೋಗಿವೆ. ಇತ್ತೀಚಿನ ಲಿಂಗಗಳನ್ನು ಅವುಗಳ ಮಧ್ಯ ಕೂಡಿಸಿದ ಶಿವಲಿಂಗಗಳು ಹೆಚ್ಚಾಗಿ ಕಂಡುಬರುತ್ತವೆ. ಆಯತಾಕಾರದ ಶಿವಲಿಂಗ ಪೀಠ (ಎರಡು-ಮೂರು ಪಿಂಡಗಳಿವೆ) ಮುರಲಿಂಗೇಶ್ವರ ಮಂದಿರದ ಒಳಗಿದೆ. ಪಿಂಡಗಳ ಮೇಲೆ ಮುಖವಾಡ ಚಿತ್ರಗಳುಳ ಅಲ್ಲಲ್ಲಿವೆ. ಕಣ್ಣು, ಮೂಗು, ಬಾಯಿ, ಹಣೆಗೆ ವಿಭೂತಿ ಪಟ್ಟಿ ಮುಖ ದಲ್ಲಿವೆ. ಅವುಗಳು ಪಾಶಾಪುರ ಓಣಿಯ ನಾಗರಕಟ್ಟೆಯ ಮೇಲಿನ ಎರಡು ಲಿಂಗ ಪೀಠಗಳಲ್ಲಿ, ಮುರಲಿಂಗೇಶ್ವರ ಮಂದಿರದ ಒಳಗಿನ ಒಂದು ಪೀಠದಲ್ಲಿ ಮತ್ತು ಬಡಿಗೇರ ಓಣಿಯ ಗುಂಡಪ್ಪ ಚೌಧರಿ ಮನೆ ಮುಂದಿನ ಹಿರೋಡಕಟ್ಟೆಯ ಮೇಲಿನ ಲಿಂಗಪೀಠದ ಮೇಲೆ ಮಧ್ಯ ಕೂಡಿಸಿರುವುದು ವಿಶೇಷ (ಚಿತ್ರ ನಂ. ೧೭).

ಕೆಲವೊಮ್ಮೆ ಪಾದಮುದ್ರೆಗಳನ್ನು (ಒಂದು ಅಥವಾ ಎರಡು ಜೋಡು), ಆವಿಗೆ ಗಳನ್ನು ಆಯತಾಕಾರದ ಪೀಠಗಳ ಮೇಲೆ ತೋರಿಸಲಾಗಿದೆ. ಅಂಥವುಗಳು ಮುರ ಲಿಂಗೇಶ್ವರ ಮಂದಿರದಲ್ಲಿ, ಅಂಬಿಗರ ಚೌಡಯ್ಯನಮಠ ಇತ್ಯಾದಿ ಸ್ಥಳಗಳಲ್ಲಿವೆ.

ಪ್ರಾಚೀನ ದೇವಾಲಯದ ಗರ್ಭಗುಡಿಗಳ ಮಧ್ಯ ಶಿವಲಿಂಗಗಳ ಸ್ಥಾಪನೆ ಸಾಮಾನ್ಯ. ಈ ಭಾಗದಲ್ಲಿ ಇಂತಹ ಗರ್ಭಗುಡಿಗಳು ನೆಲಮಟ್ಟದಿಂದ ಸುಮಾರು ೨ ಮೀ. ಆಳದವರೆಗೆ ಕೆಳಗಿರುತ್ತವೆ. ಸೋಮೇಶ್ವರ ಗುಡಿ (ಬಸವಕಲ್ಯಾಣ) ಮತ್ತು ಶಿವದೇವಸ್ಥಾನ (ಶಿವಪುರ)ದಲ್ಲಿ ಇಂಥವುಗಳಿವೆ.

ಶಿಲೆಯ ಮುಖವಾಡಗಳನ್ನು ಲಿಂಗದ ಬದಲು ಕೂಡಿಸಿರುವುದು ಕುತೂಲಹದ ಸಂಗತಿಯಾಗಿದೆ ಮತ್ತು ಅವುಗಳು ಈ ಭಾಗದಲ್ಲಿ ಕಾಣುವುದು ವಿಶೇಷವಾಗಿದೆ. ಆದರೆ ನಾಲ್ಕು ಮುಖಗಳುಳ್ಳ ಲಿಂಗ ಶಿಲ್ಪ ಮತ್ತು ಪಾದಮುದ್ರೆ(ಆವಿಗೆ)ಗಳನ್ನು ಪೀಠಗಳ ಮೇಲೆ (ಚಿತ್ರ ನಂ. ೧೧) ಅಲಂಕರಿಸುವ ಪದ್ಧತಿ ಅಲ್ಲಿಯೂ ಪ್ರಾಚೀನವಾದುದಾಗಿದೆ.

ಬ್ರಹ್ಮಸೂತ್ರವಿರುವ ಹಲವಾರು ಶಿವಲಿಂಗಗಳು ಅಲ್ಲಲ್ಲಿವೆ. ಆದರೆ ಹಲವುಗಳ ಮೂಲಸ್ಥಾನ ಬಹುಕಡೆ ಬದಲಾಗಿವೆ.

ಬಸವಕಲ್ಯಾಣದ ಮಲ್ಲಿಕಾರ್ಜುನ ಗುಂಡಿ, ಸೋಮೇಶ್ವರ ದೇವಾಲಯ, ಬಸವೇಶ್ವರ ಶಿಶುವಿಹಾರ ಶಾಲೆಯ ಮುಂದೆ ಮತ್ತು ಶಿವಪುರದ ಶಿವ (ಸಿದ್ಧೇಶ್ವರ) ದೇವಾಲಯದಲ್ಲಿ ತ್ರಿಪುರಾಂತ ಕೆರೆ ಹತ್ತಿರ ಹನುಮಾನ ಮಂದಿರ ಮುಂದಿವೆ. ಈ ಲಿಂಗದಲ್ಲಿ ಮೂರು ಭಾಗಗಳಿವೆ. ಮೇಲ್ಭಾಗ ಅರ್ಧ ವೃತ್ತಾಕಾರ, ಮಧ್ಯಭಾಗ ಅಷ್ಟಮುಖಗಳು (ಈ ಎರಡು ಒಂದೇ ಎತ್ತರ), ಕೆಳಗಿನ ಕೊನೆಯದು ಚತುರ್ಮುಖ (ಎತ್ತರ ಕಡಿಮೆ). ಈ ಮೂರು ಭಾಗಗಳ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರನನ್ನು ಪ್ರತಿನಿಧಿಸುತ್ತವೆಂದು ಶೈವ ಪುರಾಣಗಳು ಹೇಳುತ್ತವೆ. ಈ ಶಿವಲಿಂಗಗಳ ಮೇಲ್ಭಾಗ ಉಜ್ಜಿ ನಯಮಾಡಿದ್ದು ಅದು ಅರ್ಧವೃತ್ತಾಕಾರದಲ್ಲಿರುತ್ತದೆ. ಅದರ ಮೇಲೆ ಬ್ರಹ್ಮಸೂತ್ರವಿರುತ್ತದೆ. ಎರಡು ಸಮಾಂತರ ಲಂಬಕೋನ ರೇಖೆಗಳನ್ನು ಲಿಂಗ ಮುಖದಲ್ಲಿ ಮೇಲಿನಿಂದ ಕೆಳಗಿನವರೆಗೆ (ಲಿಂಗದ ಎರಡನೆ ಭಾಗದ ಮೇಲಂಚಿನವರೆಗೆ) ಎಳೆಯಲಾಗುತ್ತದೆ. ಈ ರೇಖೆಗಳು ಮೇಲ್ಗಡೆ ಕೂಡಿವೆ. ಈ ರೇಖೆಗಳ ಮೇಲಿಂದ ಸ್ವಲ್ಪ ಕೆಳಗಡೆ, ಬದಿಯಲ್ಲಿ ಪಾರ್ಶ್ವನಾಡಿ ಅಡ್ಡಹೊರತಂದು ಸುಮಾರು ಒಂದೆರಡು ಸೆಂ.ಮೀ. ಕೆಳಗಡೆ ಮಧ್ಯರೇಖೆಗೆ ಸಮಾಂತರ ಇಳಿಸಿ, ನಂತರ ಕೆಳಗಡೆ ವಿಸ್ತರಿಸುತ್ತ, ಅವೆರಡು ಲಿಂಗದ ಹಿಂಬದಿಯಲ್ಲಿ ಸಂಧಿಸುತ್ತವೆ. ಈ ಶೈಲಿಯ ಬ್ರಹ್ಮಸೂತ್ರವಿರುವ ಶಿವಲಿಂಗ ಹಾಗೂ ದುಂಡಾಕಾರದ ಲಿಂಗಪೀಠಗಳ ಕಾಲಮಾನ ಕ್ರಿ.ಶ. ಸುಮಾರು ೧೧ ರಿಂದ ೧೩ನೇ ಶತಮಾನ (ಚಿತ್ರಗಳು ನಂ. ೩ ಮತ್ತು ೧೪).

ಚತುರ್ಮುಖ ಶಿವಲಿಂಗ :

ಚತುರ್ಮುಖಗಳನ್ನು ಹೊಂದಿದ ಲಿಂಗಗಳ ಸಂಖ್ಯೆ ಅಪರೂಪ. ಅಲ್ಲಿಯ ಪರಮುಕಟ್ಟೆಯ ಹತ್ತಿರ ಒಂದು ಲಿಂಗಕ್ಕೆ ನಾಲ್ಕು ಮುಖಗಳಿವೆ. ಮುಖಗಳ ಮಧ್ಯ ಸ್ವಲ್ಪ ಎತ್ತರವಾಗಿ ದುಂಡಾದ ಲಿಂಗವಿದೆ. ನಾಲ್ಕು ಮುಖ ಮತ್ತು ಲಿಂಗ ಕೂಡಿ ಐದು ಮುಖಗಳಾಗುವವು. ಕೆತ್ತನೆ ಅಪೂರ್ಣವಾಗಿದೆ. ಬಯಲಲ್ಲಿ ಈಗ ಅದನ್ನು ನಿಲ್ಲಿಸಲಾಗಿದೆ. ಶಿವನ ಐದು ಮುಖಗಳಾದ ಸದ್ಯೋಜಾತ, ವಾಮದೇವ, ತತ್ಪುರುಷ,

ಈಶಾನ ಮತ್ತು ಅಘೋರ ಈ ಮುಖಗಳನ್ನು ಅದು ನಿದರ್ಶಿಸುತ್ತದೆ. ಅದು ಕ್ರಿ.ಶ. ೧೨ನೇ ಶತಮಾನದ್ದಾಗಿದೆ.

ಬಸವಕಲ್ಯಾಣ ಮ್ಯೂಜಿಯಂನಲ್ಲಿ ಕುತ್ತಿಗೆಯವರೆಗೆ ಚತುರ್ಮುಖವುಳ್ಳ ಶಿಲ್ಪ ಇದೆ. ಮುಖಗಳ ಮೇಲೆ, ಒಂದು ಮುಖ ಅಲ್ಲಲ್ಲಿ ಒಡೆದಿದೆ. ಅವುಗಳ ಜಟಾ ಮುಕುಟಗಳನ್ನು ವಿವಿಧ ರೀತಿಯಲ್ಲಿ ಅಲಂಕರಿಸಿರುವುದು ವಿಶೇಷವಾಗಿದೆ. ಕಿವಿಯಲ್ಲಿ ವೃತ್ತಾಕಾರದ ಮಣಿಗಳ ಓಲೆಗಳಿವೆ (ಚಿತ್ರ ನಂ. ೩). ಮಣಿ-ಸರ ಪಟ್ಟಿಕೆಗಳ ಅಲಂಕಾರ ಜಟೆಗಳಿಗಿವೆ.

ನಟರಾಜ :

ನಟರಾಜನ ಪ್ರತ್ಯೇಕ ಹಾಗೂ ಗೋಡೆ ಶಿಲ್ಪಗಳು ಅಲ್ಲಿವೆ. ಎಂಟು ಮತ್ತು ನಾಲ್ಕು ಭುಜಗಳ ನೃತ್ಯಭಂಗಿಯ ನಟರಾಜನ ಶಿಲ್ಪಗಳನ್ನು ಬಹುಸುಂದರವಾಗಿ ತೋರಿಸಲಾಗಿದೆ. ಕೋಟೆಯ ಮ್ಯೂಜಿಯಂ ಒಳಗಿನ ನಟರಾಜನಿಗೆ ಎಂಟು ಕೈಗಳಿದ್ದು, ಅವುಗಳಲ್ಲಿ ವರದ (ಜಪಮಾಲೆ), ಮೇಲಿನ ಎರಡೂ ಕೈಗಳಲ್ಲಿ ನಾಗಸರ್ಪವಿದೆ. ಕಾಲುಗಳು, ಬಲಗಡೆಯ ಮತ್ತು ಎಡಗಡೆಯ ಮೂರು ಕೈಗಳು ಮುರಿದಿವೆ. ಸುರನ ಮೇಲೆ ಶಿವ ನೃತ್ಯಮಾಡುತ್ತಿದ್ದು, ಸರಳ ಹೂವಿನ ತೋರಣ ಬದಿಗಳಲ್ಲಿ ಸಿಂಹಗಳನ್ನೂ (ಮೇಲ್ಗಡೆ) ವಾದ್ಯಗಾರ, ನೃತ್ಯಗಾರ್ತಿ, ಭಕ್ತರನ್ನು ಕೆಳಗಡೆ ತೋರಿಸಲಾಗಿದೆ. ಮಲಗಿದ ಸುರನ ಕೈಯಲ್ಲಿ ಖಡ್ಗವಿದೆ. ಪ್ರಭಾಮಂಡಲವನ್ನು ಸುಂದರವಾಗಿ ಚಿತ್ರಿಸಲಾಗಿದೆ. ವಿಶಿಷ್ಟ ರೀತಿಯ ಕರ್ಣಕುಂಡಲ, ಕೊರಳಹಾರ, ಯಜ್ಞೋಪವೀತ, ಸೊಂಟಪಟ್ಟಿ, ಹಾರ, ಕೈ-ಕಾಲಲ್ಲಿ ಬಳೆ-ಕಡಗ ಇತ್ಯಾದಿ ವಸ್ತ್ರಾಭರಣಗಳನ್ನು ತೊಡಿಸ ಲಾಗಿದೆ. ಪ್ರತ್ಯೇಕವಾಗಿ ಅರ್ಧಗಂಬಬದಿಗೆ ಬಲಗಡೆ ಮತ್ತು ಮೇಲೆ ಸೇವಕರ ಚಿತ್ರವಿದೆ. ಈ ಶಿಲ್ಪವು ಆಯತಾಕಾರದಲ್ಲಿದೆ. ಅದು ಶಿಥಿಲಗೊಂಡ ದೇವಾಲಯದ ಗೋಡೆಫಲಕವೆಂದು ಗೊತ್ತಾಗುತ್ತದೆ (ಚಿತ್ರ ನಂ. ೪).

ಸದಾನಂದಮಠ ಹತ್ತಿರದ ಬಾವಿಗೋಡೆಯ ಎಂಟು ಕೈ ನಟರಾಜ ಶಿಲ್ಪದಲ್ಲಿ ಕೆಳಗೆ ವಾದ್ಯಮೇಳದವರ ಹಾಗೂ ಭಕ್ತರ ಚಿತ್ರಗಳಿರುವುದು ಹಾಗೂ ಸುರನ ಮೇಲೆ ನಿಂತು ನೃತ್ಯ ಮಾಡುತ್ತಿರುವುದು ವಿಶೇಷವಾಗಿದೆ. ಅಲ್ಲಿಯ ಇನ್ನೊಂದು ನಟರಾಜನ ಶಿಲ್ಪದಲ್ಲಿ ನಟರಾಜನು ಕೈಯಲ್ಲಿ ಜಪಮಾಲೆ (ಅಭಯಹಸ್ತ), ಡಮರು, ನಾಗ (ಮೇಲಿನ ಕೈಗಳಲ್ಲಿ), ಖಟ್ವಾಂಗ ಮತ್ತು ಕಪಾಲವಿದೆ. ಕಪಾಲಸಂಗಡ ರುಂಡವಿದೆ. ನಂದಿಯ ಮೇಲೆ ನಿಂತು ನೃತ್ಯ ಮಾಡುವುದನ್ನು ತೋರಿಸಲಾಗಿದೆ. ಈ ರೀತಿಯ ವೈವಿಧ್ಯತೆಗಳು ಕುತೂಹಲವನ್ನುಂಟುಮಾಡುತ್ತವೆ. ಬಸವಕಲ್ಯಾಣ ಕೋಟೆಯ ಒಳಗಿನ ಎರಡು ಶಿಲ್ಪಗಳಲ್ಲಿ ನಟರಾಜನನ್ನೂ ಬಹುಸುಂದರವಾಗಿ ತೋರಿಸಲಾಗಿದೆ.

ವಾದ್ಯಮೇಳದವರ ಮಧ್ಯ ನೃತ್ಯಮಾಡುವ ದೃಶ್ಯವನ್ನೂ ಗೋಡೆಫಲಕದ ಅರ್ಧ ಕಂಬದಲ್ಲಿ (ಚಿತ್ರ ನಂ. ೫-ಅ.) ಮತ್ತು ಇನ್ನೊಂದರಲ್ಲಿ ನಟರಾಜನಿಗೆ ಎಂಟು ಕೈಗಳಿದ್ದು ಜಪಮಾಲೆ, ಡಮರು, ನಾಗ, ಖಟ್ವಾಂಗ, ಕಪಾಲ ಇತ್ಯಾದಿ ಉಪಕರಣ ಗಳನ್ನು ಹಿಡಿದು ನೃತ್ಯಮಾಡುವ ದೃಶ್ಯದೊಂದಿಗೆ ಆತನ ಬದಿಗೆ ನಂದಿ ಇರುವುದು (ಚಿತ್ರ ನಂ. ೫).

ಗಜಮರ್ದನ :

ಬಸವಕಲ್ಯಾಣ ಮ್ಯುಜಿಯಂನ ಗಜಮರ್ದನ ಶಿಲ್ಪವನ್ನು ಉಮಾಪುರದಿಂದ ತರಲಾಗಿದೆಯಂತೆ. ಎಂಟು ಕೈಯುಳ್ಳ ಶಿವನು ನೃತ್ಯಭಂಗಿಯಲ್ಲಿದ್ದಾನೆ. ಕೆಳಗಿನ ಎರಡೂ ಕೈಗಳು ಒಡೆದುಹೋಗಿವೆ. ಬಲಗಾಲನ್ನು ಬಗ್ಗಿಸಿ ಎಡಗಾಲನ್ನು ಮೇಲಕ್ಕೆ ಎತ್ತಿ ಅದನ್ನು ಮಡಿಚಿ ತನ್ನ ದೇಹವನ್ನು ಒಂದು ಕಡೆ ಬಗ್ಗಿಸಿಕೊಂಡು ಕೈಗಳನ್ನು ಎರಡೂ ಬದಿಗೆ ಹರಡಿಕೊಂಡು ನೃತ್ಯಮಾಡುತ್ತಿದ್ದಾನೆ. ತಲೆಗೂದಲನ್ನು ಹೊರಗಡೆ ತಲೆಯ ಸುತ್ತಲೂ ಹರಡಿಕೊಂಡಿದ್ದಾನೆ. ಅಂಚಿನಲ್ಲಿ ಆ ಕೂದಲನ್ನು ಹೂವಿನ ದಳಗಳಂತೆ ಸುಂದರವಾಗಿ ಚಿತ್ರಿಸಲಾಗಿದೆ. ಮೇಲಿನ ಎರಡೂ ಬದಿಯ ಕೈಗಳನ್ನು ಮೇಲಕ್ಕೆತ್ತಿ, ಗಜಾಸುರನನ್ನು ಸಂಹಾರ ಮಾಡಿದ ನಂತರ ಆ ಗಜದ ಚರ್ಮವನ್ನು ಗಟ್ಟಿಯಾಗಿ ಮೇಲಕ್ಕೆತ್ತಿಕೊಂಡು ಹಿಡಿದಿರುವ ದೃಶ್ಯ ಬಹುಸುಂದರವಾಗಿದೆ. ಉಳಿದ ಆರು ಕೈಗಳಲ್ಲಿ ಬಲಗಡೆಯ (ಕೆಳಗಿನಿಂದ) ಎರಡನೇ ಕೈಯಲ್ಲಿ ತ್ರಿಶೂಲ, ಮೂರನೇ ಕೈಯಲ್ಲಿ ತ್ರಿಶೂಲ, ಮೂರನೇ ಕೈಯಲ್ಲಿ ಡಮರು; ಎಡಗಡೆಯಲ್ಲಿ (ಮೇಲಿಂದ) ಎರಡನೇ ಕೈ ಮೇಲಕ್ಕೆತ್ತಿ ಗಜದ ಚರ್ಮ ಹಿಡಿದಂತೆ ತೋರಿಸಲಾಗಿದೆ. ಮೂರನೇ ಕೈಯಲ್ಲಿ ವೃತ್ತಾಕಾರದ ಗುರಾಣಿಯಿದೆ ಮತ್ತು ಕೊನೆಯ ಕೈಯಲ್ಲಿ ಕಪಾಲ (ಒಡೆದಿದೆ) ಹಿಡಿದಿದ್ದಾನೆ. ಗಜದ ಚರ್ಮವನ್ನು ಹೊತ್ತ ಲಕ್ಷಣವನ್ನು ಮೇಲ್ಗಡೆ ದಪ್ಪವಾಗಿ ಅಂಚಿನಲ್ಲಿ ಎದ್ದುಕಾಣುವಂತೆ ತೋರಿಸಲಾಗಿದೆ. ಕಿವಿಯಲ್ಲಿ ಓಲೆಗಳು, ಯಜ್ಞೋಪವೀತ, ಕೊರಳಲ್ಲಿ ಹಾರ, ದೊಡ್ಡಹಾರ, ಸೊಂಟಪಟ್ಟಿ, ಕಟಿಸೂತ್ರ, ಕಡಗ, ಕೈಬಳೆ, ತೋಳಬಳೆಗಳನ್ನು ಧರಿಸಲಾಗಿದೆ. ಎರಡೂ ಬದಿಗಳಲ್ಲಿ ಕೆಳಗೆ ಒಟ್ಟು ಇಬ್ಬರು ವಾದ್ಯಮೇಳದವರನ್ನು ತೋರಿಸಲಾಗಿದೆ. ಮೊಟ್ಟೆಯಾಕಾರದ ಈ ಶಿಲ್ಪಕ್ಕೆ ಇಂತಹ ಅಲಂಕಾರವು ವಿಶೇಷವಾಗಿದೆ (ಚಿತ್ರ ನಂ. ೬).

ತ್ರಿಪುರಾಂತಕ :

ಬಸವಕಲ್ಯಾಣದಿಂದ ಹುಲಸೂರ ಕಡೆ ಹೋಗುವ ರಸ್ತೆ ಬದಿಯ ಚಿಕ್ಕ ಈಶ್ವರ ಗುಡಿಯ ಗೋಡೆಯಲ್ಲಿ ಮತ್ತು ಬಸವಕಲ್ಯಾಣದಿಂದ ನಾರಾಯಣಪುರಕ್ಕೆ ಹೋಗುವ ಹಾಲುಬಸವ ಮಂದಿರದ ಗೋಡೆಯಲ್ಲಿ ಸುಂದರ ತ್ರಿಪುರಾಂತಕನ ಶಿಲ್ಪಗಳಿವೆ.

ಆಕರ್ಷಣೀಯವಾದ ಈ ಶಿಲ್ಪಗಳಲ್ಲಿ ಚತುರ್ಭುಜ ಶಿವನು ಬಿಲ್ಲನ್ನು ಹಿಡಿದು ತಲೆಯನ್ನು ಮೇಲಕ್ಕೆತ್ತಿ ನಿಂತಿರುವನು. ಎಡಗಾಲನ್ನು ಮೇಲಕ್ಕೆತ್ತಿ ಕೆಳಗಡೆ ಕುಳಿತ ನಂದಿಯ ಮೇಲಿಟ್ಟಿದ್ದಾನೆ. ಬಲಗಾಲನ್ನು ನಂದಿಯ ಬಾಲದ ಪಕ್ಕದಲ್ಲಿಟ್ಟು ನಿಂತಿದ್ದಾನೆ. ಕೆಳಗಿನ ಬಲಗೈಯನ್ನು ಎದೆಯ ಮೇಲಿಟ್ಟಿದ್ದು, ಮೇಲಿನ ಬಲಕೈಯಿಂದ ಎದೆಗೆ ಹಿಂದೆ ಕಟ್ಟಿದ ಬಾಣವನ್ನು ಹಿಡಿದಿರುವನು. ಮುಖವನ್ನು ಮುಂದುಗಡೆ ಮೇಲಕ್ಕೆ ಎತ್ತಿ ಬಿಲ್ಲನ್ನು ಮೇಲಿನ ಎಡಗೈಯಲ್ಲಿ ಮೇಲಕ್ಕೆತ್ತಿಕೊಂಡು ಗಟ್ಟಿಯಾಗಿ ಅದನ್ನು ಎತ್ತಿಹಿಡಿದಿದ್ದಾನೆ. ಕೆಳಗಿನ ಕೈ (ಎಡ) ಸ್ವಲ್ಪ ಒಡೆದಿದೆ. ಬಹುಶಃ ಅದನ್ನು ಬಲಗಾಲಿನ ಮೇಲೆ ಇಟ್ಟಂತೆ ಕಾಣುತ್ತದೆ. ಬಲಗಾಲಿನ ಬದಿಗೆ ಸವ್ಯಲಲಿತಾಸನದಲ್ಲಿ ಪಾರ್ವತಿಯಿದ್ದು ಬಿಲ್ಲಿನ ಮೇಲ್ಗಡೆ ಒಬ್ಬ ವ್ಯಕ್ತಿಯ ಮುಖವನ್ನು ಚಿಕ್ಕಗೂಡಿನ ಮಧ್ಯ ತೋರಿಸಲಾಗಿದೆ. ಬಹುಶಃ ಆ ಗೂಡು ಕವಾನದ ಸುಕನಾಶಿಯಾಗಿರಬೇಕು. ಈ ಮೂರು ಚಿಕಣಿಯಾಕಾರದ ವಿಮಾನಗಳಿವೆ. ಧರಿಸಿದ ಜಟಾಮುಕುಟ, ಕಿವಿಓಲೆ, ಮಣಿಗಳ ಹಾರಗಳ ಕಟಿಬಂಧ, ಹಾರ, ಕಡಗ, ಕೈಬಳೆ, ತೋಳಬಳೆ, ಇತ್ಯಾದಿ ವಸ್ತ್ರಾಭರಣಗಳು ಮನಮೋಹಕವಾಗಿವೆ. ಈ ಶಿಲ್ಪವು ಸುಮಾರು ಕ್ರಿ.ಶ. ೧೧–೧೨ ನೇ ಶತಮಾನದ ದೇವಾಲಯದ ಗೋಡೆಫಲಕವಾಗಿದೆ (ಚಿತ್ರ ನಂ. ೭).

ಕ್ರಿ.ಶ. ಸುಮಾರು ೭ನೇ ಶತಮಾನದ ಪಟ್ಟದಕಲ್ಲಿನ ತ್ರಿಪುರಾಂತಕ(ಶಿವ)ನಿಗೆ ಅಷ್ಟಭುಜಗಳಿದ್ದು, ಮುಖ್ಯವಾಗಿ ಬಿಲ್ಲನ್ನು ಹಿಡಿದು ಮೇಲಕ್ಕೆ ಬಾಣವನ್ನು ಹೊಡೆಯುವ ದೃಶ್ಯವಿದೆ. ಬಾಣ ತುದಿಯಲ್ಲಿ ಮೇಲ್ಗಡೆ ಚಿಕಣಿಯಾಕಾರದ ಮೂರು ವಿಮಾನಗಳಿವೆ. ಪಾರ್ವತಿ ಮತ್ತು ಬ್ರಹ್ಮರ ಚಿತ್ರಗಳು ಅವನ ಬದಿಗಿವೆ. ನಾಲ್ಕು ಕುದುರೆ ರಥದಲ್ಲಿ ಶಿವನು ನಿಂತಿದ್ದಾನೆ. ಅವು ನಾಲ್ಕು ವೇದಗಳನ್ನು ಸೂಚಿಸುತ್ತವೆ.

ಬಸವಕಲ್ಯಾಣದ ತ್ರಿಪುರಾಂತಕ (ಶಿವ) ಶಿಲ್ಪದಲ್ಲಿ ಮೇಲೆ ತಿಳಿಸಿದ ಮುಖ್ಯ ಲಕ್ಷಣಗಳು ಈ ರೀತಿಯಿವೆ : ರಥದ ಬದಲಿ ನಂದಿಯನ್ನು ಮೆಟ್ಟಿ ನಿಂತಿರುವುದು, ಅಷ್ಟಭುಜ ಬದಲು ಚತುರ್ಭುಜವಿರುವುದು, ಬದಿಗೆ ಪಾರ್ವತಿಯಿರುವುದು, ಮೂರು ವಿಮಾನಗಳನ್ನು ಗಾತ್ರದಲ್ಲಿ ಚಿಕ್ಕದಾಗಿ ತೋರಿಸಲಾಗಿದೆ. ಸುಕನಾಶಿಯಲ್ಲಿ ಮುಖವನ್ನು ತೋರಿಸಿರುವುದು ಹೊಸದೆನಿಸಿದೆ. ಕಾಲಮಾನದಲ್ಲಿ ವ್ಯತ್ಯಾಸವಿದ್ದರೂ ಕ್ರಿ. ಶ. ಸುಮಾರು ೧೧ನೇ ಶತಮಾನದ ಈ ಶಿಲ್ಪ ಈ ಭಾಗದಲ್ಲಿ ಕಾಣುವುದು ಅಪರೂಪದ್ದಾಗಿದೆ.

ಶಿವ :

ದೇವಾಲಯಗಳ ಗೋಡೆಗಳ ಮತ್ತು ಗೂಡುಗಳ ಶಿಲ್ಪಗಳೂ ಮತ್ತು ಶಿವನ ಪ್ರತ್ಯೇಕ ಶಿಲ್ಪಗಳೂ ಬಸವಕಲ್ಯಾಣದಲ್ಲಿ ಕಂಡುಬಂದಿವೆ. ನಿಂತ (ಸಮಭಂಗದಲ್ಲಿ)

ಹಾಗೂ ಕುಳಿತ (ಪದ್ಮಾಸನದಲ್ಲಿ) ಚತುರ್ಭುಜ ಶಿಲ್ಪಗಳಿವೆ. ತನ್ನ ನಾಲ್ಕು ಕೈಗಳಲ್ಲಿ ಅಭಯ (ಜಪಮಾಲೆ), ತ್ರಿಶೂಲ, ನಾಗ ಮತ್ತು ಬಹುಬೀಜಫಲಗಳಿವೆ. ಜಟಾಮುಕುಟ, ಕರ್ಣಕುಂಡಲ, ವಿವಿಧ ಕೊರಳ ಹಾರಗಳು, ಯಜ್ಞೋಪವೀತ, ಸೊಂಟಕ್ಕೆ ವಸ್ತ್ರ ಮತ್ತ ಪಟ್ಟಿ, ವೈಜಯಂತಿ (?), ತೋಳಿನಲ್ಲಿ ಪಟ್ಟಿ, ಕೈ-ಕಾಲುಗಳಲ್ಲಿ ಬಳೆ-ಕಡಗ ಇತ್ಯಾದಿ ವಸ್ತ್ರಾಭರಣಗಳನ್ನು ಧರಿಸಿದ ಶಿಲ್ಪಗಳು ಸಾಮಾನ್ಯ.

ಕೆಳಗಡೆ ನಿಂತ ಸಣ್ಣ ನಂದಿ (ಆತನ ಬಲಗಡೆ) ಮತ್ತು ಚೌರಿಹಿಡಿದ ಸೇವಕಿ (ಆತನ ಎಡಗಡೆ) ಮತ್ತು ನಿಂತ ಶಿವನ ಶಿಲ್ಪವು ಕೋಟೆ ಒಳಗಿದೆ (ಚಿತ್ರ ನಂ ೮). ಅಂಬಿಗರ ಚೌಡಯ್ಯನ ಮಠದ ಹೊರಗಡೆಯಲ್ಲಿ ಕುಳಿತ ಶಿವನ ಶಿಲ್ಪವಲ್ಲಿ ಮೇಲಿನ ಎಡಗೈಯಲ್ಲಿ ನಾಗ ಬದಲು ಖಟ್ವಾಂಗ ಹಿಡಿದಿದ್ದನ್ನು ಕಾಣಬಹುದು.

ಆದರೆ ಉರಿಲಿಂಗಪೆದ್ದಿಮಠದ ಹೊರಗೆ ಸವ್ಯಲಲಿತಾಸನದಲ್ಲಿ ಕುಳಿತ ಶಿವನ ಶಿಲ್ಪ ವಿಶೇಷವಾಗಿದೆ. ನಾಲ್ಕು ಕೈಗಳಲ್ಲಿ ಜಪಮಾಲೆ (ಅಭಯ), ತ್ರಿಶೂಲ, ನಾಗ ಮತ್ತು ಕಪಾಲಗಳಿವೆ. ಇಂತಹ ವೈಶಿಷ್ಟತೆಗಳು ಈ ಶಿಲ್ಪದಲ್ಲಿವೆ. ಇವುಗಳ ಕಾಲ ಕ್ರಿ. ಶ. ಸುಮಾರು ೧೧-೧೨ ನೇ ಶತಮಾನ.

ಕಾರ್ತಿಕೇಯ :

ಬಸವಕಲ್ಯಾಣದ ಪರುಪಕಟ್ಟೆ ಹತ್ತಿರ ಮಾಲೀಪಾಟೀಲರ ಮನೆ ಮುಂದೆ ಒಂದು ಸುಂದರ ಕಾರ್ತಿಕೇಯ ವಿಗ್ರಹ ದೊರೆತಿದೆ (ಚಿತ್ರ ನಂ ೧೧). ಈ ಭಾಗದಲ್ಲಿ ಕಾರ್ತಿಕೇಯ (ಸುಬ್ರಮಣ್ಯನ) ಶಿಲ್ಪಗಳು ಬಹಳ ಕಡಿಮೆ. ಅಲ್ಲಿಯ ಆರು ಮುಖವುಳ್ಳ ಕಾರ್ತಿಕೇಯನಿಗೆ ಚತುರ್ಭುಜಗಳಿವೆ. ಅಭಯ (ಜಪಮಾಲೆ), ಅಂಕುಶ, ಪಾಶ ಮತ್ತು ಫಲಗಳು ಕೈಗಳಲ್ಲಿವೆ. ಸವ್ಯಲಲಿತಾಸನದಲ್ಲಿ ಕುಳಿತಿದ್ದು ತನ್ನ ಎಡಗಾಲನ್ನು ಮಾತ್ರ ಒಂದು ಪಕ್ಷಿಯ ಹಿಂದಿನ ರೆಕ್ಕೆಮೇಲೆ ಇಟ್ಟಿದ್ದಾನೆ. ಎಡಗಡೆಯ ಕೊನೆ ತಲೆ-ಮುಖ ಒಡೆದಂತೆ ತೋರುತ್ತದೆ. ಸುಂದರ ಜಟೆಗಳಿವೆ, ಸರಳ ಹಾರ ಕೊರಳಲ್ಲಿ, ಯಜ್ಞೋಪನೀತ (ಉದರದಲ್ಲಿ), ಉದರಪಟ್ಟಿ, ಸೊಂಟಪಟ್ಟಿಯಿವೆ. ಸೊಂಟಪಟ್ಟಿಯ ವಸ್ತ್ರ ಮುಂದುಗಡೆ ಇಳಿ ಬಿಡಲಾಗಿದೆ, ಕೈ ಕಾಲುಗಳಲ್ಲಿ ಬಳೆ ಮತ್ತು ಕಡಗಗಳಿವೆ. ಈ ಪಕ್ಷಿ ಬಹುಶಃ ನವಿಲಿರಬೇಕು. ಮೇಲ್ಗಡೆ ತ್ರಿಕೋನದಲ್ಲಿ ಈ ಶಿಲ್ಪವಿದೆ. ಈ ವಿಗ್ರಹದ ಸುತ್ತ ಮುತ್ತ ಯಾವ ಅಲಂಕಾರಗಳಿಲ್ಲ. ಇಂತಹ ಶಿಲ್ಪ ಕಲ್ಯಾಣದಲ್ಲಿ ದೊರೆತಿರುವುದು ವಿಶೇಷವಾಗಿದೆ. ಈ ಶಿಲ್ಪದ ಕಾಲ ಕ್ರಿ. ಶ. ಸುಮಾರು ೧೧ನೇ ಶತಮಾನ.

ಕಾಮಿಂಕಾಗಮ ಪ್ರಕಾರ ಆಳುವ ಅರಸರ ರಾಜಧಾನಿಯಲ್ಲಿ ಸುಬ್ರಹ್ಮಣ್ಯನ ದೇವಾಲಯದ ಮೂರ್ತಿಗೆ ಆರು ಮುಖಗಳು, ಆರು ಕೈಗಳು, ಹನ್ನೆರಡು ಕಣ್ಣು,

ಗಳು ಮತ್ತು ಹನ್ನೆರಡು ಅಥವಾ ಆರು ಕಿವಿಗಳಿರುತ್ತವೆನ್ನಲಾಗಿದೆ. ಈ ರೀತಿಯ ಕಾರ್ತಿಕೇಯನ ವಿಗ್ರಹಗಳನ್ನು ಗ್ರಾಮ ಅಥವಾ ಪ್ರಾಸಾದದಲ್ಲಿ ನಿಲ್ಲಿಸಿರುತ್ತಾರೆ. ಅದಕ್ಕೆ ಹನ್ನೆರಡು ಕೈಗಳಿರುತ್ತವೆ. ಕೈಯಲ್ಲಿ ಯಾವ ಯಾವ ಉಪಕರಣಗಳಿರಬೇಕು ಎಂಬುದನ್ನು ಅದರಲ್ಲಿ ವಿವರಿಸಲಾಗಿದೆ (ಗೋಪಿನಾಥರಾವ್, ಭಾಗ-೨, ಪು. ೪೨೮-೨೯).

ಈ ಶಿಲ್ಪದ ಕಾಲಮಾನ, ದೊರೆತ ನೆಲೆಗಳನ್ನು ಪರಿಶೀಲಿಸಿದಾಗ ಬಹುಶಃ ಕಲ್ಯಾಣ ಚಾಲುಕ್ಯರಿಗೆ ಈಗಿನ ಬಸವಕಲ್ಯಾಣವು ಆಗ ರಾಜಧಾನಿಯಾಗಿದ್ದುದರಿಂದ ಈ ಶಿಲ್ಪವನ್ನು ಅಲ್ಲಿ ಸ್ಥಾಪಿಸಿರಬಹುದೆಂದು ತಿಳಿಯಬಹುದು. ಈ ಶಿಲ್ಪ ದೊರೆತ ನೆಲೆಯು ಈಗಿರುವ ಅಲ್ಲಿಯ ಕೋಟೆಗೆ ಹತ್ತಿರವಿದೆ. ಶೈಲಿಯ ದೃಷ್ಟಿಯಿಂದ ಆ ಶಿಲ್ಪವು ಕ್ರಿ. ಶ. ಸುಮಾರು ೧೧ ನೇ ಶತಮಾನ ಎಂಬುದನ್ನು ಗಮನಿಸಬೇಕು.

ಉಮಾ-ಮಹೇಶ್ವರ :

ಉಮಾ-ಮಹೇಶ್ವರರ ಪ್ರತ್ಯೇಕ ಮತ್ತು ನಂದಿ ಮೇಲೆ ಕುಳಿತು ಅವರು ಸವಾರಿಮಾಡುವ ವೈವಿಧ್ಯಮಯ ಶಿಲ್ಪಗಳು ಈ ಭಾಗದಲ್ಲಿವೆ. ಉಮೆಯು ಮಹೇಶ್ವರನ ತೊಡೆಯಮೇಲೆ ಕುಳಿತು ಹಾಗೂ ಬದಿಯಲ್ಲಿ ಕೆಳಗೆ ನಂದಿಯ ಚಿತ್ರವುಳ್ಳ ಶಿಲ್ಪಗಳು ಸಾಮಾನ್ಯ. ಮಹೇಶ್ವರ ಚತುರ್ಭುಜನಾಗಿದ್ದು ಕೈಯಲ್ಲಿ-ಅಭಯಹಸ್ತದಲ್ಲಿ ಜಪಮಾಲೆ, ತ್ರಿಶೂಲ, ನಾಗ ಮತ್ತು ತೊಡೆಯ ಮೇಲೆ ಕೂಡಿಸಿಕೊಂಡ ಉಮೆಯನ್ನು ಹೆಗಲಮೇಲೆ ಕೈಹಾಕಿ ಅಪ್ಪಿಕೊಂಡಿರುವುದು; ಉಮೆಯು ದ್ವಿಭುಜದಲ್ಲಿದ್ದು ಬಲಗೈಯಿಂದ ಮಹೇಶ್ವರನ ಸೊಂಟವನ್ನು ಹಿಡಿದು ಅಪ್ಪಿಕೊಂಡಿರುವುದು, ಅವಳು ಎಡಗೈಯಲ್ಲಿ ಕಮಲ ಹಿಡಿದಿರುವುದು ಸಾಮಾನ್ಯ. ಕೆಲವು ಶಿಲ್ಪಗಳಲ್ಲಿ ಅವರ ಕೆಳಗೆ ಅಥವಾ ಬದಿಗಳಲ್ಲಿ ಗಣೇಶ, ಕಾರ್ತಿಕೇಯ, ಭಕ್ತ, ವಾದ್ಯಮೇಳದವರ ಚಿತ್ರಗಳನ್ನು, ಉಮಾ-ಮಹೇಶ್ವರರ ಮೇಲ್ಗಡೆ ಹೂ-ಬಳ್ಳಿಯ ತೋರಣದ ಅಲಂಕಾರದಲ್ಲಿ ಹಾಗೂ ಅವರ ದೇಹಬದಿಗಳಲ್ಲಿ ಮತ್ತು ಮೇಲ್ಗಡೆ ಮಧ್ಯದಲ್ಲಿ ಚಿಕಣಿಯಾಕಾರದ ಗೂಡುಗಳು ಅದರಲ್ಲಿ ಶಿವ, ಸೂರ್ಯ ಮತ್ತು ವಿಷ್ಣು ಇವರ ಚಿತ್ರಗಳು ವಿಶೇಷವಾಗಿವೆ. ಅರ್ಧಗಂಬಗಳಿಂದ ಗೂಡುಗಳು ಅಲಂಕೃತಗೊಂಡಿವೆ. ಸೂರ್ಯನಿಗೆ ದ್ವಿಭುಜ ಉಳಿದವರಿಗೆ ಚತುರ್ಭುಜ. ಉಮಾ-ಮಹೇಶ್ವರರು ವಸ್ತ್ರಾಭರಣಗಳಿಂದ ಅಲಂಕೃತಗೊಂಡಿದ್ದು ಮಹೇಶ್ವರನಿಗೆ ಜಟಾಮುಕುಟ, ಕರ್ಣಕುಂಡಲ, ಕಂಠಹಾರ, ಸೊಂಟಪಟ್ಟಿ (ಕಟಿಸೂತ್ರ), ಯಜ್ಞೋಪವೀತ, ಬಳೆ, ನಾಗಬಂಧ, ಕಡಗಗಳನ್ನು; ಉಮೆಗೆ ಕಿರೀಟಮುಕುಟ, ಕರ್ಣಕುಂಡಲ, ಹಾರ, ಬಳೆ, ಕಡಗ, ವಸ್ತ್ರ ಇತ್ಯಾದಿ ವಸ್ತ್ರಾಭರಣಗಳನ್ನು ಧರಿಸಿರುವುದು ಸಾಮಾನ್ಯ.

ಶಿವಪುರದ ಶಿವಮಂದಿರ ಶಿಲ್ಪದಲ್ಲಿ ಉಮಾ-ಮಹೇಶ್ವರರು ನಂದಿಮೇಲೆ ಕುಳಿತಿರುವುದನ್ನು ಹಾಗೂ ಮಹೇಶ ತನ್ನ ಎಡಗಾಲನ್ನು ಒಂದು ಪ್ರಾಣಿಯ ಮೇಲಿಟ್ಟಿರುವುದು, ಬಸವೇಶ್ವರ ಶಿಶುವಿಹಾರ ಶಾಲೆಯ ಆವರಣದ ಶಿಲ್ಪದಲ್ಲಿ ಸಿಂಹ. ಪೇಟೆ ರಸ್ತೆ ಬದಿಯ ಮಾರುತಿ ಮಂದಿರದ ಶಿಲ್ಪದಲ್ಲಿ ಉಮೆಯ ಕೆಳಗೆ ನಂದಿಯಿದ್ದು, ಮಹೇಶನು ತನ್ನ ಕೆಳ ಎಡಗೈಯಿಂದ ಉಮೆಯ ಕುಚವನ್ನು ಅಪ್ಪಿಕೊಂಡಿದ್ದು, ಅವರ ಕೆಳಗೆ ಎಡಕ್ಕೆ ಚತುರ್ಭುಜ ಗಣೇಶ, ಮೇಲೆ ಚೌರಿಹಿಡಿದ ಸೇವಕ ಮಹೇಶನ ತಲೆ ಬಲಕ್ಕೆ, ಉಮೆಯ ತಲೆ ಎಡಗಡೆ ಚೌರಿ ಹಿಡಿದ ಹೆಂಗಸು ಇರುವದು ವಿಶೇಷವಾಗಿದೆ (ಚಿತ್ರ ನಂ. ೯). ಕೋಟೆ ಒಳಗಿನ (ಬ. ಕ.) ಶಿಲ್ಪದಲ್ಲಿ ಕೆಳಗೆ ಎಡಗಡೆ ನವಿಲ ಮೇಲೆ ಕುಳಿತ ಕಾರ್ತಿಕೇಯ ಹಾಗೂ ಮೂರು ಚಿಕ್ಕ ಗೂಡುಗಳಲ್ಲಿ : ಗರುಡ ವಿಷ್ಣುವನ್ನು ಹೊತ್ತು ನಿಂತದ್ದು (ಅವರ ಎಡಗಡೆಗೆ), ಸಮಭಂಗದಲ್ಲಿ ಶಿವನಿಂತಿರುವದು ಮೇಲ್ಭಾಗದಲ್ಲಿ ಬ್ರಹ್ಮ (ಬಲಗಡೆಗೆ) ತೋರಿಸಲಾಗಿದೆ. ಕೈಮುಗಿದು ಕುಳಿತ ಇಬ್ಬರು ಭಕ್ತರನ್ನು ಕೆಳಗೆ ತೋರಿಸಲಾಗಿರುವುದು ವಿಶೇಷವಾಗಿದೆ.

ತ್ರಿಪುರಾಂತದ ಒಂದು ಮಠದ ಒಳಗಿನ ಗೋಡೆಯಲ್ಲಿರುವ ನಂದಿಮೇಲೆ ಸವಾರಿ ಮಾಡುವ ಶಿಲ್ಪ ಈ ಭಾಗದಲ್ಲಿ ಮಹತ್ವದ್ದಾಗಿದೆ.

ನಂದಿ :

ಸಾಮಾನ್ಯವಾಗಿ ಶೈವ ದೇವಾಲಯಗಳಲ್ಲಿ ಲಿಂಗದ ಎದುರು ನಂದಿಗೆ ವಿಶೇಷ ಸ್ಥಾನ ಕೊಟ್ಟು ಅದನ್ನು ಕೂಡಿಸುವ ಪದ್ದತಿ ರೂಢಿಯಲ್ಲಿತ್ತು. ಹೆಚ್ಚಾಗಿ ಅದನ್ನು ಸಭಾಮಂಟಪ (ಚಿತ್ರ ನಂ, ೧೧) ಅಥವಾ ಪ್ರತ್ಯೇಕ ತರೆದ ಮಂಟಪಗಳ ಮೇಲೆ ಲಿಂಗಕ್ಕೆ ಎದುರುಮಾಡಿ ಕೂಡಿಸಲಾಗುತ್ತಿತ್ತು. ಇಂದು ಸ್ಪಷ್ಟಪಡಿಸಲಿಕ್ಕೆ ಈ ಬಗ್ಗೆ ಪ್ರಾಚೀನ ದೇವಾಲಯಗಳ ಮೂಲಸ್ವರೂಪಗಳು ಅಲ್ಲಿ ಕಂಡುಬರುವದಿಲ್ಲ. ಈ ಶಿಲ್ಪಗಳು ಹೆಚ್ಚಾಗಿ ಕುಳಿತ ಭಂಗಿಯಲ್ಲಿರುವುದನ್ನು ಕಾಣಬಹುದಾಗಿದೆ. ಅವೆಲ್ಲವು ಕ್ರಿ. ಶ. ಸುಮಾರು ೧೧-೧೩ ನೆಯ ಶತಮಾನಕ್ಕೆ ಸೇರಿವೆ. ಇತ್ತೀಚಿನ ನಂದಿ ವಿಗ್ರಹಗಳೂ ಅಲ್ಲಲ್ಲಿವೆ. ನಾರಾಯಣಪುರ ದಾರಿಯ ಹಾಲುಬಸವನ ಗುಡಿಯಲ್ಲಿಯ ನಂದಿ ವಿಗ್ರಹ ಈ ಭಾಗದಲ್ಲಿ ತುಂಬ ಮುದ್ದಾಗಿದ್ದು, ಅದು ಅತ್ಯಂತ ದೊಡ್ಡ ನಂದಿ ವಿಗ್ರಹವಾಗಿದೆ (ಚಿತ್ರ ನಂ, ೧೦)..

ಭೈರವ :

ಬೀದರ ಜಿಲ್ಲೆಯ ಬೀದರ, ಭಾಲ್ಕಿ ತಾಲೂಕಿನ ಹಲವಾರು ಹಳ್ಳಿಗಳಲ್ಲಿ ವೈವಿಧ್ಯಮಯ ಭೈರವನ ಶಿಲ್ಪಗಳಿವೆ. ಬಸವಕಲ್ಯಾಣ ಭಾಗದಲ್ಲಿ (ಈ ತಾಲೂಕಿನ ಹಳ್ಳಿ

ಗಳನ್ನು ಹೊರತುಪಡಿಸಿ) ಭೈರವನ ಶಿಲ್ಪಗಳು ಈ ಸದ್ಯ ಅಲ್ಪಪ್ರಮಾಣದಲ್ಲಿ ಕಂಡು ಬಂದಿವೆ. ಬಹುಶಃ ಅವುಗಳು ಅಲ್ಲಿ ಭೂಗತವಾಗಿರುವ ಸಾಧ್ಯತೆಯಿದೆ. ಈಗ ಲಭ್ಯವಾದ ಈ ಶಿಲ್ಪಗಳಲ್ಲಿ ಭೈರವನು ತ್ರಿಭಂಗದಲ್ಲಿ ಬತ್ತಲೆಯಾಗಿ ನಿಂತಿರುವುದನ್ನು ಮತ್ತು ತನ್ನ ಚತುರ್ಭುಜದಲ್ಲಿ ಖಡ್ಗ, ಡಮರು, ತ್ರಿಶೂಲ ಮತ್ತು ಕಪಾಲಗಳನ್ನು ಹಿಡಿದಿದ್ದು ಚಪ್ಪಟೆಯಾದ ತಲೆಯಲ್ಲಿ ಕೂದಲನ್ನು ಹಿಂದಕ್ಕೆಳೆದು ಅಲಂಕರಿಸಿದ್ದು (ಉಂಗುರ ಕೂದಲ), ಕಿವಿಯಲ್ಲಿ ಕುಂಡಲ, ಕೊರಳಲ್ಲಿ ಸರ, ರುಂಡಮಾಲೆ, ಸೊಂಟಕ್ಕೆ ಗೆಜ್ಜೆಯ ಪಟ್ಟಿ, ಕಡಗ ಇತ್ಯಾದಿಗಳನ್ನು ಧರಿಸಿರುವುದು ಸಾಮಾನ್ಯ. ಕಲ್ಯಾಣ ಭಾಗದ ಭೈರವ ಶಿಲ್ಪಗಳ ಕಾಲ ಕ್ರಿ.ಶ. ಸುಮಾರು ೧೧–೧೨ನೇ ಶತಮಾನ. ಬಸವಕಲ್ಯಾಣ ಕೋಟೆ ಹತ್ತಿರ ಗೀರ ಕುಟುಂಬದ ಮನೆಗಳಿವೆ. ಅವರ ಕುಟುಂಬದವರ ಹಲವಾರು ಸಮಾಧಿಗಳು, ಕೆಲವು ಶಿಲ್ಪಗಳು ಅಲ್ಲಿವೆ. ಆ ಭಾಗದಲ್ಲಿ ದೊರೆತ ಒಂದು ಭೈರವ ಶಿಲ್ಪದಲ್ಲಿ (ಚಿತ್ರ ನಂ. ೧೬), ಆವಿಗೆಗಳನ್ನು ಧರಿಸಿ, ನಾಗಬಂಧವನ್ನು ತೊಡೆಗೆ, ತಲೆಯು ಕೂದಲಿಗೆ ಧರಿಸಿ, ಖಡ್ಗ, ಡಮರು, ತ್ರಿಶೂಲ ಮತ್ತು ಕಪಾಲಗಳನ್ನು ಹಿಡಿದು ನಿಂತಿದ್ದಾನೆ. ಬದಿಗೆ ಬೇತಾಳ, ನಾಯಿ (ಎಡ) ಮತ್ತು ಚೌರಿಹಿಡಿದ ಸೇವಕಿಯರಿದ್ದಾರೆ.

ಶಕ್ತಿದೇವತೆ :

ಕಲ್ಯಾಣ ಭಾಗದಲ್ಲಿ ಶಕ್ತಿದೇವತೆಯರ ಆರಾಧನೆಗೆ ಪ್ರೋತ್ಸಾಹ ದೊರೆತಿದೆ. ಆಳರಸರ ರಾಣಿಯರು ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ದೇವಿಯ ದೇವಾಲಯಗಳನ್ನು ಈ ಭಾಗದಲ್ಲಿ ಕಟ್ಟಿಸಿದ್ದುಂಟು. ರಾಣಿಯರು ತಮ್ಮ ಹೆಸರನ್ನು ಅವುಗಳಿಗೆ ಕೊಟ್ಟಿರುವ ಸಾಧ್ಯತೆಯಿದೆ. ಅಂತಹ ಉದಾಹರಣೆಗಳನ್ನು ಅಲ್ಲಿಯ ಶಿಲಾಶಾಸನಗಳು ನೀಡುತ್ತವೆ. ಬಸವಕಲ್ಯಾಣದ ಕ್ರಿ.ಶ. ೧೧೧೭ರ ಒಂದು ಶಾಸನದಲ್ಲಿ ಗೂರ್ಜರ ಮಲಯಮತಿ–ಮಹದೇವಿಯರ ದೇಗುಲದ ಉಲ್ಲೇಖವಿದೆ. ಈ ಭಾಗದಲ್ಲಿ ಚದುರಿದ ಕೆಲ ದೇವಾಲಯದ ಅವಶೇಷಗಳಲ್ಲಿ ದೇವಿಯ ಚಿತ್ರಗಳು ವಿವಿಧ ರೀತಿಯಲ್ಲಿ ಕಂಡುಬರುತ್ತಿರುವುದು ವಿಶೇಷವಾಗಿದೆ. ಮಹಿಷಮರ್ದಿನಿ, ಲಕ್ಷ್ಮಿ (ಗಜಲಕ್ಷ್ಮಿ), ಮಹಿಷಾಸುರಮರ್ದಿನಿ, ಚಾಮುಂಡಿ, ಕಾಳಿಕ, ಸಪ್ತಮಾತೃಕೆಯರ ಶಿಲ್ಪಗಳು – ಮುಖ್ಯವಾದ ಶಕ್ತಿದೇವತೆಗಳು ಈ ಭಾಗದಲ್ಲಿ ಕಂಡುಬಂದಿವೆ.

ಮಹಿಷಾಸುರಮರ್ದಿನಿ :

ಆರು, ನಾಲ್ಕು ಕೈಗಳ ಮಹಿಷಾಸುರಮರ್ದಿನಿ ಕೋಣನ ಮೇಲೆ ನಿಂತ ವೈವಿಧ್ಯಮಯ ಶಿಲ್ಪಗಳು ಈ ಭಾಗದಲ್ಲಿವೆ. ಕೋಟೆ ಒಳಗಿನ ಆರು ಭುಜವುಳ್ಳ ದೇವಿಯು ತನ್ನ ಬಲಗಾಲನ್ನು ಮಾತ್ರ ಮಹಿಷದ ಹೊಟ್ಟೆಯ ಮೇಲೆ ಭಾರಹಾಕಿ

ಇಟ್ಟಿದ್ದಾಳೆ. ಕೆಳಗಿನ ಬಲ ಮತ್ತು ಎಡಭಾಗದ ಮೇಲಿನ ಕೈಗಳಲ್ಲಿ ತ್ರಿಶೂಲ ಹಿಡಿದು ಅದರ ತುದಿಯನ್ನು ಕೋಣನ ಹೊಟ್ಟೆಯಿಂದ ಹೊರಬಂದ ಮಹಿಷನ ಹೊಟ್ಟೆಗೆ ಹಾಕಿದ್ದಾಳೆ (ಚಿತ್ರ ನಂ. ೧೨). ಅಡ್ಡವಾಗಿ ಹಿಡಿದ ಖಡ್ಗವು ಅವಳ ಬಲಗಡೆಯ ಮೇಲಿನ ಕೈಯಲ್ಲಿದೆ. ಎಡಗಡೆಯ ಮಧ್ಯದ ಕೈಯಲ್ಲಿ ಗುರಾಣಿ ಮತ್ತು ಅದರ ಕೆಳಗಿನ ಕೈಯಿಂದ ಮಹಿಷಾಸುರನ ತಲೆಯಕೂದಲನ್ನು ಬಿಗಿಯಾಗಿ ಹಿಡಿದು ಅವನನ್ನು ಮೇಲಕ್ಕೆ ಎತ್ತಿದ್ದಾಳೆ. ದೇವಿಯು ಕಿರೀಟ ಮುಕುಟ, ಕರ್ಣ ಕುಂಡಲ, ಕಂಟಹಾರ, ಸ್ಥನಹಾರ, ತೋಳಬಂಧ, ಮೇಖಲ, ಕಟಿಸೂತ್ರ, ಕಡಗ, ಕೈಬಳೆ ಇತ್ಯಾದಿ ವಸ್ತ್ರಾಭರಣಗಳಿಂದ ಅಲಂಕೃತಳಾಗಿದ್ದಾಳೆ. ಮಕರ ಅಥವಾ ಹೂಬಳ್ಳಿಗಳ ತೋರಣವನ್ನು ಈ ಶಿಲ್ಪದಲ್ಲಿ ತೋರಿಸಿಲ್ಲ. ಈ ಚಿತ್ರಬದಿಗಳಲ್ಲಿ ಅರ್ಧಕಂಬಗಳಿವೆ. ಇದರಿಂದ ಈ ಶಿಲ್ಪ ದೇವಾಲಯದ ಭಿತ್ತಿ ಭಾಗದ್ದೆಂದು ಹೇಳ ಬಹುದಾಗಿದೆ.

ಕೋಟೆಯಲ್ಲಿಯ ಮ್ಯೂಜಿಯಂ ಒಳಗಿನ ಒಂದು ಶಿಲ್ಪದಲ್ಲಿ (ಮಹಿಷಮರ್ದಿನಿ) ಚತುರ್ಭುಜ ದೇವಿಯು ತ್ರಿಶೂಲವನ್ನು ಕೆಳಗಿನ ಬಲಗೈಯಲ್ಲಿ ಹಿಡಿದು ಕೋಣನ ಶಿರಕ್ಕೆ ಅದರ ತುದಿಯನ್ನು ಹಾಕಿದ್ದಾಳೆ. ಬಲಗಡೆಯ ಮೇಲಿನ ಕೈಯಲ್ಲಿ ಚಕ್ರವಿದೆ. ಎಡಗಡೆಯ ಮೇಲಿನ ಕೈಯಲ್ಲಿ ಶಂಖ ಮತ್ತು ಕೆಳಗಿನ ಕೈಯಿಂದ ಕೋಣನ ಮುಖ ವನ್ನು ಒತ್ತಿ ಬಿಗಿಯಾಗಿ ಹಿಡಿದುಕೊಂಡಿದ್ದಾಳೆ. ಎಡಗಾಲನ್ನು ಕೋಣದ ಕೋಡುಗಳ ಮೇಲೆ ಭಾರಬಿಟ್ಟುನಿಂತಿದ್ದಾಳೆ. ಬಲಗಾಲನ್ನು ಕೋಣನ ಕುತ್ತಿಗೆ ಬದಿಯಲ್ಲಿಟ್ಟಿರುವಳು. ಕರಂಡಮುಕುಟ, ಕುಂಡಲ, ಕಂಟಹಾರ, ಕಟಿಬಂಧ, ಕಡಗ, ಕೈಬಳೆ, ತೋಳಲ್ಲಿ ಬಳೆಗಳನ್ನು ಧರಿಸಿದ್ದಾಳೆ. ಶಿವಪುರದ ಮಾರುತಿ ಮಂದಿರ ಮುಂದಿನ ಒಂದು ಶಿಲ್ಪ ದಲ್ಲಿ ಈ ದೇವಿಯ ಸಂಗಡ ಸಿಂಹವನ್ನು ತೋರಿಸಲಾಗಿದೆ. ಹಾಗೂ ಕೋಣನ ತಲೆಯನ್ನು ಎಡಗಡೆ ತೋರಿಸಿರುವುದು ವಿಶೇಷವಾಗಿದೆ. ಅವುಗಳು ಕ್ರಿ ಶ. ಸುಮಾರು ೧೧-೧೨ ನೇ ಶತಮಾನ.

ಚಾಮುಂಡಿ :

ವಿವಿಧ ಆಕಾರದ ಚಾಮುಂಡಿ ಶಿಲ್ಪಗಳು ಬೆಳಕಿಗೆ ಬಂದಿದ್ದು, ಕೆಲವುಗಳ ಮೇಲ್ಭಾಗ ಅರ್ಧ ವೃತ್ತಾಕಾರದಲ್ಲಿ ಮತ್ತು ಕೆಲವುಗಳು ಗೋಡೆ ಫಲಕಗಳಾಗಿವೆ. ಕೇವಲ ರಕ್ತ-ಮಾಂಸವಿಲ್ಲದ ಅಸ್ಥಿ ಅವಶೇಷದ ಭಾಗ, ಸುರನ ಮೇಲೆ ನಿಂತು ರುಂಡಮಾಲೆ ಧರಿಸಿಕೊಂಡು ನೃತ್ಯಮಾಡುವ ಚಿತ್ರ ಸಾಮಾನ್ಯ. ನಾಲ್ಕು ಮತ್ತು ಆರು ಕೈಗಳ ದೇವತೆಯ ಶಿಲ್ಪಗಳು ಈ ಭಾಗದಲ್ಲಿವೆ.

ಬಸವಕಲ್ಯಾಣ ಕೋಟೆ ಒಳಗಿನ ಒಡೆದ ಚಾಮುಂಡಿ ಶಿಲ್ಪದಲ್ಲಿ ಹಲವಾರು ವೈವಿಧ್ಯಮಯ ಚಿತ್ರಗಳಿವೆ. ಸೊಂಟದ ಮೇಲ್ಭಾಗ ಒಡೆದುಹೋಗಿದೆ, ಮತ್ತು

ಆ ಭಾಗ ಕಳೆದಿದೆ. ಉಳಿದ ಭಾಗದಲ್ಲಿ ತೊಡೆಯಿಂದ ಕೆಳಗಿನವರೆಗೆ ಬಲಗಾಲು ಮುರಿದು ಹೋಗಿದೆ ಕೆಳಗಡೆ ಇಳಿಬಿಟ್ಟ ಎಡಗೈಯಲ್ಲಿ ಕಠಾರಿಯಿದೆ ಮತ್ತು ಕಾಲಿನ ಮೇಲೆ ರುಂಡಮಾಲೆಯ ಭಾಗವಿದೆ. ತೊಡೆಗಳನ್ನು ನಾಗಸರ್ಪದಿಂದ ಬಿಗಿಯಾಗಿ ಕಟ್ಟಲಾಗಿದೆ. ಸೊಂಟಕ್ಕೆ ಅಗಲ ಪಟ್ಟಿಯನ್ನು ಕಟ್ಟಲಾಗಿದೆ. ರುಂಡ ಮಾಲೆ ಧರಿಸಿಕೊಂಡು ಸುರನ ಮೇಲೆ ನೃತ್ಯಮಾಡುವ ಈ ದೇವತೆಯ ದೇಹ ಮತ್ತು ಕಾಲುಗಳನ್ನು ಅಸ್ಥಿಯಂತೆ ತೋರಿಸಿರುವುದರಿಂದ, ಇದು ಚಾಮುಂಡಿಯ ಶಿಲ್ಪವೆಂದು ಸ್ಪಷ್ಟವಾಗುತ್ತದೆ (ಚಿತ್ರ ನಂ. ೧೩ ರಿಂದ ೧೫).

ಈ ಶಿಲ್ಪದಲ್ಲಿ ದೇವಿಯು ಮಲಗಿದ ಸುರನ ಮೇಲೆ ತನ್ನ ಎಡಗಾಲನ್ನು ಊರಿದ್ದಾಳೆ. ಸುರನು ಕಿರೀಟಧಾರಿಯಾಗಿದ್ದಾನೆ. ಸುರನ ಕಾಲನ್ನು ಬಿಗಿಯಾಗಿ ಎತ್ತಿ ಹಿಡಿದುಕೊಂಡು ಒಬ್ಬ ವ್ಯಕ್ತಿ ನಿಂತಿದ್ದಾನೆ. ಬಹುಶಃ ಅವನು ಬೇತಾಳನಿರ ಬೇಕು. ಈ ಬೇತಾಳ(?)ವು ನೆಲಕ್ಕೆ ಮಂಡೆಗಳನ್ನು ಊರಿ ದೇಹವನ್ನು ಮೇಲ ಕ್ಕೆತ್ತಿ ಸುರನ ಕಾಲನ್ನು ಹಿಡಿದಿರುವುದು ಬಹು ಕುತೂಹಲವಾಗಿದೆ. ಈ ಸುರನ ಕೆಳಗಡೆ ತಾಳ, ಡಮರು, ಮದ್ದಳೆ, ಕೊಳಲು(?)ಗಳನ್ನು ಹಿಡಿದ ವಾದ್ಯ ಮೇಳದ ನಾಲ್ವರು, ನೃತ್ಯಮಾಡುವನೊಬ್ಬ ಮತ್ತು ಮೂರು ವಿವಿಧ ಭಂಗಿಯಲ್ಲಿ ನಿಂತ ಮತ್ತು ಕುಳಿತವರ ಸಮೂಹವು ವೈವಿಧ್ಯಮಯವಾಗಿದೆ. ಸುರನ ಮುಖದ ಬಲಗಡೆ ನಿಂತ ಸೇವಕ-ಸೇವಕಿಯರು ಮತ್ತು ಚಾಮುಂಡಿಯ ಎಡಗಾಲಿನ ಬದಿಗೆ ಚೌರಿ ಹಿಡಿದ ಸೇವಕಿ ಮತ್ತು ಚಾಮುಂಡಿಯ ತೊಡೆಗೆ ಸುತ್ತುವರಿದ ನಾಗದ ಬಾಲವನ್ನು ಹಿಡಿದು ನಿಂತ ಸೇವಕಿಯರನ್ನು ತೋರಿಸಲಾಗಿದೆ. ಅವರ ಕೆಳಗಡೆ ಕೈಮುಗಿದು ಕುಳಿತಿರುವ ಭಕ್ತ ದಂಪತಿಗಳಿದ್ದಾರೆ. ಬಲಗಡೆ ನಿಂತ ಸೇವಕಿ ಅವಳ ಮೇಲ್ಭಾಗದಲ್ಲಿ ನಿಂತ ಯುವಕ ಸೇವಕ ಆತನ ಮೇಲೆ ಮತ್ತೊಬ್ಬ ಮನುಷ್ಯನ ಚಿತ್ರವಿದೆ. ಧರಿಸಿದ ಕೆಲ ಆಭರಣಗಳಿಗೆ ದುಂಡಾದ ಗುಂಡುಗಳನ್ನು ಕೂಡಿಸಲಾಗಿದೆ. ಈ ಶಿಲ್ಪದಲ್ಲಿ ಕಾಣುವ ವಿವಿಧ ವಾದ್ಯಮೇಳ, ನೃತ್ಯಗಾರ್ತಿ, ಬೇತಾಳ, ಭಕ್ತದಂಪತಿಗಳ, ಸೇವಕ-ಸೇವಕಿ ಯರ ಚಿತ್ರಗಳು ವಿಶೇಷವಾಗಿವೆ. ದೇವಾಲಯ ಹೊರಗೋಡೆಯ ಶಿಲ್ಪ ಇದಾಗಿರ ಬೇಕು.

ಕಾಳಿಕಾ :

ಬಸವಕಲ್ಯಾಣ ಭಾಗದಲ್ಲಿ ಕಾಳಿಕಾದೇವಿಯ ಶಿಲ್ಪಗಳಲ್ಲಿ ದೇವಿಯು ಸವ್ಯ ಲಲಿತಾಸನದಲ್ಲಿ ಅಥವಾ ಪದ್ಮಾಸನದಲ್ಲಿ ಕುಳಿತ ಭಂಗಿಯಲ್ಲಿದ್ದು, ಆಕೆಗೆ ಚತುರ್ಭುಜ ಗಳಿವೆ. ಕೈಗಳಲ್ಲಿ ಖಡ್ಗ. ಡಮರು, ತ್ರಿಶೂಲ ಮತ್ತು ಫಲಗಳು, ಕಿರೀಟಮಕುಟ, ಕರ್ಣಕುಂಡಲ, ಕಂಟಹಾರ, ಕಟಿಸೂತ್ರ, ಹಾರ, ಬಳಿ, ಕಡಗ ಇತ್ಯಾದಿ ವಸ್ತ್ರಾಭರಣ

ಗಳು ಸಾಮಾನ್ಯ. ಧರಮ್ ಪ್ರಕಾಶ(ಬ.ಕ.)ಗಲ್ಲಿಯ ದುರಗಮ್ಮ ಮಂದಿರದ ಕಾಳಿಕಾ ಶಿಲ್ಪದಲ್ಲಿ ಆಕೆಯ ಕೈಗಳಲ್ಲಿ ಅಭಯ, ಖಡ್ಗ, ಡಮರು ಮತ್ತು ಕಪಾಲ ಗಳಿರುವುದು ವಿಶೇಷ. ಈ ಶಿಲ್ಪಗಳ ಕಾಲ ಕ್ರಿ.ಶ. ಸುಮಾರು ೧೧–೧೪ ನೇ ಶತಮಾನ.

ಸಪ್ತಮಾತೃಕೆ :

ಸಾಮಾನ್ಯವಾಗಿ ವೈದಿಕ ಪರಂಪರೆಯ ಶೈವದೇವಾಲಯಗಳ ಹೊರಗಿನ ಗೋಡೆಯ ಗೂಡು ಇತ್ಯಾದಿ ಭಾಗಗಳಲ್ಲಿ ಸಪ್ತಮಾತೃಕೆಯರ ಶಿಲ್ಪಗಳನ್ನು ನಿಲ್ಲಿಸು ತ್ತಿದ್ದರು. ಈ ಫಲಕಗಳಲ್ಲಿ ಗಣೇಶ ಮತ್ತು ವೀರಭದ್ರರ ಮಧ್ಯ ಏಳು ಮಾತೃ ದೇವತೆಯರಾದ ಬ್ರಾಹ್ಮಿ, ವರಾಹಿ, ವೈಷ್ಣವಿ, ಮಹೇಶ್ವರಿ, ಚಾಮುಂಡಿ, ಇಂದ್ರಾಣಿ ಮತ್ತು ಕೌಮಾರಿಯರನ್ನು ತೋರಿಸಿದ ಚಿತ್ರಗಳಿರುತ್ತವೆ. ಅಂಥ ಕೆಲ ಫಲಕಗಳು ಈ ಭಾಗದಲ್ಲಿವೆ (ದೇವಾಲಯದ ಉತ್ತರಾಂಗದಲ್ಲಿ ಅವರ ಚಿತ್ರಗಳು ನಾರಾಯಣ ಪುರ ಗರ್ಭಗೃಹದ ಶಿವಮಂದಿರದಲ್ಲಿ ತೋರಿಸಿರುವುದು ಅಪರೂಪವಾಗಿದೆ. ಮತ್ತು ಈ ಗುಡಿಯ ಮುಂದಿನ ಒಂದು ಶಿಲ್ಪಫಲಕದಲ್ಲಿ ಈ ದೇವತೆಯರನ್ನು ವೈವಿಧ್ಯ ಮಯವಾಗಿ ಚಿತ್ರಿಸಿರುವುದು ವಿಶೇಷ). ಸಪ್ತಮಾತೃಕೆಯರ ಇಂತಹ ವೈಶಿಷ್ಟ್ಯತೆ ಯನ್ನು ಈ ಭಾಗದಲ್ಲಿ ಕಾಣುತ್ತಿರುವುದು ವಿಶೇಷವಾಗಿದೆ. ಬಸವಕಲ್ಯಾಣ, ಶಿವಪುರ ಮತ್ತು ತ್ರಿಪುರಾಂತಗಳಲ್ಲಿ ದೊರೆತ ಶೈವಶಿಲ್ಪಗಳು ಹೀಗಿರುತ್ತವೆ :

ಚತುರ್ಭುಜ ಗಣೇಶ :

೧. ಶಿವಮಂದಿರ (ಶಿವಪುರ) – ೧
೨. ಬಸವೇಶ್ವರ ಶಿಶುವಿಹಾರ ಆವರಣದಲ್ಲಿ (ಲಕ್ಷ್ಮೀ–ಗಣೇಶ–೧) (ಬ.ಕ*) – ೧
೩. ಹನುಮಾನ ಮಂದಿರ ಮುಂದೆ (ಶಿವಪುರ) – ೧
೪. ಹನುಮಾನ ಮಂದಿರ (ಬ.ಕ) – ೧
೫. ಮಹದೇವ ಗುಡಿ (ಬ.ಕ) – ೧
೬. ಪೇಟೆಯ ರಸ್ತೆಪಕ್ಕದ ಹನುಮಾನ ಗುಡಿ (ದ್ವಿಭುಜ ಗಣೇಶ) (ಬ.ಕ) – ೧
೭. ವಿಠೋಬ ಮಂದಿರ ಹತ್ತಿರದ ಗುಂಡಪ್ಪ ಮುಂಜುನಾಥ ಮನೆ ಮುಂದೆ (ಬ.ಕ) – ೨

* ಬ.ಕ. ಎಂದರೆ ಬಸವಕಲ್ಯಾಣ

೮. ವಿಠೋಬ ಮಂದಿರ ಹತ್ತಿರದ ಗುಂಡಪ್ಪ ಮಂಜನಾಥ ಮನೆ ಮುಂದೆ (ನೃತ್ಯ ಗಣೇಶ) (ಬ.ಕ) – ೧

೯. ನುಲಿಯ ಚಂದಯ್ಯನ ಮಠದ ಹೊರಗೆ (ಬ.ಕ) – ೧

೧೦. ಅದೇ ಒಳಗೆ " – ೧

೧೧. ಅಂಬಿಗರ ಚೌಡಯ್ಯನ ಮಠದ ಹತ್ತಿರದ ಹಿರೋಡ ಕಟ್ಟೆಯ ಮೇಲೆ (ಬ.ಕ) – ೧

೧೨. ಚಂದ್ರಕಾಂತ ಭವನ ಹೊಲ (ಬ.ಕ) – ೩

೧೩. ಬಾಲಾಜಿ ಮಂದಿರ (ಬ.ಕ) – ೩

೧೪. ಸದಾನಂದ ಮಠದ ಹತ್ತಿರ ಬಾವಿಯ ಗೋಡೆ (ಬ.ಕ) – ೪

೧೫. ಪ್ರಭುದೇವರ ಗದ್ದುಗೆ ಮಠ (ಬ.ಕ) – ೧

೧೬. ಬನಶಂಕರಿ ಗುಡಿ ಮುಂದೆ (ಬ.ಕ) – ೧

೧೭. ಮುರಲಿಂಗೇಶ್ವರ ದೇವಾಲಯದ ಗೋಡೆ (ಬ.ಕ) – ೨

೧೮. ಹುಂಜಿನಗಲ್ಲಿಯ ಹುನಸೆಮರದ ಕೆಳಗೆ (ಬ.ಕ) – ೧

೧೯. ಗೌಂಡಿಗಲ್ಲಿಯ ಚೌಶೆಟ್ರು ಮನೆ ಹತ್ತಿರ ಗಣಪತಿ ಗುಡಿ (ಬ.ಕ) – ೧

೨೦. ಗೌಂಡಿಗಲ್ಲಿಯ ಹನುಮಾನ ಮಂದಿರ (ಬ.ಕ) – ೧

೨೧. ಗಾಜಾಪುರ (ಹಜಾಮಗಲ್ಲಿ) ನಂದೀ ಮಂಟಪ (ಬ.ಕ) – ೧

೨೨. ಅಂಬಾಭವಾನಿ (ಪೇಟೆಯ ರಸ್ತೆ ಪಕ್ಕದಲ್ಲಿ) (ಬ.ಕ) – ೧

೨೩. ತ್ರಿಪುರಾಂತ ಕೆರೆಯ ಹನುಮಾನ ಮಂದಿರ – ೨

೨೪. ನುಲಿಯ ಚಂದಯ್ಯನ ಗುಹೆ (ಬ.ಕ) – ೧

೨೫. ಸೋಮವಾರ ಪೇಟೆಯ ಸೋಮೇಶ್ವರ ಗುಡಿ (ಬ.ಕ) – ೪

೨೬. ಸೋಮವಾರ ಪೇಟೆಯ ಹನುಮಾನ ಮಂದಿರ (ಬ.ಕ) – ೧

೨೭. ದೇಶಪಾಂಡೆಗಲ್ಲಿ ಶ್ರೀ ಭವಾನಿ ಮಂದಿರ (ಬ.ಕ) – ೧

೨೮. ದೇಶಪಾಂಡೆಗಲ್ಲಿಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠ (ಬ.ಕ) – ೧

೨೯. ರೋಕಡಾ ಮಾರುತಿ (ಹನುಮಂತ) ಗುಡಿ (ಬ.ಕ) – ೨

೩೦. ಗೋಸಾಯಿಂಗಲ್ಲಿಯ (ಶಿವಾಜಿ ಚೌಕ) ಅಂಬಾಭವಾನಿ ಮಂದಿರದ ಹೊರಗಡೆ (ಬ.ಕ) – ೨

೩೧. ದರ್ಗಾಹತ್ತಿರದ ಮಹದೇವ ಮಂದಿರ (ಬ.ಕ) (ನೃತ್ಯಗಣೇಶ) – ೧

೩೨. ಗೋಸಾಯಿಗಲ್ಲಿಯ ರುಬಗೀರ ಮಹಾರಾಜಮಂದಿರ ಸಮಾಧಿಗಳ ಮುಂದೆ (ಬ.ಕ) – ೧

೩೩. ಗೋಸಾಯಿಂಗಲ್ಲಿಯ ಮಹಂತರಾಮಘಿರ ಕೇಶವಘಿರ ಜಾಗೀರದಾರ ಮನೆಯ ಸಮಾಧಿಗಳ ಮುಂದೆ (ಬ.ಕ) – ೨

೩೪. ಗೋಸಾಯಿಂಗಲ್ಲಿಯ ತಾಪಿಗಿಂಜಿ ಮಹಾರಾಜರ ಸಮಾಧಿ ಮುಂದೆ (ಬ.ಕ) – ೧

೩೫. ರಜಪೂತಗಲ್ಲಿಯ ವಿಠ್ಠಲರುಕ್ಮಿಣಿ ಮಂದಿರ (ಬ.ಕ) – ೩

೩೬. ತ್ರಿಪುರಾಂತದ ಕಂಟೆಪ್ಪ ಕುದುರೆ ಮನೆ ಮುಂದೆ – ೨

೩೭. ಕೋಟೆ ಒಳಗೆ ಮತ್ತು ಮ್ಯೂಜಿಯಮ್ ಒಳಗೆ (ಬ.ಕ) – ೬

೩೮. ಗಣೇಶವಾಡಿ (ಬ.ಕ) – ೧

ಶಿವಲಿಂಗಗಳು (ದುಂಡುಲಿಂಗ ಪೀಠ) :

೧. ಶಿವಪುರದ ಹೊಲದಲ್ಲಿ ದುಂಡಾದ ಲಿಂಗಪೀಠ (ನಾಗರಿ ಲಿಪಿ) – ೧

೨. ಮಹದೇವ ಗುಡಿ (ಬ.ಕ) – ೧

೩. ಸದಾನಂದ ಮಠದ ಹತ್ತಿರದ ಆಲದಮರದ ಕೆಳಗೆ (ಬ.ಕ) – ೧

೪. ಅಕ್ಕನಾಗಮ್ಮನ ಗುಹೆ (ಬ.ಕ) – ೧

೫. ಪ್ರಭುದೇವರ ಗದ್ದುಗೆ (ಬ.ಕ) – ೧

೬. ಬಸವೇಶ್ವರ ಶಿಶುವಿಹಾರ (ಬ.ಕ) – ೧

೭. ವಂಡಿವಾಳ ಮಾಚಿದೇವನ ಗುಡಿ (ಎರಡು ಲಿಂಗಗಳು) (ಬ.ಕ) – ೧

೮. ಬಸವಕಲ್ಯಾಣದ ಪಾಶಾಪುರ ಓಣಿಯ ನಾಗರಕಟ್ಟೆ (ಮುಖವಾಡಗಳು) (ಬ.ಕ) – ೨

೯. ಬನಶಂಕರಿ ಗುಡಿಯಲ್ಲಿ ಒಳಗೆ–ಹೊರಗೆ (ಬ.ಕ) – ೨

೧೦. ಮೂರಲಿಂಗೇಶ್ವರ ದೇವಾಲಯ (ಒಂದು ಪೀಠದಲ್ಲಿ ಮೂರು ಲಿಂಗಗಳು, ಇನ್ನೊಂದರಲ್ಲಿ ಪಾದಗಳು ಪೀಠ) (ಬ.ಕ) – ೪

೧೧. ಸುಭಾಷ ಚೌಕದ ಶಂಕರಲಿಂಗೇಶ್ವರ ದೇವಾಲಯ ಒಳಗೆ ಮತ್ತು ಹೊರಗೆ (ಬ.ಕ) – ೨

೧೨. ಬಡಿಗೇರ ಓಣಿಯ ಗುಂಡಪ್ಪ ಚೌಧರಿ ಮನೆಯ ಮುಂದಿನ ಹಿರೋಡ ಕಟ್ಟೆಯ ಮೇಲೆ (ಮುಖವಾಡ) (ಬ.ಕ) – ೧

೧೩. ನುಲಿಯ ಚಂದಯ್ಯನ ಮಠದ ಹೊರಗೆ (ಬ.ಕ) – ೧

೧೪. ಧರ್ಮಪ್ರಕಾಶನಗರ ಪೂರ್ವದ ಹುಣಸೆಗಿಡ ಕೆಳಗೆ (ಬ.ಕ) – ೧

೧೫. ಅಂಬಿಗರ ಚೌಡಯ್ಯನ ಮಠ (ಪೀಠದಲ್ಲಿ ೨ ಪಾದಮುದ್ರೆಗಳು) (ಬ.ಕ)– ೧

೧೬. ಬಾಲಾಜಿ ಮಂದಿರ (ಬ.ಕ) – ೧

೧೭. ಪರುಪಂಕಟ್ಟೆ (ಬ.ಕ) – ೧

೧೮. ತ್ರಿಪುರಾಂತಕೆರೆ ದಂಡೆಯ ಹನುಮಾನ ಮಂದಿರ – ೧

೧೯. ಉರಿಲಿಂಗಪೆದ್ದಿಮಠ ಹೊರಗಡೆ (ಬ.ಕ) – ೧

೨೦. ಸೋಮವಾರಪೇಟೆಯ ಸೋಮೇಶ್ವರ ದೇವಾಲಯದಲ್ಲಿ ಬ್ರಹ್ಮಸೂತ್ರ ಲಿಂಗಪೀಠ (ಬ.ಕ) – ೧

೨೧. ರೋಕಡಾ ಮಾರುತಿ (ಹನುಮಾನ ಮಂದಿರ) (ಬ.ಕ) – ೫

೨೨. ಗೋಸಾಯಿಗಲ್ಲಿ ಅಂಬಾಭವಾನಿ ಮಂದಿರ ಹೊರಗಡೆ (ಬ.ಕ) – ೩

೨೩. ಗೋಸಾಯಿಗಲ್ಲಿಯ ನಾಗೋಬ ಸ್ಥಳ (ಬ.ಕ) – ೧

೨೪. ಮಹದೇವ ಮಂದಿರ ಹೊರಗಡೆ (ಬ.ಕ) – ೧

೨೫. ಗೋಸಾಯಿಗಲ್ಲಿಯ ತಾಪಿಗಿಂಜಿ ಮಹಾರಾಜರ ಸಮಾಧಿ ಮುಂದೆ (ಬ.ಕ)–೧

೨೬. ರಜಪೂತ ಗಲ್ಲಿ (ಬ.ಕ) – ೧

೨೭. ಹರಳಯ್ಯನ ಗುಹೆ (ಬ.ಕ) – ೧

೨೮. ಘನಲಿಂಗ ರುದ್ರಮುನಿ ಶಿವಾಚಾರ್ಯರ ಗಂಹೆ (ಮುಖವಾಡ–ಪೀಠ) (ಬ.ಕ) – ೧

೨೯. ನಾರಾಯಣಪೂರ ದಾರಿಯ ಹಾಲಬಸವನ ಗುಡಿ (ಬ.ಕ) – ೧

೩೦. ಬಸವೇಶ್ವರ ಮಂದಿರ (ಬ.ಕ) – ೧

ಶಿವ (ಕುಳಿತ) :

೧. ಕೋಟೆ ಒಳಗಿನ ಮ್ಯೂಜಿಯಂ (ಬ.ಕ) – ೧

೨. ಸದಾನಂದ ಮಠದ ಹತ್ತಿರ ಬಾವಿಯಲ್ಲಿ – ೧

೩. ಅಂಬಿಗರ ಚೌಡಯ್ಯನ ಮಠದ ಹೊರಗೆ (ಬ.ಕ) – ೧

೪. ಉರಿಲಿಂಗಪೆದ್ದಿಮಠ ಹೊರಗೆ (ಬ.ಕ)

೫. ಗೋಸಾಯಿಗಲ್ಲಿ ಅಂಬಾಭವಾನಿ ಮಂದಿರ ಹೊರಗಡೆ (ಬ.ಕ) – ೧

೬. ರಜಪೂರ ಗಲ್ಲಿ (ಬ.ಕ) – ೧

ಶಿವ (ಸಮಭಂಗ) :

೧. ಕೋಟೆ ಒಳಗೆ (ಬ.ಕ) –೧

ತ್ರಿಪುರಾಂತಕ :

೧. ನಾರಾಯಣಪುರ ದಾರಿಯಲ್ಲಿ ಹಾಲುಬಸವನ ಗುಡಿ ಗೋಡೆ (ಬ.ಕ)–೧
೨. ಹಂಲಸೂರ ದಾರಿಯ ಆಲದವಂರದ ಕೆಳಗಿನ ಈಶ್ವರ ಗುಡಿ (ಬ.ಕ)–೧

ಚತುರ್ಮುಖಲಿಂಗ :

೧. ಪರುಪಕಟ್ಟೆ ಹತ್ತಿರ (ಬ.ಕ) – ೧
೨. ಕೋಟೆ ಒಳಗಿನ ಮ್ಯೂಜಿಯಂ ಒಳಗೆ (ಬ.ಕ) – ೧

ನಟರಾಜ :

೧. ಗೋಡೆಫಲಕ (ಮ್ಯೂಜಿಯಂ) (ಬ.ಕ) – ೧
೨. ಬಸವೇಶ್ವರ ಶಿಶುವಿಹಾರ (ಬ.ಕ) – ೨
೩. ಸದಾನಂದಮಠದ ಹತ್ತಿರ ಬಾವಿಗೋಡೆ (ಬ.ಕ) – ೨
೪. ಗೌಂಡಿಗಲ್ಲಿ ಹನುಮಾನ ಮಂದಿರ ಒಳಗಡೆ (ಬ.ಕ) – ೧
೫. ನಂಲಿಯ ಚಂದಯ್ಯನ ಮಠದ ಹೊರಗೆ (ಬ.ಕ) – ೧
೬. ಸೋಮವಾರಪೇಟೆಯ ಸೋಮೇಶ್ವರಮಠ (ಬ.ಕ) – ೧

ಗಜಮರ್ದನ :

೧. ಉಮಾಪುರದಿಂದ ತಂದ ಕೋಟೆ ಒಳಗಿನ ಮ್ಯೂಜಿಯಂ (ಬ.ಕ) – ೧

ಉಮಾ–ಮಹೇಶ್ವರ :

೧. ಶಿವಮಂದಿರ (ಶಿವಪುರ) – ೧
೨. ಬಸವೇಶ್ವರ ಶಿಶುವಿಹಾರ (ಬ.ಕ) – ೧
೩. ಮಾಹದೇವ ಗಂಡಿ (ಬ.ಕ) – ೧
೪. ಸದಾನಂದಮಠ ಹತ್ತಿರ ಬಾವಿ (ಬ.ಕ) – ೧
೫. ಅಕ್ಕನಾಗಮ್ಮನ ಗಂಹೆ (ಬ.ಕ) - ೨

೬. ಗೌಂಡಿಗಲ್ಲಿಯ ಚೌಶೆಟ್ರ ಮನೆಯ ಹತ್ತಿರದ ಗಣಪತಿ ಗುಡಿ (ಬ.ಕ) – ೧

೭. ಗೌಂಡಿಗಲ್ಲಿಯ ಹನುಮಾನ ಮಂದಿರ (ಬ.ಕ) – ೨

೮. ಪೇಟೆಯ ರಸ್ತೆಪಕ್ಕದ ಹನುಮಾನ ಮಂದಿರ (ಬ.ಕ) – ೧

೯. ಅಂಬಿಗರ ಚೌಡಯ್ಯನ ಮಠದ ಹತ್ತಿರದ ಹಿರೋಡ ಕಟ್ಟೆ (ಬ.ಕ) – ೧

೧೦. ಮೇಘ್ಲೇಬ ಮಂದಿರ – ಉರಿಲಿಂಗ ಪೆದ್ದಿಮಠ ಹತ್ತಿರ (ಬ.ಕ) – ೧

೧೧. ದೇಶಪಾಂಡೆಗಲ್ಲಿಯ ಶ್ರೀಭವಾನಿ ಮಂದಿರ (ಬ.ಕ) – ೧

೧೨. ಕೋಟೆ ಒಳಗಡೆ (ಬ.ಕ) – ೧

೧೩. ಮಹದೇವ (ರಸ್ತೆ ಬದಿಗೆ) ಗುಡಿ ಒಳಗೆ (ಬ.ಕ) – ೧

೧೪. ನಂದಿ ಮೇಲೆ ಸೂರಿ ಮಾಡುವ ಶಿವ–ಪಾರ್ವತಿ (ತ್ರಿಪುರಾಂತ) – ೧

ಕಾರ್ತಿಕೇಯ :

೧. ಕಾಳಿಗಲ್ಲಿಯ ಬದ್ದಪ್ಪ ಮಾಲೀಪಾಟೀಲರ ಮನೆ ಮುಂದೆ (ಬ.ಕ) – ೧

ನಂದಿ :

೧. ಬಸವೇಶ್ವರ ಶಿಶುವಿಹಾರ (ಬ.ಕ) – ೨

೨. ತ್ರಿಪುರಾಂತಕ ಕೆರೆ ದಂಡೆಯ ಮೇಲೆ – ೧

೩. ಪ್ರಭುದೇವರ ಗದ್ದುಗೆ ಮಂಟಪ (ಬ.ಕ) – ೧

೪. ಮಡಿವಾಳ ಮಾಚಿದೇವನ ಮಂಟಪ (ಬ.ಕ) – ೧

೫. ಪರುಷ ಕಟ್ಟೆ (ಬ.ಕ) – ೧

೬. ಹಜಾಮಗಲ್ಲಿ (ಗಾಜಾಪುರ) ನಂದಿಮಂಟಪ (ಬ.ಕ) – ೧

೭. ಸೋಮವಾರಪೇಟೆಯ ಸೋಮೇಶ್ವರ ಮಂದಿರ ಒಳಗಡೆ (ಬ.ಕ) – ೧

೮. ಪಂಚಸೂತ್ರಗಲ್ಲಿ ಎದುರಿಗೆ (ಬ.ಕ) – ೧

೯. ಗೋಸಾಯಿಗಲ್ಲಿಯ ತಾಪಿಗಂಜಿ ಮಹಾರಾಜರ ಸಮಾಧಿ ಮೇಲೆ (ಬ.ಕ)–೧

೧೦. ನಾರಾಯಣಪುರ ದಾರಿಯ ಹಾಲಬಸವನ ಗುಡಿ (ಬ.ಕ) – ೨

ಭೈರವ :

೧. ಶಿವಮಂದಿರ (ಶಿವಪುರ) ಗೋಡೆ ಫಲಕ – ೧

೨. ಗೋಸಾಯಿಗಲ್ಲಿ ಅಂಬಾಭವಾನಿ ಮಂದಿರ ಹೊರಗಡೆ (ಬ.ಕ) – ೧

೩. ರಜಪೂತಗಲ್ಲಿ (ಬ.ಕ) –೧
೪. ರಜಪೂತಗಲ್ಲಿಯ ವಿಠ್ಠಲ ರುಕ್ಮಿಣಿ ಮಂದಿರ ಹೊರಗಿನ ಗೋಡೆ (ಬ.ಕ)– ೧
೫. ತ್ರಿಪುರಾಂತದ ವಿಠ್ಠಲ ಮಂದಿರ ಮುಂದೆ – ೧
೬. ಕೋಟೆ ಒಳಗಡೆ (ಬ.ಕ) – ೨

ಮಹಿಷಾಸುರ ಮರ್ದಿನಿ :

೧. ಶಿವಪುರ ಹನುಮಂತನ ಮಂದಿರ – ೧
೨. ಅಂಬಿಗರ ಚೌಡಯ್ಯನ ಮಠ ಹೊರಗೆ (ಬ.ಕ) – ೧
೩. ದೇಶಪಾಂಡೆಗಲ್ಲಿಯ ಶ್ರೀಭವಾನಿ ಮಂದಿರ (ಬ.ಕ) – ೧
೪. ಗೋಸಾಯಿಗಲ್ಲಿ (ಶಿವಾಜಿಚೌಕ) ಅಂಬಾಭವಾನಿ ಮಂದಿರ (ಬ.ಕ) – ೨
೫. ಕೋಟೆ ಒಳಗೆ (ಬ.ಕ) – ೨
೬. ಕೋಟೆಯ ಮ್ಯೂಜಿಯಂ (ಮಹಿಷಮರ್ದಿನಿ) ಒಳಗೆ – ೧

ಸಪ್ತಮಾತೃಕೆ :

೧. ದರವಾಜ್ ಪ್ರಕಾಶಗಲ್ಲಿಯ ದುರಗಮ್ಮ ಗುಡಿ (ಬ.ಕ) – ೧
೨. ರಜಪೂತಗಲ್ಲಿ – ೧
೩. ತ್ರಿಪುರಾಂತ ಧರ್ಮಶಾಲೆಯ ಹತ್ತಿರ ಶ್ರೀಪಾದರಾವ ಮನೆ ಮುಂದೆ – ೧
೪. ಕೋಟೆ ಒಳಗೆ – ೧

ಚಾಮುಂಡಿ :

೧. ಕೋಟೆ ಒಳಗಿನ ಮ್ಯೂಜಿಯಂ (ಬ.ಕ) – ೧
೨. ಅಶೋಕ ಭವನ ಹೊಲ (ಬ.ಕ) – ೧
೩. ಶಿವಮಂದಿರ ಗೋಡೆ ಫಲಕದ ಮೇಲೆ (ಬ.ಕ) – ೧
೪. ಸದಾನಂದ ಮಠದ ಒಳಗೆ (ಬ.ಕ) – ೧
೫. ಅಂಬಿಗರ ಚೌಡಯ್ಯನ ಮಠದ ಹೊರಗೆ (ಬ.ಕ) – ೧

ಕಾಳಿಕಾ :

೧. ಬನಶಂಕರಿ ಗುಡಿ (ಬ.ಕ) – ೧
೨. ಧರವಾಜ್ ಪ್ರಕಾಶಗಲ್ಲಿಯ ದುರಗಮ್ಮ ಮಂದಿರ (ಬ.ಕ) – ೧

೩. ದೇಶಪಾಂಡೆಗಲ್ಲಿಯ ಶ್ರೀ ಭವಾನಿ ಮಂದಿರ (ಬ.ಕ) – ೧

೪. ರಜಪೂತಗಲ್ಲಿಯಲ್ಲಿ (ಬ.ಕ) – ೧

ಮುಖ್ಯ ಅಂಶಗಳು :

೧. ಬಸವಕಲ್ಯಾಣ ಕ್ರಿ. ಶ. ೧೧–೧೨ ನೇ ಶತಮಾನಗಳಲ್ಲಿ ಚಾಲುಕ್ಯರಿಗೆ ರಾಜಧಾನಿಯಾಗಿತ್ತು. ಕೆಲಕಾಲಮಾತ್ರ ಅದು ಕಳಚುರಿಯರಿಗೂ ರಾಜಧಾನಿಯಾಗಿತ್ತು. ಸುಮಾರು ಒಂದೂವರೆ ಶತಮಾನ ಅಲ್ಲಿಂದ ಆಳಿದ ಚಾಲುಕ್ಯರಿಗೆ ಕಲ್ಯಾಣಚಾಲುಕ್ಯರೆಂದು, ಶೈವಧರ್ಮದ ಬೆಳವಣಿಗೆಗೂ ಅವರು ಅಮೋಘ ಪ್ರೋತ್ಸಾಹ ನೀಡಿ ಖ್ಯಾತಿಯನ್ನು ಹೊಂದಿದ್ದಾರೆ. ಚಾಲುಕ್ಯರ ಕಾಲದ ಶಿಲ್ಪ, ದೇವಾಲಯುಗಳು ಶಿಥಿಲಗೊಂಡು ಇಂದು ಹೇಳಿಕೊಳ್ಳುವಂಥ ಮೂಲ ದೇವಾಲಯುಗಳು ಅಲ್ಲಿಲ್ಲವಾಗಿವೆ. ಅವುಗಳ ಅವಶೇಷಗಳು ಮತ್ತು ಶಿಲ್ಪಗಳು ಹೆಚ್ಚಾಗಿ ತುಂಡು ತುಂಡಾಗಿ ಈ ನಗರದಲ್ಲಿ ಮೂಲೆ ಮೂಲೆಗಳಲ್ಲಿ ಹಂಚಿಹೋಗಿವೆ. ಈ ನಗರ ಸುತ್ತ ಮುತ್ತಲಿನಲ್ಲಿ ಕಂಡುಬಂದ ಶೈವಶಿಲ್ಪಗಳು ಚಾಲುಕ್ಯರ ಕಾಲದ ಶೈಲಿಯನ್ನು ಹೋಲುತ್ತವೆ. ತದನಂತರ ಕಾಲದ ಶಿಲ್ಪಗಳ ಸಂಖ್ಯೆ ಬಹಳಷ್ಟು ಕಡಿಮೆ. ಅದಕ್ಕೆ ರಾಜಕೀಯ ಸ್ಥಿತಿಗತಿಯೇ ಮುಖ್ಯಕಾರಣವಾಗಿರಬೇಕು. ಕ್ರಿ.ಶ. ೧೧ ನೇ ಶತಮಾನ ಪೂರ್ವದ ಯಾವ ಶಿಲ್ಪಗಳೂ ಕಲ್ಯಾಣದಲ್ಲಿ ದೊರೆತಿರುವದಿಲ್ಲ. ಆದರೆ ಜನವಸತಿಯ ಕುರುಹುಗಳು ಮಾತ್ರ ಅಲ್ಲಿಯ ಹಾಳುನೆಲೆಗಳಲ್ಲಿ ಕಂಡುಬಂದಿರುವುದು ವಿಶೇಷ.

೨. ಶೈವಧರ್ಮದ [ಕಲ್ಯಾಣದ] ಶಿಲ್ಪಗಳು ವೈವಿಧ್ಯಮಯವಾಗಿರುವುದನ್ನು ಕಂಡುಕೊಳ್ಳಲಾಗಿದೆ. ಪ್ರಥಮಬಾರಿಗೆ ಅವುಗಳ ಪ್ರಮಾಣ ಮತ್ತು ನೆಲೆಗಳನ್ನು ಗುರ್ತಿಸಲಾಗಿದೆ. ಡಾ. ಪಿ. ಬಿ. ದೇಸಾಯಿ ಅವರು ಅಲ್ಲಿಯ ಕೆಲ ಶಿಲ್ಪಗಳನ್ನು ಸ್ಥೂಲವಾಗಿ ವರದಿ ಮಾಡಿದ್ದಾರೆ. ಅಲ್ಲಿ ಕಂಡ ಎರಡು ರಾವಣನ ಶಿಲ್ಪಗಳಿಂದ ಮತ್ತು ರಾವಣಸಿದ್ಧಾಲಯ ಹೆಸರಿನ ದೇವಾಲಯದಿಂದ ರಾವಣನ ದೇವಸ್ಥಾನ ಅಲ್ಲಿದ್ದಿತೆಂದು ಅಭಿಪ್ರಾಯ ಪಟ್ಟಿದ್ದಾರೆ [ಪು. ೩೫೫]. ಆದರೆ ಅವುಗಳು ಪ್ರಾಚೀನ ದೇವಾಲಯದ ಗೋಡೆ ಫಲಕಗಳಾಗಿವೆ. ರಾಮಾಯಣ, ಮಹಾಭಾರತ, ಪಂಚ ತಂತ್ರ ಇನ್ನಿತರ ಪೌರಾಣಿಕ ಕಥೆಗಳನ್ನು ಚಿತ್ರಗಳ ಮೂಲಕ ದೇವಾಲಯಗಳ ಗೋಡೆಗಳ ಮೇಲೆ ತೋರಿಸುವ ಪದ್ಧತಿಯು ಪ್ರಾಚೀನ ಪರಂಪರೆ ಎಂಬುದನ್ನು ಗಮನಿಸಬೇಕು. ಆದರೆ ಈ ಶಿಲ್ಪಗಳನ್ನು ಅಧ್ಯಯನದಲ್ಲಿ ಕೂಡಿಸಿಕೊಂಡಿರುವುದಿಲ್ಲ. ಇಂತಹ ವಿವಿಧ ಶಿಲ್ಪಗಳು ಅಲ್ಲಿ ಕಂಡುಬಂದಿವೆ. ಅವುಗಳ ಬಗ್ಗೆ ಪ್ರತ್ಯೇಕ ಸಮಗ್ರ ಅಧ್ಯಯನ ಕೈಕೊಳ್ಳುವ ಅವಶ್ಯಕತೆಯಿದೆ.

೩. ಗಣೇಶನ ಚತುರ್ಭುಜ ಶಿಲ್ಪಗಳು ಸಾಮಾನ್ಯ. ದ್ವಿಭುಜ ಗಣೇಶನ ಶಿಲ್ಪ ಅಪರೂಪ. ನೃತ್ಯಗಣೇಶನ ಶಿಲ್ಪಗಳು ಅಲ್ಲಲ್ಲಿ ಕಂಡುಬಂದರೂ ಅವುಗಳು ದೇವಾಲಯದ ಗೋಡೆಫಲಕಗಳಾಗಿವೆ. ಬಸವಕಲ್ಯಾಣ ಹತ್ತಿರದ ಜಲಸಂಗಿಯ ಶಿವದೇವಾಲಯ ಗೋಡೆ ಮೇಲೆ ಈ ಕಾಲದ ವಿವಿಧ ಸುಂದರ ಶಿಲ್ಪಗಳಲ್ಲಿ ನೃತ್ಯಗಣೇಶ ಒಂದಾಗಿರುವುದು. ಭಾಲ್ಕಿ ತಾಲೂಕಿನ ಹಲವಾರು ಗ್ರಾಮಗಳಲ್ಲಿ ದ್ವಿಭುಜ, ಚತುರ್ಭುಜ ಮತ್ತು ನೃತ್ಯ ಗಣೇಶನ ಶಿಲ್ಪಗಳು ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಬೆಳಕಿಗೆ ಬಂದಿರುವುದನ್ನು ಇಲ್ಲಿ ಗಮನಿಸಬಹುದು [ಡಾ. ರು. ಮ. ಷಡಕ್ಷರಯ್ಯ]. ಈ ಜಿಲ್ಲೆಯಲ್ಲಿ ಲಕ್ಷ್ಮಿ-ಗಣೇಶನ ಶಿಲ್ಪ ಇಲ್ಲಿಯವರೆಗೆ ಎಲ್ಲಿಯೂ ಕಂಡುಬಂದಿಲ್ಲ. ಆದರೆ ಬಸವಕಲ್ಯಾಣದಲ್ಲಿ ಬೆಳಕಿಗೆ ಬಂದಿರುವುದು ಗಮನಾರ್ಹ.

ಶಿವಲಿಂಗಗಳ ಮೂಲ ಪೀಠಗಳು ಬೆಳಕಿಗೆ ಬಂದಿವೆ. ಆ ಲಿಂಗಪೀಠಗಳು ಹೆಚ್ಚಾಗಿ ದುಂಡಾಕಾರದಲ್ಲಿದ್ದು, ಕೆಲವುಗಳ ಮಧ್ಯ ಇತ್ತೀಚಿನ ಲಿಂಗಪಿಂಡಗಳನ್ನು ಕೂಡಿಸಿರುವುದು ಕಂಡುಬರುತ್ತದೆ. ಕೆಲವು ಲಿಂಗಗಳ [ಮೂಲ ಲಿಂಗಗಳ] ಮೇಲೆ ಬ್ರಹ್ಮಸೂತ್ರ[ಸೋಮಸೂತ್ರ]ಗಳಿವೆ. ಬಸವಕಲ್ಯಾಣ ನಗರದ ಬಸವೇಶ್ವರ ಶಿಶುವಿಹಾರ ಮುಂದೆ ಮತ್ತು ಸೋಮೇಶ್ವರ ದೇವಾಲಯ ಒಳಗಡೆ ಇರುವ ಇಂತಹ ಲಿಂಗಗಳು ಅಲ್ಲಿ ಮುಖ್ಯವಾಗಿವೆ. ಕೆಲವು ಲಿಂಗಗಳು ಅಲ್ಲಿ ಮುಖ್ಯವಾಗಿವೆ. ಕೆಲವು ಲಿಂಗಪೀಠಗಳ ಮೇಲೆ ಏಕಮುಖಗಳ ಚಿತ್ರಗಳನ್ನು ಕೊರೆಯಲಾಗಿದೆ. ಅಂತಹವುಗಳು ಈ ಭಾಗದಲ್ಲಿ ಕಾಣುತ್ತಿರುವುದು ವಿಶೇಷವಾಗಿದೆ. ಪಂಚಮುಖ ಲಿಂಗಗಳು ಕಡಿಮೆ. ಪರುಷಕಟ್ಟೆ ಹತ್ತಿರ ಈ ನಮೂನೆಯ ಹಾಗೂ ಆರು ಮುಖಗಳ ಕಾರ್ತಿಕೇಯ ವಿಗ್ರಹ ಕೋಟೆ ಹತ್ತಿರದ ಅಲ್ಲಿಯ ಮಾಲೀಪಾಟೀಲರ ಮನೆ ಮುಂದೆ ಹಾಗೂ ಹುಲಸೂರ ರಸ್ತೆ ಬದಿಯ ಚಿಕ್ಕಗಂಡಿಯಲ್ಲಿಯ ತ್ರಿಪುರಾಂತಕನ ಸುಂದರ ಶಿಲ್ಪ ದೊರೆತಿರುವುದು ವಿಶೇಷ. ಸಮಭಂಗದಲ್ಲಿ ಮತ್ತು ಪದ್ಮಾಸನದ ಪ್ರತ್ಯೇಕ ಶಿವನ ಶಿಲ್ಪಗಳಲ್ಲಿ ಹೇಳಿಕೊಳ್ಳುವ ವಿಶಿಷ್ಟತೆಯಿಲ್ಲ. ನೃತ್ಯಮಾಡುವ ಶಿವನ ನಟರಾಜನ ಶಿಲ್ಪಗಳಲ್ಲಿ ಅವನ ಭಕ್ತರನ್ನು, ವಾದ್ಯ, ನೃತ್ಯಮಾಡುವ ಸಮೂಹವಿರುವ ಶಿಲ್ಪದಿಂದ ಅದರ ವೈವಿಧ್ಯತೆಯನ್ನು ಎತ್ತಿ ತೋರಿಸುತ್ತವೆ. ಈ ಗುಂಪಿಗೆ ಅಲ್ಲಿಯ ಚಾಮುಂಡಿ, ಉಮಾ-ಮಹೇಶ್ವರರನ್ನು ಸೇರಿಸಬಹುದು. ಗೋಡೆ ಫಲಕಗಳಲ್ಲಿ ತೋರಿಸಿದ ನಟರಾಜನ ಶಿಲ್ಪಗಳಲ್ಲಿ ವೈವಿಧ್ಯತೆ ಎದ್ದುಕಾಣುತ್ತಿರುವುದು. ಗಜಮರ್ದನ ಶಿಲ್ಪವನ್ನು ಆ ಭಾಗದ ಉಮಾಪುರ ಗ್ರಾಮದಿಂದ ತರಲಾಗಿದೆ. ಅದು ಪೂಜಾವಿಗ್ರಹ. ಮಹಿಷಮರ್ದಿನಿಯರ ಎರಡು ನಮೂನೆ ಶಿಲ್ಪಗಳಲ್ಲಿ ಮೊದಲ ನಮೂನೆಯ ಶಿಲ್ಪಗಳು ಹೆಚ್ಚು. ಅವುಗಳಲ್ಲಿ ಸಿಂಹವನ್ನು ತೋರಿಸಿದ ಶಿಲ್ಪ. ಮಹಿಷಾಸುರ ಕೋಣದ ಬಾಯಿಂದ ಹೊರಬರುವುದನ್ನು ಸಾಮಾನ್ಯ

ವಾಗಿ ತೋರಿಸಿದ ಶಿಲ್ಪಗಳು ಆ ದೇವಿಯು ಕೋಣದ ಮೇಲೆ ಕಾಲಿಟ್ಟು ಸುರನನ್ನು ಸಂಹಾರ ಮಾಡುವ ಉಮಾ-ಮಹೇಶ್ವರ[ಸೋಮೇಶ್ವರ]ನ ಶಿಲ್ಪಗಳು ಅಲ್ಲಿ ಅಪರೂಪ. ಚಾಮುಂಡಿ, ಮಹಿಷಾಸುರಮರ್ದಿನಿ ಇತ್ಯಾದಿ ದೇವತೆಯರ ಶಿಲ್ಪಗಳು ಪೂಜೆಗಾಗಿ ಮಾಡಿದ್ದಾಗಿವೆ. ಕೆಲವುಗಳು ದೇವಾಲಯಂದ ಗೋಡೆ ಫಲಕಗಳಾಗಿವೆ.

ಪಾದಮುಂದ್ರೆಗಳ ಪೀಠಗಳು ಅಥವಾ ಅವಿಗೆ ಚಿತ್ರಗಳ ಪೀಠಗಳು ಹೆಚ್ಚಾಗಿ ಅಲ್ಲಿ ಕಂಡುಬಂದಿವೆ. ಶೈಲಿಯು ದೃಷ್ಟಿಯಿಂದ ಹೆಚ್ಚಾಗಿ ಅವುಗಳು ಕ್ರಿ.ಶ. ೧೨ ನೇ ಶತಮಾನದ್ದಾಗಿವೆ. ಈ ಕಾಲದ ವಚನಸಾಹಿತ್ಯ ಮತ್ತು ಶಾಸನ ಸಾಹಿತ್ಯದಿಂದ ಆ ಕಾಲದಲ್ಲಿ ಅದೊಂದು ಆಚಾರ್ಯ, ಮುನಿಗಳ ಮತ್ತು ಶಿವಶರಣ-ಶರಣೆಯರ ಮುಂತಾದ ತಪೋಧನರ ಬೀಡಾಗಿತ್ತು. ಈಗಿನ ಬಸವಕಲ್ಯಾಣವೆಂಬುದನ್ನು ಇಲ್ಲಿ ಗಮನಿಸಬೇಕು. ಆ ಪರಮಪೂಜ್ಯರ ಗೌರವದ್ಯೋತಕ ಪಾದಮುದ್ರೆಗಳು ಅವಾಗಿವೆ. ಆದರೆ ಅವರ ಹೆಸರುಗಳು ಮಾತ್ರ ತಿಳಿದಿಲ್ಲ. ತಿಳಿಯಲು ಸಾಧ್ಯವೂ ಇಲ್ಲ. ಆದರೆ ಅಲ್ಲಿಯ ಶಿವಶರಣರ ಗವಿ, ಮಠ, ಮಂದಿರಗಳು ಇಂದಿಗೂ ಖ್ಯಾತಿಯನ್ನು ಗಳಿಸಿರುವುದು ವಿಶೇಷವಾಗಿದೆ.

೩. ದುಂಡು ಶಿಲ್ಪಗಳು ಅಪರೂಪ. ಅವುಗಳು ಸಾಮಾನ್ಯವಾಗಿ ಎರಡು ವಿಧ. ಒಂದು ಆಯತಾಕಾರದ ಮತ್ತೊಂದು ಚತುರಸ್ರಾಕಾರ. ಕೆಲವು ಮಾತ್ರ ಮೊಟ್ಟೆಯಾಕಾರದಲ್ಲಿವೆ. ಹೂಬಳ್ಳಿಯ ಅಲಂಕಾರವನ್ನು ಶಿಲ್ಪಗಳಲ್ಲಿ ಅಪರೂಪವಾಗಿ ಕಾಣುತ್ತೇವೆ. ಬದಿಗಳಲ್ಲಿ ಅರ್ಧಗಂಬ, ಅವುಗಳ ಮೇಲೆ ಮಕರತೋರಣವುಳ್ಳ ಚಿತ್ರಗಳು ಅಲ್ಲಿಯ ಶಿಲ್ಪಗಳಲ್ಲಿ ಅಪರೂಪ. ಹೂಬಳ್ಳಿಯ ಚಿತ್ರಗಳಿದ್ದರೂ ಬಹು ಕಡಿಮೆ ಪ್ರಮಾಣದಲ್ಲಿ ಹಾಗೂ ಚಿಕ್ಕ ಚಿಕ್ಕ ಮೂರು ಗೂಡು, ಅವುಗಳಲ್ಲಿ ವಿವಿಧ ದೇವರು ತೋರಿಸುವ ಶಿಲ್ಪಗಳಿವೆ. ಉದಾಹರಣೆಗೆ ಅಲ್ಲಿಯ ಕೆಲವು ಉಮಾ-ಮಹೇಶ್ವರ ಶಿಲ್ಪಗಳಲ್ಲಿ ಕಾಣಬಹುದು. ಕೆಲವು ಶಿಲ್ಪಗಳಲ್ಲಿಯ ವಸ್ತ್ರಾಭರಣ ಭಂಗಿ, ಆಯುಧಗಳು ಉತ್ತರ ಭಾರತ ಶೈಲಿಯನ್ನು ಹೋಲುತ್ತವೆ. ಹಲವಾರು ಶಿಲ್ಪಗಳು ಕಾಕತೀಯರ ಶಿಲ್ಪಗಳನ್ನು ಹೋಲುತ್ತವೆ.

೪. ಅಲ್ಲಿಯ ದೇವಾಲಯಗಳ ಅವಶೇಷಗಳ ಅಧ್ಯಯನದಿಂದ ಅಲ್ಲಿ ಶೈವ ದೇವಾಲಯಗಳು ಎಷ್ಟಿದ್ದವು ಎಂಬುದನ್ನು ಹೇಳಲು ಪ್ರಯತ್ನಿಸಬಹುದಾಗಿದೆ. ಈಗಾಗಲೇ ಬೆಳಕಿಗೆ ಬಂದ ಶಿಲಾಶಾಸನಗಳ ಪ್ರಕಾರ ಕಲ್ಯಾಣದಲ್ಲಿ ಸುಮಾರು ಹನ್ನೆರಡು ಶೈವ ದೇವಾಲಯಗಳಿದ್ದವೆಂದು ತಿಳಿಯಲಾಗಿದೆ.

ಅಡಿಟಿಪ್ಪಣಿಗಳು* :

೧. ಕನ್ನಡ ಸಂಶೋಧನ ಸಂಸ್ಥೆಯ ವತಿಯಿಂದ ಬೀದರ ಜಿಲ್ಲೆಯ ಹಳ್ಳಿ-ಹಳ್ಳಿಗಳ ಪ್ರಾಚ್ಯ ವಸ್ತುಗಳ ಅನ್ವೇಷಣೆ ಕೈಕೊಂಡಾಗ ವಿವಿಧ ಧರ್ಮದ ಶಿಲ್ಪಗಳು, ಶಿಲಾಶಾಸನಗಳು ದೇವಾಲಯದ ಅವಶೇಷಗಳು ಕಂಡುಬಂದವು. ಈ ಅವಶೇಷಗಳು ಹೆಚ್ಚಾಗಿ ಶಿಥಿಲಗೊಂಡಿವೆ. ಹಲವಾರು ಸ್ಥಳಗಳಲ್ಲಿ ಚದುರಿಹೋಗಿವೆ. ಬಸವಕಲ್ಯಾಣ ಕೋಟೆಯಿಂದ ದಕ್ಷಿಣಕ್ಕೆ ನೇರವಾಗಿ ತ್ರಿಪುರಾಂತದ ಕಡೆ ರಸ್ತೆಯಿದ್ದು ಸುಮಾರು ಒಂದು ಕಿ.ಮೀ. ಗಿಂತ ಹೆಚ್ಚು ಅಂತರದ ಈ ರಸ್ತೆ ಬದಿಗಳಲ್ಲಿ ಅಂಗಡಿಗಳಿವೆ. ಜನವಸತಿಯು ಕೋಟೆ ಹತ್ತಿರದಿಂದ ಹಿಡಿದು ಈ ನೇರ ರಸ್ತೆ ಬದಿಗೆ ಪೂರ್ವ-ಪಶ್ಚಿಮದಲ್ಲಿ ಕೇಂದ್ರೀಕೃತವಾಗಿದೆ. ಶಿವಶರಣರ ನೆಲೆಗಳು ಈ ರಸ್ತೆ ಪಶ್ಚಿಮದಲ್ಲಿ ಹೆಚ್ಚಿದ್ದು, ಈ ನಗರದಲ್ಲಿ ಕೆಲವುಗಳಿರುವುದು ವಿಶೇಷವಾಗಿದೆ. ಈ ನಗರ ಪಶ್ಚಿಮಕ್ಕೆ ನಾರಾಯಣಪುರ ಹಾಗೂ ಶಿವಪುರದ ಕಡೆ ಸುಮಾರು ಎರಡು ಕಿ.ಮೀ. ಅಂತರದವರೆಗೆ ಹಾಳಾದ ಜನವಸತಿಯ ನೆಲೆಗಳಿದ್ದು ಅಲ್ಲಿ ಹೇರಳ ಗಡಿಗೆ-ಮಡಿಕೆ ಚೂರುಗಳು, ದಿನ ಬಳಕೆಯ ಕೆಲವು ಉಪಕರಣಗಳು, ಶಿಲ್ಪ ಅವಶೇಷಗಳು ಹುಗಿದು ಹೋಗಿವೆ. ಕ್ರಿ.ಶ. ಸುಮಾರು ೧೧-೧೨ನೇ ಶತಮಾನಕ್ಕೆ ಸೇರಿದ ಆ ಅವಶೇಷಗಳು ಇಷ್ಟೊಂದು ವಿಸ್ತಾರವಾಗಿರುವುದು ಮಹತ್ವದ್ದಾಗಿದೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಈ ಬಸವಕಲ್ಯಾಣ ನಗರ ಇಷ್ಟೊಂದು ವಿಸ್ತಾರವಾಗಿದ್ದಿತೆಂದು ಹೇಳಬಹುದಾಗಿದೆ.

೨. ಡಾ. ಪಿ. ಬಿ. ದೇಸಾಯಿ : ೧೯೬೦; "ಎಕ್ಸ್‌ಪ್ಲೊರೇಶನ್ ಆ್ಯಟ ಬಸವಕಲ್ಯಾಣ". ಪು. ೧೧೫-೧೧೬, ಜರ್ನಲ್ ಆಫ್ ಹ್ಯೂಮಾನಿಟೀಸ, ಕ.ವಿ.ವಿ. ಧಾರವಾಡ-೩.

ಡಾ. ಇ. ಎನ್. ಕಾಟಕರ : ಆರ್ಟ ಅಂಡ್ ಆರ್‌ಕಿಟೆಕ್ಚರ್ ಆಫ್ ದಿ ಚಾಲುಕ್ಯಾಸ್ ಆಫ್ ಕಲ್ಯಾಣ, ಪಿ.ಹೆಚ್.ಡಿ. ಥೀಸಿಸ್, ಕ.ವಿ.ವಿ. ಧಾರವಾಡ-೩.

ಬೀದರ ಡಿಸ್ಟ್ರಿಕ್ಟ ಗೆಜೆಟಿಯರ್ : ೧೮೭೭ : ಪ್ರೊಗ್ರೆಸ್ ಆಫ್ ಅರ್‌ಕ್ಯಾಲಜಿ ಇನ್ ಕರ್ನಾಟಕ ೧೯೫೬-೧೯೭೨; ಡೈರೆಕ್ಟರೇಟ ಆಫ್ ಅರ್‌ಕ್ಯಾಲಜಿ ಅಂಡ್ ಮ್ಯೂಜಿಯಂ ಇನ್ ಕರ್ನಾಟಕ, ಗವರ್ನ್‌ಮೆಂಟ ಆಫ್ ಕರ್ನಾಟಕ, ಮೈಸೂರು.

ಜೇಮ್ಸ ಬರ್‌ಜಸ್ : ೧೮೭೮ : ರಿಪೋರ್ಟ ಆನ್ ದಿ ಯಾಂಟಿಕ್ಯುಟೀಸ್ ಇನ್ ದಿ ಬೀದರ ಅಂಡ್ ಔರಂಗಾಬಾದ ಡಿಸ್ಟ್ರಿಕ್ಟ್, ಲಂಡನ್

ಡಾ. ರು. ಮ. ಷಡಕ್ಷರಯ್ಯ : ೧೯೮೫ : ಅರ್‌ಕ್ಯಾಲಜಿ ಆಫ್ ಬೀದರ ಡಿಸ್ಟ್ರಿಕ್ಟ ವಿತ್ ಸ್ಪೆಷಲ್ ರೆಫರೆನ್ಸ್ ಟು ಮಾಂಜ್ರಾ ಅಂಡ್ ಕಾರಂಜಾ ವ್ಯಾಲಿ, ಪಿಹೆಚ್.ಡಿ. ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

● ●

---

* ಬೀದರ ಜಿಲ್ಲೆಯ ಹಳ್ಳಿ-ಹಳ್ಳಿಗಳ ಪ್ರಾಚ್ಯವಸ್ತುಗಳ ಅನ್ವೇಷಣೆ ಮಾಡಲು ಹಾಗೂ ಅಧ್ಯಯನಕ್ಕೆ ಪರವಾನಿಗೆ ನೀಡಿದ ಕರ್ನಾಟಕ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ. ಎಸ್. ರಾಮೇಗೌಡ ಇವರಿಗೆ ಹಾಗೂ ಕುಲಸಚಿವರಾದ ಡಾ. ವ್ಹಿ. ವ್ಹಿ. ಬಡಿಗೇರ ಅವರಿಗೆ ಕೃತಜ್ಞತೆಗಳು. ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ನಿರ್ದೇಶಕರು ಬಸವಕಲ್ಯಾಣ ಇತ್ಯಾದಿ (ಬೀದರ ಜಿಲ್ಲೆಯಲ್ಲಿ) ಭಾಗದ ಪ್ರಾಚ್ಯ ಅವಶೇಷಗಳನ್ನು ಅಧ್ಯಯನ ಮಾಡಲು ಅನುಮತಿ ನೀಡಿದುದಕ್ಕೆ ಕೃತಜ್ಞತೆಗಳು.



1. ಗಣೇಶವಾಡಿಯ (ಬಸವ ಕಲ್ಯಾಣ) ಗಣೇಶ



34.ಬಸವೇಶ್ವರ ಶಿಶುವಿಹಾರದ ಮುಂದಿನ ಶಿವಲಿಂಗ



ಬಸವಕಲ್ಯಾಣದ ಸೋಮೇಶ್ವರ ದೇವಾಲಯದ ಶಿವಲಿಂಗ



17. ಬಡಿಗೇರ ಓಣಿಯ ಗುಂಡಪ್ಪ ಚೌಧರಿ ಮನೆ ಎದುರಿನ ಮುಖಲಿಂಗ (?)



15. ಬಸವಕಲ್ಯಾಣ–ಹುಲಸೂರ ದಾರಿ ಬದಿಯ ಆಲದಗಿಡ ಕೆಳಗಿನ ಮಂದಿರದ ತ್ರಿಪುರಾಂತಕ



3. ಬಸವಕಲ್ಯಾಣದ ಕೋಟೆ ಒಳಗಿನ ಮ್ಯೂಜಿಯಂನಲ್ಲಿರುವ ಚತುರ್ಮುಖ ಲಿಂಗ



5. ಬಸವಕಲ್ಯಾಣ ಕೋಟೆಯಲ್ಲಿರುವ ನಟರಾಜ





7. ಬಸವಕಲ್ಯಾಣ ಕೋಟೆ ಒಳಗಿನ ಮ್ಯೂಜಿಯಂನಲ್ಲಿರುವ ಗಜಮರ್ದನ



8. ಬಸವಕಲ್ಯಾಣ ಕೋಟೆ ಒಳಗಿರುವ ಶಿವ ದೇವಾಲಯದ ನೆಲಮಾಳಿಗೆ ಶಿವಲಿಂಗ



9. ಬಸವಕಲ್ಯಾಣ ಪೇಟೆಯ ಮುಖ್ಯ ರಸ್ತೆ ಬದಿಗಿರುವ ಮಾರುತಿ ಮಂದಿರದಲ್ಲಿರುವ ಉಮಾ ಮಹೇಶ್ವರ



10. ಬಸವಕಲ್ಯಾಣ ನಾರಾಯಣಪುರ ದಾರಿಯಲ್ಲಿರುವ ಹಾಲುಬಸವನ ಗುಡಿಯಲ್ಲಿರುವ ನಂದಿ



4. ಬಸವಕಲ್ಯಾಣ ಕೋಟೆಯಲ್ಲಿರುವ ಗೋಡೆಫಲಕದಲ್ಲಿ ನಟರಾಜ



11. (ಅ) ಮಾಲೀಪಾಟೀಲರ ಮನೆ ಮುಂದಿರುವ ಬ್ರಹ್ಮ (ಕಾರ್ತಿಕೇಯ)



16. ಬಸವಕಲ್ಯಾಣ ಗೀರ ಮನೆ ಹತ್ತಿರ ಭೈರವ



11. ಬಸವಕಲ್ಯಾಣ ಬಸವೇಶ್ವರ ಶಿಶುವಿಹಾರ ಮುಂದಿರುವ ಎರಡು ನಂದಿ ಮತ್ತು ಪಾದಮುದ್ರೆ (ಆವಿಗೆ) ಪೀಠ




12. ಬಸವಕಲ್ಯಾಣ ಕೋಟೆ ಒಳಗಿರುವ
ಮಹಿಷಾಸುರ ಮರ್ಧಿನಿ



13. ಬಸವಕಲ್ಯಾಣ ಚಾಮುಂಡಿ ವಿಗ್ರಹದ
ಕೆಳಭಾಗ



15. ಬಸವಕಲ್ಯಾಣ ಕೋಟೆ ಒಳಗಿನ
ಚಾಮುಂಡಿ (ಎಡಭಾಗ)



14. ಬಸವಕಲ್ಯಾಣ ಕೋಟೆ ಒಳಗಿನ
ಚಾಮುಂಡಿ (ಬಲಭಾಗ)

ಒರೆಗಲ್ಲು

೧. 'ನೂಲ ತೋಡಾಗದೆ' ಎಂದರೇನು ?

> ಭಾಗಮನಾಸೆವಟ್ಟಳಿಪಿ ಬೇಟ್ಪುದು ನಿನ್ನಯ ಕಲ್ತ ವಿದ್ಯೆ ನೀ
> ನಾಗಳುಮಣ್ಣ ಬೇಡಿದಪೆ ಸಜ್ಜನದಂತೆನಗೆಕ್ಕ ಬಾಗೆ ನೋ
> ಡೀಗಳಿಳಾ ಲತಾಂಗಿ ಪುದುವಲ್ಲಳದೆಂತೆನೆ ಮುನ್ನ ನೂಲ ತೋ
> ಡಾಗದೆ ಕೆಟ್ಟುಪೋದವರನಂ ಮಗುಟ್ದುಂ ನಿಱಿಪಂತುಂ ಬೆಳ್ಳನೇ ॥

ಪಂಪಭಾರತದ ಒಂಬತ್ತನೆಯ ಆಶ್ವಾಸದ ೪೬ ನೆಯ ಈ ಪದ್ಯದ ಆರಂಭದಲ್ಲಿ ಅರ್ಥವಾಗುವಂತಿದ್ದರೂ 'ನೂಲ ತೋಡಾಗದೆ' ಎಂಬ ಪ್ರಯೋಗದ ಅರ್ಥವು ಸ್ಫುಟವಾದಂತೆ ತೋರುವುದಿಲ್ಲ. ಶ್ರೀ ಡಿ. ಎಲ್. ಎನ್. ರವರ 'ಪಂಪಭಾರತ ದೀಪಿಕೆ'ಯಲ್ಲಿ ಮುನ್ನ = ಮೊದಲು, ನೂಲ ತೋಡಾಗದೆ = ಹರಿದ ನೂಲಿನಂತೆ ತಿರುಗಿ ಸೇರದೆ, ಕೆಟ್ಟು ಪೋದವರಂ = ಹಾಳಾದವರನ್ನು ... ... ಈ ರೀತಿ ಇದೆ.

ಡಾ. ಉಪ್ಪಂಗಳ ರಾಮಭಟ್ಟರು 'ಸಾಧನೆ' ಸಂಪುಟ ೧೭, ಸಂಚಿಕೆ ೧–೨ (ಜನವರಿ–ಜೂನ್ ೧೯೮೮) ರಲ್ಲಿ ಈ ಪ್ರಯೋಗದ ಅರ್ಥವನ್ನು ಸ್ಪಷ್ಟಪಡಿಸುವುದಕ್ಕೆ ಪ್ರಯತ್ನಿಸಿದ್ದಾರೆ. ಅವರ ಪ್ರಕಾರ "ಇದೊಂದು ಆಡುಮಾತಿನ ಶೈಲಿ. ಇಲ್ಲಿ ದುರ್ಯೋಧನನು ತನ್ನ ಮತ್ತು ಪಾಂಡವರ ವೈರವೆಷ್ಟು ಕಟುವಾದದ್ದೆಂದು ಹೇಳುತ್ತಾನೆ. ನೂಲು ಮುಟ್ಟಿದರೆ ಆಗದಷ್ಟು ಅಸ್ಪೃಶ್ಯತೆ, ವೈರ, ಮೈಲಿಗೆ, ವರ್ಜ್ಯ, ತೀರ ಅಸ್ಪೃಶ್ಯರಾದವರು. ವಿರೋಧಿಗಳು ಮುಟ್ಟಿದ ನೂಲು ಮುಟ್ಟಿದರೆ, ಮೈಲಿಗೆ ಕಡುಕು–ದಾಗಿದೆ ತಮ್ಮೊಳಗಿನ ವೈರ ಎಂದರ್ಥ ಎಂದದ್ದಲ್ಲದೆ 'ತೋಡು' ಧಾತು ಪ್ರಯೋಗ – ಇತ್ಯಾದಿಗಳನ್ನು ಹೇಳಿ – 'ನೂಲುಂ ಮುಟ್ಟಿದರೆ ಆಗದಷ್ಟು ಕೆಟ್ಟುಹೋದ ಪಾಂಡವರನ್ನು ಮತ್ತೆ ನೆಲೆಗೊಳಿಸುವಷ್ಟು ಮೂರ್ಖನೇ ನಾನು ಎಂಬ ದುರ್ಯೋಧನನ ಮಾತು ಈ ಸಂದರ್ಭಕ್ಕೆ ಅತ್ಯಂತ ಸಮರ್ಪಕವೆನಿಸುತ್ತದೆ" ಎಂದಿದ್ದಾರೆ.

ಡಾ. ರಾಮಭಟ್ಟರ ಈ ಅರ್ಥವಿವೇಚನೆ ಇನ್ನೂ ಸಮರ್ಪಕವಾಗಿಲ್ಲವೆಂದು ತೋರುತ್ತದೆ. ಅವರೆಂದಂತೆ ಇಲ್ಲಿ ದುರ್ಯೋಧನನು ತನ್ನ ಮತ್ತು ಪಾಂಡವರ ವೈರವೆಷ್ಟು ಕಟುವಾದದ್ದು ಎಂಬುದಾಗಿ ಹೇಳಿದ್ದಾನೆ ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲದಿದ್ದರೂ ಅಲ್ಲಿ ಅರ್ಥ ಅಷ್ಟು ಕ್ಲಿಷ್ಟವಿಲ್ಲವೆಂದು ಅನಿಸುತ್ತದೆ.

ಪಂಪನ ಆದಿಪುರಾಣದ ಹನ್ನೆರಡನೆಯ ಆಶ್ವಾಸದ ಒಂಬತ್ತನೇ ಪದ್ಯ ಈ ಕೆಳಗಿನಂತಿದೆ —

ಪಗಲಂತಿರ್ದಚ್ಚವೆಳ್ದಿಂಗಳನಿನಕಿರಣದ್ಯೋತಿಗೆತ್ತಾಗಳಾಗಳ್
ಮುಗಿದಿರ್ದಂಭೋಜಮೋರಂತಲರ್ದುವು ಬಿಸುಸುಯ್ಯುತ್ತಗಲ್ದಿರ್ದ ನೀರ್ವ
ಕ್ಕಿಗಳಾಗಳ್ ಕೂಡಿ ತೋಡಾದುವು ಕುವಲಯಮುವು ಪಂಡಂಗಳಾಶಂಕೆಯಿಂದಂ
ಮುಗಿಯಲ್ಕೆಂದಿರ್ದವೇನುಜ್ಜಳಿಸಿದುದೊ ಜಗಚ್ಚಕ್ರಮಂ ಚಂದ್ರಬಿಂಬಂ ॥

ಬೆಳುದಿಂಗಳಿನಿಂದಾಗಿ ಹಗಲಿನಂತೆ ಇದ್ದ ರಾತ್ರಿಯಲ್ಲಿ "ಅಗಲ್ದಿರ್ದ ನೀರ್ವಕ್ಕಿಗಳಾಗಳ್ ಕೂಡಿ ತೋಡಾದುವು" ಎಂದಿದೆ. ಇಲ್ಲಿ 'ತೋಡು' ಎಂದರೇನು ? ಆದಿಪುರಾಣದ ಇದೇ ಪ್ರಯೋಗಕ್ಕೆ ಕೊಟ್ಟು ಶ್ರೀಯುತ ಮರಿಯಪ್ಪ ಭಟ್ಟರಿಂದ ಪರಿಷ್ಕೃತ ಗೊಂಡ ಕಿಟ್ಟೆಲ್ ಕೋಶದ ೮೦೩ನೇ ಪುಟದಲ್ಲಿ couple, pair, together, company ಮೊದಲಾದ ಅರ್ಥ ಕೊಟ್ಟಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ–ಕನ್ನಡ ನಿಘಂಟುವಿನ ನಾಲ್ಕನೇ ಸಂಪುಟದ ೩೭೦೪ನೇ ಪುಟದಲ್ಲಿ ಆದಿಪುರಾಣದ ಇದೇ ಪ್ರಯೋಗಕ್ಕೆ ಕೊಟ್ಟು ಯುಗಳ, ಜೊತೆ ಎಂದರ್ಥವಿದೆ. ಕೇಶಿರಾಜ ಧಾತುಪ್ರಕರಣದಲ್ಲಿ ೨೯೦ನೇ ಧಾತು ತೋಡು ಎಂಬುದಕ್ಕೆ – ನಿಷ್ಪುಮಣೇ, ಯುಗ್ಮೀಚ ಎಂದಿದ್ದಾನೆ. ಜತೆ ಎಂಬುದೇ ಇದರ ಅರ್ಥ. ಆದುದರಿಂದ 'ಅಗಲ್ದಿರ್ದ ನೀರ್ವಕ್ಕಿಗಳಾಗಳ್ ಕೂಡಿ ತೋಡಾದುವು' ಎಂದರೆ ಅಗಲಿದಂತಹ ಚಕ್ರವಾಕ ಹಕ್ಕಿಗಳು ಜತೆಯಾದವು, ಬೆಸೆದವು, ಬಂದು ಸೇರಿದವು ಎಂದು ಸ್ಪಷ್ಟಾರ್ಥವಷ್ಟೆ. ಈ ಅಂತಸ್ಸಂಭಾವ್ಯತೆಯ ಅರ್ಥವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಪಂಪನ ಪಂಪ ಭಾರತದ ಪ್ರಯೋಗವನ್ನು ಪರಿಶೀಲಿಸಬಹುದು.

'ನೂಲ ತೋಡುವುದು' ಎಂಬ ಪದಪುಂಜ ಇಂದೂ ಕೂಡ ಗದಗ, ರಾಯ ಚೂರು, ದಕ್ಷಿಣ ಕರಾವಳಿಯ ನೇಕಾರರಲ್ಲಿ ಬಳಕೆಯಲ್ಲಿರುವುದು ಗಮನಾರ್ಹ. 'ಲಡಿ'ಯ ನೂಲನ್ನು 'ಕಬ್ಬಿ'ಗೆ (Reel) ಅಥವಾ 'ವಟ'ಯಾ 'ವಟಿ' ಗೆ ಸುತ್ತುವ ಕಾರ್ಯಕ್ಕೆ 'ನೂಲ ತೋಡುವುದು' ಎನ್ನುತ್ತಾರೆ. ಸಾಮಾನ್ಯವಾಗಿ ಮನೆಗಳಲ್ಲಿ ಹೆಂಗಸರು ತೊಡೆಯ ಮೇಲೆ, ಹಲಗೆಯ ಮೇಲೆ ಈ 'ವಟಿ'ಯನ್ನು ಇಟ್ಟು, ಅದಕ್ಕೆ 'ಲಡಿ'ಯ ಯಾ ರಾಟೆಯ ನೂಲನ್ನು ಸುತ್ತುತ್ತಾರೆ. ಇದೇ ನೂಲ ತೋಡು ವುದು. ಹೀಗೆ 'ತೋಡು'ವುದಕ್ಕೆ ನೂಲು ಯಾವ 'ಸಿಕ್ಕು' ಇಲ್ಲದೆ ಸರಾಗವಾಗಿ ಬರ ಬೇಕು. ಇಲ್ಲದಿದ್ದಲ್ಲಿ ಈ ಕ್ರಿಯೆ ನಡೆಯದು.

ಪಂಪನ ಆದಿಪುರಾಣದಲ್ಲಿ ಮತ್ತು ನೇಕಾರರ ಈ ಪದಪ್ರಯೋಗದಲ್ಲಿ ಇರುವ ಅರ್ಥಗಳನ್ನು ಗಮನದಲ್ಲಿಟ್ಟುಕೊಂಡು ಪಂಪಭಾರತದ ಈ ಪ್ರಯೋಗದ ಅರ್ಥ

ವನ್ನು ವಿವೇಚಿಸಬಹುದು. ಮುನ್ನ = ಮೊದಲು, ನೂಲ ತೋಡಾಗದೆ = ಎಂದರೆ ತೋಡುವುದಕ್ಕೆ ಸಿಕ್ಕದ 'ಸಿಕ್ಕು'ದ ನೂಲಿನಂತೆ ಸೇರದೆ, ಜೊತೆಯಾಗಿರದೆ, ಒಟ್ಟಿಗೆ ಇರದೆ, ಕೆಟ್ಟು ಪೋದವರಮ್ = ಹಾಳಾಗಿಹೋದವರನ್ನು – ಆ ಪಾಂಡವರನ್ನು ಮಗುಳ್ದುಂ = ಪುನಃ, ಮತ್ತೆ; ನಿಜಿಪಂತು = ಸ್ಥಾಪಿಸುವಷ್ಟು, ಇರಿಸಿಕೊಳ್ಳುವಷ್ಟು; ಬೆಳ್ಳನೇ = ಹೆಡ್ಡನೇ ನಾನು. ಈ ದೇಸೀಯ ನುಡಿ ಅರ್ಥಪರಂಪರೆಗೆ ಎಡೆಗೊಡುತ್ತದೆ. ದುರ್ಯೋಧನನು ಆರೋಪವನ್ನು ಪಾಂಡವರ ಮೇಲೆ ಹೊರಿಸುತ್ತಿದ್ದಾನೆ. ಈ ಅರ್ಥವು ಇಲ್ಲಿ ಹೆಚ್ಚು ಸಮಂಜಸ ಎಂದು ಕಾಣಿಸುತ್ತದೆ.*

ಗ್ರಂಥಋಣ

ಪಂಪಭಾರತ — ಮೈಸೂರು ವಿಶ್ವವಿದ್ಯಾಲಯ ಪ್ರಕಟಣೆ

ಆದಿಪುರಾಣ — ಪ್ರೊ. ಕೆ. ಜಿ. ಕುಂದಣಗಾರ
ಶ್ರೀ ಎ. ಪಿ. ಚೌಗಂಲೆ – ಸಂಪಾದಿತ.

ಕಿಟ್ಟೆಲ್ ಕೋಶ — ಪ್ರೊ. ಎಂ. ಮರಿಯಪ್ಪ ಭಟ್ಟರಿಂದ ಪರಿಷ್ಕೃತ ಮುದ್ರಣ.

ಶಬ್ದಮಣಿದರ್ಪಣ — ಪಂಜೆ ಮಂಗೇಶರಾವ್ ಪರಿಷ್ಕೃತ ಮುದ್ರಣ.

ಕನ್ನಡ ನಿಘಂಟು — ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಸಾಧನೆ — ಬೆಂಗಳೂರು ವಿಶ್ವವಿದ್ಯಾನಿಲಯ, ಸಂಪುಟ ೧೭, ಸಂಚಿಕೆ ೧–೨, ಜನವರಿ–ಜೂನ ೧೯೮೮

— ಯು. ಶಂಕರನಾರಾಯಣ ಭಟ್

● ●

* ಕೃತಜ್ಞತೆಗಳು : ಶ್ರೀ ಕೆ. ಎಮ್. ಪುರದ, ಕನ್ನಡ ಅಧ್ಯಾಪಕರು, ಟಾಗೋರ ಸ್ಮಾರಕ ಕಾಲೇಜು ರಾಯಚೂರು, ಕರ್ನಾಟಕ-೫೮೪ ೧೦೧; ಶ್ರೀ ಬಸವರಾಜ ಗಣಪ್ಪನವರ, ಆಟೋ ಟೆಲಿಫೋನ ಎಕ್ಸಚೇಂಜ್, ಗದಗ-೫೮೨ ೧೦೧; ಡಾ. ಪಿ. ಶ್ರೀಕೃಷ್ಣಭಟ್, ಕನ್ನಡ ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು, ಸರಕಾರಿ ಕಾಲೇಜು, ಕಾಸರಗೋಡು; ಶ್ರೀ ಕೆ. ಕಮಲಾಕ್ಷ, ಕನ್ನಡ ಅಧ್ಯಾಪಕರು, ಸರಕಾರಿ ಕಾಲೇಜು, ಕಾಸರಗೋಡು, ವಿದ್ಯಾನಗರ.

೨. 'ನಿಜಗುರು ಸಿದ್ಧಲಿಂಗ' ಅಂಕಿತದ ಒಂದು ಸ್ವರವಚನ

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ಹಸ್ತಪ್ರತಿ-ಭಾಂಡಾರದಲ್ಲಿ ಈಚೆಗೆ ದೊರೆತ ಗುರುಶಂಕರ ಸ್ವಾಮಿಗಳು ಸೇರಿಸಿದ 'ಜ್ಞಾನಪಟ್ ಸ್ಥಲಸಾರ' ಒಂದು ನೂತನ ಸ್ಥಲಕಟ್ಟಿನ ವಚನ ಸಂಕಲನ. ಇದರಲ್ಲಿ ೪೦ ಸ್ಥಲ. ಸುಮಾರು ೬೦ ಜನ ವಚನಕಾರರ ೩೯೯ ವಚನ ಮತ್ತು ೪ ಸ್ವರವಚನಗಳಿವೆ. (ಈಗ ದೊರೆತ ಕೃತಿ ಅಪೂರ್ಣವಾಗಿದೆ). ಸ್ವರವಚನಗಳು ಕೆಲವು ಸ್ಥಲಗಳ ಅಂತ್ಯದಲ್ಲಿ ಜೋಡಿಸಲ್ಪಟ್ಟಿವೆ. ದೊರೆತ ನಾಲ್ಕರಲ್ಲಿ ೩ ಸ್ವರವಚನಗಳು ಈಗಾಗಲೆ ಪ್ರಕಟವಾಗಿದ್ದರೆ, ಒಂದು ಹೊಸದೆನಿಸಿದೆ. ಅದು ಅವಸಾನ ಸ್ಥಲದ ಅಂತ್ಯದಲ್ಲಿ ಬಂದಿದೆ. ಎರಡು ಸಾಲಿನ ಪಲ್ಲ, ೫ ನುಡಿಗಳಿರುವ ಇದರಲ್ಲಿ ಲಿಂಗಮಹಿಮೆಯನ್ನು ಹೇಳಲಾಗಿದೆ. ಇದರ ಕರ್ತೃ, ಕಾಲ, ಅಜ್ಞಾತ. ಅದನ್ನಿಲ್ಲಿ ಪರಿಷ್ಕರಿಸಿ ಕೊಡಲಾಗಿದೆ. ಹಸ್ತಪ್ರತಿಯನ್ನು ಬಳಸಿಕೊಳ್ಳಲು ಅನುಮತಿಯಿತ್ತ ಕನ್ನಡ ಸಂಶೋಧನ ಸಂಸ್ಥೆಯ ನಿರ್ದೇಶಕರಿಗೆ ಕೃತಜ್ಞತೆಗಳು.

ಲಿಂಗ ಬೀಳ್ಬಲ್ಲುದೆ ಮಹಾಘನ ಲಿಂಗ ಬೀಳ್ಬಲ್ಲುದೆ
ಲಿಂಗ ಬಿದ್ದರೆ ಪ್ರಾಣಹಿಂಗದುಳಿದಿಹುದೆ ? ।ಪಲ್ಲ।

ಶ್ರೀಗುರು ಕರುಣದಿ ಹಸ್ತಮಸ್ತಕ ಸಂ-
ಯೋಗವ ಮಾಡಿ ಬೇಗನೆ ಎನಂತ
ಈ ಘನವಸ್ತು ಲಿಂಗವೆ ಪತಿ
ಯಾಗಿ ಮುಕ್ತಿಯ ಪಾಲಿಸಿದ ಪಾವನ ।
ನಿಜಲಿಂಗ ಬೀಳ್ಬಲ್ಲುದೆ ? ।೧।

ಉರುತರಾತ್ಮನೆ ಸೆಜ್ಜೆ ಶ್ರೀಮುರುಂತನೆ ಶಿವದಾರ
ನಿರುತ ಮಹಾಘನದ ವಸ್ತ್ರವು
ಸ್ಥಿರಚಿತ್ತಕುಸುಮಪೂಜೆಯೊಳೊಪ್ಪುತಿಹ
ಪರತರ ಪರಿಪೂರ್ಣಖಂಡ ಪರಂಜ್ಯೋತಿ ।
ಲಿಂಗ ಬೀಳ್ಬಲ್ಲುದೆ ? ।೨।

ಆಕಾಶವೆ ಲಿಂಗ ಭೂಮಿಯೆ ಪೀಠ ಅ-
ನೇಕತತ್ವಂಗಳ ಲಯುವೆಸೆಯೆ

ಏಕೋದೇವ ಬಾಹ್ಯಂತರನೊಳು ಹಾಗೆ
ಏಕೀಕರಿಸಿ ಚಿದಾಕಾರವಾಗಿಹ ।
ಲಿಂಗ ಬೀಳ್ಬಲ್ಲುದೆ ? । ೩ ।

ಕಡುಗಲಿ ದೈತ್ಯರ ತ್ರಿಪುರವ ಪರಶಿವ
ಸುಡುವಂದು ರಚಿಸಿದ ರಥದ ಮೇಲೆ
ಅಡಿಯಿಡಲಡಿಗೈದಿಪೋದಂದಿಲ್ಲವೆ ಲಿಂಗ
ಸಡಿಲಿಬಿದ್ದಡೆ ಧಾತ್ರಿತ್ರಯಂ [ಉಳಿಯು] ಬಲ್ಲಂದೆ ಪ್ರಾಣ ।
ಲಿಂಗ ಬೀಳ್ಬಲ್ಲುಂದೆ ? । ೪ ।

ಎಲ್ಲ ಜಗದೊಳು ಮುಳ್ಳೂರಲೆಡದೆರ-
ಹಿಲ್ಲದ ಘನವು ತಾ ಚರಿಸುವಡೆ
ನಿಲ್ಲುವ ಠಾವಾವುದು ಹೇಳು ಮತ್ಪ್ರಾಣ
ದೊಲ್ಲಭ ಕರುಣವಾರುಧಿ ನಿಜಗುರು ಸಿದ್ಧ ।
ಲಿಂಗ ಬೀಳ್ಬಲ್ಲುಂದೆ ? । ೫ ।

— ವೀರಣ್ಣ ರಾಜೂರ

೩. ಸ್ವಾದಿ ಸದಾಶಿವರಾಯನ ರಚನೆಗಳು

೧

ಚೆನ್ನಬಸವಗೆ ಚೋರ ಚಿಕ್ಕಗೆ
ಚದುರ ರಾಮಗೆ ಮಂಗಳ
ಹೊನ್ನಿತಂದೆಗೆ ಹಂಪಹಂದಗೆ
ಹಳ್ಳಮಧುವಗೆ ಮಂಗಳ
ಚೆನ್ನಚೋಳಗೆ ಚಂದ ಶಿವನಿಗೆ
ಚಾರುಮುಂಗ ಸುಮಂಗಳ
ಕಿನ್ನರಯ್ಯ ಕಿರಾತರುದ್ರಗೆ ॥ ಶ್ರೀ ॥
ಕರುಣಿ ನಂದಿಯಗೆ ಮಂಗಳಂ

೨

ಬಸವ ಬಸವಗೆ ಬಸವರಾಜಗೆ
ಬಸವತಂದೆಗೆ ಬಸವಗೆ
ಬಸವ ಭಕ್ತ[ಗೆ] ಬಸವ ಮುಂಕ್ತಗೆ
ಬಸವ ಸ್ವಾಮಿಂಗೆ ಬಸವಗೆ
ಬಸವ ಗುರುವಿಗೆ ಬಸವಲಿಂಗಗೆ
ಬಸವ ಜಂಗಮು ಬಸವಗೆ
ಬಸವ ಸೋದೆಯು ಬಸವ ನಂದಿಯುಗೆ
ಬಸವಗಣರಿಗೆ ಮಂಗಳ ॥ ಶ್ರೀ ॥

೩

ಮಂಗಳ ಮುಂಗಳ [ಅ]ಕ್ಷಯು ಮುಂಳಗ
ಗಂಗೆಯು[ಂ]ಭೋಜ ಮಂ[ಡಾ]ಳ
ವೃಷಭಗ[ಧ್ವ]ಗಜ ನಂದೀಶ ಸರ್ವ
ದೇವ ೨[ಸದ್ಗುರು]೨ ನಂದೀಶ
ಸರ್ವ ಸಂಪದ ನಂದೀಶ
ಅಂದದಿ ಧರ್ಮ ಮೋಕ್ಷಾಣಿ
ನಂದೀಶ ನಂದದಿ ಕೊಗ್ಗೆ (?) ॥ ಶ್ರೀ ॥

೪. ಸ್ವಾದೆನಗರಿ ನಂದೀಶ್ವರ

ಜಯು ಜಯು ಜಗಧೀಶ್ವರನಿಗೆ ಭಕ್ತ–
ಜಯು ವರದನಿಗೆ ಸದಾಶಿವಲಿಂಗಗೆ ॥ಪಲ್ಲ॥

ಪಂಚವಿಂಶತಿಲೀಲೆಗಳನುರೆ ನಟಿಸುತ್ತೆ
ವಂಚಿಸದರುಹೊಳನ್ಮಕ್ಕೆನಿಪ
ಮುಂಚೀವ ಸುಖವಿಲಾಸಂಗಳ ನಡಸಿದ
ಪಂಚವಂುಖದ ಪರಾಸ್ಮರ ಫಣಿಭೂಷಗೆ ॥ ೧ ॥

೧—೧ ದೋ ; ೨—೨ ನದುಂ ; ಆಕರ : ಬಿಡಿಗರಿ, ಬೃಹನ್ಮಠ, ಚಿತ್ರದುರ್ಗ.

ಸುಂದರ ಮೂರ್ತಿಗೆ ಸುರುಚಿರ ಕೀರ್ತಿಗೆ
ಇಂದುಕಲಾಧರನೆನಿಸುತೆ
ಸಂದ೧[ಸಾರಸ]೧ಕುಲ ವಂಶರಾಜಗೆ
ಹೊಂದಿದ ಭೋಗಮೋಕ್ಷಗಳಧೀನಪಗೆ ॥ ೨ ॥

ನಿರುಪಮ ಮಧುರಾಪುರದಿಂದೆ ನಡೆತಂದು
ಕರುಣದೆ ಸ್ವಾದೆ ನಗರಿಯೊಳಂ
ಉರುತರ ನಂದೀಶ್ವರನೊಡಗೂಡುತೆ
ಪರಿಪೂರ್ಣದ ಸದಾಶಿವ ನ೨[ಮಂ]೨ಗೆ ॥ ૩ ॥

— ಎಸ್. ಶಿವಣ್ಣ

● ●

೧—೧ ಸದಸೆ ; ೨—೨ ಮೊ ; ಆಕರ : ಬಿಡಿಗರಿ, ಬೃಹನ್ಮಠ, ಚಿತ್ರದುರ್ಗ.

ಪ್ರಸ್ತುತ

ಸಮಾಜಸೂರ್ಯರಾಗಿ ಬಾಳಿ, ಬೆಳಗಿದ ಡಾ. ಬಿ. ಆರ್. ಅಂಬೇಡಕರ ಅವರ ಬದುಕು–ಬರಹ ಅತ್ಯಂತ ಅಮೂಲ್ಯವಾದವುಗಳಾಗಿವೆ. ತನ್ನ ಸಮಾಜ, ದೇಶ ಸೇವೆಗಳಿಗಾಗಿ ಸರ್ವಸಮರ್ಪಣ ಭಾವದಿಂದ ದುಡಿದ ಅಂಬೇಡಕರ ಅವರ ಜೀವನ ನಿಷ್ಠೆ, ಸಮಾಜನಿಷ್ಠೆ, ಸಮಯನಿಷ್ಠೆ ಹಾಗೂ ಕಾರ್ಯನಿಷ್ಠೆಗಳು ಅನುಪಮ ಹಾಗೂ ಅನುಕರಣೀಯವಾದವುಗಳಾಗಿರುತ್ತವೆ. ಭಾರತದ ಸಾಮಾನ್ಯ ಜನವರ್ಗದಲ್ಲಿ ಹೊಸ ಚೈತನ್ಯವನ್ನು ತುಂಬಿ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ಹಾಗೂ ರಾಜಕೀಯವಾಗಿ ಜನರನ್ನು ಜಾಗ್ರತಗೊಳಿಸಿದ ಶ್ರೇಯಸ್ಸು ಅಂಬೇಡಕರರದಾಗಿದೆ. ಹೀಗೆ ಅಂಬೇಡಕರ ಅವರು ಮಾನವೀಯತೆಯನ್ನು ಪ್ರೀತಿಸಿದ, ಗೌರವಿಸಿದ, ಎತ್ತಿ ಹಿಡಿದ ಮಹಾಮಾನವತಾವಾದಿಯಾಗಿದ್ದಾರೆ. ಇಂಥ ಅಂಬೇಡಕರರ ಜೀವನ ಹಾಗೂ ವಿಚಾರಗಳ ತಲಸ್ಪರ್ಶಿಯಾದ ಅಧ್ಯಯನ, ಪ್ರಸಾರಕಾರ್ಯಗಳು ಇನ್ನೂ ಭರದಿಂದ ವ್ಯವಸ್ಥಿತವಾಗಿ ಅನೇಕ ಮುಖಗಳಲ್ಲಿ ನಡೆಯುವ ಅವಶ್ಯಕತೆಯಿದೆ.

ಮಾನವೀಯ ಮೌಲ್ಯಗಳನ್ನು ಬದುಕಿದ, ಬದುಕಿಸಿದ ಡಾ. ಬಿ. ಆರ್. ಅಂಬೇಡಕರ ಅವರ ಜನ್ಮಶತಮಾನೋತ್ಸವವನ್ನು ಭಾರತದಾದ್ಯಂತ ಆಚರಿಸುತ್ತಿರುವ ಸಂದರ್ಭದಲ್ಲಿ "ಕರ್ನಾಟಕ ಭಾರತಿ" ಈ ಸಂಕ್ರಮಣ ಸಂಚಿಕೆಯನ್ನು 'ಡಾ. ಬಿ.ಆರ್. ಅಂಬೇಡಕರ ವಿಶೇಷಾಂಕ'ವನ್ನಾಗಿ ಹೊರತರುತ್ತಿರುವುದು ಹೆಚ್ಚು ಅರ್ಥಪೂರ್ಣವೆನಿಸಿದೆ. ಈ ಮೂಲಕ 'ಭಾರತಿ' ಭಾರತರತ್ನ ಡಾ. ಅಂಬೇಡಕರ ಅವರಿಗೆ ತನ್ನ ಗೌರವಗಳನ್ನು ಸಲ್ಲಿಸುತ್ತಿದೆ. ಈ ಸಂಚಿಕೆಯಲ್ಲಿ ಅಂಬೇಡಕರರನ್ನು ಕುರಿತು ಒಂದು ಕವನ ಹಾಗೂ ಅವರ ಜೀವನ-ಸಾಧನೆ, ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ವರ್ಗ ಹೋರಾಟ, ಅವರನ್ನು ಅರ್ಥೈಸಿಕೊಳ್ಳುವ ಪ್ರಯತ್ನ – ಹೀಗೆ ಐದು ಲೇಖನಗಳು ಇರುತ್ತವೆ. ಈ ಲೇಖನಗಳನ್ನು ಸಮಯಕ್ಕೆ ಸರಿಯಾಗಿ ಬರೆದುಕೊಟ್ಟ ಲೇಖಕರಿಗೆ ತುಂಬುಹೃದಯದ ಕೃತಜ್ಞತೆಗಳು ಸಲ್ಲುತ್ತವೆ.

ಈ ಸಂಚಿಕೆಯಲ್ಲಿ ಅಂಬೇಡಕರರನ್ನು ಕುರಿತೆ ಲೇಖನಗಳೊಂದಿಗೆ ಆಧ್ಯಾತ್ಮ, ಹಸ್ತಪ್ರತಿ, ಶಾಸನ, ಶಿಲ್ಪ, ವಿಮರ್ಶೆ, ಸಂಶೋಧನೆಗಳಿಗೆ ಸಂಬಂಧಿಸಿದ ಲೇಖನಗಳನ್ನೂ ಸಮಾವೇಶಗೊಳಿಸಲಾಗಿದೆ. ಈ 'ವಿಶೇಷಾಂಕ'ವನ್ನು ಸಹೃದಯರಿಗೆ ಸಾದರಪಡಿಸಲು ಸಂತೋಷವೆನಿಸುತ್ತದೆ.

— **ಸಂಪಾದಕರು**

ಸಾದರ ಸ್ವೀಕಾರ

ಕನ್ನಡ ಮಹಾಭಾರತ (ಆದಿಪರ್ವ–೨) :

ಅನುವಾದ : ಎಸ್. ಶೇಷಾಚಲ ಶರ್ಮ
ಪ್ರ : ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು, ೧೯೯೦
ಪುಟ : viii + ೭೦೯, ಬೆಲೆ : ರೂ. ೪೫=೦೦

ಫ್ಲೀಟರು ಸಂಗ್ರಹಿಸಿದ ಲಾವಣಿಗಳು :

ಸಂ : ಕ್ಯಾತನಹಳ್ಳಿ ರಾಮಣ್ಣ
ಪ್ರ : ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು, ೧೯೯೧
ಪುಟ : xx + ೩೩೬, ಬೆಲೆ : ರೂ. ೬೦=೦೦

ಭಾರತೀಯ ಕಾವ್ಯಮೀಮಾಂಸೆ (ಐದನೆಯ ಮುದ್ರಣ) :

ತೀ. ನಂ. ಶ್ರೀಕಂಠಯ್ಯ
ಪ್ರ : ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು, ೧೯೯೦
ಪುಟ : xvi + ೪೯೦, ಬೆಲೆ : ರೂ. ೨೫=೦೦

ವಸ್ತು–ವಿನ್ಯಾಸ :

ಎನ್. ಶ್ರೀನಿವಾಸ ಉಡುಪ
ಪ್ರ : ಶ್ರೀ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ
ಉಜಿರೆ (ದಕ್ಷಿಣ ಕನ್ನಡ), ೧೯೯೧
ಪುಟ : xvi+೧೧೬, ಬೆಲೆ : ರೂ. ೧೮=೦೦

ವಿಶ್ವಶಾಂತಿ :

ಮೂಲ–ಇಂಗ್ಲೀಷ : ಶಾಂತಿ ಯಾತ್ರಿಕಳು
ಕನ್ನಡಕ್ಕೆ ಅನುವಾದ : ರಾಮಣ್ಣ ಹೊನಕೇರಿ, ಶಿಗ್ಗಿ
ಪ್ರ : ಶ್ರೀ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ.
ಉಜಿರೆ (ದಕ್ಷಿಣ ಕನ್ನಡ), ೧೯೯೧
ಪುಟ : iv + ೩೫, ಬೆಲೆ : ರೂ. ೬=೦೦

ಲೇಖಕರ ವಿಳಾಸ

ಪ್ರೊ. ಅಶೋಕ ನರೋಡೆ
ಕನ್ನಡ ಅಧ್ಯಾಪಕರು
ಕಲಾ-ವಾಣಿಜ್ಯ ಮಹಾವಿದ್ಯಾಲಯ,
ಮಹಾಲಿಂಗಪೂರ [ಜಿಲ್ಲೆ-ವಿಜಾಪುರ]

ಶ್ರೀಮಂತಿ ಚಂದ್ರಮಾ ಭೀಮಸೇನರಾವ್
ಸಂಶೋಧನ ವಿದ್ಯಾರ್ಥಿನಿ, ಇಂಗ್ಲೀಷ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ. ಜೋಗನ್ ಶಂಕರ
ರೀಡರ್. ಸಮಾಜಶಾಸ್ತ್ರ ವಿಭಾಗ
ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಪ್ರೊ. ಎಸ್. ಕೆ. ಕಲ್ಲೋಳಿಕರ
ಇತಿಹಾಸ ಅಧ್ಯಾಪಕರು
ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ. ಬಿ. ಕೃಷ್ಣಮೂರ್ತಿ
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಮನೋವಿಜ್ಞಾನ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಡಾ. ಎ. ಮುರಿಗೆಪ್ಪ
ರೀಡರ್, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ. ದಯಾನಂದ ಮಾನೆ
ರೀಡರ್, ರಾಜ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ. (ಕುಮಾರಿ) ಎನ್. ವಿ. ಕೊಪ್ಪಳ
ರೀಡರ್, ಸಂಸ್ಕೃತ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ. ಬಿ. ಆರ್. ಹಿರೇಮಂಠ
ರೀಡರ್, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ. ಶಾಂತಿನಾಥ ದಿಬ್ಬದ
ಅಧ್ಯಾಪಕರು, ಕನ್ನಡ ವಿಭಾಗ
ಸ್ನಾತಕೋತ್ತರ ಕೇಂದ್ರ, ಸಂಡೂರ [ಜಿಲ್ಲೆ-ಬಳ್ಳಾರಿ]

ಶ್ರೀಮತಿ ಹನುಮಾಕ್ಷಿ ಗೋಗಿ
ಸಹಾಯಕ ನಿಬಂಧಕರು
ಸಹಕಾರಿ ಇಲಾಖೆ, ಹಾವೇರಿ [ಜಿಲ್ಲೆ-ಧಾರವಾಡ]

ಪ್ರೊ. ಗುಂಡಣ್ಣ ಚ. ಕಲಬುರ್ಗಿ
ಕನ್ನಡ ಅಧ್ಯಾಪಕರು
ಕಲಾ-ವಾಣಿಜ್ಯ ಮಹಾವಿದ್ಯಾಲಯ, ಮೂಡಲಗಿ [ಜಿಲ್ಲೆ-ಬೆಳಗಾವಿ]

ಡಾ. ಬಿ. ವಿ. ಶಿರೂರ
ರೀಡರ್, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರೊ. ಬಾಳಣ್ಣ ಶೀಗೀಹಳ್ಳಿ
ಕನ್ನಡ ಅಧ್ಯಾಪಕರು
ಜೆ. ಎಸ್. ಎಸ್. ಕಾಲೇಜು, ಧಾರವಾಡ

ಡಾ. ರಂ. ವಂ. ಷಡಕ್ಷರಯ್ಯ
ಕಾರ್ಯನಿರ್ವಾಹಕ ನಿರ್ದೇಶಕರು
ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಯು. ಶಂಕರನಾರಾಯಣ ಭಟ್
ಪ್ರಾಧ್ಯಾಪಕರು, ಸರಕಾರಿ ಕಾಲೇಜು, ಕಾಸರಗೋಡು
ವಿದ್ಯಾನಗರ ಅಂಚೆ - ೬೭೦ ೧೨೩

ಡಾ. ವೀರಣ್ಣ ರಾಜೂರ
ಪ್ರವಾಚಕರು, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಶ್ರೀ ಎಸ್. ಶಿವಣ್ಣ
ಸಂಪಾದಕರು, ಹಸ್ತಪ್ರತಿ ವಿಭಾಗ
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

● ●

ಬಸವನಾಳ ಪ್ರಿಂಟರ್ಸ್, ಯು. ಬಿ. ಹಿಲ್, ಧಾರವಾಡ-೧